ಕರ್ನಾಟಕದಲ್ಲೇ ಮೊಟ್ಟಮೊದಲ ಬಾರಿಗೆ UPSC/KAS ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ತಯಾರಿನಡೆಸಲು ರಚಿಸಿರುವಂತಹ ವೆಬ್ ಸೈಟ್

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

# UPSC/KAS ಪ್ರಚಲಿತ ವಿದ್ಯಮಾನಗಳ ಮಾಸಿಕ ಕೈಪಿಡಿ- ಡಿಸೆಂಬರ್ -2017

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**http://www.nammaiasacademy.com**

**DOWNLOAD OUR ANDROID MOBILE APP**

http://www.nammaiasacademy.com/download-app

# ಮುನ್ನುಡಿ

ನನ್ನ ನೆಚ್ಚಿನ ಸ್ಪರ್ಧಾತ್ಮಕ ಪರೀಕ್ಷೆಯ ಅಭ್ಯರ್ಥಿಗಳೆ ...

ಕರ್ನಾಟಕದಲ್ಲೇ ಪ್ರಥಮ ಭಾರಿಗೆ ಕನ್ನಡದಲ್ಲಿ **IAS/KAS** ಸ್ಪರ್ಧಾತ್ಮಕ ಪರೀಕ್ಷೆಗಳಿಗೋಸ್ಕರ ರಚಿಸಿರುವ **www.nammaiasacademy.com** ಎಂಬ ವೆಬ್ ತಾಣ ಎಂದು ತಿಳಿಸಲು ಹೆಮ್ಮೆ ಅನ್ನಿಸುತ್ತಿದೆ. ನಿಮಗೆ ತಿಳಿದಿರುವಂತೆ ನಗರ ಪ್ರದೇಶಗಳಲ್ಲಿ ತರಭೇತಿ ಕೇಂದ್ರಗಳು ಸೌಲಭ್ಯವಿರುವವರಿಗೆ ನೆರವಾಗುತ್ತಿದ್ದು, ಗ್ರಾಮೀಣ ವಿಧ್ಯಾರ್ಥಿಗಳು ಈ ಸೌಲಭ್ಯದಿಂದ ವಂಚಿತರಾಗುತ್ತಿರುವುದು ಅಕ್ಷರಃ ಸಹ ನಿಜ.ಅದರಲ್ಲೂ ಕನ್ನಡ ಮಾಧ್ಯಮದಲ್ಲಿ ಒಳ್ಳೆಯ ಗುಣಮಟ್ಟದ ತರಭೇತಿ ಕೇಂದ್ರಗಳು ಇಲ್ಲದೆ ಅಭ್ಯರ್ಥಿಗಳು ಅವಕಾಶ ವಂಚಿತರಾಗುತಿದ್ದಾರೆ .ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಂದು ಅನೇಕ ವೆಬ್ ತಾಣಗಳು ಇಂಗ್ಲೀಷ್ ನಲ್ಲಿ ಲಭ್ಯವಿದ್ದು, ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ ಅಂತಹ ವೆಬ್ ತಾಣವು ಸಹ ಇಲ್ಲದೆ ಅವೈಜ್ಞಾನಿಕ ತನದಿಂದ ತಮ್ಮ ಸಮಯ ಮತ್ತು ಹಣವನ್ನು ಕಳೆದುಕೊಳ್ಳುತಿದ್ಧಾರೆ . **IAS/KAS** ಪರೀಕ್ಷೆ ಯಲ್ಲಿ ಯಶಸ್ವಿ ಆಗಲು ದೆಹಲಿ ಮತ್ತು ಇತರೆ ಹೊರ ರಾಜ್ಯಗಳಿಗೆ ತರಭೇತಿ ಹೋಗುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ಇದನೆಲ್ಲ ಗಮನದಲ್ಲಿ ಇಟ್ಟುಕೊಂಡು ಸುಮಾರು 3 ವರ್ಷಗಳಿಂದ ಕನ್ನಡ ಮಾಧ್ಯಮದ ಅಭ್ಯರ್ಥಿಗಳು ಯಾವ ರೀತಿ ತಯಾರಿ ನಡಿಸಿದರೆ ಯಶಸ್ವಿ ಆಗಬಹುದು ಎಂದು ನಮ್ಮದೆ ಆದಂತಹ **SCIENTIFICALLY DAILY STUDY PLAN**,ರಚಿಸಿ ಅದನ್ನು ಪ್ರಯೋಗಿಸಿ ಈಗ ಈ ವೆಬ್ ತಾಣದ ಮೂಲಕ ಪರಿಚಯಿಸುತಿದ್ದೇವೆ. ತಮ್ಮ ವಾಸ ಸ್ಥಾನ ದಲ್ಲೇ ಕುಳಿತು ಅಂತರ್ಜಾಲದ ಮೂಲಕ ನೀವಿದ್ದಲ್ಲಿಗೆ **IAS/KAS** ಪರೀಕ್ಷೆ ತಯಾರಿನಡೆಸಲು **NAMMA IAS ACTIVE LEARNING PROGRAM (NIALP)** ಅನ್ನು ರಚಿಸಿದ್ದೇವೆ. ಈ **NIALP** ಮೂಲಕ ಕನ್ನಡ ದಲ್ಲೂ IAS/KAS ಪರೀಕ್ಷೆ ಯಲ್ಲಿ ಉತ್ತಮ **RANK** ಪಡೆಯಬಹುದು ಎಂದು **www.nammaiasacademy.com** ಟೀಮ್ ಹಗಲಿರುಳು ಶ್ರಮವಹಿಸಿ ಈ ವೆಬ್ ತಾಣವನ್ನು ರಚಿಸಿದೆ.ಇದಕ್ಕೆ ನಿಮ್ಮ ಪ್ರೋತ್ಸಾಹ ಮತ್ತು ಸಹಕಾರ ನಮಗೆ ಮುಂದಿನ ದಿನಗಳಲ್ಲಿ ಈ ಪ್ಲಾನ್ ಅನ್ನು ಉತ್ತಮಗೊಳಿಸಲು ತುಂಬ ಅಗತ್ಯವಿದೆ. ನಿಮ್ಮ ಸಲಹೆ, ಅನಿಸಿಕೆಗಳಿಗೆ ಸ್ವಾಗತ. ನಿಮ್ಮ ಪ್ರೋತ್ಸಾಹಕ್ಕೆ ಧನ್ಯವಾದಗಳು .

ಗುರಿ ನಿಮ್ಮದು...ಮಾರ್ಗದರ್ಶನ ನಮ್ಮದು...

**SMART AND HARD WORK=NAMMAIASACADEMY + YOU—> SUCCESS GUARANTEED!**

**ನಮ್ಮ ಐಎಎಸ್ ಅಕಾಡೆಮಿ**

# CONTENTS

1 .ಅಂತರಾಷ್ಟ್ರಿಯ ಸೌರ ಶಕ್ತಿ ಒಕ್ಕೂಟ (INTERNATIONAL SOLAR ALLIANCE) ............................1

2. ಏಷ್ಯನ್ ದೇಶಗಳ ಸಮನ್ವಯಗೊಳಿಸುವಿಕೆ ಕಾರ್ಯಪಡೆ ಸಮ್ಮೇಳನ (ASIAN HARMONIZATION WORKING PARTY) ....................................................................................5

3. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯಲ್ಲಿ ಏಕ ಸದಸ್ಯ ಪೀಠ ರಚಿಸಲು ಅನುಮತಿಸಿದ ಕೇಂದ್ರ ಸರಕಾರ ....................................................................................6

4. ಮದುವೆ ನಂತರ ಪತ್ನಿಯ ಧರ್ಮ ಗಂಡನ ಧರ್ಮದ ಜತೆ ಸೇರುವುದಿಲ್ಲ: ಸುಪ್ರೀಂ ಕೋರ್ಟ್ ...........8

5. ಏಕರೂಪ ನಾಗರಿಕ ಸಂಹಿತೆ( Uniform Civil Code) ...........................................9

6. ವಾಸೆನಾರ್ ಗುಂಪಿಗೆ ಭಾರತ ಸೇರ್ಪಡೆ ..................................................13

7. ತಾಜ್ ಸಂರಕ್ಷಣೆಗೆ ದೀರ್ಘ ಕಾಲೀನ ಕ್ರಮ ಅಗತ್ಯ: ಸುಪ್ರೀಂ ಕೋರ್ಟ್ ..................................16

8. ತ್ರಿವಳಿ ತಲಾಖ್ ಕರಡು ಮಸೂದೆಗೆ ಒಪ್ಪಿಗೆ ನೀಡಿದ ಮೊದಲ ರಾಜ್ಯ -ಉತ್ತರ ಪ್ರದೇಶ ..............19

9. ವಕೀಲರ ದುಬಾರಿ ಶುಲ್ಕ ನಿಯಂತ್ರಣಕ್ಕೆ ಕಾನೂನು ..................................................20

10. ವ್ಯಭಿಚಾರ(Adultery law) ಪ್ರಕರಣಗಳಲ್ಲಿ ಪುರುಷರಿಗಷ್ಟೇ ಶಿಕ್ಷೆ ಏಕೆ? ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನೆ ....................................................................................21

11. ಮಣ್ಣಿನ ಆರೋಗ್ಯ ಕಾರ್ಡ್ ಮೊಬೈಲ್ ಅಪ್ಲಿಕೇಶನ್ ..................................................22

12. ತಾಜ್' 2ನೇ ಉತ್ತಮ ಪಾರಂಪರಿಕ ತಾಣ ..................................................26

13. ಭಾರತದ ಇಂಧನ ಭದ್ರತಾ ಯೋಜನೆಗಳು ..................................................27

14. ರೆಪೋ ದರ ಯಥಾಸ್ಥಿತಿ..................................................30

15. ಜೆರುಸಲೇಂ ಇಸ್ರೇಲ್ ರಾಜಧಾನಿ..................................................31

16. ಭಾರತ- ಕ್ಯೂಬಾ ಒಪ್ಪಂದ ..................................................34

17. ಜಿಸಿಸಿ ಮತ್ತು ಪರ್ಷಿಯನ್ ಗಲ್ಫ್ ಬಿಕ್ಕಟ್ಟು ..................................................35

18. ಸೂಪರ್‌ಸಾನಿಕ್ ಆಕಾಶ್ ಕ್ಷಿಪಣಿ ಪರೀಕ್ಷೆ ಯಶಸ್ವಿ......40

19. ಅಂತರರಾಷ್ಟ್ರೀಯ ಹವಾಮಾನ ಬದಲಾವಣೆ ಸಮ್ಮೇಳನ (International Climate Change Conference) ......41

20. ಭಾರತವು ಟ್ರಕೋಮಾ ಸೋಂಕು ಮುಕ್ತ ರಾಷ್ಟ್ರ: ಕೇಂದ್ರ ......42

21. ಸಾಂಸ್ಕೃತಿಕ ಪರಂಪರೆ ಪಟ್ಟಿಗೆ ಕುಂಭಮೇಳ ......45

22. ಶಾಮಲೀ......49

23. ಸಲಿಂಗ ವಿವಾಹಕ್ಕೆ ಅಸ್ತು ಎಂದ ಆಸ್ಟ್ರೇಲಿಯಾ ......50

24. ಸಮುದ್ರದಾಳದಲ್ಲಿ ರೋಮ್ ಸಾಮ್ರಾಜ್ಯ ......50

25. ಬೋಧಿ ಪರ್ವ ......51

27. ಸ್ವಚ್ಛಭಾರತ: ಸಾರ್ವಜನಿಕ ಶೌಚಾಲಯಕ್ಕೂ ವಿಶೇಷ ಗುರುತಿನ ಚೀಟಿ......54

28. ಸದ್ಯದಲ್ಲೇ 'ಉಭಯಚರ' ವಿಮಾನ ಸೇವೆ......55

29. ಹಂಬಂತೋಟ ಬಂದರನ್ನು ಚೀನಾಗೆ ಹಸ್ತಾಂತರಿಸಿದ ಶ್ರೀಲಂಕಾ......56

30. ತಾಂತ್ರಿಕ ಶಿಕ್ಷಣ ಕೋರ್ಸ್ ಶುಲ್ಕಕ್ಕೆ ಕನಿಷ್ಠ–ಗರಿಷ್ಠ ಮಿತಿಗೆ ಎಐಸಿಟಿಇ ಚಾಲನೆ ......58

31. ಎಕ್ಸಿಟೋನಿಯಮ್ (Excitonium)......59

32. ಟೈಮ್ ವರ್ಷದ ವ್ಯಕ್ತಿಯಾಗಿ "ಸೈಲೆನ್ಸ್ ಬ್ರೇಕರ್ಸ್" ......60

33. ಹೊಮೈ ವ್ಯಾರವಾಲಾ ......60

34. ಭಾರತದ ಡಿಎನ್ ಎ ಬೆರಳಚ್ಚು ಮುದ್ರಕ ಪಿತಾಮಹ ಲಾಲ್ ಜೀ ಸಿಂಗ್ ನಿಧನ......61

35. "ಸೇಫ್ ಸಿಟಿ ಕಣ್ಗಾವಲು" ಯೋಜನೆ ......61

36. ಸೌದಿ ಅರೇಬಿಯಾದಲ್ಲಿ ಚಲನಚಿತ್ರ ಪ್ರದರ್ಶನಗಳ ಮೇಲಿದ್ದ ನಿಷೇಧ ತೆರವು......62

37. ಲೆಗೆಟಮ್ ಸಮೃದ್ಧಿ ಸೂಚ್ಯಂಕ (Legatum Prosperity Index)......63

38. ಏಕಕಾಲಕ್ಕೆ 2 ಕ್ಷೇತ್ರದಿಂದ ಸ್ಪರ್ಧೆಗೆ ತಡೆ-ಕೇಂದ್ರ ಚುನಾವಣಾ ಆಯೋಗ ಸ್ಪಷ್ಟನೆ ......65

39. ಆಸಿಯಾನ್ ಇಂಡಿಯಾ ಸಂಪರ್ಕ ಶೃಂಗಸಭೆ (ASEAN-India Connectivity Summit (AICS)) ......67

40. ಸಾರಂಗ್‌ಖೇಡಾದಲ್ಲಿ ದೇಶದ ಮೊದಲ ಹಾರ್ಸ್ ಮ್ಯೂಸಿಯಂ ....................................... 69

41. ಭಾರತದ ದಿವಾಳಿತನ ಮತ್ತು ದಿವಾಳಿ ಘೋಷಣೆ ಮಂಡಳಿ (Insolvency and Bankruptcy Board of India (IBBI) ) ....................................... 71

42.ಲಕ್ಷ್ಯ ಇನಿಶಿಯೇಟಿವ್ (Laqshya Initiative) ....................................... 73

43. ರಂಗನಾಡಿ ಜಲವಿದ್ಯುತ್ ಅಣೆಕಟ್ಟು....................................... 73

44. ದೇಶದ ಮೊಟ್ಟಮೊದಲ ಆಹಾರ, ನೀರಿನ ಗುಣಮಟ್ಟ ಪರೀಕ್ಷೆಗೆ ಸಂಚಾರಿ ಪ್ರಯೋಗಾಲಯ......... 74

45. ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಕುರಿತು UNWTO / UNESCO ವಿಶ್ವ ಸಮ್ಮೇಳನ ........... 74

46. ಎಂಎಸ್‌ಎಂಇ ಸಂಬಂಧ್ (MSME Sambandh)....................................... 76

47. ರಾಜಕಾರಣಿಗಳ ವಿಚಾರಣೆಗೆ 12 ವಿಶೇಷ ನ್ಯಾಯಾಲಯ....................................... 77

48. ಫೇಮ್ ಇಂಡಿಯಾ ಯೋಜನೆ....................................... 79

49. ಏಷ್ಯಾ ಮೂಲಸೌಕರ್ಯ ಹೂಡಿಕೆ ಬ್ಯಾಂಕ್(AIIB)....................................... 80

50. ಭಾರತ-ಮ್ಯಾನ್ಮಾರ್-ಥೈಲ್ಯಾಂಡ್ (IMT)ಹೆದ್ದಾರಿ ....................................... 81

51. ೧೧ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್ ....................................... 85

52.ಆಧುನಿಕ ನಕ್ಷತ್ರಗಳ ಕೈಪಿಡಿಯಲ್ಲಿ ರೇವತಿ, ಭರಣಿ....................................... 86

53. ಕೃತಕ ಬುದ್ಧಿಮತ್ತೆ ಬಳಸಿ ಹೊಸ ಸೌರ ಮಂಡಲ ಪತ್ತೆ ಹೇಗೆ ಮಾಡಿದ ನಾಸಾ....................... 87

54. ಭಾರತೀಯ ನೌಕಾಪಡೆ ಸೇರಿದ ಕಲವರಿ....................................... 88

55.ಅಂತಾರಾಷ್ಟ್ರೀಯ ನ್ಯಾಯಾಲಯ....................................... 91

56. ಇ–ತ್ಯಾಜ್ಯ(E-WASTE) ನಿರ್ವಹಣೆ ....................................... 93

57. ಸಖಿ ಒನ್ ಸ್ಟಾಪ್ ಸೆಂಟರ್....................................... 94

58. ತ್ರಿವಳಿ ತಲಾಖ್ ಮಸೂದೆಗೆ ಕೇಂದ್ರ ಸಚಿವ ಸಂಪುಟ ಅಸ್ತು ....................................... 95

59.ಎಕುವೆರಿನ್(Ekuverin') ....................................... 96

60. ಅಮರನಾಥ ಗುಹೆಯನ್ನು ಶಬ್ದರಹಿತ ಪ್ರದೇಶ ಎಂದು ಘೋಷಣೆ ಮಾಡಿಲ್ಲ: ಎನ್ ಜಿಟಿ ಸ್ಪಷ್ಟನೆ ....97

61.ಎಕೊ ನಿವಾಸ್ ....................................................................................................98

62. 100 ಕೋಟಿಗೂ ಅಧಿಕ ಭಾರತೀಯರಿಗೆ ಆರೋಗ್ಯ ವಿಮೆ ಇಲ್ಲ:ಜಾಗತಿಕ ವರದಿ ......................99

63. ಹಿಂದಿ ಭಾಷೆಯಲ್ಲಿ ಇ-ಮೇಲ್ ಐಡಿ ನೀಡಿದ ದೇಶದ ಮೊದಲ ರಾಜ್ಯ  ರಾಜಸ್ಥಾನ್................101

64.ಭಾರತದ ಲಕ್ಷ್ಮೀ ಪುರಿ ಸೇರಿ 6 ರಾಜತಾಂತ್ರಿಕರಿಗೆ ವಿಶ್ವಸಂಸ್ಥೆ 'ಪವರ್ ಆಫ್ ಒನ್' ಪ್ರಶಸ್ತಿ........101

65.ಭಾರತೀಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷರಾಗಿ ನರೀಂದರ್ ಬಾತ್ರಾ...................................102

66. ಇಸ್ಲಾಮಿಕ್ ಸಹಕಾರ ಸಂಘಟನೆ(ಒಐಸಿ) ...............................................................102

67. ವೇದಗಳ ಕುರಿತು  ವಿಶ್ವ ಸಮ್ಮೇಳನ ...................................................................103

68.ಸರಕಾರದ ಲೆಟರ್‌ಹೆಡ್‌ನಲ್ಲಿ ದೀನದಯಾಳ್ ಉಪಾಧ್ಯಾಯರ ಭಾವಚಿತ್ರವನ್ನು ಅಳವಡಿಸಿಕೊಂಡ ಪ್ರಪ್ರಥಮ ರಾಜ್ಯವಾಗಿ ರಾಜಸ್ತಾನ ಸರಕಾರ ...............................................................103

69.ಸಂಕಲ್ಪ್ ಯೋಜನೆ (SANKALP Project) ..............................................................104

70.  ಚೆಕ್ ಅಮಾನ್ಯಕ್ಕೆ ಮಧ್ಯಂತರ ಪರಿಹಾರ? ..............................................................106

71.ಎಟಿಎಲ್ ಸಮುದಾಯ ದಿನ (ATL Community Day ) ............................................108

72. ಹೊಸ ಖಾತೆಗೆ ಆಧಾರ್ ನೋಂದಣಿ ಚುರುಕುಗೊಳಿಸಿ: ಬ್ಯಾಂಕುಗಳಿಗೆ ಯುಐಡಿಎಐ ನಿರ್ದೇಶನ110

73.  ಹೊಳೆಯುವ ಗಿಡ ಸೃಷ್ಟಿ (Plants that can glow)...................................................111

74. ರೈಲ್ವೆ ಸಚಿವಾಲಯವು ಪ್ರಾರಂಭಿಸಿರುವ ಮುಖ್ಯ  ಉಪಕ್ರಮಗಳು (Initiatives)...................113

75.ತುಯಿರಿಯಾಲ್ ಜಲವಿದ್ಯುತ್ ಯೋಜನೆ...................................................................113

76.ರೇರಾ  ಆಡಳಿತವು  ನಗರ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ...............................114

77. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಬದಲು ನ್ಯಾಷನಲ್ ಮೆಡಿಕಲ್ ಕಮಿಷನ್: ಮಸೂದೆಗೆ ಕೇಂದ್ರ  ಸಂಪುಟ  ಅನುಮೋದನೆ ..........................................................................115

78. ಮೆಟ್ರೋ ರೈಲು ಸುರಕ್ಷತೆ ಆಯುಕ್ತರು (Commissioner of Metro Railway Safety)..........116

79. ಸಿಗರೇಟ್ ಪ್ಯಾಕ್‌ಗಳ ಎರಡೂ ಕಡೆ ಚಿತ್ರ ಸಹಿತ ಎಚ್ಚರಿಕೆ ಸಂದೇಶ ಮುದ್ರಿಸುವ ಆದೇಶವನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್ ..................................................................119

80. ರಾಷ್ಟ್ರೀಯ ಆಯುಷ್ ಮಿಷನ್ (ನಾಮ್)........................................................................121

81. ಈಶಾನ್ಯ ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (NESIDS).....................................123

82. ಸಾಗರ ಶಾಸ್ತ್ರ ಕಾರ್ಯಕಾಚರಣೆಯ ಅಂತಾರಾಷ್ಟ್ರೀಯ ತರಬೇತಿ ಕೇಂದ್ರ (International Training Centre for Operational Oceanography) ........................................................125

83. ಭಾರತ ಮತ್ತು ಕೊಲಂಬಿಯಾ ನಡುವೆ ಕೃಷಿ ಮತ್ತು ಮೀನುಗಾರಿಕೆ ಕ್ಷೇತ್ರದಲ್ಲಿನ ತಿಳಿವಳಿಕೆ ಒಪ್ಪಂದಕ್ಕೆ ಸಂಪುಟದ ಅನುಮೋದನೆ ........................................................................127

84. ನ್ಯಾಯ ಗ್ರಾಮ್ ಯೋಜನೆ .......................................................................................129

85. ಐಎಎಫ್'ನಲ್ಲಿ 45 ವರ್ಷ ಸುದೀರ್ಘ ಸೇವೆ ಸಲ್ಲಿಸಿದ್ದ ಎಂಐ-8 ಪ್ರತಾಪ್ ಹೆಲಿಕಾಪ್ಟರ್'ಗೆ ವಿದಾಯ ........................................................................................................129

86.ಡೆಬಿಟ್ ಕಾರ್ಡ್/ಭೀಮ್ ಯುಪಿಐ/ಎಇಪಿಎಸ್ ವಹಿವಾಟುಗಳ ಮೇಲಿನ ಎಂ.ಡಿ.ಆರ್. ಶುಲ್ಕಕ್ಕೆ ಸಹಾಯಧನ ನೀಡಲು ಸಂಪುಟದ ಅನುಮೋದನೆ ..................................................................130

87. ಭಾರತ- ಮೊರಾಕ್ಕೊ ಒಪ್ಪಂದ...............................................................................131

88. 157 ಅನ್ಯ ದಾಳಿಕೋರ ಪ್ರಾಣಿ ಪ್ರಬೇಧಗಳ ಪಟ್ಟಿ (Alien invasive animal species)...........132

89. ಪಾದರಕ್ಷೆ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗಾಗಿ ವಿಶೇಷ ಪ್ಯಾಕೇಜ್ ಗೆ ಸಂಪುಟದ ಅನುಮೋದನೆ...134

90. ಜಾಗತಿಕ ಆವಿಷ್ಕಾರ ಸೂಚ್ಯಂಕ (Global Innovation Index)........................................138

91. ಕ್ರಿಯಾತ್ಮಕ ಸಾಮಗ್ರಿಗಳ ಕುರಿತು ಜಾಗತಿಕ ಸಮ್ಮೇಳನ.............................................139

92. ವಿದೇಶಗಳಲ್ಲೂ ಐಐಎಂ ಕ್ಯಾಂಪಸ್, ಪದವಿ ಪ್ರದಾನಕ್ಕೆ ಸಂಸತ್ ಅಸ್ತು...............................139

93. ಇ-ಸಿಗರೇಟ್ ತಡೆ: ಕೇಂದ್ರ ಚಿಂತನೆ .......................................................................141

94. ಇ-ಕಾರು; ಭಾರತ ಏನನ್ನು ಕಲಿತುಕೊಳ್ಳಬಹುದು? ........................................................143

95. 5 ಲಕ್ಷ ಬಿಟ್ ಕಾಯಿನ್ ಬಳಕೆದಾರರಿಗೆ ಐಟಿ ನೋಟಿಸ್....................................................145

96. ಭದ್ರತಾ ಮಂಡಳಿ ನಿರ್ಣಯ ವಿರುದ್ಧ ಅಮೆರಿಕದ ವಿಟೋ................................................148

97. ಕನಿಷ್ಠ ಪರಿಹಾರ ನಿಗದಿಗೆ ನಿಯಮ ರೂಪಿಸದ ಕೇಂದ್ರ ಸರಕಾರ ........................................149

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

98.ರಾಷ್ಟ್ರೀಯ ಹೆದ್ದಾರಿ ಹೂಡಿಕೆ ಉತ್ತೇಜನ ಘಟಕ (National Highways Investment Promotion Cell -NHIPC)....152
99. ಸಮೀಪ್ ಯೋಜನೆ....153
100. ರಾಷ್ಟ್ರೀಯ ಸೇವಾ ಯೋಜನ ಪ್ರಶಸ್ತಿ....155
101. ದರ್ಪಣ್ ಯೋಜನೆ....156
102. ಕಾಳಧನಿಕರ ಬೇಟೆಗೆ ಭಾರತ-ಸ್ವಿಸ್ ಒಪ್ಪಂದ: ಹೊಸ ವರ್ಷದಿಂದಲೇ ಮಾಹಿತಿ ವಿನಿಮಯ....158
103. ರಖೀನ್ ಅಭಿವೃದ್ಧಿಗೆ ಭಾರತದ ನೆರವು....161
104.ಐಸಿಜಿಎಸ್ ಸುಜಯ್....163
105. ಇಂಟರ್ನೆಟ್ ಬಳಕೆದಾರರಲ್ಲಿ ಭಾರತೀಯ ಮಹಿಳೆಯರ ಪ್ರಮಾಣ ಕಡಿಮೆ-ಯುನಿಸೇಫ್....164
106. ಗಂಗಾ ಗ್ರಾಮ ಯೋಜನೆ....166
107. ಕ್ಷಿಪ್ರ ಸರಿಪಡಿಸುವ ಕ್ರಮ( Prompt correction action -PCA)....167
108. ಜಲ ಫಿರಂಗಿ ಮೂಲಕ ಸ್ಮಾಗ್ ನಿವಾರಣೆ ಯತ್ನಕ್ಕೆ ಮುಂದಾದ ದೆಹಲಿ ಸರ್ಕಾರ....168
109. ಒಡರ್ರನಾ ಅರುಣಾಚಲೆನಸಿಸ್ (Odorrana arunachalensis)....169
110. ನಗರದ ಬಡವರಿಗೆ ಮನೆ ನಿರ್ಮಾಣ ಎರಡನೇ ಸ್ಥಾನದಲ್ಲಿ ಕರ್ನಾಟಕ....171
111. ಎಫ್‌ಎಂ 2ನೇ ಹಂತದಲ್ಲಿ 680 ಚಾನೆಲ್ ಹರಾಜಿಗೆ ಸಂಪುಟ ಅನುಮೋದನೆ....171
112. ಮೊದಲ ಎಸಿ ನಗರ ರೈಲಿಗೆ ಚಾಲನೆ....173
113. ಮೆಜೆಂಟಾ ಮಾರ್ಗಕ್ಕೆ ಚಾಲನೆ....173
114.ಉತ್ತಮ ಆಡಳಿತ ದಿನ -2017 (Good Governance Day 2017)....174
115.ರಿಸರ್ವಾಯರ್ ಕಂಪ್ಯೂಟಿಂಗ್ ಸಿಸ್ಟಂ (Reservoir computing system)....175
116. ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಕ್ರಿಯಾ ಯೋಜನೆ (Action plan for the backward districts)....176
117. ಎಲೆಕ್ಟ್ರಾನಿಕ್ ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆ (e-HRMS)....177

IAS/KAS
ನಮ್ಮ ಐಎಎಸ್ ಅಕಾಡೆಮಿ

118. 'ಒಂದು ದೇಶ-ಒಂದೇ ಪರ್ಮಿಟ್-ಒಂದೇ ತೆರಿಗೆ' ನೀತಿಗೆ ಶಿಫಾರಸು ....................................178

119. ಎಲ್‌ಪಿಜಿ ಆಮದು: ಚೀನಾ ಹಿಂದಿಕ್ಕಿದ ಭಾರತ ....................................180

120.ಪ್ರಕಾಶ್ ಹೇ ತೋ ವಿಕಾಸ್ ಯೋಜನೆಗೆ ಚಾಲನೆ....................................181

121.ಜಿಎಸ್‌ಟಿ ಸಂಗ್ರಹ ಮಹಾರಾಷ್ಟ್ರ ಪ್ರಥಮ....................................182

122.ವಿಶ್ವದ ಅತಿದೊಡ್ಡ ಉಭಯವಾಸಿ ವಿಮಾನ ಟೇಕಾಫ್....................................182

123.ಕಿಸಾನ್ ಉದಯ್ ಯೋಜನೆ ....................................182

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 1 .ಅಂತರಾಷ್ಟ್ರಿಯ ಸೌರ ಶಕ್ತಿ ಒಕ್ಕೂಟ (INTERNATIONAL SOLAR ALLIANCE)

### ಪ್ರಮುಖ ಸುದ್ದಿ

- ಅಂತಾರಾಷ್ಟ್ರೀಯ ಸೌರ ಒಕ್ಕೂಟವನ್ನು ಅಧಿಕೃತವಾಗಿ ಒಪ್ಪಂದ ಆಧಾರಿತ ಅಂತರ್ ಸರ್ಕಾರಗಳ ಸಂಘಟನೆಯಾಗಿ ಅಸ್ತಿತ್ವದಲ್ಲಿ ಬರಲಿದೆ.

### ಪ್ರಮುಖ ಸಂಗತಿಗಳು (FOR PRELIMS)

- ಇದನ್ನು Conference of Parties-21 (COP-21) ಶೃಂಗಸಭೆಯ ಮೊದಲ ದಿನದಂದು, ಭಾರತೀಯ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರೆಂಚ್ ಅಧ್ಯಕ್ಷ ಫ್ರಾಂಕೋಯಿಸ್ ಹಾಲಾಂಡೆ ಅವರು ಹೇರಳವಾದ ಸೌರ ಶಕ್ತಿಯನ್ನು ಹೊಂದಿರುವ ದೇಶಗಳ ಒಕ್ಕೂಟವಾಗಿ ಅಂತಾರಾಷ್ಟ್ರೀಯ ಸೌರ ಒಕ್ಕೂಟವನ್ನು ಪ್ರಾರಂಭಿಸಿದರು.
- ಇದರ ಕೇಂದ್ರ ಕಚೇರಿಯು **ಹರಿಯಾಣದ ಗುರ್ಗಾಂವ್ ನಲ್ಲಿದೆ**.
- ಈ ಒಪ್ಪಂದವನ್ನು ಅನುಮೋದಿಸಿದ **15 ನೇ ದೇಶ ಗಿನಿಯಾ**
- ಅಂತರರಾಷ್ಟ್ರೀಯ ಸೌರ ಒಕ್ಕೂಟ ಮೂರು ಉದ್ದೇಶಗಳನ್ನು ಒಳಗೊಂಡಿದೆ.ಅವುಗಳೆಂದರೆ
- 1.ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಬೆಲೆಯನ್ನು ತಗ್ಗಿಸುವುದು .
- 2.ಸೌರ ತಂತ್ರಜ್ಞಾನಗಳನ್ನು ಪ್ರಮಾಣೀಕರಿಸುವುದು.
- 3.ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವುದು.

### ಸಂಕ್ಷಿಪ್ತ ವಿಶ್ಲೇಷಣೆ (FOR MAINS)

- ಭೂಮಿಯ ವಾಯುಮಂಡಲದಲ್ಲಿ ಹಸಿರುಮನೆ ಅನಿಲಗಳ ಮಟ್ಟ ಹೆಚ್ಚಾಗುವುದರಿಂದ ಉಂಟಾಗುವ ಹವಾಗುಣ ಬದಲಾವಣೆಯ ಬಗ್ಗೆ ಹೆಚ್ಚಿನ ಕಾಳಜಿಯೊಂದಿಗೆ, ಪಳೆಯುಳಿಕೆ- ಇಂಧನಗಳಿಗೆ ಪರ್ಯಾಯವಾಗಿ ಶುದ್ಧವಾದ ಕಾರ್ಯಸಾಧ್ಯವಾದ ಸೌರ ಶಕ್ತಿ ಬಳಕೆ ವೇಗವನ್ನು ಪಡೆಯುತ್ತಿದೆ. ಸೌರ ಶಕ್ತಿಯ ಬಳಕೆಯನ್ನು ಹೆಚ್ಚಿಸಲು ಭಾರತೀಯ ಸರ್ಕಾರ ಹಲವಾರು ಪ್ರಯತ್ನಗಳನ್ನು ಕೈಗೊಂಡಿದೆ.

- ಸುಮಾರು ಒಂದು ವರ್ಷದಲ್ಲಿ ಸುಮಾರು 300 ಸ್ಪಷ್ಟ ಮತ್ತು ಬಿಸಿಲಿನ ದಿನಗಳಲ್ಲಿ, ಭಾರತದ ಭೂಪ್ರದೇಶದ ಮೇಲೆ ಅಂದಾಜು 5,000 ಟ್ರಿಲಿಯನ್ ಕಿಲೋವ್ಯಾಟ್-ಗಂಟೆಗಳಷ್ಟಿರುವ ಸೌರ ಶಕ್ತಿಯ ಸಂಭವನೀಯತೆ ಭಾರತದಲ್ಲಿರುವ ಎಲ್ಲಾ ಪಳೆಯುಳಿಕೆ ಇಂಧನ ಶಕ್ತಿ ನಿಕ್ಷೇಪಗಳ ಶಕ್ತಿಯ ಒಟ್ಟು ಉತ್ಪಾದನೆಯನ್ನು ಮೀರಿಸುತ್ತದೆ.

- ಭಾರತದಲ್ಲಿ ಸೌರಶಕ್ತಿ ವೇಗವಾಗಿ ಬೆಳೆಯುತ್ತಿರುವ ಉದ್ಯಮವಾಗಿದೆ. ಸೆಪ್ಟೆಂಬರ್ 2017 ರ ವೇಳೆಗೆ, ದೇಶದ ಸೌರ ಗ್ರಿಡ್ 14.77 ಗಿಗಾವ್ಯಾಟ್ ನಷ್ಟು ಸಾಮರ್ಥ್ಯ ಹೊಂದಿತ್ತು. ಪ್ರಸ್ತುತ, ಗ್ರಿಡ್-ಸಂಪರ್ಕಿತ ಸೌರ ವಿದ್ಯುತ್ ಉತ್ಪಾದನೆಯು ಭಾರತದ ಒಟ್ಟು ಉಪಯುಕ್ತತೆಯ ವಿದ್ಯುತ್ ಉತ್ಪಾದನೆಯ ಸುಮಾರು ಶೇಕಡಾ ೧ ರಷ್ಟಿದೆ.

- ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ನಡೆಸಿದ  ಭಾರತದ ಭಾರಿ ಪ್ರಯತ್ನಗಳು ಸೌರ ಬೆಲೆಯಲ್ಲಿ ಗಣನೀಯ ಕುಸಿತಕ್ಕೆ ಕಾರಣವಾಗಿದೆ ಮತ್ತು ಸೌರ ವಿದ್ಯುಚ್ಛಕ್ತಿಯ ಸರಾಸರಿ ದರವು ಅದರ ಕಲ್ಲಿದ್ದಲಿನಿಂದ ಹೊರಹಾಕಲ್ಪಟ್ಟ ಪ್ರತಿರೂಪಕ್ಕಿಂತ 18 ಪ್ರತಿಶತದಷ್ಟು ಕಡಿಮೆಯಾಗಿದೆ. ಬೆಳಕು, ಪಂಪ್ ಮತ್ತು ಸಾರ್ವಜನಿಕ ಸಾರಿಗೆ ಮುಂತಾದ ಅಸಂಖ್ಯಾತ ಉದ್ದೇಶಗಳಿಗಾಗಿ ಸೌರ ವಿದ್ಯುಚ್ಛಕ್ತಿಯನ್ನು ಬಳಸಬಹುದು.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಸೌರ ದ್ಯುತಿವಿದ್ಯುತ್ ಜನಕ ವಿದ್ಯುತ್ ಉತ್ಪಾದನೆಯ ಹೊರತಾಗಿ, ಸೌರ ಉಷ್ಣ ಸ್ಥಾವರಗಳಲ್ಲಿ ಪ್ರಗತಿಯನ್ನು ಸಹ ಮಾಡಲಾಗಿದೆ. ಇದು ವಿದ್ಯುತ್ ಉತ್ಪಾದನೆಗೆ ಉಗಿ ಮತ್ತು ಚಕ್ರಗಳನ್ನು ಉತ್ಪಾದಿಸಲು ಸೌರ ಶಾಖವನ್ನು ಬಳಸುತ್ತದೆ. ಭಾರತದಲ್ಲಿನ ವಾಣಿಜ್ಯ ಸೌರ ಉಷ್ಣ ವಿದ್ಯುತ್ ಸ್ಥಾವರಗಳ ಪ್ರಸ್ತುತ ಸ್ಥಾಪಿತ ಸಾಮರ್ಥ್ಯವು 227.5 ಮೆಗಾವ್ಯಾಟ್ಗಳಷ್ಟಿದೆ. ಸೌರ-ಉಷ್ಣದ ಮತ್ತು ಸೌರ-ದ್ಯುತಿವಿದ್ಯುಜ್ಜನಕಗಳ ಸರಿಯಾದ ಮಿಶ್ರಣವು ವಿದ್ಯುತ್ ಏರುಪೇರಿನ ಸಂದರ್ಭದಲ್ಲಿ ದುಬಾರಿ ಬ್ಯಾಟರಿಯ ಅಗತ್ಯವಿಲ್ಲದಂತೆ ಮಾಡಬಲ್ಲದು.

- ಮಾರ್ಚ್ 2022 ರೊಳಗೆ ಸೌರ ಮತ್ತು ಗಾಳಿ ವಿದ್ಯುತ್ ಕ್ಷೇತ್ರದಲ್ಲಿ 175-ಗಿಗಾವ್ಯಾಟ್ ಸಾಮರ್ಥ್ಯವನ್ನು ಪಡೆಯಲು ಭಾರತ ಸರ್ಕಾರವು ಒಂದು ಸ್ವಚ್ಛ ಇಂಧನ ಜಾರಿ ಪಥವನ್ನು ಘೋಷಿಸಿದೆ. ಇದಲ್ಲದೆ, ರೈತರಿಗೆ 20 ಗಿಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಸರ್ಕಾರ ರೂಪಿಸಿದೆ. ಇದು ಸೌರ ಶಕ್ತಿಯಿಂದ

ನೀರಿನ ಪಂಪ್ ಗಳನ್ನು ಪವರ್ ಮಾಡುವಿಕೆಗಾಗಿ ಹೊಲಗಳಲ್ಲಿ 1 ರಿಂದ 2 ಮೆಗಾವ್ಯಾಟ್ ಗಾತ್ರದ ಸಣ್ಣ ಸೌರ ಯೋಜನೆಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ.

- ಸೌರ ಉಪಕರಣಗಳ ದೇಶೀಯ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಸರ್ಕಾರ ಬಯಸಿದ್ದು ಇದಕ್ಕಾಗಿನ ನೀಲ ನಕಾಶೆ ಘೋಷಿಸಲು ಮುಂದಾಗಿದೆ. ದೊಡ್ಡ ಪ್ರಮಾಣದ ಗ್ರಿಡ್-ಸಂಪರ್ಕಿತ ಸೌರ ದ್ಯುತಿವಿದ್ಯುಜ್ಜನಕ ಯೋಜನೆಗೆ ಹೊರತಾಗಿ ಸ್ಥಳೀಯ ಶಕ್ತಿ ಅಗತ್ಯಗಳಿಗಾಗಿ ಭಾರತವು ಗ್ರಿಡ್ ಸೌರಶಕ್ತಿಯನ್ನು ಅಭಿವೃದ್ಧಿಪಡಿಸುತ್ತಿದೆ.

- ವಿದ್ಯುತ್ ಉತ್ಪಾದನೆಯ ಹೊರತಾಗಿ, ಕೇಂದ್ರೀಕರಿಸಿದ ಸೌರ ಪ್ರತಿಫಲಕಗಳನ್ನು ಬಳಸಿಕೊಂಡು ನೀರು ಅಥವಾ ಗಾಳಿಯ ತಾಪನವು ವೇಗವಾಗಿ ಹೆಚ್ಚುತ್ತಿದೆ. ದಕ್ಷಿಣ ಭಾರತದಲ್ಲಿನ ಬೆಂಗಳೂರು ನಗರವು ಭಾರತದಲ್ಲಿ ಛಾವಣಿಯ ಮೇಲ್ಭಾಗದ ಸೌರ ಜಲತಾಪಕಗಳ ದೊಡ್ಡ ನಿಯೋಜನೆಯನ್ನು ಹೊಂದಿದೆ, ಇದು 200 ಮೆಗಾವ್ಯಾಟ್ ನಷ್ಟು ಉಷ್ಣದ ಸಮಾನ ಶಕ್ತಿ ಉತ್ಪಾದಿಸುತ್ತದೆ. ಛಾವಣಿಯ ಮೇಲಿನ ಉಷ್ಣ ವ್ಯವಸ್ಥೆಗಳನ್ನು ಬಳಸುತ್ತಿರುವ ನಿವಾಸಿಗಳಿಗೆ ಮಾಸಿಕ ವಿದ್ಯುಚ್ಛಕ್ತಿ ಮಸೂದೆಗಳಲ್ಲಿ 78 ಯು.ಎಸ್. ಸೆಂಟ್ಸ್ ಗಳ ರಿಯಾಯಿತಿ ನೀಡಿದ ಭಾರತದ ಮೊದಲ ನಗರ ಬೆಂಗಳೂರು ಆಗಿದೆ.

- ಬೆಂಗಳೂರಿನ ಎಲ್ಲಾ ಹೊಸ ಕಟ್ಟಡಗಳಲ್ಲಿ ಇದು ಕಡ್ಡಾಯವಾಗಿದೆ. ಮತ್ತೊಂದು ನಗರ ಪುಣೆಯಲ್ಲಿಯೂ ಹೊಸ ಕಟ್ಟಡಗಳಲ್ಲಿ ಸೌರ ಜಲತಾಪಕಗಳನ್ನು ಕಡ್ಡಾಯಗೊಳಿಸಿದೆ.

- ಸೌರ ವಿದ್ಯುತ್ ಸ್ಥಾವರಗಳ ನಿರ್ಮಾಣ ಮಾಡಲು ಜಮೀನಿನ ಕೊರತೆಯ ಸಮಸ್ಯೆಯನ್ನು ಸಹ ಗಮನಿಸಲಾಗುತ್ತಿದೆ. ಯುಟಿಲಿಟಿ-ಸ್ಕೇಲ್ ಸೌರಶಕ್ತಿ ಸ್ಥಾವರಗಳಲ್ಲಿ ಪ್ರತಿ 40 ರಿಂದ 60 ಮೆಗಾ ವ್ಯಾಟ್ ಷ್ಟು ವಿದ್ಯುತ್ ಉತ್ಪಾದಿಸಲು ಸುಮಾರು 1 ಚದರ ಕಿಲೋಮೀಟರ್ ಜಾಗ ಬೇಕಿದೆ.

- ಭಾರತದಲ್ಲಿ ಲಭ್ಯವಿರುವ ಭೂಮಿ ವಿರಳವಾಗಿದ್ದು ಪ್ರತಿ ತಲಾ ಭೂಮಿ ಲಭ್ಯತೆ ಕಡಿಮೆಯಾಗಿದೆ. ಈ ಸಮಸ್ಯೆಯನ್ನು ಮೀರಲು ಬೃಹತ್ ಸೌರ ವಿದ್ಯುತ್ ಸ್ಥಾವರಗಳನ್ನು ಕಾಲುವೆಗಳು, ಸರೋವರಗಳು, ಜಲಾಶಯಗಳು, ಕೃಷಿ ಕೊಳಗಳು ಮತ್ತು ಸಮುದ್ರದ ಮೇಲ್ಮೈ ವಿಸ್ತೀರ್ಣವನ್ನು ಬಳಸುವುದು ಒಂದು ದಾರಿಯಾಗಿದೆ.

- 80 ರಾಷ್ಟ್ರಗಳ ಈ ಒಕ್ಕೂಟದಲ್ಲಿ, ಸೂರ್ಯ-ಸಮೃದ್ಧ ರಾಷ್ಟ್ರಗಳಾದ ಕಟಕ ಮತ್ತು ಮಕರ ಸಂಕ್ರಾಂತಿ ವೃತ್ತದ ನಡುವೆ ಸಂಪೂರ್ಣವಾಗಿ ಇರುವ ಅಥವಾ ಭಾಗಶಃ ಸುತ್ತುವರಿದಿರುವ ದೇಶಗಳ ಒಂದು ಸಾಮಾನ್ಯ ವೇದಿಕೆಯಾಗಿದೆ. ಇದು ಸೌರ ಶಕ್ತಿ ಬಳಕೆಯನ್ನು ಹೆಚ್ಚಿಸುವ ಒಂದು ವೇದಿಕೆಯಾಗಿದೆ. ಇದು ಜಾಗತಿಕ ಹಸಿರುಮನೆ ಹೊರಸೂಸುವಿಕೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ ಹಾಗೆಯೇ ಇದು ಅಗ್ಗದ ಶಕ್ತಿ.

- ಸೂಕ್ತ ಮಾನದಂಡಗಳ ನಿಯೋಜನೆ, ಸಂಪನ್ಮೂಲ ಮೌಲ್ಯಮಾಪನಗಳನ್ನು ಸುಲಭಗೊಳಿಸುವುದು, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಪ್ರದರ್ಶನ ಸೌಲಭ್ಯಗಳನ್ನು ಬೆಂಬಲಿಸುವುದು, ಸೌರ ತಂತ್ರಜ್ಞಾನಗಳ ನವೀನ ಮತ್ತು ಕೈಗೆಟುಕುವ ಅಪ್ಲಿಕೇಶನ್‌ಗಳನ ಉತ್ತೇಜಿಸುವ ದೃಷ್ಟಿಯಿಂದ ದೇಶಗಳು ಒಟ್ಟಿಗೆ ಕೆಲಸ ಮಾಡುವುವ ಗುರಿಹೊಂದಲಾಗಿದೆ.

- 2030 ರ ಹೊತ್ತಿಗೆ ಅಗತ್ಯವಿರುವ 1 ಟ್ರಿಲಿಯನ್ ಡಾಲರ್ ಹೂಡಿಕೆಗಳನ್ನು ಒಟ್ಟುಗೂಡಿಸಲು ನವೀನ ನೀತಿಗಳನ್ನು, ಯೋಜನೆಗಳು, ಕಾರ್ಯಕ್ರಮಗಳು, ಸಾಮರ್ಥ್ಯದ ನಿರ್ಮಾಣ ಕ್ರಮಗಳು ಮತ್ತು ಹಣಕಾಸಿನ ಸಲಕರಣೆಗಳನ್ನು ಸಹ ISA ಯ ಜಂಟಿ ಪ್ರಯತ್ನಗಳು ಒಳಗೊಂಡಿವೆ. ಅಂತಹ ಉಪಕ್ರಮಗಳು ಉತ್ಪಾದನೆ ಮತ್ತು ಅಭಿವೃದ್ಧಿ ವೆಚ್ಚವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಭಾವಿಸಲಾಗಿದೆ, ಬಡ ಮತ್ತು ದೂರದ ಪ್ರದೇಶಗಳ ಇಂಧನ ಸಮಸ್ಯೆಗಳನ್ನು ಪರಿಹರಿಸಲು ಸೌರ ತಂತ್ರಜ್ಞಾನಗಳ ಹೆಚ್ಚಿನ ನಿಯೋಜನೆ ಉಪಯುಕ್ತ ವಾಗಿದೆ.

✍ **ವಿಧ್ಯಾರ್ಥಿಗಳ ಯೋಚನೆಗೆ ಒಂದು ಯೋಜನೆ**

**In the light of its vision and objectives, examine the progress made by the International Solar Alliance (ISA) and the challenges it's facing in meeting its objectives**

(ಅಂತರಾಷ್ಟ್ರೀಯ ಸೌರ ಶಕ್ತಿ ಒಕ್ಕೂಟದ ದೃಷ್ಟಿಕೋನ ಮತ್ತು ಉದ್ದೇಶಗಳ ಬೆಳಕಿನಲ್ಲಿ, ಅದರ ಗುರಿಗಳನ್ನು ಪೂರೈಸುವಲ್ಲಿ ಮತ್ತು ಪ್ರಗತಿಯನ್ನು ಸಾಧಿಸಲು ಎದುರಿಸುತ್ತಿರುವ ಸವಾಲುಗಳನ್ನು ಪರೀಕ್ಷಿಸಿ.)

## 2. ಏಷ್ಯನ್ ದೇಶಗಳ ಸಮನ್ವಯಗೊಳಿಸುವಿಕೆ ಕಾರ್ಯಪಡೆ ಸಮ್ಮೇಳನ (ASIAN HARMONIZATION WORKING PARTY)

### ಪ್ರಮುಖ ಸುದ್ದಿ

- ಇತ್ತೀಚೆಗೆ ದೆಹಲಿಯಲ್ಲಿ ಏಷ್ಯನ್ ದೇಶಗಳ ಸಮನ್ವಯಗೊಳಿಸುವಿಕೆ ಕಾರ್ಯಪಡೆಯ 22ನೇ ವಾರ್ಷಿಕ ಸಮ್ಮೇಳನ ನಡೆಯಿತು.

- ಈ ಸಮ್ಮೇಳನದ ಮುಖ್ಯ ಉದ್ದೇಶವೆಂದರೆ ಏಷ್ಯಾ ಖಂಡದಲ್ಲಿ ಮತ್ತು ಹೊರಗೆ ವೈದ್ಯಕೀಯ ಸಾಧನಗಳ ನಿಯಂತ್ರಣವನ್ನು ಸನ್ವಯಗೊಳಿಸುವ ನಿಟ್ಟಿನಲ್ಲಿ ಚೌಕಟ್ಟು ಅಭಿವೃದ್ಧಿಪಡಿಸಿ ಶಿಫಾರಸ್ಸು ಮಾಡುವುದು. ಏಷ್ಯನ್ ದೇಶಗಳ ಔಷಧ ನಿಯಂತ್ರಕರು ಹಾಗೂ ಉದ್ಯಮ ಕ್ಷೇತ್ರದಲ್ಲಿ ಜ್ಞಾನ ಮತ್ತು ಅನುಭವವನ್ನು ವಿನಿಮಯ ಮಾಡಿಕೊಳ್ಳುವುದು.
- ಈ ಸಮ್ಮೇಳನವನ್ನು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ಹಾಗೂ ರಾಷ್ಟ್ರೀಯ ಔಷಧ ನಿಯಂತ್ರಣ ಪ್ರಾಧಿಕಾರ (ಎನ್‌ಡಿಆರ್‌ಎ) ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಭಾಗಿತ್ವದಲ್ಲಿ ಆಯೋಜಿಸಿದೆ.

### ಏಷ್ಯನ್ ದೇಶಗಳ ಸಮನ್ವಯಗೊಳಿಸುವಿಕೆ ಕಾರ್ಯಪಡೆ ಬಗ್ಗೆ

- ಅಂತರರಾಷ್ಟ್ರೀಯ ವೈದ್ಯಕೀಯ ಸಾಧನಗಳ ನಿಯಂತ್ರಣ ವೇದಿಕೆ (ಐಎಂಡಿಆರ್‌ಎಫ್) ಮಾರ್ಗಸೂಚಿಗೆ ಅನುಗುಣವಾಗಿ ಇದನ್ನು ರೂಪಿಸುವುದು. ಇದನ್ನು 1999ರಲ್ಲಿ ಆರಂಭಿಸಲಾಗಿದ್ದು, 30 ದೇಶಗಳ ನಿಯಂತ್ರಕರು ಮತ್ತು ಉದ್ಯಮಗಳು ಇದರ ಸದಸ್ಯತ್ವ ಪಡೆದಿವೆ.
- ಇದು ಸಂಬಂಧಪಟ್ಟ ಅಂತರರಾಷ್ಟ್ರೀಯ ಸಂಸ್ಥೆಗಳಾದ ಐಎಂಡಿಆರ್‌ಎಫ್. ಐಎಸ್‌ಒ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯಂಥ ಸಂಘ ಸಂಸ್ಥೆಗಳ ಜತೆಗೂಡಿ ಕಾರ್ಯನಿರ್ವಹಿಸುತ್ತದೆ.
- ಏಷ್ಯನ್ ದೇಶಗಳ ಸಮನ್ವಯಗೊಳಿಸುವಿಕೆ ಕಾರ್ಯಪಡೆಯು ಒಂದು ಲಾಭರಹಿತ ಸಂಸಥೆಯಾಗಿದ್ದು, ಇದರ ಮುಖ್ಯ ಉದ್ದೇಶವೆಂದರೆ ಏಷ್ಯಾ ಖಂಡದಲ್ಲಿ ಮತ್ತು ಹೊರಗೆ

ವೈದ್ಯಕೀಯ ಸಾಧನಗಳ ನಿಯಂತ್ರಣವನ್ನು ಸನ್ವಯಗೊಳಿಸುವ ನಿಟ್ಟಿನಲ್ಲಿ ಚೌಕಟ್ಟು ಅಭಿವೃದ್ಧಿಪಡಿಸಿ ಶಿಫಾರಸ್ಸು ಮಾಡುವುದು.

## 3. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯಲ್ಲಿ ಏಕ ಸದಸ್ಯ ಪೀಠ ರಚಿಸಲು ಅನುಮತಿಸಿದ ಕೇಂದ್ರ ಸರಕಾರ

### ಪ್ರಮುಖ ಸುದ್ದಿ

- ಕೇಂದ್ರ ಪರಿಸರ ಸಚಿವಾಲಯವು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಅಧ್ಯಕ್ಷರು ಏಕ ಸದಸ್ಯ ಪೀಠವನ್ನು ರಚಿಸಿಕೊಳ್ಳಲು ಒಪ್ಪಿಗೆ ನೀಡಿದೆ. ಆದರೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಇದಕ್ಕೆ ಅವಕಾಶ ಇರುತ್ತದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಪದ್ಧತಿಗಳು ಮತ್ತು ವಿಧಿವಿಧಾನಗಳು) ನಿಯಮಾವಳಿ- 2011ಕ್ಕೆ ಸೂಕ್ತ ತಿದ್ದುಪಡಿ ತಂದಿದೆ. ಈ ಸಂಬಂಧ ಈಗಾಗಲೇ ಅಧಿಸೂಚನೆ ಹೊರಡಿಸಿದೆ. ಆದರೆ ಇದು ವಿಶೇಷ ಸಂದರ್ಭಗಳನ್ನು ವ್ಯಾಖ್ಯಾನಿಸಿಲ್ಲ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಮುಖ ಸುದ್ದಿ

- ಈ ನಡೆಯ ಮುಖ್ಯ ಉದ್ದೇಶವಪೆಂದರೆ , ಎನ್‌ಜಿಟಿಯಲ್ಲಿನ ಖಾಲಿ ಹುದ್ದೆಗಳ ಸಮಸ್ಯೆಯನ್ನು ನಿಭಾಯಿಸುವುದು. ಈ ಹಿಂದಿನ ನಿಯಮಾವಳಿಯ ಅನ್ವಯ, ಎನ್‌ಜಿಟಿ ಪೀಠದಲ್ಲಿ ಎರಡು ಅಥವಾ ಹೆಚ್ಚಿನ ಸದಸ್ಯರು ಇರಬೇಕಾಗುತ್ತದೆ. ಇದರಲ್ಲಿ ಒಬ್ಬರು ನ್ಯಾಯಾಂಗ ಸದಸ್ಯರು ಹಾಗೂ ಮತ್ತೊಬ್ಬರು ತಜ್ಞರು ಇರುತ್ತಾರೆ. ನ್ಯಾಯಾಂಗ ಹಾಗೂ ಸ್ವತಂತ್ರ ತಜ್ಞರು ಎಲ್ಲ ವ್ಯಾಜ್ಯಗಳ ತಾಂತ್ರಿಕ ಆಯಾಮಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರ ಒದಗಿಸುತ್ತಾರೆ.

### ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಬಗ್ಗೆ

- ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯನ್ನು 2010ರಲ್ಲಿ ಆರಂಭಿಸಲಾಗಿದ್ದು, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕಾಯ್ದೆ- 2010ರ ಅನ್ವಯ ಇದನ್ನು ಆರಂಭಿಸಲಾಗಿದೆ. ಇದರ ಮುಖ್ಯ ಉದ್ದೇಸವೆಂದರೆ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳನ್ನು ತಕ್ಷಣ ಮತ್ತು ಪರಿಣಾಮಕಾರಿಯಾಗಿ ವಿಲೇವಾರಿ ಮಾಡುವುದು. ಇದರ ಜತೆಗೆ ಪರಿಸರ ಸಂರಕ್ಷಣೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಯ ಬಗೆಗಿನ ವ್ಯಾಜ್ಯಗಳನ್ನೂ ಇದು ಬಗೆಹರಿಸುತ್ತದೆ.

- ಎನ್‌ಜಿಟಿ ನೈಸರ್ಗಿಕ ನ್ಯಾಯ ತತ್ವದಿಂದ ನಿರ್ದೇಶಿತವಾಗಿದ್ದು, ನಾಗರಿಕ ಅಥವಾ ಅಪರಾಧ ದಂಡಸಂಹಿತೆಯ ವಿಧಿವಿಧಾನಗಳನ್ನು ಇದು ಒಳಗೊಂಡಿರುವುದಿಲ್ಲ. ಇದು ಯಾವುದೇ ಅರ್ಜಿಗಳು ಸಲ್ಲಿಕೆಯಾದ ಆರು ತಿಂಗಳ ಒಳಗಾಗಿ ವಿಲೇವಾರಿ ಮಾಡುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ನವದೆಹಲಿಯಲ್ಲಿ ಎನ್‌ಜಿಟಿ ಇದ್ದು, ಇದರ ಪೀಠಗಳು ಭೋಪಾಲ್, ಪುಣೆ, ಕೊಲ್ಕತ್ತಾ ಹಾಗೂ ಚೆನ್ನೈಗಳಲ್ಲಿ ಇವೆ. ಇತರೆಡೆಗಳಲ್ಲಿ ಪ್ರಾದೇಶಿಕ ಪೀಠಗಳು ಇರುತ್ತವೆ.

- ಇದು ವ್ಯಾಜ್ಯಗಳನ್ನು ನ್ಯಾಯಬದ್ಧವಾಗಿ ತೀರ್ಮಾನಿಸುವ ಹೊಣೆ ಹೊಂದಿದ್ದು, ಪರಿಸರ, ಅರಣ್ಯ, ಜನರಿಗೆ ಹಾನಿಕಾರಕವಾಗುವ ರೀತಿಯಲ್ಲಿ ಪರಿಸರಾತ್ಮಕ ಬದ್ಧತೆಯನ್ನು ಪರಿಶೀಲಿಸುತ್ತದೆ.

- ಇದು ವಿಶೇಷೀಕೃತ ಸಂಸ್ಥೆಯಾಗಿದ್ದು, ಪರಿಸರಾತ್ಮಕ ವಿಷಯಗಳನ್ನು ನಿರ್ವಹಿಸುವಲ್ಲಿ ಅಗತ್ಯವಾದ ಪರಿಣತಿಯನ್ನು ಹೊಂದಿರುತ್ತದೆ. ಇದರಲ್ಲಿ ಕಾನೂನು ಹಕ್ಕುಗಳು ಮತ್ತು ಪರಿಹಾರ ನೀಡಿಕೆ ಕೂಡಾ ಸೇರುತ್ತದೆ. ಪರಿಸರ ವಿಚಾರದಲ್ಲಿ ಯಾವುದೇ ವ್ಯಕ್ತಿ ಅಥವಾ ಆಸ್ತಿಗೆ ಹಾನಿಯಾದಾಗ ಅದಕ್ಕೆ ಪರಿಸರ ವಿಚಾರದಲ್ಲಿ ಪರಿಹಾರ ನೀಡುವ ಹೊಣೆ ಇರುತ್ತದೆ. ಇದು ನೀರು ಮತ್ತಿತರ ವಿವಾದಗಳ ಬಗ್ಗೆಯೂ ಪರಿಶೀಲನೆ ನಡೆಸುತ್ತದೆ.

**ವಿದ್ಯಾರ್ಥಿಗಳ ಯೋಚನೆಗೆ ಒಂದು ಯೋಜನೆ (MLP-GS PAPER-2)**

**Why was the National Green Tribunal (NGT) set up? What are its objectives? Do you think its institutional integrity and autonomy is being compromised? Critically examine.**

(ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಯನ್ನು ಏಕೆ ಸ್ಥಾಪಿಸಲಾಯಿತು ? ಅದರ ಉದ್ದೇಶಗಳು ಯಾವುವು? ಸಾಂಸ್ಥಿಕ ಸಮಗ್ರತೆ ಮತ್ತು ಸ್ವಾಯತ್ತತೆಯು ರಾಜಿಯಾಗುತ್ತಿದೆ ಎಂದು ನೀವು ಯೋಚಿಸುತ್ತೀರಾ? ವಿಮರ್ಶಾತ್ಮಕವಾಗಿ ಪರೀಕ್ಷಿಸಿ.)

## 4. ಮದುವೆ ನಂತರ ಪತ್ನಿಯ ಧರ್ಮ ಗಂಡನ ಧರ್ಮದ ಜತೆ ಸೇರುವುದಿಲ್ಲ: ಸುಪ್ರೀಂ ಕೋರ್ಟ್

### ಪ್ರಮುಖ ಸುದ್ದಿ

- ಮದುವೆಯಾದ ನಂತರ ಪತ್ನಿಯು ಪತಿಯ ಧರ್ಮದವಳಾಗುವುದಿಲ್ಲ. ಅಥವಾ ಪತಿಯ ಜಾತಿಯ ಜತೆ ಪತ್ನಿಯ ಜಾತಿಯೂ ಸೇರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

### ಪ್ರಮುಖ ಅಂಶಗಳು

- ತಮ್ಮ ಪೋಷಕರ ಅಂತ್ಯ ಸಂಸ್ಕಾರ ಮಾಡಲು ಅವಕಾಶ ನೀಡಲಿಲ್ಲ ಎಂದು ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ, ನ್ಯಾಯಮೂರ್ತಿಗಳಾದ ಎ.ಕೆ. ಸಿಕ್ರಿ, ಎ.ಎಂ. ಖಾನ್ವಿಲ್ಕರ್, ಡಿ.ವೈ.ಚಂದ್ರಚೂಡ್, ಅಶೋಕ್ ಭೂಷಣ್ ನೇತೃತ್ವದ ನ್ಯಾಯಪೀಠ ಕೈಗೆತ್ತಿಕೊಂಡಿತು.

- ಬೇರೆ ಸಮುದಾಯದ ಪುರುಷನನ್ನು ವಿವಾಹವಾಗಿದ್ದ ಪಾರ್ಸಿ ಮಹಿಳೆಯು ತಂದೆ-ತಾಯಿಯ ಅಂತ್ಯ ಸಂಸ್ಕಾರ ಮಾಡುವಂತಿಲ್ಲ. ಆಕೆ ಬೇರೆ ಸಮುದಾಯದವಳಾಗಿದ್ದಾಳೆಂದು ವಲ್ಸಾದ್ ಜೊರೊಸ್ಟ್ರಿಯನ್ ಟ್ರಸ್ಟ್ ನಿಷೇಧ ಹೇರಿತ್ತು. ಇದನ್ನು ಪ್ರಶ್ನಿಸಿ ಗೂಲ್‌ರುಕ್ ಎಂ. ಗುಪ್ತಾ ಕಾನೂನಿನ ಮೊರೆ ಹೋಗಿದ್ದರು.

- ಈಕೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಪೀಠ, ಆಕೆ ಮದುವೆಯಾದ ಮಾತ್ರಕ್ಕೆ ಮತಾಂತರವಾಗುವ ಅಗತ್ಯವಿಲ್ಲ. ಆಕೆ ಮದುವೆಯಾದ ನಂತರ ಆಕೆಯ ಜಾತಿ ಕೂಡ ಬದಲಾವಣೆಯಾಗಬೇಕು ಎಂಬ ನಿಯಮವಿಲ್ಲ. ಆಕೆ ಪಾರ್ಸಿಯಂತೆಯೇ ಅಂತ್ಯಸಂಸ್ಕಾರ ನಡೆಸಲು ಅರ್ಹಳು ಎಂದು ತಿಳಿಸಿದೆ.

- ಸಂಪೂರ್ಣವಾಗಿ ಬದಲಾಗುವುದು ಮಹಿಳೆಯ ವೈಯಕ್ತಿಕ ನಿರ್ಧಾರದ ಮೇಲೆ ಅನ್ವಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

## 5. ಏಕರೂಪ ನಾಗರಿಕ ಸಂಹಿತೆ( Uniform Civil Code)

### ಪ್ರಮುಖ ಸುದ್ದಿ

- ದೇಶದಲ್ಲಿ ಭಾರಿ ಚರ್ಚೆಗೆ ಒಳಗಾದ ಏಕರೂಪ ನಾಗರಿಕ ಸಂಹಿತೆಯ ಜಾರಿ ಅಸಾಧ್ಯ ಎಂದು ಕಾನೂನು ಆಯೋಗದ ಅಧ್ಯಕ್ಷ ನಿವೃತ್ತ ನ್ಯಾಯಮೂರ್ತಿ ಬಿ.ಎಸ್. ಚೌಹಾಣ್ ಹೇಳಿದ್ದಾರೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಸಮಗ್ರವಾದ ಏಕರೂಪ ನಾಗರಿಕ ಸಂಹಿತೆ ರೂಪಿಸಲು ಸಾಧ್ಯವಾಗದೇ ಇದ್ದರೆ ವಿವಿಧ ಧರ್ಮಗಳ ವೈಯಕ್ತಿಕ ಕಾನೂನುಗಳಿಗೆ ತಿದ್ದುಪಡಿ ಮಾಡಲು ಧರ್ಮವಾರು ಶಿಫಾರಸುಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ.
- ವಿವಿಧ ಧರ್ಮ, ಸಮುದಾಯ ಮತ್ತು ಪ್ರದೇಶಗಳಿಗೆ ಸಂವಿಧಾನ ಕೆಲವು ವಿಶೇಷ ಅವಕಾಶಗಳನ್ನು ನೀಡಿದೆ. ಈ ಅವಕಾಶಗಳನ್ನು ಉಲ್ಲಂಘಿಸಿ ನಾಗರಿಕ ಸಂಹಿತೆಯನ್ನು ರೂಪಿಸುವುದು ಎಂದೂ ಅವರು ತಿಳಿಸಿದ್ದಾರೆ.

### ಪ್ರಮುಖ ಸಂಗತಿ

- ಏಕರೂಪ ನಾಗರಿಕ ಸಂಹಿತೆಯ ವಿಚಾರದಲ್ಲಿ ಈವರೆಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಸರ್ಕಾರಕ್ಕೆ ಶಿಫಾರಸು ಮಾಡುವ ಯಾವುದೇ ಅಂಶ ಸಂವಿಧಾನದ ಚೌಕಟ್ಟಿನ ಒಳಗೇ ಇರುತ್ತದೆ. ಯಾವುದೇ ಧರ್ಮವನ್ನು ಅನುಸರಿಸುವ ಯಾವುದೇ ವ್ಯಕ್ತಿಯ ಮೂಲಭೂತ ಹಕ್ಕು ಉಲ್ಲಂಘನೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

- ಏಕರೂಪ ನಾಗರಿಕ ಸಂಹಿತೆ ಬಗ್ಗೆ ವಿಚಾರ ಮಾಡುವಾಗ ಸಂವಿಧಾನದ ಆರನೇ ಪರಿಚ್ಛೇದವನ್ನು ಗಮನದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ. ಈ ಪರಿಚ್ಛೇದವು ಈಶಾನ್ಯ ರಾಜ್ಯಗಳ ಜನರಿಗೆ ಕೆಲವು ವಿನಾಯಿತಿಗಳನ್ನು ನೀಡುತ್ತದೆ ಎಂದು ಅವರು ಹೇಳಿದರು.

### ಸುಪ್ರೀಂ ಕೋರ್ಟ್ ನಿಲುವು

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- 1985: ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವಂತೆ ಸಂಸತ್ತಿಗೆ ಸುಪ್ರೀಂ ಕೋರ್ಟ್ ಸೂಚಿಸಿತು. ಶಾಬಾನು ಪ್ರಕರಣದ ಬಳಿಕ ಈ ಸೂಚನೆ ನೀಡಲಾಯಿತು. ಭಾರತೀಯ ದಂಡ ಸಂಹಿತೆಯ 125ನೇ ಸೆಕ್ಷನ್ ಪ್ರಕಾರ ಮುಸ್ಲಿಂ ಮಹಿಳೆಗೆ ಗಂಡನಿಂದ ಜೀವನಾಂಶ ಪಡೆಯುವ ಹಕ್ಕು ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿತು

- 2015: ಏಕರೂಪ ನಾಗರಿಕ ಸಂಹಿತೆಯ ಅಗತ್ಯ ಇದೆ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತು. 'ವಿವಿಧ ವಿಚಾರಗಳನ್ನು ತಮ್ಮ ವೈಯಕ್ತಿಕ ಕಾನೂನು ಅಡಿಯಲ್ಲಿಯೇ ನಿರ್ಧರಿಸಬೇಕು ಎಂದು ಬೇರೆ ಬೇರೆ ಧರ್ಮಕ್ಕೆ ಸೇರಿದವರು ಹೇಳಬಹುದು. ಅದು ಸ್ವೀಕಾರಾರ್ಹವಲ್ಲ' ಎಂದು ಹೇಳಿತು

- 2016 ಅಕ್ಟೋಬರ್: ತ್ರಿವಳಿ ತಲಾಖ್ ವಿಚಾರದಲ್ಲಿ ಅಭಿಪ್ರಾಯ ತಿಳಿಸಲು ಕೇಂದ್ರಕ್ಕೆ ನಾಲ್ಕು ವಾರಗಳ ಅವಕಾಶ ನೀಡಿತು

- 2017 ಆಗಸ್ಟ್: ತ್ರಿವಳಿ ತಲಾಖ್‌ಗೆ ಸಾಂವಿಧಾನಿಕ ಮಾನ್ಯತೆ ಇಲ್ಲ ಎಂದು ಸಂವಿಧಾನ ಪೀಠ ತೀರ್ಪು ಕೊಟ್ಟಿತು

### ಏನಿದು ಏಕರೂಪ ನಾಗರಿಕ ಸಂಹಿತೆ?

- ಭಾರತ ಹಲವು ಧರ್ಮ-ಜಾತಿಗಳ ದೇಶ. ವಿವಿಧ ರೀತಿ ಆಚರಣೆಗಳು ಅಸ್ತಿತ್ವದಲ್ಲಿದೆ. ಸದ್ಯದ ಕಾನೂನುಗಳೂ ಆಯಾ ಧರ್ಮದ ವಿವಿಧ ಅಭ್ಯಾಸಗಳಿಗೆ ಅನುಗುಣವಾಗಿದೆ. ಇದರಿಂದಾಗಿ ವೈಯಕ್ತಿಕ ಕಾನೂನುಗಳೂ ವಿವಿಧ ಧರ್ಮಗಳಿಗೆ ಬೇರೆ ಬೇರೆಯ ರೀತಿಯಲ್ಲಿವೆ. ಇದಕ್ಕೆ ಹೊರತಾಗಿ ವೈಯಕ್ತಿಕ ಕಾನೂನುಗಳಾದ, ವಿಶೇಷವಾಗಿ ವಿವಾಹ, ವಿಚ್ಛೇದನ, ಆಸ್ತಿ ಹಂಚಿಕೆ, ಉತ್ತರಾಧಿಕಾರ ವಿಚಾರಗಳಿಗೆ ಏಕರೂಪದ ಕಾನೂನು ತರುವುದು ಇದರ ಉದ್ದೇಶ. ಇದನ್ನೇ ಏಕರೂಪ
- ನಾಗರಿಕ ಸಂಹಿತೆ ಎನ್ನುತ್ತಾರೆ. ಸದ್ಯ ವಿಚ್ಛೇದನವನ್ನು ತೆಗೆದುಕೊಂಡರೆ, ಹಿಂದೂಗಳಲ್ಲೊಂದು, ಮುಸಲ್ಮಾನರಲ್ಲೊಂದು, ಕ್ರೈಸ್ತರಲ್ಲೊಂದು ಎಂಬಂತೆ ಕಾನೂನು ಜಾರಿಯಲ್ಲಿದೆ.

### ಬೇಡಿಕೆ ಶುರುವಾದ್ದೆಲ್ಲಿಂದ?

- ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಕುರಿತ ಚರ್ಚೆ ಇಂದು ನಿನ್ನೆಯದಲ್ಲ. ಬ್ರಿಟಿಷರ ಕಾಲದಿಂದ ಅದು ಹುಟ್ಟಿದೆ. ಬ್ರಿಟಿಷ್ ಆಡಳಿತದ ವೇಳೆ ಭಾರತದಲ್ಲಿ ಏಕರೂಪದ ಕಾನೂನು ಬೇಕು ಎಂಬ ಬಗ್ಗೆ ದಿ ಲೆಕ್ಸ್ ಲೊಸಿ ವರದಿ 1840ರಲ್ಲಿ ಸಲ್ಲಿಕೆಯಾಗಿತ್ತು. ಸ್ವಾತಂತ್ರ್ಯನಂತರವೂ ಸಂವಿಧಾನ ರಚನೆ ಸಂದರ್ಭ ಇದು ಚರ್ಚೆಯಾಗಿತ್ತು. ಬಳಿಕ ಸಂವಿಧಾನ ರಚನೆ ಸಂದರ್ಭ ಏಕರೂಪ ನಾಗರಿಕ ಸಂಹಿತೆ ಅಳವಡಿಸುವುದು ಸರ್ಕಾರದ ಕರ್ತವ್ಯ ಎಂದು ಹೇಳಲಾಗಿತ್ತು. ಸಂವಿಧಾನದ 44ನೇ ಕಲಂನಲ್ಲಿ ಈ ಬಗ್ಗೆ ಹೇಳಲಾಗಿದೆ. 1985ರ ಶಾ ಬಾನು ಪ್ರಕರಣದ ಬಳಿಕ ಏಕರೂಪ

### 1985ರ ಶಾ ಬಾನು ಪ್ರಕರಣವೇನು?

- ಸುಪ್ರೀಂ ಕೋರ್ಟ್ ಮೊದಲ ಬಾರಿಗೆ ಏಕರೂಪದ ನಾಗರಿಕ ಸಂಹಿತೆ ಬಗ್ಗೆ ಹೇಳಿದ ಪ್ರಕರಣವಿದು. ಶಾ ಬಾನು ಅವರು 5 ಮಕ್ಕಳ ತಾಯಿಯಾಗಿದ್ದು, ತಮ್ಮ ಪತಿಯಿಂದ 1978ರಲ್ಲಿ ವಿಚ್ಛೇದನ ಪಡೆದಿದ್ದರು. ಬಳಿಕ ತಮ್ಮ ಮಾಜಿ
- ಗಂಡನಿಂದ ಜೀವನಾಂಶ ಪಡೆವ ಹಕ್ಕಿದೆ ಎಂದು ಕೋರ್ಟ್ ಮೆಟ್ಟಿಲೇರಿದ್ದರು. ಈ ಕುರಿತಂತೆ ಅವರು ಸುಪ್ರೀಂ ಮೆಟ್ಟಿಲೇರಿದ್ದು, ಜೀವನಾಂಶ ನೀಡುವಂತೆ ನ್ಯಾಯಪೀಠ ಆದೇಶಿಸಿತ್ತು. ಆದರೆ ಇದು ಮುಸ್ಲಿಂ ವೈಯಕ್ತಿಕ ಕಾನೂನುಗಳಿಗೆ ವಿರುದ್ಧ ಎಂದು ಆಗಿನ ರಾಜೀವ್ ಗಾಂಧಿ ಅವರ ಸರ್ಕಾರ, ಮುಸ್ಲಿಂ

ಮುಖಂಡರ ಒತ್ತಡದಿಂದಾಗಿ ಇದಕ್ಕೆ ವಿರುದ್ಧವಾದ ಮುಸ್ಲಿಂ ಮಹಿಳೆರ (ರಕ್ಷಣೆ ಮತ್ತು ಹಕ್ಕುಗಳು, ವಿಚ್ಛೇದನ ಕುರಿತ ಹಕ್ಕು) ಕಾಯ್ದೆ 1986ನ್ನು ಜಾರಿಗೆ ತಂದಿತ್ತು. ಪ್ರಕರಣದ ಹಿನ್ನೆಲೆಯಲ್ಲಿ ಮುಸ್ಲಿಂ ಕಾನೂನು ಮತ್ತು ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆ ವ್ಯಾಪಕ ಚರ್ಚೆಯಾಗಿತ್ತು. ಮುಸ್ಲಿಂ ಮಹಿಳೆಯರಿಗೆ ಹಕ್ಕು ನಿರಾಕರಿಸಲಾಗಿದೆ ಎಂಬ ವಾದಗಳು ಶುರುವಾಗಿದ್ದವು. ಇತ್ತೀಚೆಗೆ ಮುಸಲ್ಮಾನ ಸಮುದಾಯದಲ್ಲಿರುವ ತ್ರಿವಳಿ ತಲಾಖ್ ಮತ್ತು ಬಹುಪತ್ನಿತ್ವ ವಿರುದ್ಧ ಹಲವು ಮಹಿಳೆಯರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಪದ್ಧತಿಯನ್ನು ಸಂವಿಧಾನ ಚೌಕಟ್ಟಿನಲ್ಲಿ ಒರೆಗೆ ಹಚ್ಚಿ ನೋಡಬೇಕು ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತ್ತು.

### ಪರ-ವಿರೋಧ ಚರ್ಚೆ

- ಏಕರೂಪ ನಾಗರಿಕ ಸಂಹಿತೆ ಬಗ್ಗೆ ವ್ಯಾಪಕ ಪರ ವಿರೋಧ ಚರ್ಚೆಯಿದೆ. ಇದು ಸಮಾನತೆಯನ್ನು ಪ್ರತಿಪಾದಿಸುತ್ತದೆ, ಮಹಿಳೆಯರ ಹಕ್ಕುಗಳಿಗೆ ಪೂರಕವಾಗಿದೆ ಎಂಬ ವಾದಗಳು ಮುನ್ನೆಲೆಯಲ್ಲಿವೆ. ಅಲ್ಲದೇ ನ್ಯಾಯಾಂಗದ
- ಮಹತ್ವದ ಸಮಯ ಕಾಪಿಡಲು ಇದು ಪ್ರಯೋಜನಕಾರಿ, ದೇಶದಾದ್ಯಂತ ವಿವಿಧ ಸಮುದಾಯಗಳಿಗೆ ಬೇರೆ ಬೇರೆ ಕಾನೂನುಗಳ ಬದಲು ಏಕರೂಪದ್ದು ಹೆಚ್ಚು ಪರಿಣಾಮಕಾರಿ ಎಂಬ ಅಭಿಪ್ರಾಯವಿದೆ. ಇದೇ ರೀತಿ, ಭಾರತದಲ್ಲಿ ಅಲ್ಪಸಂಖ್ಯಾತರಿಗೆ ತಮ್ಮ ಧರ್ಮ, ಆಚರಣೆ, ಸಂಪ್ರದಾಯವನ್ನು ಆಚರಿಸುವ ಹಕ್ಕಿದೆ. ಜೊತೆಗೆ ವೈಯಕ್ತಿಕ ಕಾನೂನುಗಳಡಿ ಆಸ್ತಿ, ವಿವಾಹ, ವಿಚ್ಛೇದನ ಇತ್ಯಾದಿಗಳ ಬಗ್ಗೆ ನ್ಯಾಯ ಪಡೆವ ಅವಕಾಶವಿದೆ. ಇದು ಭಾರತದ ಜಾತ್ಯತೀತ ರೂಪಕ್ಕೆ ಹೆಚ್ಚು ಪೂರಕವಾಗಿದೆ. ಆದರೆ ಏಕರೂಪದ ಕಾನೂನು ಇದನ್ನು ತಡೆಯುತ್ತದೆ. ಪ್ರತಿ ಸಮುದಾಯದ ಆಚರಣೆಗಳು, ಪಾಲನೆಗಳು ಬೇರೆ ಬೇರೆಯದ್ದಾಗಿದೆ. ಸದ್ಯ ಇರುವ ಕಾನೂನುಗಳು (ಸಂವಿಧಾನದ 45ನೇ ಮತ್ತು 15ನೇ ಕಲಂ)ಗಳು ಲಿಂಗತಾರತಮ್ಯ ನಿಯಂತ್ರಿಸುವ ಬಗ್ಗೆ ಪ್ರಬಲವಾಗಿದ್ದು, ಏಕರೂಪ ನಾಗರಿಕ ಸಂಹಿತೆಯಿಂದ ವೈಯಕ್ತಿಕ ಆಚರಣೆಗಳಿಗೆ ಧಕ್ಕೆ ತರುವಂಥದ್ದು ಎಂಬ ಮಾತಿದೆ.

### ಹಿಂಜರಿಕೆಗೆ ಮುಖ್ಯ ಕಾರಣ

- ದೇಶದ ವಿವಿಧ ವರ್ಗ ಮತ್ತು ಸಮುದಾಯಗಳಿಗೆ ಸಂವಿಧಾನವೇ ಕೆಲವು ವಿನಾಯಿತಿಗಳನ್ನು ನೀಡಿದೆ. ಉದಾಹರಣೆಗೆ ಈಶಾನ್ಯ ಭಾರತದ ಒಂದು ಬುಡಕಟ್ಟಿನಲ್ಲಿ ಕಿರಿಯ ಮಗಳಿಗೆ ಮಾತ್ರ ಕುಟುಂಬದ ಆಸ್ತಿಯಲ್ಲಿ ಹಕ್ಕು ದೊರೆಯುತ್ತದೆ.
- ಇದಕ್ಕೆ ಸಂವಿಧಾನದ ರಕ್ಷಣೆ ಇದೆ. ಏಕರೂಪ ನಾಗರಿಕ ಸಂಹಿತೆ ಜಾರಿಯಾದರೆ ಸಂವಿಧಾನದ ಉಲ್ಲಂಘನೆ ಮಾಡಿದಂತಾಗುತ್ತದೆ ಎಂದು ಕಾನೂನು ಆಯೋಗದ ಮುಖ್ಯಸ್ಥ ನ್ಯಾಯಮೂರ್ತಿ ಚೌಹಾಣ್ ಹೇಳಿದ್ದಾರೆ.

## 6. ವಾಸೆನಾರ್ ಗುಂಪಿಗೆ ಭಾರತ ಸೇರ್ಪಡೆ

### ಪ್ರಮುಖ ಸುದ್ದಿ

- ಸಾಂಪ್ರದಾಯಿಕ ಶಸ್ತ್ರಾಸ್ತ್ರ, ದ್ವಿಬಳಕೆ ಸಾಧನಗಳು ಮತ್ತು ತಂತ್ರಜ್ಞಾನಗಳ ರಫ್ತು ನಿಯಂತ್ರಿಸುವ ಪ್ರತಿಷ್ಠಿತ 'ವಾಸೆನಾರ್ ಅರೇಂಜ್‌ಮೆಂಟ್' (ಡಬ್ಲ್ಯು ಎ) ಗುಂಪಿನಲ್ಲಿ ಭಾರತಕ್ಕೆ ಸದಸ್ಯತ್ವ ದೊರೆತಿದೆ. ದ್ವಿಬಳಕೆ ಎಂದರೆ, ನಾಗರಿಕ, ಮತ್ತು ಸೇನಾ ಬಳಕೆಗಳೆರಡಕ್ಕೂ ಉಪಯೋಗಿಸಬಹುದಾದ ತಂತ್ರಜ್ಞಾನ. ಉದಾಹರಣೆಗೆ ಪರಮಾಣು ತಂತ್ರಜ್ಞಾನ.
- ವಿಯೆನ್ನಾದಲ್ಲಿ ನಡೆದ ಡಬ್ಲ್ಯು ಎ 23ನೇ ವಾರ್ಷಿಕ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಭಾರತ ಡಬ್ಲ್ಯುಎಯ 42ನೇ ಸದಸ್ಯ ರಾಷ್ಟ್ರವಾಗಿದೆ.

### ಪ್ರಮುಖ ಸಂಗತಿಗಳು

- ರಫ್ತು ನಿಯಂತ್ರಣ ಗುಂಪಿಗೆ ಸೇರ್ಪಡೆಯಿಂದಾಗಿ ಅಣ್ವಸ್ತ್ರ ಪ್ರಸರಣ ತಡೆ ಕ್ಷೇತ್ರದಲ್ಲಿ ಭಾರತದ ವಿಶ್ವಾಸಾರ್ಹತೆ ಹೆಚ್ಚಾಗುತ್ತದೆ. ಅಣ್ವಸ್ತ್ರ ಪ್ರಸರಣ ತಡೆ (ಎನ್‌ಪಿಟಿ) ಒಪ್ಪಂದಕ್ಕೆ ಸಹಿ ಹಾಕದಿದ್ದರೂ ಭಾರತಕ್ಕೆ ಈ ಸದಸ್ಯತ್ವ ದೊರೆತಿರುವುದು ವಿಶೇಷ.

- ಡಬ್ಲ್ಯು ಎ ಸದಸ್ಯತ್ವದಿಂದಾಗಿ 48 ಸದಸ್ಯರನ್ನು ಹೊಂದಿರುವ ಪರಮಾಣು ಪೂರೈಕೆದಾರರ ಗುಂಪಿನ (ಎನ್ಎಸ್‌ಜಿ) ಸದಸ್ಯತ್ವಕ್ಕೆ ಭಾರತ ಇರಿಸಿರುವ ಬೇಡಿಕೆಗೆ ಹೆಚ್ಚಿನ ಬಲ ಬರುತ್ತದೆ. ಎನ್ಎಸ್‌ಜಿ ಸದಸ್ಯತ್ವ ಪಡೆಯುವಲ್ಲಿ ಭಾರತಕ್ಕೆ ತೊಡಕಾಗಿರುವ ಚೀನಾಕ್ಕೆ ಈ ಸದಸ್ಯತ್ವ ಇಲ್ಲ.

- ಸಾಂಪ್ರದಾಯಿಕ ಶಸ್ತ್ರಾಸ್ತ್ರ ಮತ್ತು ದ್ವಿಬಳಕೆ ಸಾಧನಗಳು ಹಾಗೂ ತಂತ್ರಜ್ಞಾನದ ವರ್ಗಾವಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ತರುವುದು ಮತ್ತು ಹೆಚ್ಚಿನ ಹೊಣೆಗಾರಿಕೆ ತೋರುವಲ್ಲಿ ಡಬ್ಲ್ಯು ಎ ಮಹತ್ವದ ಪಾತ್ರ ವಹಿಸುತ್ತಿದೆ. ಈ ಗುರಿಗಳನ್ನು ನಿರ್ಲಕ್ಷಿಸಿ ಸೇನಾ ಸಾಮರ್ಥ್ಯ ವೃದ್ಧಿಗೆ ತಂತ್ರಜ್ಞಾನ ವರ್ಗಾವಣೆ ಮಾಡುವುದಿಲ್ಲ ಎಂಬುದನ್ನು ಸದಸ್ಯ ರಾಷ್ಟ್ರಗಳು ಖಾತರಿಪಡಿಸಬೇಕು. ಇಂತಹ ಶಸ್ತ್ರಾಸ್ತ್ರ ಮತ್ತು ತಂತ್ರಜ್ಞಾನ ಭಯೋತ್ಪಾದಕರ ಕೈಗೆ ಸಿಗದಂತೆ ನೋಡಿಕೊಳ್ಳುವುದು ಡಬ್ಲ್ಯು ಎ ಇನ್ನೊಂದು ಗುರಿ.

- ಇನ್ನೊಂದು ಮಹತ್ವದ ರಫ್ತು ನಿಯಂತ್ರಣ ಗುಂಪಾದ ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ಗುಂಪಿಗೆ (ಎಂಟಿಸಿಆರ್) ಕಳೆದ ಜೂನ್‌ನಲ್ಲಿ ಭಾರತ ಸೇರ್ಪಡೆಯಾಗಿತ್ತು. ಅಮೆರಿಕದ ಜತೆಗೆ ನಾಗರಿಕ ಪರಮಾಣು ಒಪ್ಪಂದ ಮಾಡಿಕೊಂಡ ಬಳಿಕ ಜಾಗತಿಕ ಮಟ್ಟದ ವಿವಿಧ ನಿಯಂತ್ರಣ ಗುಂಪುಗಳ ಸದಸ್ಯತ್ವ ಪಡೆಯಲು ಭಾರತ ಪ್ರಯತ್ನಿಸಿದೆ. ಎನ್ಎಸ್‌ಜಿ, ಎಂಟಿಸಿಆರ್, ಆಸ್ಟ್ರೇಲಿಯಾ ಗುಂಪು ಮತ್ತು ಡಬ್ಲ್ಯು ಎ ಅವುಗಳಲ್ಲಿ ಮುಖ್ಯವಾದವು. ಸದ್ಯ ಎರಡು ಗುಂಪುಗಳಲ್ಲಿ ಭಾರತಕ್ಕೆ ಸದಸ್ಯತ್ವ ದೊರೆತಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಕಾರ್ಯ ನಿರ್ವಹಣೆ ಹೇಗೆ ?**

- ಗುಂಪು ಒಂದು ನಿಯಂತ್ರಣ ಪಟ್ಟಿಯನ್ನು ಹೊಂದಿದೆ. ಸದಸ್ಯ ರಾಷ್ಟ್ರಗಳು ಒಪ್ಪಿಗೆ ನೀಡಿದ ಶಸ್ತ್ರಾಸ್ತ್ರ ಮತ್ತು ತಂತ್ರಜ್ಞಾನಗಳು ಈ ಪಟ್ಟಿಗೆ ಸೇರುತ್ತವೆ. ದ್ವಿಬಳಕೆ ಸಾಧನಗಳು ಮತ್ತು ತಂತ್ರಜ್ಞಾನಗಳ ಬಗ್ಗೆ ಮಾಹಿತಿ ವಿನಿಮಯಕ್ಕೆ ಸದಸ್ಯ ರಾಷ್ಟ್ರಗಳು ಒಪ್ಪಿಗೆ ನೀಡಬೇಕು. ನಿಯಂತ್ರಣ ಪಟ್ಟಿಯಲ್ಲಿ ಇರುವ ಸಾಧನಗಳ ವರ್ಗಾವಣೆ ಬಗ್ಗೆ ಮಾಹಿತಿ ದೊರೆತರೆ ಅದನ್ನು ಡಬ್ಲ್ಯು ಎ ಜತೆ ಹಂಚಿಕೊಳ್ಳಬೇಕು. ಸದಸ್ಯರಲ್ಲದ ರಾಷ್ಟ್ರಗಳಿಗೆ ಇಂತಹ ಸಾಧನಗಳನ್ನು ನೀಡಬಾರದು.

**ಏನಿದು ವಾಸೆನಾರ್ ಅರೇಂಜ್‌ಮೆಂಟ್ ?**

- ಬಹುರಾಷ್ಟ್ರೀಯ ರಫ್ತು ನಿಯಂತ್ರಣ ಸಮನ್ವಯ ಸಮಿತಿ ಎಂಬ ಗುಂಪು ಶೀತಲ ಸಮರ ಯುಗದಲ್ಲಿ ಅಸ್ತಿತ್ವದಲ್ಲಿತ್ತು. ಅದರ ಬದಲಿಗೆ 1996ರಲ್ಲಿ ಡಬ್ಲ್ಯು ಎ ಜಾರಿಗೆ ಬಂತು. ಹೇಗ್‌ನ ಸಮೀಪದ ವಾಸೆನಾರ್ ಪಟ್ಟಣದಲ್ಲಿ ಈ ಒಪ್ಪಂದ ಏರ್ಪಟ್ಟ ಕಾರಣ ಗುಂಪಿಗೆ ಅದೇ ಹೆಸರು ಇರಿಸಿಕೊಳ್ಳಲಾಗಿದೆ.

- ಪರಮಾಣು ಪೂರೈಕೆದಾರರ ಗುಂಪು ಮತ್ತು ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ಗುಂಪುಗಳು ಕ್ರಮವಾಗಿ ಅಣ್ವಸ್ತ್ರ ಮತ್ತು ಕ್ಷಿಪಣಿ ತಂತ್ರಜ್ಞಾನ ವರ್ಗಾವಣೆ ಮೇಲೆ ನಿಗಾ ಇರಿಸಿದಂತೆ ಡಬ್ಲ್ಯು ಎ, ಸಾಂಪ್ರದಾಯಿಕ ಶಸ್ತ್ರಾಸ್ತ್ರ ಮತ್ತು ದ್ವಿ ಬಳಕೆ ತಂತ್ರಜ್ಞಾನ ವರ್ಗಾವಣೆಯನ್ನು ನಿಯಂತ್ರಿಸುತ್ತದೆ.

## ಭಾರತಕ್ಕೆ ಏನು ಲಾಭ ?

- ಭಾರತವು ಅಣ್ವಸ್ತ್ರ ಪ್ರಸರಣ ತಡೆ (ಎನ್‌ಪಿಟಿ) ಒಪ್ಪಂದಕ್ಕೆ ಸಹಿ ಹಾಕಿಲ್ಲ. ಈಗ ಡಬ್ಲ್ಯು ಎ ಸದಸ್ಯತ್ವ ದೊರೆತಿರುವುದರಿಂದ ಅಣ್ವಸ್ತ್ರ ಪ್ರಸರಣ ತಡೆ ಕ್ಷೇತ್ರದಲ್ಲಿ ಭಾರತದ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಎನ್‌ಎಸ್‌ಜಿ ಸದಸ್ಯತ್ವ ಪಡೆಯುವಲ್ಲಿ ಇದು ನೆರವಾಗಬಹುದು.

## ಶಸ್ತ್ರಾಸ್ತ್ರ ಹಂಚಿಕೆ ನಿಯಂತ್ರಣಕ್ಕೆ ನಾಲ್ಕು ತಂಡಗಳು

- ಅಪಾಯಕಾರಿ ತಂತ್ರಜ್ಞಾನ ಹಸ್ತಾಂತರಕ್ಕೆ ಸಂಬಂಧಿಸಿದ ನಾಲ್ಕು ಗ್ರೂಪ್‌ಗಳಲ್ಲಿ ವಾಸ್ಸೆನ್ನಾರ್ ಅರೇಂಜ್ ಮೆಂಟ್ ಒಂದು. ನ್ಯೂಕ್ಲಿಯರ್ ಸಪ್ಲೈಯರ್ಸ್ ಗ್ರೂಪ್(ಎನ್‌ಎಸ್‌ಜಿ) ನ್ಯೂಕ್ಲಿಯರ್ ವಸ್ತುಗಳು ಮತ್ತು ತಂತ್ರಜ್ಞಾನ ಆಮದನ್ನು ನಿಯಂತ್ರಿಸಿದರೆ, ವಾಸ್ಸೆನ್ನಾರ್ ಗ್ರೂಪ್ ರಾಸಾಯನಿಕ ಮತ್ತು ಜೈವಿಕ ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಬಳಸುವ ವಸ್ತುಗಳ ಆಮದನ್ನು ನಿಯಂತ್ರಿಸುತ್ತದೆ.
- ಕ್ಷಿಪಣಿ ಮತ್ತು 500 ಕೆಜಿ ತೂಕದ ಶಸ್ತ್ರಾಸ್ತ್ರ ಒಯ್ಯಬಲ್ಲ, ಕನಿಷ್ಠ 300 ಕಿಲೋಮೀಟರ್ ದೂರದ ಸಾಮರ್ಥ್ಯ ಹೊಂದಿರುವ ಯುಎವಿಗಳ ಹಸ್ತಾಂತರವನ್ನು ಮಿಸೈಲ್ ಟೆಕ್ನಾಲಜಿ ಕಂಟ್ರೋಲ್ ರೆಜಿಮ್‌ಎಂಟಿಸಿಆರ್) ನಿಯಂತ್ರಿಸುತ್ತದೆ. ಭಾರತ ಅಣ್ವಸ್ತ್ರ ಪ್ರಸರಣ ವಿರೋಧಿ ಒಪ್ಪಂದ(ಎನ್‌ಪಿಟಿ)ಗೆಸಹಿ ಹಾಕದ ಹೊರತಾಗಿಯೂ ಇದರ ಸದಸ್ಯತ್ವ ಪಡೆದುಕೊಂಡಿರುವ ರಾಷ್ಟ್ರಗಳೊಂದಿಗೆ ಒಪ್ಪಂದಗಳನ್ನು ನಡೆಸಲು, ತಂತ್ರಜ್ಞಾನಗಳ ಹಸ್ತಾಂತರಕ್ಕೆ ಸಹಾಯವಾಗಲಿದೆ.

- ಅಮೆರಿಕದಿಂದ ದಶಕಗಳಿಂದ ಪಡೆದುಕೊಳ್ಳಲು ಪ್ರಯತ್ನಿಸುತ್ತಿರುವ ತಂತ್ರಜ್ಞಾನಗಳನ್ನು ಪಡೆಯಲು ಅನುಕೂಲವಾಗಲಿದೆ. ಭಾರತ ಕಳೆದ ವರ್ಷವೇ ಎಂಟಿಸಿಆರ್‌ನಲ್ಲಿ ಸದಸ್ಯತ್ವ ಹೊಂದಿದೆ.ನ ಇದರಲ್ಲಿ ಒಟ್ಟು 35 ಸದಸ್ಯ ರಾಷ್ಟ್ರಗಳಿವೆ. ಇದರ ಸದಸ್ಯತ್ವ ಕಾರಣದಿಂದಲೇ ಭಾರತಕ್ಕೆ ರಷ್ಯಾ ಸಹಯೋಗದಲ್ಲಿ ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ರೂಸ್ ಕ್ಷಿಪಣಿಯನ್ನು ದೇಶದಲ್ಲೇ ನಿರ್ಮಾಣ ಮಾಡಲು ಸಾಧ್ಯವಾಗಿದೆ.
- ಎನ್‌ಎಸ್‌ಜಿಯಲ್ಲಿ ಸದಸ್ಯತ್ವ ಪಡೆಯಲು ಯತ್ನಿಸಿತ್ತಾದರೂ ಅಮೆರಿಕದ ತೀವ್ರ ಒತ್ತಡದ ಹೊರತಾಗಿಯೂ ಚೀನಾ ಮಧ್ಯಪ್ರವೇಶದಿಂದ ಇದು ಸಾಧ್ಯವಾಗಿರಲಿಲ್ಲ. ರಷ್ಯಾ ಇದನ್ನು ರಾಜಕೀಯ ಪಿತೂರಿಯ ಪರಿಣಾಮ ಎಂದು ಬಣ್ಣಿಸಿತ್ತು.

- ಇನ್ನು 1985ರಲ್ಲಿ ಹುಟ್ಟಿಕೊಂಡ ಆಸ್ಟ್ರೇಲಿಯಾ ಗ್ರೂಪ್‌ಗೆ ಸೇರುವ ಪ್ರಯತ್ನವನ್ನೂ ಭಾರತ ಮಾಡುತ್ತಿದೆ. 1980ರಿಂದ 1988ರ ಅವಧಿಯಲ್ಲಿ ನಡೆದ ಇರಾನ್- ಇರಾಕ್ ಯುದ್ಧದಲ್ಲಿ ರಾಸಾಯನಿಕ ಶಸ್ತ್ರಾಸ್ತ್ರ ಬಳಕೆ ಮತ್ತು ಅದನ್ನು ನಿಯಂತ್ರಿಸುವ ಸಲುವಾಗಿ ಹುಟ್ಟಿಕೊಂಡ ಗ್ರೂಪ್ ಇದು. ಇದು ರಾಸಾಯನಿಕ ಶಸ್ತ್ರಾಸ್ತ್ರಗಳ ಆಮದು ನಿಯಂತ್ರಣ, ರಾಸಾಯನಿಕಗಳ ಸಂಗ್ರಹ, ರಾಸಾಯನಿಕ ತಯಾರಿಕಾ ತಂತ್ರಜ್ಞಾನ ಮುಂತಾದವುಗಳ ಬಗ್ಗೆ ನಿಗಾ ವಹಿಸುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ವಿದ್ಯಾರ್ಥಿಗಳ ಯೋಚನೆಗೆ ಒಂದು ಯೋಜನೆ (MLP-GS PAPER-2)**

**What is Wassenaar Arrangement? India recently became member of the Wassenaar Arrangement. Discuss its significance to India**

**(ವಾಸೆನಾರ್ ಅರೇಂಜ್‌ಮೆಂಟ್ ಎಂದರೇನು? ಇತ್ತೀಚೆಗೆ ಭಾರತ ವಾಸೆನಾರ್ ಅರೇಂಜ್‌ಮೆಂಟ್ ಸದಸ್ಯ ರಾಷ್ಟ್ರದ ಕುರಿತು ಅದರ ಮಹತ್ವವನ್ನು ಚರ್ಚಿಸಿ)**

## 7. ತಾಜ್ ಸಂರಕ್ಷಣೆಗೆ ದೀರ್ಘ ಕಾಲೀನ ಕ್ರಮ ಅಗತ್ಯ: ಸುಪ್ರೀಂ ಕೋರ್ಟ್

**ಪ್ರಮುಖ ಸುದ್ದಿ**

- ತಾಜ್ ಮಹಲ್ ಸಂರಕ್ಷಣೆಗಾಗಿ ಕನಿಷ್ಠ 100 ವರ್ಷಗಳ ಕಾರ್ಯಯೋಜನೆ ಕುರಿತು ಸಮಗ್ರ ಮತ್ತು ವಿಸ್ತೃತ ವರದಿ ಸಲ್ಲಿಸುವಂತೆ ತಾಜ್ ವಲಯ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

- 'ತಾಜ್ ವಲಯ ಪ್ರಾಧಿಕಾರ (ಟಿಟಿಝಡ್) ಸಲ್ಲಿಸಿರುವುದು ಮಧ್ಯಂತರ ವರದಿ. ಇದರಲ್ಲಿ ತಾತ್ಕಾಲಿಕ ಕ್ರಮಗಳನ್ನು ವಿವರಿಸಲಾಗಿದೆ. ಟಿಟಿಝಡ್ ಪರಿಸರ ಸೂಕ್ಷ್ಮ ವಲಯ. ಹೀಗಾಗಿ ತಾಜ್ ಮಹಲ್ ಸಂರಕ್ಷಣೆಗೆ ದೀರ್ಘ ಕಾಲೀನ ಕಾರ್ಯಸೂಚಿಯ ಅಗತ್ಯವಿದೆ' ಎಂದು ನ್ಯಾಯಮೂರ್ತಿ ಎಂ.ಬಿ. ಲೋಕೂರ್ ಅವರಿದ್ದ ಪೀಠವು ಹೇಳಿದೆ. ಹೆಚ್ಚುವರಿ ಸಾಲಿಸಿಟರ್ ಜನರಲ್ ತುಷಾರ್ ಶರ್ಮಾ ಅವರು ಸಲ್ಲಿಸಿದ ಪ್ರಮಾಣಪತ್ರಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿತು.

### ಪ್ರಮುಖ ಸಂಗತಿಗಳು

- ಉತ್ತರ ಪ್ರದೇಶದ ಆಗ್ರಾ, ಫಿರೋಜಾಬಾದ್, ಮಾಥುರ್, ಹಥ್ರಸ್, ಏಟಾ ಹಾಗೂ ರಾಜಸ್ಥಾನದ ಭರತ್‌ಪುರ್ ಜಿಲ್ಲೆಗಳ 10,400 ಚದರ ಕಿ.ಮೀ ವ್ಯಾಪ್ತಿಯಲ್ಲಿ ತಾಜ್ ವಲಯ ಹರಡಿಕೊಂಡಿದೆ.

- 'ತಜ್ಞರು, ನಾಗರಿಕ ಸಮಾಜದ ಸದಸ್ಯರು ಎಲ್ಲರೂ ಒಟ್ಟಾಗಿ ಚರ್ಚಿಸಿ ಮುಂದಿನ ಪೀಳಿಗೆಗೋಸ್ಕರ ತಾಜ್ ಮಹಲ್ ಅನ್ನು ಹೇಗೆ ಸಂರಕ್ಷಿಸುವುದು ಎಂಬ ಕುರಿತು ನಿರ್ಧಾರಕ್ಕೆ ಬರಬೇಕು' ಎಂದು ಶರ್ಮಾ ಅವರಿಗೆ ಪೀಠ ಸೂಚಿಸಿದೆ.

- ತಾಜ್ ಮಹಲ್ ಸುತ್ತಮುತ್ತ 500 ಮೀಟರ್ ವ್ಯಾಪ್ತಿಯಲ್ಲಿ ನಿರ್ಮಾಣ ಕಾಮಗಾರಿ ನಿಷೇಧಿಸುವುದು, ಸಿಎನ್‌ಜಿ ಇಂಧನ ಬಳಕೆಯ ವಾಹನಗಳಿಗಷ್ಟೇ ಈ ಸ್ಮಾರಕದ ಸಮೀಪ ಓಡಾಡಲು ಅವಕಾಶ ನೀಡುವುದು, ವಿದ್ಯುತ್ ಜನಕಗಳ (ಜನರೇಟರ್) ಬಳಕೆ ತಗ್ಗಿಸುವ ಸಲುವಾಗಿ ನಿರಂತರ ವಿದ್ಯುತ್ ಪೂರೈಕೆ ಮಾಡುವುದು ಹಾಗೂ ಕಸ, ತ್ಯಾಜ್ಯಗಳನ್ನು ಸುಡುವುದನ್ನು ಸಂಪೂರ್ಣವಾಗಿ ನಿಷೇಧಿಸುವುದೂ ಸೇರಿದಂತೆ ಹಲವು ಕ್ರಮಗಳನ್ನು ಶಿಫಾರಸು ಮಾಡಲಾಗಿದೆ' ಎಂದು ತುಷಾರ್ ಶರ್ಮಾ ವಿವರಿಸಿದರು.

- 'ನಿರೀಕ್ಷೆಯಂತೆ ಪ್ರತಿ ಎರಡು ತಿಂಗಳಿಗೊಮ್ಮೆ ಏಕೆ ಸಭೆ ನಡೆಸುತ್ತಿಲ್ಲ' ಎಂದೂ ನ್ಯಾಯಾಲಯ ಪ್ರಶ್ನಿಸಿದೆ.

- ತಾಜ್ ಮಹಲ್ ಸಮೀಪ ಕಾರುಗಳ ನಿಲುಗಡೆಗಾಗಿ ನಿರ್ಮಿಸಲಾದ ಬಹುಮಹಡಿ ಕಟ್ಟಡಗಳನ್ನು ನೆಲಸಮ ಮಾಡುವಂತೆ ನೀಡಿದ್ದ ತನ್ನ ಈ ಹಿಂದಿನ ಆದೇಶಕ್ಕೆ ನ್ಯಾಯಾಲಯವು ತಡೆ ನೀಡಿದೆ. ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸಂಬಂಧ ಪಟ್ಟ ಪ್ರಾಧಿಕಾರಗಳಿಗೆ ಸೂಚಿಸಿದೆ.

### ತಾಜ್ ಮಹಲ್

- ಭಾರತದ ಆಗ್ರಾದಲ್ಲಿರುವ ಭವ್ಯ ಸಮಾಧಿಯಾಗಿದೆ. ಇದನ್ನು ಮೊಘಲ್ ಚಕ್ರವರ್ತಿ ಷಹ ಜಹಾನ್ ತನ್ನ ಮೆಚ್ಚಿನ ಪತ್ನಿ ಮಮ್ತಾಜ್ ಮಹಲ್‌ಳ ನೆನಪಿಗಾಗಿ ಕಟ್ಟಿಸಿದನು.

- ಪರ್ಷಿಯನ್, ಭಾರತೀಯ ಮತ್ತು ಮುಸ್ಲಿಂ ವಾಸ್ತುಶೈಲಿಗಳ ಸಮ್ಮಿಶ್ರಣವಾದ ಮೊಘಲ್ ವಾಸ್ತುಶೈಲಿಗೆ ತಾಜ್ ಮಹಲ್ ("ತಾಜ್" ಎಂದೂ ಕರೆಯಲ್ಪಡುತ್ತದೆ) ಅತ್ಯುತ್ತಮ ಉದಾಹರಣೆಯೆಂದು ಪರಿಗಣಿಸಲಾಗಿದೆ.
- 1983ರಲ್ಲಿ ತಾಜ್ ಮಹಲ್ UNESCOದ ವಿಶ್ವ ಪರಂಪರೆ ತಾಣವಾಗಿ ಗುರುತಿಸಲ್ಪಟ್ಟಿತು ಮತ್ತು ಇದನ್ನು "ಭಾರತದಲ್ಲಿರುವ ಮುಸ್ಲಿಂ ಕಲೆಯ ಅನರ್ಘ್ಯ ರತ್ನ ಮತ್ತು ಜಾಗತಿಕವಾಗಿ ಮೆಚ್ಚುಗೆಯನ್ನು ಪಡೆದ ವಿಶ್ವ ಪರಂಪರೆಯ ಮೇರುಕೃತಿಗಳಲ್ಲಿ ಒಂದು" ಎಂದು ಉಲ್ಲೇಖಿಸಲಾಗಿದೆ.

- ತಾಜ್ ಮಹಲ್ ವಾಸ್ತವವಾಗಿ ಅನೇಕ ಸಂರಚನೆಗಳ ಒಂದು ಸಮಗ್ರ ಸಂಕೀರ್ಣವಾಗಿದ್ದು, ಗೌರವರ್ಣದ ಗುಮ್ಮಟಾಕಾರದ ಅಮೃತಶಿಲೆಯ ಭವ್ಯ ಸಮಾಧಿಯು ಇದರ ಅತ್ಯಂತ ಸುಪರಿಚಿತ ಭಾಗವಾಗಿದೆ. ಈ ಕಟ್ಟಡದ ನಿರ್ಮಾಣ ಕಾರ್ಯವು 1632ರಲ್ಲಿ ಪ್ರಾರಂಭವಾಗಿ, ಸರಿಸುಮಾರು 1653ರ ಹೊತ್ತಿಗೆ ಪೂರ್ಣಗೊಂಡಿತು. ಈ ಭವ್ಯ ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ಸಾವಿರಾರು ಕುಶಲಕರ್ಮಿಗಳು ಮತ್ತು ನುರಿತ ಕೆಲಸಗಾರರನ್ನು ಬಳಸಿಕೊಳ್ಳಲಾಗಿತ್ತು.
- ತಾಜ್ ಮಹಲ್‌ನ ನಿರ್ಮಾಣ ಕಾರ್ಯದ ಮೇಲ್ವಿಚಾರಣೆಗೆ ಅಬ್ದ್ ಉಲ್-ಕರೀಮ್ ಮಾಮುರ್ ಖಾನ್, ಮಖ್ರಾಮತ್ ಖಾನ್ ಮತ್ತು ಉಸ್ತಾದ್ ಅಹ್ಮದ್ ಲಹೌರಿ ಸೇರಿದಂತೆ ಇನ್ನೂ ಕೆಲವರನ್ನು ಒಳಗೊಂಡಂತೆ ವಾಸ್ತುಶಿಲ್ಪಿಗಳ ಮಂಡಳಿಗೆ ನೇಮಿಸಲಾಗಿತ್ತು. ಅವರಲ್ಲಿ ಲಹೌರಿರವರನ್ನು ತಾಜ್ ಮಹಲ್ ನಿರ್ಮಾಣದ ಪ್ರಧಾನ ಶಿಲ್ಪಿ ಎಂದು ಸ್ಥೂಲವಾಗಿ ಪರಿಗಣಿಸಲಾಗಿದೆ.

- ವಿಧ್ಯಾರ್ಥಿಗಳ ಯೋಚನೆಗೆ ಒಂದು ಯೋಜನೆ (MLP-GS PAPER-2)

**Discuss the architectural and cultural significance of Taj Mahal.**

(ತಾಜ್ ಮಹಲ್ ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಕುರಿತು ಚರ್ಚಿಸಿ.)

## 8. ತ್ರಿವಳಿ ತಲಾಖ್ ಕರಡು ಮಸೂದೆಗೆ ಒಪ್ಪಿಗೆ ನೀಡಿದ ಮೊದಲ ರಾಜ್ಯ -ಉತ್ತರ ಪ್ರದೇಶ

ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರದ ತ್ರಿವಳಿ ತಲಾಖ್ ನಿಷೇಧ ಕರಡು ಮಸೂದೆಗೆ ಉತ್ತರ ಪ್ರದೇಶ ಸರ್ಕಾರ ಅನುಮೋದನೆ ನೀಡಿದೆ. ಆ ಮೂಲಕ ಮಸೂದೆಗೆ ಒಪ್ಪಿಗೆ ಸೂಚಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

- 'ಮುಸ್ಲಿಂ ಮಹಿಳೆಯರ ವೈವಾಹಿಕ ಹಕ್ಕುಗಳ ರಕ್ಷಣೆ ಕರಡು ಮಸೂದೆ'ಯನ್ನು ಇತ್ತೀಚೆಗೆ ಎಲ್ಲ ರಾಜ್ಯ ಸರ್ಕಾರಗಳಿಗೆ ರವಾನಿಸಿದ್ದ ಕೇಂದ್ರ, ಇದೇ 10ರೊಳಗೆ ಅಭಿಪ್ರಾಯ ತಿಳಿಸುವಂತೆ ಕೋರಿತ್ತು.

- ತ್ರಿವಳಿ ತಲಾಖ್ ಜಾಮೀನುರಹಿತ ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಿರುವ ಕರಡು ಪ್ರಸ್ತಾವನೆಗೆ ಮಂಗಳವಾರ ರಾತ್ರಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನೇತೃತ್ವದಲ್ಲಿ ನಡೆದ ಸಂಪುಟ ಸಭೆ ಒಪ್ಪಿಗೆ ನೀಡಿದೆ.

- ಗೃಹ ಸಚಿವ ರಾಜನಾಥ ಸಿಂಗ್ ನೇತೃತ್ವದ ಅಂತರ ಸಚಿವಾಲಯ ತಂಡ ಸಿದ್ಧಪಡಿಸಿರುವ ಕರಡು ಪ್ರಸ್ತಾವನೆಯನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು ಕೇಂದ್ರ ನಿರ್ಧರಿಸಿದೆ. ತ್ರಿವಳಿ ತಲಾಖ್ ಅಥವಾ ತಲಾಖ್ –ಏ–ಬಿದ್ದತ್‌ಗೆ ಮಾತ್ರ ಈ ಮಸೂದೆ ಅನ್ವಯಿಸಲಿದೆ.

ಹಿನ್ನಲೆ

- ಮುಸ್ಲಿಂ ಸಮುದಾಯದಲ್ಲಿ ವಿವಾಹ ವಿಚ್ಛೇದನ ನೀಡಲು ಜಾರಿಯಲ್ಲಿದ್ದ ತ್ರಿವಳಿ ತಲಾಖ್ ಪದ್ಧತಿ ಅಸಾಂವಿಧಾನಿಕ ಮತ್ತು ಸಂವಿಧಾನದ 14ನೇ ಕಲಂನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಸುಪ್ರೀಂ ಕೋರ್ಟ್ ಇದೇ ಆಗಸ್ಟ್ 22ರಂದು ತೀರ್ಪು ನೀಡಿತ್ತು.

- ತ್ರಿವಳಿ ತಲಾಖ್ ಜಾಮೀನುರಹಿತ ಅಪರಾಧವಾಗಿದ್ದು, ತಲಾಖ್ ನೀಡಿದವರಿಗೆ ಮೂರು ವರ್ಷ ಶಿಕ್ಷೆ ಮತ್ತು ದಂಡ ವಿಧಿಸುವ ಪ್ರಸ್ತಾವ ಕರಡು ಮಸೂದೆಯಲ್ಲಿದೆ.

- ಗಂಡನಿಂದ ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆ ಜೀವನಾಂಶ ಪಡೆಯಲು ಅರ್ಹಳಾಗಿದ್ದು, ಚಿಕ್ಕ ವಯಸ್ಸಿನ ಮಕ್ಕಳ ಸುಪರ್ದಿ ಹಕ್ಕನ್ನೂ ಆಕೆಗೆ ನೀಡಲಾಗಿದೆ. ಮಕ್ಕಳ ಜೀವನ ನಿರ್ವಹಣೆಗಾಗಿ ಪ್ರತ್ಯೇಕ ಜೀವನಾಂಶ ಕೋರುವ ಹಕ್ಕನ್ನೂ ಆಕೆ ಪಡೆದಿದ್ದಾಳೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 9. ವಕೀಲರ ದುಬಾರಿ ಶುಲ್ಕ ನಿಯಂತ್ರಣಕ್ಕೆ ಕಾನೂನು

ಪ್ರಮುಖ ಸುದ್ದಿ

- ಕಕ್ಷಿದಾರರಿಂದ ವಕೀಲರು ಪಡೆಯುವ ಶುಲ್ಕ ನಿಯಂತ್ರಣಕ್ಕೆ ಸೂಕ್ತ ಕಾಯ್ದೆ ಜಾರಿಗೆ ತರುವಂತೆ ಸುಪ್ರೀಂಕೋರ್ಟ್ ಬುಧವಾರ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ. ವಕೀಲ ವೃತ್ತಿ ವಾಣಿಜ್ಯೀಕರಣಗೊಳ್ಳುತ್ತಿದ್ದು, ಬಡವರಿಗೆ ಇದರಿಂದ ತೊಂದರೆಯಾಗುತ್ತಿದೆ ಎಂದು ನ್ಯಾ. ಆದರ್ಶ ಗೊಯೆಲ್ ಹಾಗೂ ಯು.ಯು. ಲಲಿತ್ ಅವರಿದ್ದ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಮುಖ ಸಂಗತಿ

- ನೈತಿಕತೆ ಕಾಪಾಡುವುದು, ಹಣಕಾಸು ಕೊರತೆ ಯಿಂದಾಗಿ ಬಡವರು ಸರಿಯಾದ ವಕೀಲರ ಸೇವೆ ಸಿಗದೆ ವಂಚಿತರಾಗುವುದನ್ನು ತಡೆಯುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು. ವಕೀಲರ ಗರಿಷ್ಠ ಶುಲ್ಕ ಮಿತಿ ಹಾಗೂ ಶುಲ್ಕದ ವಿವಿಧ ಹಂತಗಳನ್ನು ನಿರ್ಧರಿಸಬೇಕು ಎಂದು ಸೂಚಿಸಿದೆ.

- ಕೆಲ ಪ್ರಕರಣಗಳಲ್ಲಿ ಕಕ್ಷಿದಾರರಿಗೆ ಸಿಗುವ ಪರಿಹಾರ ಮೊತ್ತದಲ್ಲಿ ವಕೀಲರು ಪಾಲು ಪಡೆಯುತ್ತಾರೆ. ಇದು ವೃತ್ತಿ ನಿಯಮಕ್ಕೆ ಬಾಹಿರವಾಗಿದ್ದು, ಇಂಥ ವಕೀಲರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

- ಕಾನೂನು ಸೇವೆ ಪ್ರತಿಯೊಬ್ಬ ನಾಗರಿಕನ ಮೂಲ ಹಕ್ಕು. ಆದರೆ ವಕೀಲರು ನೈತಿಕತೆ ಮರೆತು ಅಪಾರ ಶುಲ್ಕ ವಸೂಲಿ ಮಾಡಿದರೆ, ಜನಸಾಮಾನ್ಯರಿಗೆ ನ್ಯಾಯ ಸಿಗುವುದು ಸಾಧ್ಯವೇ? ಎಂದು ನ್ಯಾಯಪೀಠ ಪ್ರಶ್ನಿಸಿದೆ.

ಕಾನೂನು ಆಯೋಗದ ವರದಿ

- 1988ರಲ್ಲಿ ಕಾನೂನು ಆಯೋಗ 131ನೇ ವರದಿಯಲ್ಲಿ ಈ ವಿಚಾರ ಪ್ರಸ್ತಾಪಿಸಿತ್ತು. ಹೆಚ್ಚುತ್ತಿರುವ ವಕೀಲರ ಶುಲ್ಕದಿಂದಾಗಿ ನನೆಗುದಿಗೆ ಬಿದ್ದಿರುವ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಇದನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಕಾಯ್ದೆ ರೂಪಿಸಬೇಕು ಎಂದು ತಿಳಿಸಿತ್ತು.

## 10. ವ್ಯಭಿಚಾರ(Adultery law) ಪ್ರಕರಣಗಳಲ್ಲಿ ಪುರುಷರಿಗಷ್ಟೇ ಶಿಕ್ಷೆ ಏಕೆ? ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನೆ

ಪ್ರಮುಖ ಸುದ್ದಿ

- ಅನೈತಿಕ ಸಂಬಂಧ ಅಥವಾ ವ್ಯಭಿಚಾರ ಪ್ರಕರಣದಲ್ಲಿ ಪರ ಹೆಂಗಸಿನೊಂದಿಗೆ ಸರಸವಾಡಿದ ಗಂಡಸನನ್ನೇ ಏಕೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕು ಎಂದು ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದೆ.

ಹಿನ್ನಲೆ

- ಐಪಿಸಿ ಸೆಕ್ಷನ್ 497ನ್ನು ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ. ಅನೈತಿಕ ಸಂಬಂಧ ಪ್ರಕರಣಗಳಲ್ಲಿ ಪರಸ್ಪರ ಒಪ್ಪಿಗೆ ನೀಡಿ ಲೈಂಗಿಕ ಕ್ರಿಯೆ ನಡೆಸಿದ ಹೆಂಗಸು ಕೂಡ ಅಪರಾಧಿಯಲ್ಲವೆ? ಆಕೆಯನ್ನೇಕೆ ಶಿಕ್ಷಿಸಬಾರದು? ಎಂದು ಕೇಳಿ ಇದಕ್ಕೆ ಉತ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

- ಅನೈತಿಕ ಸಂಬಂಧ ಮಾಡಿದ ಗಂಡಸನ್ನು ಮಾತ್ರ ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸುವ ಭಾರತೀಯ ದಂಡ ಸಂಹಿತೆಯ 497 ಸೆಕ್ಷನ್ ನಲ್ಲಿನ ನಿಯಮವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದ್ದು, ಈ ನಿಯಮ ಮಹಿಳಾ ಪರವಾಗಿದೆ. ತಪ್ಪು ಮಾಡಿದ ಹೆಂಗಸರನ್ನು ಆರೋಪದಿಂದ ತಪ್ಪಿಸಿಕೊಳ್ಳುವಂತೆ ಮಾಡುತ್ತದೆ. ಗಂಡಸರಿಗೆ ಇದರಿಂದ ಅನ್ಯಾಯವಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿದೆ.

- ಜೋಸೆಫ್ ಶೈನ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ ಇಂತಹ ಪ್ರಕರಣಗಳಲ್ಲಿ ಸಾಮಾನ್ಯವಾಗಿ ತಪ್ಪಿತಸ್ಥ ಪುರುಷನನ್ನು ಮಾತ್ರ ಶಿಕ್ಷೆಗೊಳಪಡಿಸಲಾಗುತ್ತದೆ. ಅದೇ ಪ್ರಕರಣದಲ್ಲಿ ಭಾಗಿಯಾದ ಮಹಿಳೆ ಶಿಕ್ಷೆಗೊಳಪಡುವುದಿಲ್ಲ. ಇದು ದುರ್ಬಳಕೆಗೆ ಕಾರಣವಾಗಿದೆ. ಸಂವಿಧಾನ ಯಾವಾಗಲೂ ತಟಸ್ಥವಾಗಿರಬೇಕು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

- ಈ ಹಿಂದೆ ಡಿಸೆಂಬರ್ 3ರಂದು ನಡೆದಿದ್ದ ವಿಚಾರಣೆ ವೇಳೆ ಇಂತಹುದೇ ಪ್ರಕರಣ ಸಂಬಂಧ ಸುಪ್ರೀಂ ಕೋರ್ಟ್, ವಿವಾಹಿತ ಮಹಿಳೆಯ ಅನುಮತಿ ಮೇರೆಗೆ ಆಕೆಯೊಂದಿಗೆ ಲೈಂಗಿಕ ಕ್ರಿಯ ನಡೆಸಿದ ಪುರುಷನದ್ದು ತಪ್ಪು ಎಂದಾದರೇ ಪುರುಷನ ಅನುಮತಿ ಇಲ್ಲದೇ ಪರಪುರುಷನೊಂದಿಗೆ ಮಲಗುವುದೂ ಕೂಡ ಅಪರಾಧ. ಹೀಗಾಗಿ ಅವರ ಹೆಸರೇಕೆ ಬಹಿರಂಗ ಪಡಿಸಬಾರದು ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ಅಭಿಪ್ರಾಯ ವ್ಯಕ್ತಪಡಿಸಿತ್ತು.

## 11. ಮಣ್ಣಿನ ಆರೋಗ್ಯ ಕಾರ್ಡ್ ಮೊಬೈಲ್ ಅಪ್ಲಿಕೇಶನ್

### ಪ್ರಮುಖ ಸುದ್ದಿ

- ವಿಶ್ವ ಮಣ್ಣಿನ ದಿನದಂದು, ರೈತರಿಗೆ ಸಹಾಯ ಮಾಡಲು ಸೈಲ್ ಹೆಲ್ತ್ ಕಾರ್ಡ್ ಮೊಬೈಲ್ ಅಪ್ಲಿಕೇಶನ್ ಅನ್ನು ಸರ್ಕಾರ ಪ್ರಾರಂಭಿಸಿದೆ.

### ಪ್ರಮುಖ ಸಂಗತಿಗಳು

- ಇದು ಕ್ಷೇತ್ರ ಮಟ್ಟದ ಕಾರ್ಮಿಕರಿಗೆ ಪ್ರಯೋಜನವನ್ನು ನೀಡುತ್ತದೆ ಏಕೆಂದರೆ ಕ್ಷೇತ್ರದ ಸ್ಯಾಂಪಲ್ ಸಂಗ್ರಹದ ಸಮಯದಲ್ಲಿ ಮಾದರಿ ವಿವರಗಳನ್ನು ನೋಂದಾಯಿಸುವಾಗ ಸ್ವಯಂಚಾಲಿತವಾಗಿ GIS ನಿರ್ದೇಶಾಂಕಗಳನ್ನು ಸೆರೆಹಿಡಿಯುತ್ತದೆ ಮತ್ತು ಮಾದರಿಯನ್ನು ಸಂಗ್ರಹಿಸಿರುವ ಸ್ಥಳವನ್ನು ಸೂಚಿಸುತ್ತದೆ.

- ಈ ಅಪ್ಲಿಕೇಶನ್ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಾಗಿ ಅಭಿವೃದ್ಧಿಪಡಿಸಲಾದ ಇತರ ಅಪ್ಲಿಕೇಶನ್ಗಳಂತೆ ಕಾರ್ಯನಿರ್ವಹಿಸುತ್ತದೆ. ಇದರಲ್ಲಿ ಹೆಸರು, ಆಧಾರ್ ಕಾರ್ಡ್ ಸಂಖ್ಯೆ, ಮೊಬೈಲ್ ಸಂಖ್ಯೆ, ಲಿಂಗ, ವಿಳಾಸ, ಬೆಳೆ ವಿವರ, ಇತ್ಯಾದಿ ಸೇರಿದಂತೆ ರೈತರ ವಿವರಗಳನ್ನು ಒಳಗೊಂಡಿದೆ.

### ವಿಶ್ವ ಮಣ್ಣಿನ ದಿನ'ದ ಬಗ್ಗೆ

- ಮಣ್ಣು ಒಂದು ಸ್ವಾಭಾವಿಕ ವಸ್ತು. ಸಸ್ಯಗಳ ಬೆಳವಣಿಗೆಗೆ ಅಗತ್ಯವಾಗಿರುವುದು ಮಣ್ಣು, ಈ ಸಸ್ಯಗಳು ಪ್ರತಿ ಜೀವಿಗಳಿಗೆ ಆಹಾರವನ್ನು ಒದಗಿಸುತ್ತವೆ. ನೈಸರ್ಗಿಕ ಪ್ರಕ್ರಿಯೆಗಳಿಂದ ಭೂಮಿಯ ಮೇಲೆ ಮಣ್ಣು ರೂಪುಗೊಳ್ಳಲು ಸಹಸ್ರಾರು ವರ್ಷಗಳೇ ಬೇಕಾಗಿದೆ. ಮನುಷ್ಯನ ಬದುಕು ನಿಂತಿರುವುದೇ ಮಣ್ಣಿನ ಮೇಲೆ. ಮನುಷ್ಯನಿಗೆ ಬದುಕು ನೀಡಿರುವುದೇ ಮಣ್ಣು, ಬೇಸಾಯದ ಮೂಲಕ ಬದುಕು ನಡೆಸುವುದಕ್ಕೆ ಮಣ್ಣೆ ಸಹಕಾರಿಯಾಗಿದೆ. ಜಗತ್ತಿನ ಶೇ.95 ರಷ್ಟು ಆಹಾರ ಪದಾರ್ಥ ಸಿಕ್ಕುವುದು ಮಣ್ಣಿನಿಂದ.

- ಈ ಮಣ್ಣು ಮನುಷ್ಯನ ಬದುಕಿನಲ್ಲಿ ವಹಿಸಿದ ಮಹತ್ವದ ಪಾತ್ರವನ್ನು ಮನಗಂಡು ಅದರ ರಕ್ಷಣೆಗೆ ಪಣತೊಡುವ ಉದ್ದೇಶದಿಂದ ಪ್ರತಿ ಡಿಸೆಂಬರ್ 5ನ್ನು `ವಿಶ್ವ ಮಣ್ಣಿನ ದಿನ' ಎಂದು ಆಚರಿಸಲಾಗುತ್ತದೆ.

- ಅಂತಾರಾಷ್ಟ್ರೀ ಮಟ್ಟದಲ್ಲಿ ಮಣ್ಣಿನ ದಿನವನ್ನು ಆಚರಿಸುವಂತೆ ಅಂತಾರಾಷ್ಟ್ರೀಯ ಮಣ್ಣು ವಿಜ್ಞಾನ ಸಂಸ್ಥೆ 2002ರಲ್ಲೇ ಶಿಫಾರಸ್ಸು ಮಾಡಿತ್ತು.
- ಮೊದಲ ಬಾರಿಗೆ 2014 ಡಿಸೆಂಬರ್ 5 ರಂದು ಅಧಿಕೃತವಾಗಿ ಅಂತಾರಾಷ್ಟ್ರೀಯ ಮಣ್ಣು ದಿನವನ್ನು ಆಚರಿಸಲಾಗಿತ್ತು.

- ಪ್ರತಿ ವರ್ಷವೂ ಒಂದೊಂದು ಧ್ಯೇಯವಾಕ್ಯಗಳೊಂದಿಗೆ ಈ ದಿನ ಆಚರಣೆಗೊಳ್ಳುತ್ತದೆ. ಈ ವರ್ಷ 'Caring for the Planet starts from the Ground' (ಭೂಮಿಯ ಮೇಲಿನ ಕಾಳಜಿ ನೆಲದಿಂದ ಆರಂಭವಾಗುತ್ತದೆ) ಎಂಬ ಮಣ್ಣು ದಿನದ ಧ್ಯೇಯವಾಕ್ಯವಾಗಿದೆ.

- ಈಗಾಗಲೇ ಶೇ.33ರಷ್ಟು ಮಣ್ಣು ತನ್ನ ಫಲವತ್ತತೆಯನ್ನು ಕಳೆದುಕೊಂಡಿದೆ. ಪ್ಲಾಸ್ಟಿಕ್, ರಾಸಾಯನಿಕ ವಸ್ತುಗಳು ಮಣ್ಣಿನಲ್ಲಿ ಹೂತು, ಮಣ್ಣಿನ ಗುಣಮಟ್ಟಕ್ಕೆ ಕುತ್ತು ತರುತ್ತಿದೆ. ಉಳಿದ ಮಣ್ಣನ್ನಾದರೂ ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ. ವಿಶ್ವದಾದ್ಯಂತ ಬೇರೆ ಬೇರೆ ಸ್ಥಳಗಳಲ್ಲಿ ಮಣ್ಣಿನ ಕಾಳಜಿಯ ಕುರಿತು ಕಾರ್ಯಾಗಾರ, ಉಪನ್ಯಾಸ, ತರಬೇತಿ ನೀಡಿ ಈ ದಿನವನ್ನು ಆಚರಿಸಲಾಗುತ್ತದೆ.

## ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆ ಬಗ್ಗೆ

- 2015ರ ಫೆಬ್ರವರಿಯಲ್ಲಿ ಕೇಂದ್ರ ಸರ್ಕಾರದಿಂದ 568 ಕೋಟಿ ರೂ. ಬಜೆಟ್‌ನಲ್ಲಿ ಆರಂಭವಾದ ಈ ಯೋಜನೆಯಡಿಯಲ್ಲಿ ಪ್ರತೀ ರೈತನ ಭೂಮಿಯ ಮಣ್ಣನ್ನು ಪರೀಕ್ಷಿಸಿ ಆ ಮಣ್ಣಿನ ಫಲವತ್ತತೆ ಮತ್ತಿತರ ವಿಚಾರಗಳನ್ನೊಳಗೊಂಡ ಬಗ್ಗೆ ಕಾರ್ಡ್ ಒಂದನ್ನು ವಿತರಿಸಲಾಗುತ್ತಿದೆ. ವಿತರಿಸಲಾದ ಕಾರ್ಡ್‌ನಲ್ಲಿ ಆ ಮಣ್ಣಿನಲ್ಲಿ ಬೆಳೆಯಬಹುದಾದ ಬೆಳೆಗಳ ಬಗ್ಗೆ ಸಲಹೆಗಳಿರುತ್ತವೆ, ಜತೆಗೆ ಆ ಬೆಳೆಗೆ ಬಳಸಬೇಕಾದ ರಸಗೊಬ್ಬರ, ನೀಡಬೇಕಾದ ಖನಿಜ ಮಿಶ್ರಣಗಳ ಪ್ರಮಾಣವನ್ನು ನಮೂದು ಮಾಡಲಾಗಿರುತ್ತದೆ. ಇದರಿಂದಾಗಿ ರೈತರು ತಮ್ಮ ಭೂಮಿಯ ಫಲವತ್ತತೆಗೆ ತಕ್ಕಂಥ ಬೆಳೆಯನ್ನು ಅಧಿಕೃತ ರಸಗೊಬ್ಬರಗಳನ್ನು ಬಳಸುವ ಮೂಲಕ ಬೆಳೆದು ಹೆಚ್ಚುವರಿ ಇಳುವರಿ ಪಡೆಯಲು ಸಹಾಯವಾಗುತ್ತದೆ.

### ಏನಿದು ಯೋಜನೆ?

- ದೇಶಾದ್ಯಂತ ಎಲ್ಲ ರೈತರ ಸಾಗುವಳಿ ಜಮೀನಿನ ಮಣ್ಣಿನ ಮಾದರಿಯನ್ನು ಪರೀಕ್ಷಿಸಿ ನಂತರ ಅವರಿಗೆ ಮಣ್ಣಿನ ಫಲವತ್ತತೆ ಬಗ್ಗೆ ಕಾರ್ಡ್ ನೀಡಲಾಗುತ್ತದೆ. ಪ್ರತೀ ಜಮೀನಿನ ಮಣ್ಣಿನ ಮಾದರಿ ಪಡೆದು ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಗುತ್ತದೆ. ಅಲ್ಲಿ ಸೂಕ್ತ ತಜ್ಞರಿಂದ ಮಣ್ಣಿನ ಮಾದರಿಯನ್ನು ಪರೀಕ್ಷೆಗೊಳಪಡಿಸಲಾಗುತ್ತದೆ. ಮುಖ್ಯವಾಗಿ ಮಣ್ಣು ಒಳಗೊಂಡಿರುವ ಖನಿಜಗಳು, ರಾಸಾಯನಿಕಗಳ ಬಗ್ಗೆ ಹೆಚ್ಚಿನ ಗಮನ ಹರಿಸಲಾಗುತ್ತದೆ. ನಂತರ ಆ ಮಣ್ಣಿನ ಜಮೀನು ಯಾವ ಬೆಳೆಗೆ ಸೂಕ್ತ ಹಾಗು ಆ ಬೆಳೆಯ ಹೆಚ್ಚಿನ ಇಳುವರಿಗೆ ಯಾವ ರೀತಿಯ ಹಾಗು ಪ್ರಮಾಣದ ರಸಗೊಬ್ಬರ ಅವಶ್ಯಕ ಎಂಬುದನ್ನು ನಿರ್ಧರಿಸಿ 'ಮಣ್ಣಿನ ಆರೋಗ್ಯ ಕಾರ್ಡ್' ನಲ್ಲಿ ದಾಖಲಿಸಲಾಗುತ್ತದೆ.

### ರೈತರಿಗೆ ಮಾಹಿತಿ ಹೇಗೆ?

- ಭಾರತ ಸರ್ಕಾರದ ಕೃಷಿ, ಸಹಕಾರ ಹಾಗು ರೈತ ಕಲ್ಯಾಣ ಇಲಾಖೆ ನಿಭಾಯಿಸುತ್ತಿರುವ ಮಣ್ಣಿನ ಕಾರ್ಡ್ ಯೋಜನೆಯನ್ನು ದೇಶದ ಸರ್ವ ರೈತರು ಪಡೆಯಬಹುದು. ಇದಕ್ಕೆಂತಲೇ ಕೇಂದ್ರ ಸರ್ಕಾರದ ವೆಬ್ ಸೈಟ್ ಇದ್ದು, ಇದರಲ್ಲಿ ವಲಯವಾರು ಯೋಜನಾ ನಿರ್ದೇಶಕರನ್ನು ನೋಡಬಹುದು. ರೈತರು ತಮ್ಮ ವಲಯದ ಅಥವಾ ತಮ್ಮ ವಲಯಕ್ಕೆ ಸಮೀಪದ ನಿರ್ದೇಶಕರ ಅಥವಾ ಕಾರ್ಯಕರ್ತರನ್ನು ಭೇಟಿಯಾಗಿ ಮಣ್ಣಿನ ಆರೋಗ್ಯ ಕಾರ್ಡ್ ಪಡೆಯುವ ಬಗ್ಗೆ ಮಾಹಿತಿ ಪಡೆಯಬಹುದು ಹಾಗು ಮಣ್ಣಿನ ಅರೋಗ್ಯ ಕಾರ್ಡ್ ಗಾಗಿ ಕೋರಿಕೆಯನ್ನು ಸಲ್ಲಿಸಬಹುದು.
- ರೈತರ ಜಮೀನಿನಿಂದ ಮಣ್ಣಿನ ಮಾದರಿ ಸಂಗ್ರಹಿಸಿದ ನಂತರ ಮುಂದಿನ ಅಂಶಗಳ ಬಗ್ಗೆ ಸಮಗ್ರವಾಗಿ ವೆಬ್‌ಸೈಟ್‌ನಲ್ಲಿ ಬಿತ್ತರಿಸಲಾಗುತ್ತದೆ. ತಮ್ಮ ಮಾದರಿ ಸಂಖ್ಯೆಯನ್ನು ಹುಡುಕುವ ಮೂಲಕ ರೈತರು ತಮ್ಮ ಮಣ್ಣಿನ ಪರೀಕ್ಷೆಯ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬಹುದು.

- ಮಣ್ಣಿನ ಮಾದರಿ ಪರೀಕ್ಷೆಯ ನಂತರ ಕಾರ್ಡ್ ಸಿದ್ಧವಾದಾಗ ಆ ಕಾರ್ಡ್ ಅನ್ನು ವೆಬ್‌ಸೈಟ್‌ನ ಮುಖಾಂತರವೂ ಪಡೆಯಬಹುದು. ವೆಬ್‌ಸೈಟ್‌ನಲ್ಲಿ ವಲಯ, ಜಿಲ್ಲಾ, ರಾಜ್ಯವಾರು ಮಣ್ಣಿನ ಗುಣಮಟ್ಟ,

ರಾಸಾಯನಿಕ-ಖನಿಜ ಅಂಶಗಳ ಮಿಶ್ರಣ ಮುಂತಾದ ಮಾಹಿತಿಗಳನ್ನು ಬಿತ್ತರಿಸಲಾಗಿದೆ. ರೈತರು ಈ ವೆಬ್‌ಸೈಟ್‌ನ ಮೂಲಕ 'ಮಣ್ಣಿನ ಆರೋಗ್ಯ'ದ ಬಗೆಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬಹುದು.

**ಯೋಜನೆಯ ಸ್ವರೂಪವೇನು?**

- ರೈತರಿಗೆ ಲಾಭವಾಗಬೇಕಾದರೆ ರಸಗೊಬ್ಬರ ಮತ್ತಿತರ ಕೃಷಿ ಬಂಡವಾಳ ಕಡಿಮೆಯಾಗಬೇಕು. ಈ ನಿಟ್ಟಿನಲ್ಲಿ ರಸಗೊಬ್ಬರವನ್ನು ಸಮರ್ಪಕ ಬಳಕೆ ಮಾಡಲು ಮಣ್ಣಿನ ಫಲವತ್ತತೆ/ಆರೋಗ್ಯ ಬಹು ಮುಖ್ಯ. ಈ ಯೋಜನೆಯಲ್ಲಿ ಮಣ್ಣಿನ ಫಲವತ್ತತೆಯ ಆಧಾರದ ಮೇಲೆ ವೈಜ್ಞಾನಿಕವಾಗಿ ರಸಗೊಬ್ಬರ ಬಳಕೆಯ ಬಗ್ಗೆ ಮಾಹಿತಿ ನೀಡುವುದರಿಂದ ರೈತರು ಕಡಿಮೆ ಪ್ರಮಾಣದ ರಸಗೊಬ್ಬರ ಬಳಕೆ ಮಾಡಿ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿ.

**ವಿದ್ಯಾರ್ಥಿಗಳ ಯೋಚನೆಗೆ ಒಂದು ಯೋಜನೆ (GS PAPER-3)**

**Write a critical note on the objectives, significance and performance of Soil Health Cards (SHC) programme.**

**(ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆಯ ಉದ್ದೇಶಗಳು, ಪ್ರಾಮುಖ್ಯತೆ ಮತ್ತು ಕಾರ್ಯಕ್ಷಮತೆಯ ಬಗ್ಗೆ ವಿಮರ್ಶಾತ್ಮಕ ಟಿಪ್ಪಣಿ ಬರೆಯಿರಿ.)**

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 12. ತಾಜ್' 2ನೇ ಉತ್ತಮ ಪಾರಂಪರಿಕ ತಾಣ

**ಪ್ರಮುಖ ಸುದ್ದಿ**

- ಯುನೆಸ್ಕೊದ ಉತ್ತಮ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ತಾಜ್‌ಮಹಲ್ ಎರಡನೇ ಸ್ಥಾನದಲ್ಲಿದೆ ಎಂದು ಹೊಸ ಸಮೀಕ್ಷೆಯೊಂದು ತಿಳಿಸಿದೆ. ಕಾಂಬೋಡಿಯಾದ ದೇವಾಲಯ ಸಂಕೀರ್ಣ ಅಂಕೂರ್‌ವಾಟ್ ಮೊದಲ ಸ್ಥಾನ ಗಿಟ್ಟಿಸಿದೆ.

- ಯುನೆಸ್ಕೊದ ಸಾಂಸ್ಕೃತಿಕ ಮತ್ತು ನೈಸರ್ಗಿಕ ತಾಣಗಳ ಪಟ್ಟಿಯನ್ನು ಆಧರಿಸಿ ಈ ಸಮೀಕ್ಷೆ ನಡೆಸಲಾಗಿದೆ. ಪ್ರಯಾಣ ಸೌಲಭ್ಯ ಒದಗಿಸುವ ಅಂತರ್ಜಾಲ ತಾಣ 'ಟ್ರಿಪ್ ಅಡ್ವೈಸರ್' ಸಮೀಕ್ಷೆ

ನಡೆಸಿದ್ದು, ಉತ್ತಮ ಪಾರಂಪರಿಕ ತಾಣಗಳ ಪಟ್ಟಿಯನ್ನು ಅದು ಸಿದ್ಧಪಡಿಸಿದೆ. ವಿಶ್ವದಾದ್ಯಂತ ಪ್ರವಾಸಿಗರು ಸಮೀಕ್ಷೆಯಲ್ಲಿ ಭಾಗವಹಿಸಿದ್ದರು.

ಪ್ರಮುಖ ಸಂಗತಿ

- 'ಅದ್ಭುತ ತಾಣ ತಾಜ್‌ಮಹಲ್‌ಗೆ ಭೇಟಿ ನೀಡಿದರೆ ನೂರಾರು ಅವಿಸ್ಮರಣೀಯ ಅನುಭವಗಳು ನಿಮ್ಮದಾಗುತ್ತವೆ. ಖಾಸಗಿ ಪ್ರವಾಸಿ ಮಾರ್ಗದರ್ಶಕರು ಇಲ್ಲಿ ಸಿಗುತ್ತಾರೆ. ಸೂರ್ಯೋದಯ, ಸೂರ್ಯಾಸ್ತ ತಾಣಗಳಲ್ಲಿ ಕಾಲ ಕಳೆಯಬಹುದು. ಸ್ಥಳೀಯ ಆಹಾರ ಸವಿಯಲು ಬಯಸುವವರಿಗೆ ಅಂಥ ಅವಕಾಶ ಮಾಡಿಕೊಡುವ ಹಲವು ಮನೆಗಳೂ ಆಗ್ರಾದಲ್ಲಿ ಇವೆ' ಎಂದು ಟ್ರಿಪ್ ಅಡ್ವೈಸರ್ ಹೇಳಿದೆ.

- ತಾಜ್‌ಮಹಲ್‌ಗೆ ವಾರ್ಷಿಕ 80 ಲಕ್ಷಕ್ಕೂ ಅಧಿಕ ಪ್ರವಾಸಿಗರು ಭೇಟಿ ನೀಡುತ್ತಾರೆ.

ಇತರ ಉತ್ತಮ ತಾಣಗಳು

- ಚೀನಾ ಮಹಾಗೋಡೆ, ಮಾಚು ಪಿಚು ಕೋಟೆ (ದಕ್ಷಿಣ ಆಫ್ರಿಕಾ), ಇಗುವಾಜು ರಾಷ್ಟ್ರೀಯ ಉದ್ಯಾನ (ಬ್ರೆಜಿಲ್), ಪುರಾತನ ಗುಹೆಗಳಿರುವ ಸಸ್ಸಿ ಡಿ ಮಟೆರಾ (ಇಟಲಿ), ಅಶ್‌ವಿಟ್ಸ್ ಬಿರ್ಕೆನೌ ಸ್ಮಾರಕ ವಸ್ತುಸಂಗ್ರಹಾಲಯ, ಐತಿಹಾಸಿಕ ಕ್ರಕೋವ್ ನಗರ (ಪೋಲಂಡ್), ಇಸ್ರೇಲ್‌ನ ಜೆರುಸಲೇಮ್‌ನ ಓಲ್ಡ್ ಸಿಟಿ ಪ್ರದೇಶ ಮತ್ತು ಟರ್ಕಿಯ ಇಸ್ತಾಂಬುಲ್‌ನ ಐತಿಹಾಸಿಕ ಸ್ಥಳಗಳು.

## 13. ಭಾರತದ ಇಂಧನ ಭದ್ರತಾ ಯೋಜನೆಗಳು

ಪ್ರಮುಖ ಸುದ್ದಿ

- ಭಾರತದ ಭರವಸೆಯ ಬೆಳವಣಿಗೆಯ ಕಥೆ ಉದ್ಯಮಶೀಲತೆ, ಜನಸಂಖ್ಯಾ ಲಾಭಾಂಶ, ದೊಡ್ಡ ಮಾರುಕಟ್ಟೆ, ಬಲಿಷ್ಠ ಕಾನೂನು ಮತ್ತು ನಿಯಂತ್ರಕ ಚೌಕಟ್ಟುಗಳು ಮತ್ತು ಪ್ರಜಾಪ್ರಭುತ್ವದ ರಾಜಕೀಯ ಮುಖ್ಯ ಕಂಬಗಳ ಮೇಲೆನಿಂತಿದೆ.

- ಭಾರತದ ಪ್ರಗತಿ ಮತ್ತು ಎಲ್ಲರಿಗೂ ಕೈಟುಕುವ ದರದಲ್ಲಿ ಇಂಧನ ನೀತಿಗೆ ಪ್ರಧಾನಿ ನರೇಂದ್ರ ಮೋದಿ ಆದ್ಯತೆ ನೀಡಿ ಇಂಧನ ಲಭ್ಯತೆ, ಶಕ್ತಿ ದಕ್ಷತೆ, ಶಕ್ತಿ ಸುಸ್ಥಿರತೆ ಮತ್ತು ಇಂಧನ ಭದ್ರತೆ ಎಂಬ ನಾಲ್ಕು ಪ್ರಮುಖ ಅಂಶಗಳಿಗೆ ಒತ್ತು ನೀಡಿದ್ದಾರೆ. ತೈಲ ಮತ್ತು ಅನಿಲ ವಲಯದಲ್ಲಿ ಹೂಡಿಕೆಗಿದ್ದ ತಡೆಗಳನ್ನು ನಿವಾರಿಸಿ ವ್ಯವಹಾರ ಸರಳಗೊಳಿಸಲು ಮತ್ತು 'ಮೇಕ್ ಇನ್ ಇಂಡಿಯಾ'ಕ್ಕೆ ಉತ್ತೇಜನ ನೀಡಲು ಭಾರತ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ.

**ಪ್ರಮುಖ ವಿಶ್ಲೇಷಣೆ (ಮುಖ್ಯ ಪರೀಕ್ಷೆಗಾಗಿ )**

- ತೈಲ ಮತ್ತು ಅನಿಲ ಅನ್ವೇಷಣೆಯನ್ನು ಸುಲಭಗೊಳಿಸಲು ಹೈಡ್ರೊಕಾರ್ಬನ್ ಅನ್ವೇಷಣೆ ಮತ್ತು ಲೈಸೆನ್ಸಿಂಗ್ ಪಾಲಿಸಿ ಸೇರಿದಂತೆ ಅನೇಕ ದೊಡ್ಡ ಕ್ರಮಗಳನ್ನು ಕೇಂದ್ರ ಸರ್ಕಾರ ಕೈಗೊಂಡಿದೆ. ಇದು ಎಲ್ಲಾ ಮೂರು ರೀತಿಯ ಹೈಡ್ರೊಕಾರ್ಬನ್ ಪರಿಶೋಧನೆಗೆ ಏಕ ಪರವಾನಗಿ ನೀಡುವ ವ್ಯವಸ್ಥೆ ಕಲ್ಪಿಸಿದೆ.
- ಬಹಿರಂಗ ಮತ್ತು ಪಾರದರ್ಶಕ ಹರಾಜು ವ್ಯವಸ್ಥೆಯಿಂದ ಸಣ್ಣ ಪತ್ತೆ ಹಚ್ಚಲ್ಪಟ್ಟ ಜಾಗಗಳ ಹಣಗಳಿಕೆ ಮತ್ತು ತಿಳುವಳಿಕೆಯ ಹೂಡಿಕೆಯ ನಿರ್ಧಾರಗಳನ್ನು ಸುಲಭಗೊಳಿಸಲು ರಾಷ್ಟ್ರೀಯ ದತ್ತಾಂಶ ಸಂಗ್ರಹದ ರಚನೆಯನ್ನು ಮಾಡಲಾಗಿದೆ. ಮುಂಬರುವ ವರ್ಷಗಳಲ್ಲಿ ಈ ಯೋಜನೆಗಳು ಹೂಡಿಕೆಯನ್ನು ಪ್ರೋತ್ಸಾಹಿಸಬಲ್ಲವು ಮತ್ತು ಹೆಚ್ಚಿನ ಪ್ರಮಾಣದಲ್ಲಿ ಹೈಡ್ರೋಕಾರ್ಬನ್ ಗಳನ್ನು ಪತ್ತೆ ಹಚ್ಚ ಬಲ್ಲದು. ಭಾರತವು ವಿಶ್ವದಲ್ಲೇ 4 ನೇ ಅತಿದೊಡ್ಡ ರಿಫೈನರ್ ಆಗಿ ಹೊರಹೊಮ್ಮಿದೆ.
- ಪ್ರತಿ ವರ್ಷಕ್ಕೆ 235 ದಶಲಕ್ಷ ಮೆಟ್ರಿಕ್ ಟನ್ನಳಷ್ಟು ಸಂಸ್ಕರಣೆಗೆ ಸಾಮರ್ಥ್ಯವಿದೆ. ಇದರಿಂದಾಗಿ ಜಾಗತಿಕ ಮಟ್ಟದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ರಫ್ತುಗೆ ಕಾರಣವಾಗಿದೆ. ರಾಷ್ಟ್ರೀಯ ಗ್ಯಾಸ್ ಗ್ರಿಡ್ ಇನ್ನು 15,000 ಕಿಮೀ ಕಾಮಗಾರಿ ನಡೆಸಿದರೆ ಅದು ಪೂರ್ಣಗೊಳ್ಳಲಿದೆ. 2600 ಕಿಲೋಮೀಟರ್ ಉದ್ದದ ಪ್ರಧಾನ ಮಂತ್ರಿ ಉರ್ಜಾ ಗಂಗಾ ಪೈಪ್ ಲೈನ್ ಯೋಜನೆಯ ತ್ವರಿತ ಗತಿಯಲ್ಲಿ ನಡೆಯುತ್ತಿದೆ.
- ಈ ಶಕ್ತಿ ಸಂಪರ್ಕ ಯೋಜನೆಗಳು ಪೂರ್ವ ಭಾರತದಲ್ಲಿನ ಕೈಗಾರಿಕಾ ಅಭಿವೃದ್ಧಿಯ ಸಾಮರ್ಥ್ಯವನ್ನು ಹೆಚ್ಚಿಸಲಿದೆ. ನಗರದ ಗ್ಯಾಸ್ ವಿತರಣೆ (ಸಿಜಿಡಿ) ನೆಟ್ವರ್ಕ್ ವಿಸ್ತರಣೆ ಮತ್ತು ಸಾರಿಗೆಗೆ ಇಂಧನವಾಗಿ ಅನಿಲವನ್ನು ಉತ್ತೇಜಿಸುವುದು ಭಾರತದ ಶಕ್ತಿಯ ಬುಟ್ಟಿಯಲ್ಲಿನ ಅನಿಲದ ಪಾಲನ್ನು ಪ್ರಸ್ತುತ ದಶಕದಲ್ಲಿ 6.5% ರಿಂದ 15% ರಷ್ಟಕ್ಕೆ ಹೆಚ್ಚಿಸುವ ಇತರ ಪ್ರಮುಖ ಕ್ರಮಗಳಾಗಿವೆ.

- ಇಂಗಾಲದ ಹೆಜ್ಜೆಗುರುತುಗಳನ್ನು ಕಡಿಮೆ ಮಾಡಲು 21 ಕಾನ್ಫರೆನ್ಸ್ ಆಫ್ ಪಾರ್ಟೀಸ್ (ಕೊಂಪೆ) 21 ಬದ್ಧತೆಗಳು, ತೀವ್ರವಾದ ಎಥೆನಾಲ್ ಮಿಶ್ರಣ ಕಾರ್ಯಕ್ರಮಗಳ ಮೂಲಕ ಪರಿಸರೀಯ ಸ್ನೇಹಿ ಪರ್ಯಾಯ ಇಂಧನಗಳನ್ನು ಬಳಸಲು ಒತ್ತು ನೀಡಿದೆ. ವಿಶೇಷವಾಗಿ ವ್ಯರ್ಥ ತ್ಯಾಜ್ಯದಿಂದ ಇಂಧನ ಉತ್ಪಾದಿಸಲು ಆಧುನಿಕ ಎಥೆನಾಲ್ ಸ್ಥಾವರ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಇದು 2020 ರ ವೇಳೆಗೆ ಯುರೋ VI ಸಮಾನ ಮಟ್ಟಕ್ಕೆ ತಲುಪಲು ಪೂರಕವಾಗಿ ಶುದ್ಧ ಸಾರಿಗೆ ಇಂಧನವನ್ನು ಪ್ರೋತ್ಸಾಹಿಸುತ್ತದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತದೆ. ಪ್ರಧಾನ ಮಂತ್ರಿ ಉಜ್ವಲಾ ಯೋಜನಾ (ಪಿಎಂಯುವೈ) ಮೇ 2016 ರಲ್ಲಿ ಪ್ರಾರಂಭವಾಗಿದ್ದು ಈಗಾಗಲೇ ಸುಮಾರು 30 ದಶಲಕ್ಷ ಬಡ ಮಹಿಳೆಯರಿಗೆ 18 ತಿಂಗಳೊಳಗೆ ಶುದ್ಧ ಅಡುಗೆ ಅನಿಲವನ್ನು ಒದಗಿಸಿದೆ.

- ಈ ಮೂಲಕ ಲಕ್ಷಾಂತರ ಕುಟುಂಬಗಳಿಗೆ ಬೃಹತ್ ಸಾಮಾಜಿಕ-ಆರ್ಥಿಕ ಮತ್ತು ಆರೋಗ್ಯಪ್ರಯೋಜನಗಳೊಂದಿಗೆ ಪರಿವರ್ತನೆಯ ನೀಲಿ ಜ್ವಾಲೆಯ ಕ್ರಾಂತಿಗೆ ಕಾರಣವಾಗಿದೆ. ಹೆಚ್ಚುವರಿಯಾಗಿ, 10 ಮಿಲಿಯನ್ ಎಲ್ಪಿಜಿ ಗ್ರಾಹಕರು ತಮ್ಮ ಸಬ್ಸಿಡಿಯನ್ನು ನೀಡುವ ಮೂಲಕ ಪಾಲ್ಗೊಳ್ಳುವಿಕೆ ಪ್ರಜಾಪ್ರಭುತ್ವದ ಮತ್ತುಸ್ವಯಂಪ್ರೇರಿತತೆಯ ಉನ್ನತ ಆದರ್ಶವನ್ನು ಸಾಬೀತು ಮಾಡಿದ್ದಾರೆ. ಇದರಿಂದಾಗಿ ಎಲ್ಪಿಜಿ ಸಂಪರ್ಕಗಳನ್ನು ಬಡ ಜನರಿಗೆ ತಲುಪಿಸಲು ಸಾಧ್ಯವಾಗಿದೆ. 'ಪಹಲ್' ಯೋಜನೆ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಎಲ್ಪಿಜಿ ಸಬ್ಸಿಡಿಇನಿಶಿಯೇಟಿವ್ ಸರಕಾರದ ನೇರ ವರ್ಗಾವಣೆಯಿಂದ 190 ದಶಲಕ್ಷ ಎಲ್ಪಿಜಿ ಗ್ರಾಹಕರಿಗೆ ಲಾಭವಾಗಲಿದ್ದು ಇದು ವಿಶ್ವದ ಅತಿ ದೊಡ್ಡ ಲಾಭ ವರ್ಗಾವಣೆ ಯೋಜನೆ ಎಂದು ಗಿನ್ನೆಸ್ ಪುಸ್ತಕದಿಂದ ಗುರುತಿಸಲ್ಪಟ್ಟಿದೆ.

- ಅಂತರರಾಷ್ಟ್ರೀಯ ರಂಗದಲ್ಲಿ, ಭಾರತ ತನ್ನ ಶಕ್ತಿ ಆಮದುಗಳನ್ನು ವೈವಿಧ್ಯಗೊಳಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ, ತೈಲ ಮತ್ತು ಅನಿಲ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ರಷ್ಯಾ ಮತ್ತು ವೆನೆಜುವೆಲಾ ದೇಶಗಳ ಹೂಡಿಕೆಗಳನ್ನು ಉತ್ತೇಜಿಸುತ್ತಿದೆ. ಭಾರತವು ವಿಶ್ವದಲ್ಲೇ ಮೂರನೇ ಅತಿದೊಡ್ಡ ಇಂಧನ ಗ್ರಾಹಕನಾಗಿದ್ದು, ವಿವಿಧ ಅಂತರರಾಷ್ಟ್ರೀಯ ಶಕ್ತಿ ಕ್ಷೇತ್ರ ಮತ್ತು ಪ್ರಾದೇಶಿಕ ಗುಂಪುಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ವರ್ಷದ ವಿಶ್ವ ಎಲ್ಪಿಜಿ ಅಸೋಸಿಯಶನ್ ನ್ನ ಏಷ್ಯಾ ಶೃಂಗಸಭೆಯ ಅತಿಥ್ಯವನ್ನು ದೆಹಲಿ ವಹಿಸಿಕೊಂಡಿತ್ತು. ಇದನ್ನು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಶ್ರೀ ಧರ್ಮೇಂದ್ರ ಪ್ರಧಾನ್ ಉದ್ಘಾಟಿಸಿದರು. 2018 ರ ಏಪ್ರಿಲಲ್ಲಿ ಅಂತರರಾಷ್ಟ್ರೀಯ ಎನರ್ಜಿ ಫೋರಮ್ ನ ಸಚಿವರ ಅಧಿವೇಶನದ ಆತಿಥ್ಯ ವಹಿಸಲು ಭಾರತವು ಸಜ್ಜಾಗುತ್ತಿದೆ. ಬಾಂಗ್ಲಾದೇಶ, ನೇಪಾಳ ಮತ್ತು ಮಯನ್ಮಾರ್ ದೇಶಗಳೊಂದಿಗಿನ ವಿಶೇಷ ಸಂಬಂಧವನ್ನು ಅವರು ಹೊಂದಿದ್ದಾರೆ.

## 14. ರೆಪೋ ದರ ಯಥಾಸ್ಥಿತಿ

### ಪ್ರಮುಖ ಸುದ್ದಿ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶೇ. 6ರ ರೆಪೋ ದರವನ್ನೆ ಮುಂದುವರಿಸಿದ್ದು, ನಗದು ಹೊಂದಾಣಿಕೆ ಸೌಕರ್ಯ (ಎಲ್‌ಎಎಫ್) ಅಡಿಯಲ್ಲಿ ರೆಪೋ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಜತೆಗೆ ರಿವರ್ಸ್ ರೆಪೋ ದರ ಕೂಡ ಶೇ. 5.75ರಲ್ಲೇ ಮುಂದುವರಿಸಿದೆ.

### ಪ್ರಮುಖ ಸಂಗತಿಗಳು

- ಪ್ರಸಕ್ತ ಆರ್ಥಿಕ ವರ್ಷದ ಮೂರು ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಹಣದುಬ್ಬರದ ಅಂದಾಜನ್ನು ಶೇ. 4.3ರಿಂದ 4.7ಕ್ಕೆ ಹೆಚ್ಚಿಸಿರುವ ಆರ್‌ಬಿಐ, ಆರ್ಥಿಕ ಪ್ರಗತಿಯ ಅಂದಾಜನ್ನು ಶೇ.6.7ರಲ್ಲಿ ಕಾಯ್ದುಕೊಂಡಿದೆ.

- ಬಡ್ಡಿದರ ಕಡಿತಕ್ಕೆ ಪೂರಕವಾದ ಆರ್ಥಿಕ ವಾತಾವರಣದ ಮುನ್ಸೂಚನೆ ಇರುವ ಕಾರಣ ಹೊಸ ಬಡ್ಡಿದರದ ನೀತಿಯನ್ನು ಆರ್‌ಬಿಐ ಗವರ್ನರ್ ಊರ್ಜಿತ್ ಪಟೇಲ್ ಅಧ್ಯಕ್ಷತೆಯ ಹಣಕಾಸು ನೀತಿ ಸಮಿತಿ (ಎಂಪಿಸಿ) ಪ್ರಕಟಿಸುವ ನಿರೀಕ್ಷೆ ಇತ್ತು. ಆದರೆ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರದಲ್ಲಿ ಆಗುತ್ತಿರುವ ಹೆಚ್ಚಳ ಹಾಗೂ 7ನೇ ವೇತನ ಆಯೋಗ ಜಾರಿಯಿಂದ ಬೊಕ್ಕಸದ ಮೇಲಾಗಿರುವ ಹೊರೆ, ದೇಶದ ಪ್ರಸ್ತುತದ ಆರ್ಥಿಕ ಸ್ಥಿತಿ ಹಿನ್ನೆಲೆಯಲ್ಲಿ ರೆಪೋ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎನ್ನಲಾಗಿದೆ.

- ಗ್ರಾಹಕ ದರ ಸೂಚ್ಯಂಕದಲ್ಲಿ (ಸಿಪಿಐ) ಮಧ್ಯಮಾವಧಿ ಗುರಿಯನ್ನು ತಲುಪುವ ಉದ್ದೇಶದಿಂದ ಹಣದುಬ್ಬರವನ್ನು ಶೇ. 4ರಲ್ಲಿ(2 % ಅಂದಾಜಿನಲ್ಲಿ) ಕಾಯ್ದುಕೊಳ್ಳುವ ಮೂಲಕ ಪ್ರಗತಿಗೆ ಪೂರಕ ವಾತಾವರಣ ಕಲ್ಪಿಸುವ ಇರಾದೆಯನ್ನು ಎಂಪಿಸಿ ಹೊಂದಿದೆ ಎಂದು ಆರ್‌ಬಿಐ ತಿಳಿಸಿದೆ.

## 15. ಜೆರುಸಲೇಂ ಇಸ್ರೇಲ್ ರಾಜಧಾನಿ

### ಪ್ರಮುಖ ಸುದ್ದಿ

- ಇಸ್ರೇಲ್ ರಾಜಧಾನಿಯಾಗಿ ಜೆರುಸಲೇಂ ನಗರವನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಾನ್ಯ ಮಾಡಿ ಆದೇಶ ಹೊರಡಿಸಿದ್ದಾರೆ. ಇದು ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವಿನ ದ್ವೇಷದ ಬೆಂಕಿಗೆ ತುಪ್ಪ ಸುರಿಯಲಿದೆ ಎಂದು ವಿದೇಶಗಳು ಎಚ್ಚರಿಕೆ ನೀಡಿದ್ದರೂ, ಅಮೆರಿಕದ ಹತ್ತು ವರ್ಷಗಳ ನೀತಿಗೆ ತಿಲಾಂಜಲಿ ನೀಡಿ ಈ ನಿರ್ಧಾರವನ್ನು ಟ್ರಂಪ್ ಕೈಗೊಂಡಿದ್ದಾರೆ.

### ಸಂಕ್ಷಿಪ್ತ ವಿಶ್ಲೇಷಣೆ (ಮುಖ್ಯ ಪರೀಕ್ಷೆಗಾಗಿ )

- ಒಂದು ನಗರಕ್ಕೆ ರಾಜಧಾನಿಯ ಮಾನ್ಯತೆ ನೀಡುವುದರಿಂದ ಏಕಿಷ್ಟು ಸಮಸ್ಯೆ, ಟ್ರಂಪ್ ನಿರ್ಧಾರಕ್ಕೆ ಕಾರಣವೇನು?

- ಜೆರುಸಲೇಂ ಮೇಲೆ ಇಸ್ರೇಲ್, ಪ್ಯಾಲೆಸ್ಟೀನ್... ಎರಡೂ ಹಕ್ಕು ಸಾಧಿಸುತ್ತಿವೆ. ವಾಸ್ತವದಲ್ಲಿ ಅದು ಇಸ್ರೇಲ್ ನಿಯಂತ್ರಣದಲ್ಲಿದ್ದರೂ ಈ ಕಾರಣಕ್ಕಾಗಿ ವಿವಾದಾತ್ಮಕ ನಗರ. ಜೆರುಸಲೇಂ ತನ್ನ

ರಾಜಧಾನಿ ಎಂದು ಇಸ್ರೇಲ್ ಸಂಸತ್ತು ಬಹಳ ಹಿಂದೆಯೇ ನಿರ್ಣಯ ಅಂಗೀಕರಿಸಿದೆ. ಆದರೂ ಟೆಲ್‌ಅವೀವ್‌ನಿಂದಲೇ ಕಾರ್ಯನಿರ್ವಹಿಸುತ್ತಿದೆ. ಈಗಲೂ ಜೆರುಸಲೇಂನಲ್ಲಿ ಯಾವುದೇ ದೇಶದ ರಾಜತಾಂತ್ರಿಕ ಕಚೇರಿಗಳಿಲ್ಲ. 1995ರಲ್ಲಿ ಅಮೆರಿಕ ಕಾಂಗ್ರೆಸ್ ಕೂಡ ಜೆರುಸಲೇಂಗೆ ಇಸ್ರೇಲ್‌ನ ರಾಜಧಾನಿ ಎಂಬ ಮಾನ್ಯತೆ ನೀಡಿ ರಾಯಭಾರ ಕಚೇರಿ ಸ್ಥಳಾಂತರಿಸುವ ನಿರ್ಣಯ ತೆಗೆದುಕೊಂಡಿತ್ತು. ಆದರೆ ಆಗ ಇದ್ದ ಮತ್ತು ನಂತರ ಬಂದ ಅಧ್ಯಕ್ಷರು ಆರು ತಿಂಗಳಿಗೊಮ್ಮೆ ತಮ್ಮ ವಿಶೇಷಾಧಿಕಾರ ಚಲಾಯಿಸಿ ಈ ನಿರ್ಣಯದ ಜಾರಿ ಮುಂದೂಡುತ್ತ ಬಂದಿದ್ದರು. ಇದು ಟ್ರಂಪ್‌ಗೆ ಚುನಾವಣಾ ವಿಷಯವಾಗಿತ್ತು. ಆಗ ಮಾಡಿದ ವಾಗ್ದಾನವನ್ನು ಈಗ ಜಾರಿಗೊಳಿಸಿದ್ದಾರೆ. ಈ ಮೂಲಕ ರಾಜಕೀಯ ಲಾಭ ಪಡೆಯುವುದು ಅವರ ಉದ್ದೇಶ.

## ಜೆರುಸಲೇಂಗೆ ಏಕಿಷ್ಟು ಮಹತ್ವ?

- ಜೆರುಸಲೇಂ ವಿಶ್ವದ ಅತ್ಯಂತ ಹಳೆಯ ಕೆಲವೇ ನಗರಗಳಲ್ಲಿ ಒಂದು. ಮೆಡಿಟರೇನಿಯನ್ ಸಮುದ್ರ ಮತ್ತು ಮೃತ ಸಮುದ್ರದ ಮಧ್ಯದಲ್ಲಿನ ಈ ನಗರ ಕ್ರಿಸ್ತಪೂರ್ವ 4500ಕ್ಕೂ ಮೊದಲೇ ಅಸ್ತಿತ್ವದಲ್ಲಿತ್ತು ಎನ್ನುತ್ತವೆ ಪುರಾತತ್ವ ಸಾಕ್ಷ್ಯಗಳು. ಇದು ಯೆಹೂದಿಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು... ಹೀಗೆ ಮೂರು ಪ್ರಮುಖ ಧರ್ಮದವರಿಗೂ ಅತ್ಯಂತ ಪವಿತ್ರ ಸ್ಥಳ. ವಿಶ್ವದಲ್ಲಿ ಇದಕ್ಕೆ ಪರ್ಯಾಯವಾದ ಇನ್ನೊಂದು ಉದಾಹರಣೆ ಇಲ್ಲ. ಪ್ರವಾದಿ ಮುಹಮ್ಮದರು ಸ್ವರ್ಗಾರೋಹಣ ಮಾಡಿದ್ದು ಇಲ್ಲಿಂದಲೇ ಎಂಬುದು ಮುಸ್ಲಿಮರ ನಂಬಿಕೆ.

- ಮೆಕ್ಕಾ, ಮದೀನಾ ನಂತರ ಇದು ಅವರ ಪಾಲಿಗೆ ಮೂರನೇ ಅತ್ಯಂತ ಪವಿತ್ರ ಸ್ಥಳ. ಏಸುವನ್ನು ಶಿಲುಬೆಗೆ ಏರಿಸಿದ ಮತ್ತು ಏಸುವಿನ ಮಹಾಪರಿನಿರ್ವಾಣ ಸ್ಥಳ ಎನ್ನುವ ಕಾರಣಕ್ಕಾಗಿ ಕ್ರೈಸ್ತರಿಗೆ ಇದು ಪುಣ್ಯ ಭೂಮಿ. ಜಗತ್ತಿನ ಎಲ್ಲ ಜೀವಿಗಳ ಸೃಷ್ಟಿ ಆರಂಭವಾದದ್ದೇ ಇಲ್ಲಿಂದ ಎಂಬ ನಂಬಿಕೆಯಿಂದಾಗಿ ಯೆಹೂದಿಗಳಿಗೂ ಈ ನಗರಕ್ಕೂ ಧಾರ್ಮಿಕವಾಗಿ ಬಿಡಲಾರದ ನಂಟು. ಅವರ ಪ್ರಕಾರ ಇಲ್ಲಿನ ಪಶ್ಚಿಮ ಗೋಡೆ ಈಗಲೂ ದೇವತೆಗಳಿರುವ ಸ್ಥಳ. ಅದರ ದರ್ಶನ, ಆರಾಧನೆ ಅವರ ಪಾಲಿಗೆ ಧಾರ್ಮಿಕ ಕರ್ತವ್ಯ. ಧರ್ಮ ಗ್ರಂಥಗಳಲ್ಲಿ 'ಶಾಂತಿಯ ನಗರ' ಎಂದು ಉಲ್ಲೇಖಗೊಂಡಿದ್ದರೂ ಇದರ ಮೇಲೆ ಪರಮಾಧಿಕಾರ ಸಾಧಿಸಲು ಸಾವಿರಾರು ವರ್ಷಗಳಿಂದ ನಡೆದ ಯುದ್ಧಗಳಿಗೆ ಲೆಕ್ಕವಿಲ್ಲ.

## ಪೂರ್ವ ಮತ್ತು ಪಶ್ಚಿಮ ಜೆರುಸಲೇಂ. ಏನು?

- ಸಾಲೊಮನ್, ಡೆವಿಡ್‌ರಿಂದ ಹಿಡಿದು ಕಾಲಾಂತರದಲ್ಲಿ ಟರ್ಕಿಯ ಒಟ್ಟೊಮನ್ ಅರಸೊತ್ತಿಗೆಯ ವಶಕ್ಕೆ ಬಂದ ಈ ನಗರವನ್ನು ಸ್ಥೂಲವಾಗಿ ಪೂರ್ವ ಮತ್ತು ಪಶ್ಚಿಮ ಜೆರುಸಲೇಂ ಎಂದು ಎರಡು ಭಾಗಗಳಾಗಿ ಗುರುತಿಸಲಾಗುತ್ತಿದೆ. ಅಲ್ ಅಕ್ಸಾ ಮಸೀದಿ, ಪಶ್ಚಿಮ ಗೋಡೆ, ಡೋಮ್ ಆಫ್ ದಿ ರಾಕ್, ಡೋಮ್ ಆಫ್ ದಿ ಚೈನ್ ಮುಂತಾದ ಪವಿತ್ರ ಸ್ಥಳಗಳು ಹಳೆಯ ಜೆರುಸಲೇಂ ಎಂದು ಕರೆಯುವ ಪೂರ್ವ ಭಾಗದಲ್ಲಿವೆ. ಪಶ್ಚಿಮ ಜೆರುಸಲೇಂ ಸ್ವಲ್ಪ ಆಧುನಿಕ ನಗರ. 1947ರಲ್ಲಿ ವಿಶ್ವಸಂಸ್ಥೆಯು ಇದನ್ನು ಅಂತರರಾಷ್ಟ್ರೀಯ ನಗರ ಎಂದು ಘೋಷಿಸಿತ್ತು. ನಗರದ ಪಶ್ಚಿಮ ಭಾಗದಲ್ಲಿ ಯೆಹೂದಿಗಳು, ಪೂರ್ವ ಭಾಗದಲ್ಲಿ ಪ್ಯಾಲೆಸ್ಟೀನಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಈ ಕಾರಣಕ್ಕಾಗಿ ಎರಡು ಭಾಗವಾಗಿ ಗುರುತು ಮಾಡಿತ್ತು.

- ಪಶ್ಚಿಮ ಭಾಗ ಇಸ್ರೇಲ್ ನಿಯಂತ್ರಣದಲ್ಲಿ, ಪೂರ್ವ ಭಾಗ ಜೋರ್ಡ್‌ನ್ ದೊರೆಯ ನಿಯಂತ್ರಣದಲ್ಲಿ ಇದ್ದವು. ಆದರೆ 1967ರಲ್ಲಿ ನಡೆದ ಆರು ದಿನಗಳ ಯುದ್ಧದಲ್ಲಿ ಅರಬ್ ದೇಶಗಳ ಮೇಲೆ ಇಸ್ರೇಲ್ ಜಯಗಳಿಸಿ ಪೂರ್ವ ಭಾಗವನ್ನೂ ತನ್ನ ಸುಪರ್ದಿಗೆ ತೆಗೆದುಕೊಂಡಿತು. ಅದರ ಪ್ರಕಾರ ಪೂರ್ವ– ಪಶ್ಚಿಮ ಜೆರುಸಲೇಂ ಎಂಬುದು ಇಲ್ಲವೇ ಇಲ್ಲ. ಅದು ಇಡಿಯಾಗಿ ಒಂದು ನಗರ. ಆದರೆ ಇಸ್ರೇಲ್‌ನ ಈ ವಾದ ಮತ್ತು ಆಕ್ರಮಣವನ್ನು ಅಮೆರಿಕ ಬಿಟ್ಟರೆ ಬೇರೆ ಯಾವ ದೇಶವೂ ಒಪ್ಪಿಲ್ಲ. ಪೂರ್ವ ಜೆರುಸಲೇಂ ಭಾಗವನ್ನು ಇಸ್ರೇಲ್ ಬಲವಂತವಾಗಿ ಆಕ್ರಮಿಸಿದೆ ಎಂದು ವಿಶ್ವಸಂಸ್ಥೆ ಹೇಳಿದ್ದರೂ ಇದಕ್ಕೆ ಇಸ್ರೇಲ್ ಸೊಪ್ಪು ಹಾಕಿಲ್ಲ. ಇಡೀ ನಗರವನ್ನು ತನ್ನ ಬಿಗಿಮುಷ್ಟಿಯಲ್ಲಿ ಇಟ್ಟುಕೊಂಡಿದೆ. ಪೂರ್ವ ಜೆರುಸಲೇಂನ ಧಾರ್ಮಿಕ ಪ್ರದೇಶದ ಉಸ್ತುವಾರಿಯನ್ನು ಮುಸ್ಲಿಂ ವಕ್ಫ್ ಆಡಳಿತಕ್ಕೆ ವಹಿಸಿಕೊಟ್ಟಿದ್ದರೂ ಅಲ್ಲಿ ತನ್ನ ಯೆಹೂದಿ ಪ್ರಜೆಗಳಿಗೆ ಹೊಸ ಹೊಸ ಬಡಾವಣೆ ನಿರ್ಮಿಸುತ್ತ ಪ್ಯಾಲೆಸ್ಟೀನಿ ಮುಸ್ಲಿಮರ ಪ್ರಾಬಲ್ಯ ಕಡಿಮೆ ಮಾಡುತ್ತ ನಡೆದಿದೆ.

## ಟ್ರಂಪ್ ಘೋಷಣೆಗೆ ಪ್ಯಾಲೆಸ್ಟೈನ್ ವಿರೋಧ ಏಕೆ?

- ಜೆರುಸಲೇಂಗೂ ಯೆಹೂದಿಗಳಿಗೂ ಯಾವುದೇ ಧಾರ್ಮಿಕ, ಭಾವನಾತ್ಮಕ ಸಂಬಂಧ ಇಲ್ಲ ಎಂಬುದು ಪ್ಯಾಲೆಸ್ಟೀನ್ ವಿಮೋಚನಾ ರಂಗದ (ಪಿಎಲ್‌ಒ) ನೇತೃತ್ವದ ಪ್ಯಾಲೆಸ್ಟೀನ್ ಸರ್ಕಾರದ ವಾದ. ಅಲ್ಲಿ ಇಸ್ರೇಲಿಗಳ ಮೇಲುಗೈಯನ್ನು ಅದು ವಿರೋಧಿಸುತ್ತಲೇ ಬಂದಿದೆ. ಪೂರ್ವ

ಜೆರುಸಲೇಂ ತನ್ನ ರಾಜಧಾನಿ ಎಂದು ಪಟ್ಟು ಹಿಡಿದಿದ್ದರೂ ವಾಸ್ತವವಾಗಿ ಅದು ರಮಲ್ಲಾದಿಂದ ಕಾರ್ಯ ನಿರ್ವಹಿಸುತ್ತಿದೆ.

- 'ಜೆರುಸಲೇಂನ ಆಡಳಿತಾತ್ಮಕ ಸ್ವರೂಪ ಬದಲಾಯಿಸುವುದು, ಇಸ್ರೇಲ್‌ನ ರಾಜಧಾನಿ ಎಂದು ಘೋಷಿಸುವುದು ಅಂತರರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧ; ಶಾಂತಿ ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ' ಎನ್ನುತ್ತಾರೆ ಪ್ಯಾಲೆಸ್ಟೀನ್ ಅಧ್ಯಕ್ಷ ಮಹಮ್ಮೂದ್ ಅಬ್ಬಾಸ್. ಇಸ್ರೇಲ್‌ನ ಅಸ್ತಿತ್ವವನ್ನು ಮಾನ್ಯ ಮಾಡಿರುವ ಪಿಎಲ್‌ಒ ಮತ್ತು ಕೆಲ ಅರಬ್ ದೇಶಗಳು, ಇದೇ ಕಾರಣ ಮುಂದಿಟ್ಟುಕೊಂಡು ಮಾನ್ಯತೆ ರದ್ದು ಮಾಡಲು ಹಿಂಜರಿಯುವುದಿಲ್ಲ ಎಂಬ ಬೆದರಿಕೆ ಹಾಕಿವೆ. ಹಾಗೇನಾದರೂ ಆದರೆ ಪಶ್ಚಿಮ ಏಷ್ಯಾ ಮತ್ತೆ ಅಶಾಂತಿಯ ಗೂಡಾಗುತ್ತದೆ ಎಂಬುದು ವಿಶ್ವದ ಆತಂಕ.

**ವಿಧ್ಯಾರ್ಥಿಗಳ ಯೋಚನೆಗೆ ಒಂದು ಯೋಜನೆ(GS PAPER-2)**

**What are the possible consequences of the U.S. President Donald Trump's decision to recognise Jerusalem as the capital of Israel. In your opinion, what should be India's stance on this issue?**

**(ಇಸ್ರೇಲ್ ರಾಜಧಾನಿಯಾಗಿ ಜೆರುಸಲೇಂ ಮಾನ್ಯ ಮಾಡಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ಧಾರದ ಸಂಭಾವ್ಯ ಪರಿಣಾಮಗಳು ಯಾವುವು. ಈ ವಿಷಯದ ಬಗ್ಗೆ ಭಾರತದ ನಿಲುವು ಏನಾಗಿರಬೇಕು? ನಿಮ್ಮ ಅಭಿಪ್ರಾಯ ತಿಳಿಸಿ)**

## 16. ಭಾರತ- ಕ್ಯೂಬಾ ಒಪ್ಪಂದ

**ಪ್ರಮುಖ ಸುದ್ದಿ**

- ಭಾರತ ಹಾಗೂ ಕ್ಯೂಬಾ ಎರಡು ದೇಶಗಳು ಆರೋಗ್ಯ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಒಪ್ಪಂದ ಮಾಡಿಕೊಂಡಿವೆ.ಈ ಒಪ್ಪಂದದ ಮುಖ್ಯ ಉದ್ದೇಶವೆಂದರೆ, ಸಮಗ್ರವಾದ ಅಂತರ ಸಚಿವಾಲಯ ಮತ್ತು ಅಂತರ ಸಾಂಸ್ಥಿಕ ಸಹಕಾರವನ್ನು ಆರೋಗ್ಯಕ್ಷೇತ್ರದಲ್ಲಿ ವಿನಿಮಯ ಮಾಡಿಕೊಳ್ಳುವುದು.

- ಇದು ಆರೋಗ್ಯ ಕ್ಷೇತ್ರದಲ್ಲಿ ಪರಸ್ಪರ ಜ್ಞಾನ ವಿನಿಮಯಕ್ಕೆ ಅವಕಾಶ ಮಾಡಿಕೊಡುತ್ತದೆ. ಎರಡು ದೇಶಗಳ ನಡುವೆ ಆರೋಗ್ಯ ಕ್ಷೇತ್ರದಲ್ಲಿ ಪರಸ್ಪರ ಸಹಕಾರದ ಚೌಕಟ್ಟು ರೂಪಿಸುವಲ್ಲಿ ಇದು ಮಹತ್ವದ್ದಾಗಿದೆ.

### ಪ್ರಮುಖ ಅಂಶಗಳು

- ಇದು ಔಷಧ ಕ್ಷೇತ್ರ, ವೈದ್ಯಕೀಯ ಸಾಧನಗಳು ಮತ್ತು ಮಾಹಿತಿಗಳ ವಿನಿಮಯಕ್ಕೆ ಕೂಡಾ ಅವಕಾಶ ಮಾಡಿಕೊಡುತ್ತದೆ. ಇದು ಔಷಧ ಉತ್ಪಾದನೆ ಮತ್ತು ಇತರ ಗುರುತಿಸಲ್ಪಟ್ಟ ಪ್ರದೇಶದಲ್ಲಿ ವಹಿವಾಟು ಅಭಿವೃದ್ಧಿ ಅವಕಾಶಗಳ ಉತ್ತೇಜನಕ್ಕೆ ಕೂಡಾ ಸಹಕಾರಿಯಾಗಿದೆ. ಈ ಒಪ್ಪಂದ ಜೀವರಕ್ಷಕ ಮತ್ತು ಅಗತ್ಯ ಔಷದಿಗಳ ಖರೀದಿ ಹಾಗೂ ಔಷಧ ಪೂರೈಕೆ ಮೂಲಗಳಿಗೆ ನೆರವು ನೀಡುವ ವ್ಯವಸ್ಥೆಯನ್ನು ಕೂಡಾ ಒಳಗೊಂಡಿರುತ್ತದೆ.

- ವೈದ್ಯರಿಗೆ, ಅಧಿಕಾರಿಗಳಿಗೆ, ಇತರ ಆರೋಗ್ಯ ಕಾರ್ಯಕರ್ತರಿಗೆ ಮತ್ತು ತಜ್ಞರಿಗೆ ತರಬೇತಿ ನೀಡುವುದು ಹಾಗೂ ಮಾಹಿತಿ ವಿನಿಮಯ ಮಾಡಿಕೊಳ್ಳುವುದು. ಇದು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ. ಆರೋಗ್ಯ ಸೇವೆ ಮತ್ತು ಆರೋಗ್ಯ ಕಾಳಜಿ ಸೌಲಭ್ಯವನ್ನು ಅಭಿವೃದ್ಧಿಪಡಿಸುವುದು ಇದರ ಉದ್ದೇಶ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಉತ್ಪಾದನೆಯಲ್ಲಿ ಸುರಕ್ಷತೆ, ವರ್ಗಾವಣೆ, ವಿತರಣೆ ಮತ್ತು ಆಹಾರ ವಿತರಣೆಯಲ್ಲಿ ಸುರಕ್ಷತೆಗೆ ಇದು ಒತ್ತು ನೀಡಲಿದೆ. ನೈರ್ಮಲ್ಯ ಮತ್ತು ಆಹಾರ ಸುರಕ್ಷೆ ಬಗ್ಗೆ ನಾಗರಿಕರಿಗೆ ಮಾಹಿತಿ ಮತ್ತು ಸಂವಹನವನ್ನು ಒದಗಿಸುವುದು ಹಾಗೂ ಆರೋಗ್ಯಕರ ಆಹಾರ ಸೇವನೆ ಹವ್ಯಾಸಗಳನ್ನು ಜನಸಾಮಾನ್ಯರಲ್ಲಿ ರೂಢಿಸುವುದು ಇದರ ಗುರಿಯಾಗಿದೆ.

- ಸಾಂಕ್ರಾಮಿಕವಲ್ಲದ ರೋಗಗಳ ತಡೆಗೆ ಸಹಭಾಗಿತ್ವವನ್ನು ಅಭಿವೃದ್ಧಿಪಡಿಸುವುದು ಹಾಗೂ ಪರಸ್ಪರ ಆಸಕ್ತಿಯ ವಿಷಯಗಳಲ್ಲಿ ಉಭಯ ದೇಶಗಳಿಗೆ ಲಾಭವಾಗುವಂತೆ ಕ್ರಮಗಳನ್ನು ಕೈಗೊಳ್ಳುವುದು ಇದರ ಉದ್ದೇಶ. ಹೃದ್ರೋಗ, ಕ್ಯಾನ್ಸರ್, ಮಾನಸಿಕ ಆರೋಗ್ಯ ಹಾಗೂ ಮರೆಗುಳಿತನದಂಥ ಸುಸ್ಥಿರ ಅಭಿವೃದ್ಧಿ ಗುರಿಯ ಅಂಶಗಳಿಗೆ ಒತ್ತು ನೀಡುವುದು ಸೇರಿದೆ. ಇದು

ಹವಾಮಾನ ಬದಲಾವಣೆ ಪರಿಣಾಮವು ಸಾಂಕ್ರಾಮಿಕ ಹಾಗೂ ಇತರ ಸೊಳ್ಳೆಗಳಿಂದ ಹರಡುವ ರೋಗದ ಬಗ್ಗೆ ಒತ್ತು ನೀಡುವುದು ಈ ಒಪ್ಪಂದದ ಇನ್ನೊಂದು ಪ್ರಮುಖ ಅಂಶವಾಗಿದೆ

## 17. ಜಿಸಿಸಿ ಮತ್ತು ಪರ್ಷಿಯನ್ ಗಲ್ಫ್ ಬಿಕ್ಕಟ್ಟು

### ಪ್ರಮುಖ ಸುದ್ದಿ

- ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಮತ್ತು ಸೌದಿ ಅರೇಬಿಯಾ ವಿಧ್ಯುಕ್ತವಾಗಿ ಹೊಸ ಆರ್ಥಿಕ ಹಾಗೂ ಪಾಲುದಾರಿಕೆ ಗುಂಪನ್ನು ರಚಿಸಿಕೊಂಡಿದ್ದು, ಇದಕ್ಕೆ ಜಂಟಿ ಸಹಕಾರ ಸಮಿತಿ ಎಂದು ಹೆಸರಿಸಲಾಗಿದೆ. ಇದು ಗಲ್ಫ್ ಸಹಕಾರ ಮಂಡಳಿ (ಜಿಸಿಸಿ)ಯಿಂದ ಭಿನ್ನವಾಗಿದೆ.

### ಮುಖ್ಯ ಅಂಶಗಳು

IAS/KAS
ನಮ್ಮ ಐಎಎಸ್ ಅಕಾಡೆಮಿ

- ಇದರಿಂದಾಗಿ ಇತರ ಆರು ಜಿಸಿಸಿ ಸದಸ್ಯರನ್ನು ಕಡೆಗಣಿಸಿದಂತಾಗಿದ್ದು, ಸೌದಿ ಅರೇಬಿಯಾ ನೇತೃತ್ವದ ಅರಬ್ ದೇಶಗಳು ರಾಜತಾಂತ್ರಿಕ ಸಂಘರ್ಷವನ್ನು ಕತಾರ್ನೊಂದಿಗೆ ಹೊಂದಿದ ಹಿನ್ನೆಲೆಯಲ್ಲಿ ಇದಕ್ಕೆ ವಿಶೇಷ ಮಹತ್ವವಿದೆ. ಅರ್ಧದಷ್ಟು ದೇಶಗಳು ಕತಾರ್ನನ್ನು ನಿಷೇಧಿಸಿದ್ದು, ಆ ಆದೇಶ ಭಯೋತ್ಪಾದಕ ಕೃತ್ಯಗಳಿಗೆ ಬೆಂಬಲ ನೀಡುತ್ತಿದೆ ಎಂದು ಆಪಾದಿಸಿವೆ.

- ಹೊಸ ಸಮಿತಿಯು ಮುಖ್ಯವಾಗಿ ಯುಎಇ ಮತ್ತು ಸೌದಿ ಅರೇಬಿಯಾ ನಡುವೆ ಎಲ್ಲ ಕ್ಷೇತ್ರಗಳಲ್ಲಿ ಸಹಕಾರ ಹಾಗೂ ಸಮನ್ವಯನ್ನು ಸಾಧಿಸುವ ಗುರಿ ಹೊಂದಿದೆ. ಮಿಲಿಟರಿ, ರಾಜಕೀಯ, ಆರ್ಥಿಕ, ವ್ಯಾಪಾರ ಮತ್ತು ಸಾಂಸ್ಕøತಿಕ ಕ್ಷೇತ್ರಗಳಲ್ಲಿ ಕೂಡಾ ಪರಸ್ಪರ ಸಹಕಾರ ನೀಡಲಿವೆ ಮತ್ತು ಪರಸ್ಪರ ದಏಶಗಳ ಹಿತಾಸಕ್ತಿಯನ್ನು ಕಾಯ್ದುಕೊಳ್ಳಿವೆ.

- ಇದರ ಮುಖ್ಯಸ್ಥರಾಗಿ ಅಬುದಾಬಿ ರಾಜ ಶೇಖ್ ಮೊಹ್ಮದ್ ಬಿನ್ ಝುಯೇದ್ ಅಲ್ ನಹ್ಯಾನ್ ಹಾಗೂ ಯುಎಇ ಉಪಪ್ರಧಾನಿ ಶೇಕ್ ಮಸೂರ್ ಬಿನ್ ಝುಯೇದ್ ಅಲ್ ನಹ್ಯಾನ್ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುವರು.

## ಗಲ್ಫ್ ಸಹಕಾರ ಮಂಡಳಿ ಬಗ್ಗೆ (Gulf Cooperation Council (GCC))

- ಗಲ್ಫ್ ಸಹಕಾರ ಮಂಡಳಿಯು ರಾಜಕೀಯ ಹಾಗೂ ಆರ್ಥಿಕ ಒಕ್ಕುಟವಾಗಿದ್ದು, ಅರೇಬಿಯನ್ ಭೂಭಾಗದ ಕುವೈತ್, ಒಮನ್, ಬಹರೇನ್, ಕತಾರ್, ಸೌದಿಅರೇಬಿಯಾ ಹಾಗೂ ಯುಎಇಯನ್ನು ಒಳಗೊಂಡಿದೆ.
- ಇದು ಆರ್ಥಿಕ ಭದ್ರತೆ, ಸಾಂಸ್ಕøತಿಕ ಹಾಗೂ ಸಾಮಾಜಿಕ ಸಹಕಾರಗಳನ್ನು ಆರು ದೇಶಗಳ ನಡುವೆ ಬಲಗೊಳಿಸುವ ಗುರಿ ಹೊಂದಿದೆ. ಪ್ರಾದೇಶಿಕ ವ್ಯವಹಾರಗಳ ಸಹಕಾರ ವಿಚಾರದ ಬಗ್ಗೆ ಚರ್ಚಿಸಲು ವಾರ್ಷಿಕವಾಗಿ ಶೃಂಗಸಭೆ ನಡೆಸುತ್ತವೆ.
- ಜಿಸಿಸಿ ಒಪ್ಪಂದಕ್ಕೆ 1981ರಲ್ಲಿ ಸಹಿ ಮಾಡಲಾಗಿದ್ದು, ಆಗ ಇದು ವಿಧ್ಯುಕ್ತವಾಗಿ ಚಾಲನೆ ಪಡೆದಿದೆ. ಇದರ ಕೇಂದ್ರ ಕಚೇರಿ ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನಲ್ಲಿದೆ.
- ಜಿಸಿಸಿಯ ಎಲ್ಲ ಸದಸ್ಯ ದೇಶಗಳು ರಾಜಪ್ರಭುತ್ವವನ್ನು ಹೊಂದಿದ್ದು, ಇದರಲ್ಲಿ ಕುವೈತ್, ಕತಾರ್ ಮತ್ತು ಬಹರೈನ್‌ನಲ್ಲಿ ಸಂವಿಧಾನಾತ್ಮಕ ರಾಜಪ್ರಭುತ್ವವಿದೆ. ಒಮನ್ ಮತ್ತು ಸೌದಿ ಅರೇಬಿಯಾ ಹೀಗೆ ಎರಡು ಸಂಪೂರ್ಣ ರಾಜಪ್ರಭುತ್ವ ಹೊಂದಿದ್ದರೆ, ಯುಎಪಿ ಒಕ್ಕೂಟ ರಾಜಪ್ರಭುತ್ವವನ್ನು ಹೊಂದಿದೆ. ಇದರಲ್ಲಿ ಏಳು ರಾಜ್ಯಗಳಿದ್ದು, ತನ್ನದೇ ಅಮೀರ್‌ಗಳನ್ನು ಇವು ಹೊಂದಿರುತ್ತವೆ.

## ಪ್ರಮುಖ ವಿಶ್ಲೇಷಣೆ (ಮುಖ್ಯ ಪರೀಕ್ಷೆಗಾಗಿ )

- ಕತಾರ್ ಮತ್ತು ಸೌದಿ ಅರೇಬಿಯಾ, ಬಹ್ರೇನ್ ಮತ್ತು ಯುಎಇ ನಡುವಿನ ವಿವಾದಕ್ಕೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಸಮುದಾಯದಿಂದ ಉಂಟಾದ ಕಳವಳದ ನಂತರ 38 ನೇ GCC ಶೃಂಗಸಭೆ ಈ ವಾರ ಕುವೈಟ್ ಸಿಟಿಯಲ್ಲಿ ನಡೆಯಿತು. ಸಭೆ ಆರಂಭಗೊಂಡ ಕೇವಲ ಹದಿನೈದು ನಿಮಿಷಗಳ ನಂತರ ಅದು ಹಠಾತ್ ಅಂತ್ಯಗೊಂಡಿತು.
- ಕತಾರ್ ಬಿಕ್ಕಟ್ಟಿನಲ್ಲಿ ಶೇಖ್ ಸಬಾಹ್ ಅಲ್ ಅಹ್ಮದ್ ಅಲ್-ಜಬೇರ್ ಅಲ್-ಸಬಾಹ್, ಎಮಿರ್ ಶೇಖ್ ತಮೀಮ್ ಬಿನ್ ಹಮಾದ್ ಅಲ್ ಥಾನಿ ಮತ್ತು ಎಮಿರ್ ಆಫ್ ಕುವೈತ್ ಮತ್ತು

ಅತಿಥೇಯರು ಆಗಿದ್ದಾರೆ. ಅವರು ಬಿಕ್ಕಟ್ಟು ಶಮನಕ್ಕೆ ಮಧ್ಯಸ್ಥಿಕೆ ವಹಿಸಿಕೊಂಡಿದ್ದಾರೆ. ಆದರೆ ನಿರ್ಬಂಧ ಹೇರಿರುವ ದೇಶಗಳ ಯಾವುದೇ ಪ್ರಮುಖರು ಭಾಗಿಯಾಗಿರಲಿಲ್ಲ.

- ಕುವೈಟ್ ಶೃಂಗಸಭೆಯ ಕಾರ್ಯಸೂಚಿಯನ್ನು ಬಹಿರಂಗ ಪಡಿಸಿರಲಿಲ್ಲ. ಆದರೆ ಗಲ್ಫ್ ಬಿಕ್ಕಟ್ಟನ್ನು ಅದರ ಆದ್ಯತೆಯೆಂದು ಉಲ್ಲೇಖಿಸಲಾಗಿತ್ತು . ಈ ಬೆಳವಣಿಗೆ ಜಿಸಿಸಿಯ ಸಂರಚನೆಯನ್ನೇ ಗುಮಾನಿಯಿಂದ ನೋಡುವಂತೆ ಮಾಡಿದೆ. ಯುಎಸಿಯು ತಾನು ಸೌದಿ ಅರೇಬಿಯಾದೊಂದಿಗೆ ಹೆಚ್ಚಿನ ಆರ್ಥಿಕಮ ರಾಜಕೀಯ ಮತ್ತು ಮಿಲಿಟರಿ ಒಪ್ಪಂದಗಳನ್ನು ಪ್ರತ್ಯೇಕವಾಗಿ ಮಾಡಿಕೊಳ್ಳುವುದಾಗಿ ಹೇಳಿದ್ದು ಯುಎಇ ಅಧ್ಯಕ್ಷ ಮತ್ತು ಅಬುಧಾಬಿ ಆಡಳಿತಗಾರ ಶೇಖ್ ಖಲೀಫಾ ಬಿನ್ ಜಾಯೆದ್ "ಜಂಟಿ ಸಹಕಾರ ಸಮಿತಿ"ಯನ್ನು ಅನುಮೋದಿಸಿದ್ದಾರೆ. ಯುಎಇಯ ಯುವ ರಾಜ ಹಮ್ದಾನ್ ಬಿನ್ ಅಲ್ ಮಕ್ತೂನ್ ಮತ್ತು ಸೌದಿ ಅರೇಬಿಯಾ ಮೊಹಮ್ಮದ್ ಬಿನ್ ಸಲ್ಮಾನ್ ಅವರು ಹತ್ತಿರದ ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ ಮತ್ತು ಇರಾನ್ ವಿರುದ್ಧ ಸಂಘರ್ಷದ ನಿಲುವು ತಾಳಿದ್ದಾರೆ ಎಂದು ಹೇಳಲಾಗಿದೆ.
- ಜಿಸಿಸಿ ರಚನೆಯು 'ಸವಾಲಿಗಳನ್ನು ಎದುರಿಸಲು ಉತ್ತಮ ಪ್ರಕ್ರಿಯೆಗಳನ್ನು' ಹೊಂದುವ ರೀತಿಯಲ್ಲಿ ಬದಲಾಗಬೇಕು ಮತ್ತು ಜಿಸಿಸಿ ಯೊಳಗಿನ ಆಂತರಿಕ ಬಿಕ್ಕಟ್ಟನ್ನು ನಿಭಾಯಿಸಲು ಒಂದು ಕಾರ್ಯಪಡೆ ಸ್ಥಾಪಿಸುವ ಸಾಧ್ಯತೆಯಿದೆ ಎಂದು ಶೇಖ್ ಸಬಾ ಘೋಷಿಸಿದ್ದಾರೆ. ಕುವೈಟ್ ನಲ್ಲಿ ನಡೆದ 38 ನೇ ವಾರ್ಷಿಕ ಜಿಸಿಸಿ ಶೃಂಗಸಭೆಯು ಕತಾರ್ ನ ಮೇಲೆ ನಿರ್ಬಂಧ ಹೇರಿದ ಸೌದಿ ನೇತೃತ್ವದ ಅದರ ಮಿತ್ರರಾಷ್ಟ್ರಗಳ ನಡೆ ಘಟಿಸಿದ ಆರು ತಿಂಗಳ ಬಳಿಕ ನಡೆದಿದೆ. ಅದಾಗ್ಯೂ 144 ನೇ ಜಿಸಿಸಿ ವಿದೇಶಾಂಗ ಮಂತ್ರಿಗಳ ಸಭೆ ಕುವೈತ್ ನಲ್ಲಿ ನಡೆದಾಗ ಎಲ್ಲ ಆರು ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಭಾಗವಹಿಸಿದ್ದರು.
- ಜಿಸಿಸಿ ಸಭೆಯ ಬಹಿಷ್ಕಾರವು ನಿರ್ಬಂಧ ಹೇರಿದ ಮೂರು ದೇಶಗಳು ಪ್ರಸಕ್ತ ಸ್ವರೂಪದಲ್ಲಿ ಜಿಸಿಸಿಗೆ ಯಾವುದೇ ಭವಿಷ್ಯವಿಲ್ಲ ಎಂಬುದನ್ನು ಭಾವಿಸಿರುವ ಸ್ಪಷ್ಟ ಸೂಚನೆ. ಈ ನಡೆಯು ಜಿಸಿಸಿಯ ಅಸ್ತಿತ್ವವನ್ನು ನಗಣ್ಯಗೊಳಿಸಲಿದೆ ಮತ್ತು ಮತ್ತು ಕುವೈಟ್ ನ ಮಧ್ಯಸ್ಥಿಕೆಯ ಭರವಸೆಗೆ ಕಲ್ಲು ಹಾಕಬಹುದಾಗಿದೆ.
- ಬಹಿಷ್ಕಾರದ ಆರಂಭದಲ್ಲಿ ಕತಾರ್ ಅನ್ನು ದೂಷಿಸಲಾಗುತ್ತು. ಆದರೆ ದೋಹಾವು ತನ್ನ ಆರ್ಥಿಕತೆಯಲ್ಲಿ ತಿದ್ದುಪಡಿ ಮಾಡಿತನ್ನ ಕಾರ್ಯತಂತ್ರಗಳ ಆಯ್ಕೆಗಳನ್ನು ತ್ವರಿತವಾಗಿ ಸರಿಹೊಂದಿಸಿ ತಾನು ಮಾತುಕತೆಗಳಿಗೆ ಇನ್ನೂ ಮುಕ್ತವಾಗಿದ್ದೇನೆ ಎಂಬ ಸಂದೇಶವನ್ನು ರವಾನಿಸಿತು. ಫ್ರಾನ್ಸ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ರಕ್ಷಣಾ ಒಪ್ಪಂದಗಳನ್ನು ಮಾಡಿಕೊಂಡು ಟರ್ಕಿ ಮತ್ತು ಇರಾನ್ ಜೊತೆ ಸಾರಿಗೆ ಮತ್ತು ವಾಣಿಜ್ಯ

ಒಪ್ಪಂದಕ್ಕೆ ಸಹಿ ಹಾಕಿದ ಕತಾರ್ ತನ್ನನ್ನು ಏಕಾಂಗಿಯನ್ನಾಗಿಸಿ ಕಟ್ಟಿ ಹಾಕುವ ಪ್ರಯತ್ನ ಪರಿಣಾಮ ಬೀರದು. ಬದಲಾಗಿ ತಾನು ಇರಾನ್ ಜೊತೆ ಇನ್ನಷ್ಟು ಆತ್ಮೀಯಗೊಂಡು ಸೌದಿ ನೇತೃತ್ವದ ದೇಶಗಳ ಬಹಿಷ್ಕಾರ ಅವುಗಳಿಗೇ ತಿರುಗುಬಾಣವಾಗುವ ನಡೆಯನ್ನು ಪ್ರದರ್ಶಿಸಿದೆ. ಕತಾರ್ ನಲ್ಲಿ ಯುಎಸ್ ಮತ್ತು ಟರ್ಕಿಯ ಮಿಲಿಟರಿ ನೆಲೆಗಳಿರುವ ಕಾರಣದಿಂದ ಮಿಲಿಟರಿ ಹಸ್ತಕ್ಷೇಪ ನಡೆಸುವುದು ಸೌದಿ ಮತ್ತದರ ಮಿತ್ರರಾಷ್ಟ್ರಗಳಿಗೆ ಅಸಾಧ್ಯ

- ಹೆಚ್ಚುವರಿಯಾಗಿ, ಮತ್ತೊಂದು ವಿವಾದದ ವಿಷಯವೆಂದರೆ ಯೆಮೆನ್ ನಲ್ಲಿ, 2015 ರಿಂದ ಸೌದಿ ನೇತೃತ್ವದ ಹಸ್ತಕ್ಷೇಪವು ಅಲ್ಲಿ ಮಾನವೀಯ ಬಿಕ್ಕಟ್ಟನ್ನು ಸೃಷ್ಟಿಸಿದೆ. ಈ ವಾರ ಹೌತಿ ಬಂಡುಕೋರರಿಂದ ಮಾಜಿ ಯೆಮೆನಿ ಅಧ್ಯಕ್ಷ ಅಲಿ ಅಬ್ದುಲ್ಲಾ ಸಲೇಹ್ರ ಹತ್ಯೆ ನಡೆಯುವುದರೊಂದಿಗೆ ಸೌದಿಗಳು ತಮ್ಮ ಅತಿದೊಡ್ಡ ಹಿನ್ನಡೆ ಪಡೆದರು. ಇರಾನ್ ಬೆಂಬಲದೊಂದಿಗೆ ಹೂತೈಸ್ ಗೆ ಕತಾರ್ ನೆರವು ನೀಡುತ್ತಿದೆ ಎಂಬ ಟೀಕೆಗಳು ವ್ಯಕ್ತವಾದವು.
- ಈ ಪ್ರದೇಶದಲ್ಲಿ ರಾಜತಾಂತ್ರಿಕ ಬಿಕ್ಕಟ್ಟನ್ನು ಬಗೆಹರಿಸಲು ಪಾಶ್ಚಾತ್ಯ ಶಕ್ತಿಗಳ ಅಸಮರ್ಥತೆ ಮತ್ತು ಕತಾರ್ ಮತ್ತು ಲೆಬನಾನ್ ನಂತಹ ಸಣ್ಣ ರಾಷ್ಟ್ರಗಳ ಹೆಚ್ಚುತ್ತಿರುವ ಪ್ರತಿರೋಧ ಪ್ರಾದೇಶಿಕ ರಾಷ್ಟ್ರಗಳ ಪೈಪೋಟಿಗೆ ಕಾರಣವಾಗಿದೆ. ಸೌದಿ ಕ್ರೌನ್ ಪ್ರಿನ್ಸ್ ಮೊಹಮ್ಮದ್ ಅವರು ಕತಾರ್ ಬಿಕ್ಕಟ್ಟನ್ನು "ಒಂದು ಸಣ್ಣ ಸಮಸ್ಯೆ" ಎಂದು ಕರೆದಿದ್ದು ಕತಾರ್ ನತ್ತ ಆ ಮೂಲಕ ಇರಾನ್ ವಿರುದ್ಧದ ಕಠಿಣ ಕ್ರಮಗಳು ಮುಂದುವರಿಯಲಿದೆ ಎಂಬ ಸಂದೇಶ ನೀಡಿದ್ದಾರೆ. ವಮುಂದುವರಿಯುತ್ತದೆ ಎಂದು ತೋರುತ್ತದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಪರ್ಷಿಯನ್ ಕೊಲ್ಲಿಯ ಪರಿಸ್ಥಿತಿಯು ಹೆಚ್ಚು ಉದ್ವಿಗ್ನತೆಯನ್ನು ತೋರುತ್ತಿರುವಾಗ, ಪ್ರದೇಶದ ಎಲ್ಲ ದೇಶಗಳೊಂದಿಗೆ ಬಲವಾದ ಆರ್ಥಿಕ ಮತ್ತು ರಾಜಕೀಯ ಸಂಬಂಧಗಳನ್ನು ಹೊಂದಿರುವ ಭಾರತವು ಪ್ರಾದೇಶಿಕ ಶಕ್ತಿಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಬೇಕು ಎಂದು ಭಾರತ ಕಾಲಕಾಲಕ್ಕೆ ಕರೆ ನೀಡಿದೆ. ಹೊಸ ದೆಹಲಿಯ ಬಗ್ಗೆ ಜಿ.ಸಿ.ಸಿ ನಾಯಕತ್ವಕ್ಕೆ ಭಾರಿ ಗೌರವವಿದೆ. ಭಾರತ ತೈಲ ಮತ್ತು ಅನಿಲ ಆಮದುಗಳಿಗಾಗಿ ಈ ಪ್ರದೇಶವನ್ನು ಅವಲಂಬಿಸಿದೆ ಮತ್ತು ಭಾರತದ ದೊಡ್ಡ ವಲಸಿಗ ಜನಸಂಖ್ಯೆಯು $ 50 ಶತಕೋಟಿ ಮೌಲ್ಯದ ಹಣವನ್ನು ಭಾರತಕ್ಕೆ ರವಾನೆ ಮಾಡುತ್ತಿದೆ.

- ಸಮತೋಲನವನ್ನು ಹಾಳುನ ಮಾಡುವ ಬೆಳವಣಿಗೆಗಳು ತೈಲ ಮತ್ತು ಅನಿಲ ಸರಬರಾಜಿಗೆ ತೊಂದರೆ ಮಾಡಿದರೆ, ಭಾರತದ ನಾಗರಿಕರಿಗೆ ಹಾನಿಯಾದರೆ ಗಲ್ಫ್ ಯುದ್ಧದ ಸಂದರ್ಭದಲ್ಲಿ ಆದಂತೆ ಭಾರತೀಯರಿಗೆ ಕಷ್ಟವಾಗಬಹುದು.

- ಪರ್ಷಿಯಾದ ಕೊಲ್ಲಿಯು ಮಧ್ಯಪ್ರಾಚ್ಯದಲ್ಲಿ ಭಾರತದ ಅತಿ ದೊಡ್ಡ ವ್ಯಾಪಾರಿ ಪಾಲುದಾರನಾಗಿ ಉಳಿದಿದೆ. ಗಲ್ಫ್ ರಾಷ್ಟ್ರಗಳ ಆಂತರಿಕ ವ್ಯವಹಾರಗಳಲ್ಲಿ ಹೊರಗಿನ ಆಟಗಾರರ ಹಸ್ತಕ್ಷೇಪವಿಲ್ಲದೆಯೇ ಪ್ರಾದೇಶಿಕ ಸ್ಥಿರತೆಗಾಗಿ ಕರೆದೊಯ್ಯುವ ಮೂಲಕ ಭಾರತವನ್ನು ಪ್ರಬುದ್ಧತೆಗೆ ಒಳಪಡಿಸುವುದಕ್ಕಾಗಿ ಭಾರತವು ಮುಕ್ತಾಯವನ್ನು ಪ್ರದರ್ಶಿಸಿದೆ. ಅಂತಹ ಒಂದು ಕಾರ್ಯತಂತ್ರದ ನಿರಂತರತೆ ಈ ಸಮಯದಲ್ಲಿ ಪ್ರಮುಖ ಮತ್ತು ಅನಿವಾರ್ಯವಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 18. ಸೂಪರ್‌ಸಾನಿಕ್ ಆಕಾಶ್ ಕ್ಷಿಪಣಿ ಪರೀಕ್ಷೆ ಯಶಸ್ವಿ

### ಪ್ರಮುಖ ಸುದ್ದಿ

- ದೇಶೀಯವಾಗಿ ನಿರ್ಮಿಸಲಾಗಿರುವ ಭೂ ಮೇಲ್ಮೈನಿಂದ ಆಕಾಶಕ್ಕೆ ಚಿಮ್ಮುವ ಸೂಪರ್ ಸಾನಿಕ್ ಆಕಾಶ್ ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ.

- ಒಡಿಶಾದ ಚಾಂದಿಪುರ್‌ನಲ್ಲಿರುವ ಪರೀಕ್ಷಾ ವಲಯದಿಂದ ಯಶಸ್ವಿಯಾಗಿ ಕ್ಷಿಪಣಿಯ ಪರೀಕ್ಷೆ ನಡೆಸಲಾಯಿತು. ಆಕಾಶ್ ಕ್ಷಿಪಣಿಯಲ್ಲಿ ತರಂಗಾಂತರಗಳನ್ನು ಸ್ವೀಕರಿಸುವ ತಂತ್ರಜ್ಞಾನವನ್ನು ದೇಶೀಯವಾಗಿ ಅಭಿವೃದ್ಧಿ ಪಡಿಸಲಾಗಿದೆ.

- ಇದು ಭೂಮಿಯ ಮೇಲ್ಮೈನಿಂದ ಗಾಳಿಗೆ ಚಿಮ್ಮುವ ಮೊಟ್ಟಮೊದಲ ಸೂಪರ್‌ಸಾನಿಕ್ ಕ್ಷಿಪಣಿಯಾಗಿದ್ದು, ದೇಶೀಯವಾಗಿ ಅಭಿವೃದ್ಧಿಪಡಿಸಿದ ಸೀಕರ್‌ನಿಂದ ಪರೀಕ್ಷಾರ್ಥ ಪ್ರಯೋಗ ನಡೆಸಲಾಯಿತು. ಇದರಿಂದಾಗಿ ಭಾರತ ಯಾವುದೇ ಬಗೆಯ ಮೇಲ್ಮೈ ಕ್ಷಿಪಣಿಯನ್ನು ತಡೆಯುವ ಸಾಮರ್ಥ್ಯವನ್ನೂ ಹೊಂದಲಿದೆ.

ಆಕಾಶ್ ಕ್ಷಿಪಣಿ ಬಗ್ಗೆ

- ಆಕಾಶ್ ಕ್ಷಿಪಣಿ 55 ಕೆ.ಜಿ. ಸಿಡಿತಲೆ ಹೊತ್ತು 25 ಕಿ.ಮೀ. ದೂರದ ಗುರಿಯನ್ನು ನಿಖರವಾಗಿ ತಲುಪುವ ಸಾಮರ್ಥ್ಯ ಹೊಂದಿದೆ. ಎಲ್ಲಾ ವಿಧದ ಹವಾಗುಣದಲ್ಲಿ ಈ ಕ್ಷಿಪಣಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತದೆ. ಈ ಕ್ಷಿಪಣಿ ವ್ಯವಸ್ಥೆ ಸಂಪೂರ್ಣವಾಗಿ ಸ್ವಯಂ ಚಾಲಿತವಾಗಿದ್ದು, ಆಕಾಶದ ಯಾವುದೇ ದಿಕ್ಕಿನಿಂದ ದಾಳಿ ನಡೆದರೂ ಸಹ ಅದನ್ನು ತಡೆಯುತ್ತದೆ. ಜತೆಗೆ ಈ ಕ್ಷಿಪಣಿ ವ್ಯವಸ್ಥೆ ವಿಮಾನ, ಎಲ್ಲಾ ವಿಧದ ಕ್ಷಿಪಣಿಗಳನ್ನು ಹೊಡೆದುರುಳಿಸುವ ಸಾಮರ್ಥ್ಯ ಹೊಂದಿದೆ.

- ಆಕಾಶ್ ಕ್ಷಿಪಣಿಯನ್ನು ಶೀಘ್ರದಲ್ಲೇ ಸೇನೆಗೆ ಸೇರ್ಪಡೆ ಮಾಡಲಾಗುವುದು. ಈ ಕ್ಷಿಪಣಿಯ ಯಶಸ್ವಿ ಪರೀಕ್ಷೆಯಿಂದ ಭಾರತ ಯಾವುದೇ ವಿಧದ ಭೂ ಮೇಲ್ಮೈನಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿಯನ್ನು ನಿರ್ಮಿಸಲು ಸಮರ್ಥವಾಗಿದೆ ಎಂಬುದು ಸಾಬೀತಾಗಿದೆ ಎಂದು ರಕ್ಷಣಾ ಇಲಾಖೆಯ ಮೂಲಗಳು ತಿಳಿಸಿವೆ.

## 19. ಅಂತರರಾಷ್ಟ್ರೀಯ ಹವಾಮಾನ ಬದಲಾವಣೆ ಸಮ್ಮೇಳನ (International Climate Change Conference)

ಪ್ರಮುಖ ಸುದ್ದಿ

- ಇತ್ತೀಚೆಗೆ ನೇಪಾಳದಲ್ಲಿ ಅಂತರರಾಷ್ಟ್ರೀಯ ಹವಾಮಾನ ಬದಲಾವಣೆ ಕುರಿತ ಸಮ್ಮೇಳನ ನಡೆಯಿತು. ರಿಸಿಲಿಯೆಂಟ್ ಹಿಂದು ಖುಷ್ ಹಿಮಾಲಯ: ಡೆವಲಪಿಂಗ್ ಸೊಲ್ಯೂಶನ್ಸ್ ಟವರ್ಡ್ಸ್ ಎ ಸಸ್ಟೈನೇಬಲ್ ಫ್ಯೂಚರ್ ಆಫ್ ಏಷ್ಯಾ" ಎಂಬ ಶೀರ್ಷಿಕೆಯಡಿ ಇದನ್ನು ಆಯೋಜಿಸಲಾಗಿದೆ.
- ಇದನ್ನು ನೇಪಾಳದ ಪರಿಸರ ಸಚಿವಾಲಯವು ಅಂತರರಾಷ್ಟ್ರೀಯ ಸಮಗ್ರ ಪರ್ವತ ಅಭಿವೃದ್ಧಿ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿತ್ತು.

### ಪ್ರಮುಖ ಸಂಗತಿಗಳು

- ಈ ಸಮ್ಮೇಳನದ ಮುಖ್ಯ ಉದ್ದೇಶವೆಂದರೆ, ಏಷ್ಯಾಖಂಡದ ಸುಸ್ಥಿರ ಅಭಿವೃದ್ಧಿ ಭವಿಷ್ಯಕ್ಕಾಗಿ ವಾತಾವರಣವನ್ನು ಸಜ್ಜುಗೊಳಿಸುವುದು ಹಾಗು ಹವಾಮಾನ ಬದಲಾವಣೆಯ ಪರಿಣಾಮವನ್ನು ಕನಿಷ್ಠಗೊಳಿಸುವುದು.
- ಇದಕ್ಕೆ ಪೂರಕವಾದ ಕಟ್ಟಡಗಳನ್ನು ನಿರ್ಮಿಸುವುದು, ಪ್ರಾದೇಶಿಕ ಸಹಕಾರವನ್ನು ಹೆಚ್ಚಿಸುವುದು ಹಾಗೂ ಮಾಹಿತಿಗಳ ಅಂತರವನ್ನು ಕಡಿಮೆ ಮಾಡುವುದು ಇದರ ಮುಖ್ಯವಾದ ಉದ್ದೇಸವಾಗಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮಿಂದ..... ಮಸೂರಿಗೆ/ಮೈಸೂರಿಗೆ

- ಈ ಸಮ್ಮೇಳನದಲ್ಲಿ 300ಕ್ಕೂ ಅಧಿಕ ತಜ್ಞರು ಏಷ್ಯಾದ ವಿವಿಧ ದೇಶಗಳಿಂದ ಆಗಮಿಸಿದ್ದರು. ಭಾರತ, ಬಾಂಗ್ಲಾದೇಶ, ನೇಪಾಳ, ಪಾಕಿಸ್ತಾನ ಮತ್ತು ಮ್ಯಾನ್ಮಾರ್ ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

### ಹಿಂದು ಖುಷ್ ಹಿಮಾಲಯದ ಬಗ್ಗೆ

- ಹಿಂದು ಖುಷ್ ಹಿಮಾಲಯ ಎನ್ನುವುದು ಒಂದು ಪರ್ವತ ಶ್ರೇಣಿಯಾಗಿದ್ದು, ಇದು ಅಫ್ಘಾನಿಸ್ತಾನದಿಂದ ಮ್ಯಾನ್ಮಾರ್ವರೆಗೆ ಹಬ್ಬಿದೆ. ಇದು ಪ್ರಮುಖ 10 ನದಿಗಳ ವ್ಯವಸ್ಥೆಗೆ ಮೂಲವಾಗಿದ್ದು, ಪರಿಸರ ಸೇವೆಗಳು ಹಾಗೂ ಜೀವನಾಧಾರಕ್ಕಾಗಿ 210 ದಶಲಕ್ಷ ಮಂದಿಗೆ ಅವಕಾಶವನ್ನು ಮತ್ತು ನೀರನ್ನು ಒದಗಿಸುತ್ತವೆ.
- ಈ ಭಾಗವು ಕೆಳಭಾಗದ ಜನರಿಗಾಗಿ ಸುಮಾರು 130 ಶತಕೋಟಿ ಮಂದಿಯ ನೀರಿನ ಅಗತ್ಯತೆಗಳನ್ನು ಪೂರೈಸಲು ಶಕ್ತವಾಗಲಿದೆ.

## 20. ಭಾರತವು ಟ್ರಕೋಮಾ ಸೋಂಕು ಮುಕ್ತ ರಾಷ್ಟ್ರ: ಕೇಂದ್ರ

### ಪ್ರಮುಖ ಸುದ್ದಿ

- ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ. ನಾಡ್ಡಾ ಅವರು ಮಕ್ಕಳಲ್ಲಿ ಸಾಂಕ್ರಾಮಿಕ ಕುರುಡುತನಕ್ಕೆ ಪ್ರಮುಖ ಕಾರಣವಾಗುವ ಸೋಂಕು ಟ್ರಕೋಮಾ ದಿಂದ ಭಾರತ ಮುಕ್ತವಾಗಿದೆ ಎಂದು ಘೋಷಿಸಿದ್ದಾರೆ.
- ಆಲ್ ಇಂಡಿಯಾ ಇನ್ ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ಎಐಐಎಂಎಸ್) ನ ನೇತ್ರವಿಜ್ಞಾನ ವಿಭಾಗದಲ್ಲಿ ನೆರೆದಿದ್ದ ಹಿರಿಯ ಆರೋಗ್ಯ ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಮ್ಮುಖದಲ್ಲಿ ಸಚಿವರು ಈ ಘೋಷಣೆ ಮಾಡಿದ್ದಾರೆ.

### ಪ್ರಮುಖ ಸಂಗತಿಗಳು

- "ಸಮೀಕ್ಷೆ ನಡೆಸಿದ್ದ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟಾರೆ ಕೇವಲ ಶೇ. 0.7ರಷ್ಟು ಮಕ್ಕಳಲ್ಲಿ ಮಾತ್ರವೇ ಈ ಟ್ರಕೋಮಾ ಸೋಂಕು ಕಂಡು ಬಂದಿದೆ. ಇದು ಡಬ್ಲ್ಯೂ ಎಚ್ ಓ ನಿಂದ ವ್ಯಾಖ್ಯಾನಿಸಲ್ಪಟ್ಟಿರುವ ಟ್ರಾಕೊಮಾದ ಸೋಂಕಿನ ಮಾನದಂಡಕ್ಕಿಂತ ಕಡಿಮೆಯಾಗಿದೆ.
- ಸಮೀಕ್ಷೆಯ ಪ್ರಕಾರ, ಮಕ್ಕಳಲ್ಲಿ ಸಕ್ರಿಯ ಟ್ರಾಕೊಮಾ ಸೋಂಕು ಕಾಣಿಸಿಕೊಂಡಿಲ್ಲ." ಎಂದು ಸಚಿವ ನಾಡ್ಡಾ ಹೇಳಿದ್ದಾರೆ. 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಸಕ್ರಿಯ ಸೋಂಕಿನ ಪ್ರಮಾಣವು ಶೇಕಡಾ 5 ಕ್ಕಿಂತ ಕಡಿಮೆಯಿದ್ದರೆ ಅಂತಹಾ ದೇಶವನ್ನು ಟ್ರಕೋಮಾ ಸೋಂಕು ಮುಕ್ತ ಪ್ರದೇಶವೆಂದು ಘೊಷಿಸಲಾಗುತ್ತದೆ.
- ವೈದ್ಯಕೀಯ ವಿಜ್ಞಾನಗಳ ಪ್ರಕಾರ, ಟ್ರಕೋಮಾ ಕಣ್ಣಿನ ದೀರ್ಘಕಾಲದ ಸೋಂಕಿನ ಕಾಯಿಲೆಯಾಗಿದ್ದು, ಮಕ್ಕಳಲ್ಲಿ ಕುರುಡುತನ ಕಾಣಿಸಿಕೊಳ್ಳುವ ಪ್ರಮುಖ ಕಾರಣವಾಗಿದೆ. ಕಲುಷಿತ ಪರಿಸರ ಮತ್ತು ನೈರ್ಮಲ್ಯ ಕೊರತೆ ಯಿಂದಾಗಿ ಈ ಸೋಂಕು ಕಾಣಿಸಿಕೊಳ್ಳುತ್ತದೆ.

### ಪ್ರಮುಖ ಸುದ್ದಿ

- ವಿಶ್ವ ಸಾಂಸ್ಕೃತಿಕ ಉತ್ಸವ ಆಯೋಜಿಸಿ ಯಮುನಾ ನದಿ ದಂಡೆಯ ಪರಿಸರಕ್ಕೆ ಹಾನಿಯಾಗಿರುವುದಕ್ಕೆ ಶ್ರೀಶ್ರೀ ರವಿಶಂಕರ್ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ಹೊಣೆ ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ(ಎನ್‌ಜಿಟಿ) ಹೇಳಿದೆ.

### ಪ್ರಮುಖ ಸಂಗತಿಗಳು

- ದೆಹಲಿಯ ಹೊರವಲಯದಲ್ಲಿರುವ ಯಮುನಾ ನದಿ ದಂಡೆಯ ಮೇಲೆ ಆರ್ಟ್ ಆಫ್ ಲಿವಿಂಗ್ 2016ರ ಮಾರ್ಚ್‌ನಲ್ಲಿ ಸಾಂಸ್ಕೃತಿಕ ಉತ್ಸವ ಆಯೋಜಿಸಿತ್ತು.

- ಎನ್‌ಜಿಟಿಯ ಅಧ್ಯಕ್ಷ ಸ್ವತಂತ್ರ ಕುಮಾರ್ ಅವರ ನೇತೃತ್ವದ ಪೀಠ, ಯಮುನಾ ತೀರದಲ್ಲಿ ವಿಶ್ವ ಸಂಸ್ಕೃತಿ ಉತ್ಸವ ಆಯೋಜನೆಯಿಂದ ಅಲ್ಲಿನ ಪರಿಸರಕ್ಕೆ ಹೆಚ್ಚಿನ ಹಾನಿಯಾಗಿದೆ. ಆರ್ಟ್ ಆಫ್ ಲಿವಿಂಗ್ ಸಂಸ್ಥೆ ದಂಡ ಪಾವತಿ ಮಾಡಿದ ಬಳಿಕ, ಆ ಹಣವನ್ನು ನದಿ ತಿರದ ಪರಿಸರ ಪುನರುಜ್ಜೀವನ ಯೋಜನೆಗಳಿಗೆ ಬಳಸುವಂತೆ ದೆಹಲಿ ಅಭಿವೃದ್ಧಿ ಪ್ರಾಧಿಕಾರಕ್ಕೆ(ಡಿಡಿಎ) ಸೂಚಿಸಿದೆ.

- ಪರಿಸರ ಹಾನಿ ಮಧ್ಯಂತರ ಪರಿಹಾರವಾಗಿ ಆರ್ಟ್ ಆಫ್ ಲಿವಿಂಗ್‌ಗೆ ಈಗ ಯಾವುದೆ ಹೆಚ್ಚುವರಿ ದಂಡ ವಿಧಿಸುವುದಿಲ್ಲ. ಎನ್‌ಜಿಟಿ ಈ ಹಿಂದೆ ವಿಧಿಸಿದ್ದ  5 ಕೋಟಿ ಪರಿಸರ ಹಾನಿ ಪರಿಹಾರವನ್ನು ನದಿ ತೀರದ ಪರಿಸರ ಪುನರುಜ್ಜೀವನಗೊಳಿಸಲು ಬಳಸಿ ಎಂದು ಪೀಠ ಹೇಳಿದೆ.

- 'ತಜ್ಞ ಸಮಿತಿಯಿಂದ ಸಲ್ಲಿಸಿದ ವರದಿಯ ಪ್ರಕಾರ, ಯಮುನಾ ತೀರಕ್ಕೆ ಹಾನಿಯಾಗುವ ಕುರಿತು ನಾವು ಆರ್ಟ್ ಆಫ್ ಲಿವಿಂಗ್ ಸಂಸ್ಥೆಯನ್ನು ಜವಾಬ್ದಾರರನ್ನಾಸುತ್ತೇವೆ' ಎಂದು ಪೀಠ ಹೇಳಿದೆ.

- ನ್ಯಾಯಮೂರ್ತಿ ಜಾವದ್ ರಹೀಮ್ ಮತ್ತು ತಜ್ಞ ಸದಸ್ಯರಾದ ಬಿ.ಎಸ್. ಸಜ್ವಾನ್ ಅವರನ್ನೊಳಗೊಂಡ ಪೀಠ, ನದಿ ತೀರದಲ್ಲಿ ಉಂಟಾದ ಹಾನಿಯನ್ನು ನಿರ್ಣಯಿಸಲು ಮತ್ತು ತಜ್ಞರ ಸಮಿತಿಯ ಶಿಫಾರಸಿನ ಅನುಸಾರವಾಗಿ ಪುನಃ ವೆಚ್ಚವನ್ನು ಲೆಕ್ಕಹಾಕಲು ಡಿಡಿಎಗೆ ನಿರ್ದೇಶನ ನೀಡಿದೆ.

- ವಿಶ್ವ ಸಾಂಸ್ಕೃತಿಕ ಉತ್ಸವದಿಂದಾಗಿ ಯಮುನಾ ನದಿ ತೀರ ಹಾನಿಗೊಳಗಾಗಿದೆ ಎಂದು ಎನ್‌ಜಿಟಿ ರಚಿಸಿದ್ದ ತಜ್ಞರ ಸಮಿತಿ ವರದಿ ಸಲ್ಲಿಸಿದ್ದರಿಂದ ನದಿ ತೀರದ ಪುನರುಜ್ಜೀವನಕ್ಕಾಗಿ ಪರಿಸರ ಪರಿಹಾರದ ರೂಪದಲ್ಲಿ 42 ಕೋಟಿ ದಂಡ ಪಾವತಿಸಬೇಕು ಎಂದು ಎನ್‌ಜಿಟಿ ಈ ಹಿಂದೆ ಆದೇಶಿಸಿತ್ತು.

### ಯಮುನಾ ನದಿ ಬಗ್ಗೆ

- ಯಮುನಾ ನದಿಯು ಗಂಗಾ ನದಿಯ ಒಂದು ಪ್ರಮುಖ ಉಪನದಿ. ಯಮುನೆಯ ಉಗಮಸ್ಥಾನ ಉತ್ತರಾಖಂಡ ರಾಜ್ಯದ ಉತ್ತರಕಾಶಿ ಜಿಲ್ಲೆಯ ಯಮುನೋತ್ರಿ. ಯಮುನೋತ್ರಿಯಿಂದ ಸುಮಾರು ೧೩೭೦ ಕಿ.ಮೀ. ಪ್ರವಹಿಸಿದ ನಂತರ ಉತ್ತರಪ್ರದೇಶದ ಅಲಹಾಬಾದ್ (ಪ್ರಯಾಗ)ದಲ್ಲಿ ಯಮುನಾ ನದಿಯು ಗಂಗಾ ನದಿಯನ್ನು ಕೂಡಿಕೊಳ್ಳುತ್ತದೆ.
- ತನ್ನ ಹಾದಿಯಲ್ಲಿ ಯಮುನೆಯು ಉತ್ತರಾಖಂಡ, ಹರ್ಯಾಣ, ದೆಹಲಿ ಹಾಗೂ ಉತ್ತರಪ್ರದೇಶ ರಾಜ್ಯಗಳಲ್ಲಿ ಹರಿಯುವಳು. ದೆಹಲಿ, ಮಥುರಾ ಮತ್ತು ಆಗ್ರಾ ಯಮುನಾ ನದಿಯ ತೀರದ ಪ್ರಮುಖ ಪಟ್ಟಣಗಳು.
- ಗಂಗಾ ನದಿಯ ಅತ್ಯಂತ ದೊಡ್ಡ ಉಪನದಿಯಾದ ಯಮುನಾ ನದಿಗೆ ಉಪನದಿಗಳು ಹಲವು. ಇವುಗಳಲ್ಲಿ ಮುಖ್ಯವಾದುವೆಂದರೆ- ಚಂಬಲ್ , ಬೇತ್ವಾ , ತೋನ್ಸ್ ಮತ್ತು ಕೇನ್. ಇವುಗಳಲ್ಲಿ ತೋನ್ಸ್ ಎಲ್ಲಕ್ಕಿಂತ ಉದ್ದವಾದುದು.

## 21. ಸಾಂಸ್ಕೃತಿಕ ಪರಂಪರೆ ಪಟ್ಟಿಗೆ ಕುಂಭಮೇಳ

### ಪ್ರಮುಖ ಸುದ್ದಿ

- ಭಾರತದಲ್ಲಿ ಪ್ರತಿವರ್ಷ ನಡೆಯುವ ಕುಂಭಮೇಳವನ್ನು 'ಮನುಕುಲದ ಅತ್ಯಂತ ವಿಶಿಷ್ಟ ಸಾಂಸ್ಕೃತಿಕ ಪರಂಪರೆ' ಎಂದು ಯುನೆಸ್ಕೊ ಗೌರವಿಸಿದೆ. ಈ ಕುರಿತು ಯುನೆಸ್ಕೊ ಟ್ವೀಟ್ ಮಾಡಿದೆ.

### ಪ್ರಮುಖ ಅಂಶಗಳು

- ದಕ್ಷಿಣ ಆಫ್ರಿಕಾದ ಜೆಜುವಿನಲ್ಲಿ ಸಭೆ ಸೇರಿದ, ವಿಶಿಷ್ಟ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗಾಗಿ ರಚಿಸಲಾದ ವಿಶ್ವಸಂಸ್ಥೆಯ ಅಂತರಸರ್ಕಾರೀಯ ಸಮಿತಿಯು ಕುಂಭಮೇಳವನ್ನು 'ಮನುಕುಲದ ಅತ್ಯಂತ ವಿಶಿಷ್ಟ ಸಾಂಸ್ಕೃತಿಕ ಪರಂಪರೆ ಪ್ರತಿನಿಧಿ ಪಟ್ಟಿ'ಯಲ್ಲಿ ಗುರುತಿಸಿದೆ.
- ಧಾರ್ಮಿಕ ಪ್ರವಾಸಿಗರು ಪಾಲ್ಗೊಳ್ಳುವ ವಿಶ್ವದ ಬೃಹತ್ ಆಚರಣೆ ಎಂದು ಕುಂಭಮೇಳವನ್ನು ಪರಿಗಣಿಸಲಾಗಿದೆಧಾರ್ಮಿಕ ಪ್ರವಾಸಿಗರು ಪಾಲ್ಗೊಳ್ಳುವ ವಿಶ್ವದ ಬೃಹತ್ ಆಚರಣೆ ಎಂದು ಕುಂಭಮೇಳವನ್ನು ಪರಿಗಣಿಸಲಾಗಿದೆ .
- ವಿಶ್ವದ ಅತ್ಯಂತ ದೊಡ್ಡ ಉತ್ಸವವಾದ ಕುಂಭಮೇಳ ಭಾರತದ ನಾಲ್ಕು ಕಡೆಗಳಲ್ಲಿ ನಡೆಯುತ್ತದೆ. ಹರಿದ್ವಾರ ಹಾಗೂ ಅಲಹಾಬಾದ್ ನ ಗಂಗಾ ತೀರದಲ್ಲಿ ಹಾಗೂ ಉಜ್ಜಯನಿಯ ಕ್ಷಿಪ್ರ ನದಿ ಹಾಗೂ ನಾಸಿಕದ ಗೋದಾವರಿ ನದಿಯ ತೀರದಲ್ಲಿ ನಡೆಯುತ್ತದೆ
- . ಅಲಹಾಬಾದ್, ಹರಿದ್ವಾರ, ಉಜ್ಜಯಿನಿ ಹಾಗೂ ನಾಸಿಕ್‌ಗಳಲ್ಲಿ ಭಕ್ತರು ಪವಿತ್ರ ನದಿಗಳಲ್ಲಿ ಕುಂಭಮೇಳ ಸ್ನಾನ ಮಾಡುತ್ತಾರೆ.

- 'ಸಂತರು, ಸಾಧುಗಳು ತಮ್ಮ ಶಿಷ್ಯರಿಗೆ ಪಾರಂಪರಿಕ ಆಚರಣೆ ಮತ್ತು ಪಠಣಗಳ ಬಗ್ಗೆ ತಿಳಿಸುತ್ತಿದ್ದರು. ಈ ಗುರು–ಶಿಷ್ಯ ಪರಂಪರೆಯ ಮೂಲಕವೇ ಕುಂಭಮೇಳಕ್ಕೆ ಸಂಬಂಧಿಸಿದ ಜ್ಞಾನ ಮತ್ತು ಕೌಶಲವು ಪ್ರವಹಿಸುತ್ತಾ ಬಂದಿದೆ' ಎಂದು ಸಮಿತಿಯು ಹೇಳಿದೆ.

- ಈ ಪಟ್ಟಿಗೆ ಸೇರುವುದರಿಂದ, ಸಾಂಸ್ಕೃತಿಕ ಪರಂಪರೆ ಆಚರಣೆಯಲ್ಲಿ ಭಾಗವಹಿಸಲು ಮತ್ತು ಅವುಗಳನ್ನು ಪ್ರಚುರಪಡಿಸಲು ಅಂತರರಾಷ್ಟ್ರೀಯ ಸಹಕಾರ ಸಿಗುತ್ತದೆ.

### ಕುಂಭಮೇಳದ ಬಗ್ಗೆ

- ಹಿಂದೂ ಧಾರ್ಮಿಕ ಸಂಪ್ರದಾಯಕ್ಕೆ ಸೇರಿದ ಅತಿ ದೊಡ್ಡ ಮೇಳ. ಉತ್ತರ ಭಾರತದ ಪ್ರಯಾಗ ಮತ್ತು ಹರಿದ್ವಾರಗಳಲ್ಲಿ ನಡೆಯುವ ಈ ಮೇಳದಲ್ಲಿ ಹೆಚ್ಚಾಗಿ ಸಂನ್ಯಾಸಿಗಳು ಭಾಗವಹಿಸುವರು. ಭಾರತದ ಎಲ್ಲ ಕಡೆಗಳಿಂದಲೂ ಲಕ್ಷಾಂತರ ಯಾತ್ರಿಕರು ಇಲ್ಲಿಗೆ ಬರುತ್ತಾರೆ. ಗಂಗಾ, ಯಮುನಾ ಮತ್ತು ಸರಸ್ವತೀ ನದಿಗಳು ಸೇರುವ ತ್ರಿವೇಣಿ ಸಂಗಮವಾದ ಪ್ರಯಾಗವೇ ಕುಂಭಮೇಳದ ಕೇಂದ್ರ.

- ಇಲ್ಲಿ ಎರಡು ಬಗೆಯ ಮೇಳಗಳು ನಡೆಯುತ್ತವೆ. ವರ್ಷಂಪ್ರತಿ ನಡೆಯುವ ಮೇಳಕ್ಕೆ ಮಾಘ್ ಮೇಳವೆನ್ನುತ್ತಾರೆ. ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಮೇಳಕ್ಕೆ ಕುಂಭಮೇಳವೆನ್ನುತ್ತಾರೆ. ಸೂರ್ಯ ಮೇಷ, ಗುರು ಮತ್ತು ಕುಂಭ ರಾಶಿಗಳನ್ನು ಪ್ರವೇಶಿಸಿದ ಅಪೂರ್ವ ಸಮಯದಲ್ಲಿ ಈ ಮೇಳ ನಡೆಯುತ್ತದೆ.

- ಬಿತ್ತನೆ ಕಾಲದಲ್ಲಿ ಒಳ್ಳೆಯ ಫಸಲು ಪಡೆಯಲು ಒಂದು ಫಲೋತ್ಪಾದಕ ಹಬ್ಬವನ್ನಾಗಿ ಇದನ್ನು ಉತ್ತರಭಾರತದಲ್ಲಿ ಆಚರಿಸುತ್ತಿದ್ದರೆಂದು ಕಾಣಬರುತ್ತದೆ. ಸಾಮಾನ್ಯವಾಗಿ ಈ ಹಬ್ಬಗಳು ನದೀ ತೀರದಲ್ಲಿ ನಡೆಯುತ್ತಿದ್ದವು. ಸೂರ್ಯ ಕುಂಭರಾಶಿಯನ್ನು ಪ್ರವೇಶಿಸುವ ಪ್ರಶಸ್ತ ಕಾಲದಲ್ಲಿ ಮಡಕೆಯ ತುಂಬ ಬಿತ್ತನೆ ಧಾನ್ಯಗಳನ್ನು ತುಂಬಿಕೊಂಡು ಬಂದ ಜನ ನದೀತೀರದಲ್ಲಿ ಕಲೆತು, ನೀರಿನಲ್ಲಿ ಅವನ್ನು ಅದ್ದಿ ಊರಿಗೆ ತೆಗೆದುಕೊಂಡು ಹೋಗಿ ಅವುಗಳಲ್ಲಿನ ಬೀಜಗಳನ್ನು ಇತರ ಬೀಜಗಳೊಂದಿಗೆ ಬೆರೆಸಿ ಮಾಡುತ್ತಿದ್ದರು. ಈ ರೀತಿ ಮಾಡಿದರೆ ಅತಿ ಹೆಚ್ಚಿನ ಬೆಳೆ ಪಡೆಯಬಹುದೆಂಬ ಬಯಕೆಯೂ ಇಂಥ ಹಬ್ಬಗಳನ್ನು ಆಚರಿಸಲು ಹಿನ್ನಲೆಯಾಗಿರಬೇಕು.

- ದೇವತೆಗಳು ಮತ್ತು ರಾಕ್ಷಸರು ಕ್ಷೀರಸಮುದ್ರವನ್ನು ಕಡೆದಾಗ ಬಂದಂಥ ಅಮೃತದ ಕುಂಭವನ್ನು ರಾಕ್ಷಸರು ಕದ್ದು ಓಡುತ್ತಿರುವಾಗ ದೇವಾಸುರರಲ್ಲಿ ಯುದ್ಧ ನಡೆಯಿತು. ಆ ಸಮಯದಲ್ಲಿ ರಾಕ್ಷಸರು ನಾಲ್ಕು ಸ್ಥಳಗಳಲ್ಲಿ ಆ ಕುಂಭವನ್ನು ಇಟ್ಟರೆಂದು ಒಂದು ಹೇಳಿಕೆಯೂ ನಾಲ್ಕು ಕಡೆ ಅಮೃತವನ್ನು ಚೆಲ್ಲಿದರೆಂದು ಇನ್ನೊಂದು ಹೇಳಿಕೆಯೂ ಪುರಾಣಗಳಲ್ಲಿದೆ.

- ಈ ಮೇಳಗಳ ಪ್ರಾಚೀನತೆ ಬುದ್ಧನ ಕಾಲಕ್ಕೆ ಹೋಗುವುದಾದರೂ ಏಳನೆಯ ಶತಮಾನಕ್ಕೆ ಹಿಂದಿನಿಂದಲೂ ಈ ಮೇಳಗಳು ನಡೆದು ಬರುತ್ತಿರುವುದಕ್ಕೆ ಸಾಕಷ್ಟು ಆಧಾರಗಳಿವೆ. ಚಕ್ರವರ್ತಿ ಶ್ರೀಹರ್ಷ ಚೀನದ ಯಾತ್ರಿಕ ಹ್ಯುಯೆನ್‌ತ್ಸಾಂಗನ್ನು ಅಲಹಾಬಾದಿನಲ್ಲಿ ನಡೆದ ಮೇಳಕ್ಕೆ ಬರಮಾಡಿಕೊಂಡು ಆತನ ಸಮ್ಮುಖದಲ್ಲಿ ಎಲ್ಲ ಧರ್ಮದ ಸಂನ್ಯಾಸಿಗಳಿಗೂ ದೀನದಲಿತರಿಗೂ ಯಥೇಚ್ಛವಾಗಿ ದಾನಧರ್ಮ ಮಾಡಿದನೆಂದು ಇತಿಹಾಸದಿಂದ ತಿಳಿದುಬರುತ್ತದೆ.

- ಅದ್ವೈತದ ಅಧ್ವರ್ಯುಗಳಾದ ಶಂಕರಾಚಾರ್ಯರಿಗೂ ಈ ಮೇಳಕ್ಕೂ ನಿಕಟ ಸಂಬಂಧವಿದೆ ಎನ್ನಲಾಗಿದೆ. ಆಚಾರ್ಯರು ತಮ್ಮ ದಿಗ್ವಿಜಯ ಯಾತ್ರೆಯ ಕಾಲದಲ್ಲಿ ತ್ರಿವೇಣಿ ಸಂಗಮಕ್ಕೆ ಬಂದು ಅಲ್ಲಿನ ಸಂನ್ಯಾಸಿಗಳಲ್ಲಿ ದಶನಾಮೀ ಸಂಪ್ರದಾಯ ಏರ್ಪಡಿಸಿ ಕುಂಭಮೇಳವನ್ನು ವ್ಯವಸ್ಥೆ ಮಾಡಿದರಂತೆ.

- ಲೋಕಹಿತಕ್ಕಾಗಿ ಶ್ರಮಿಸುವುದು ಈ ದಶನಾಮೀ ಸಂಪ್ರದಾಯದವರ ಗುರಿ. ಈ ಸಂನ್ಯಾಸಿಗಳು ತಮ್ಮ ಇಷ್ಟ ಸಿದ್ಧಿಗಾಗಿ ತಮ್ಮ ಹೆಸರಿನ ಮುಂದೆ ತೀರ್ಥ, ಆಶ್ರಮ, ವನ, ಅರಣ್ಯ, ಗಿರಿ, ಪರ್ವತ, ಸಾಗರ, ಸರಸ್ವತೀ, ಭಾರತೀ, ಪುರೀ ಎಂಬ ಪದಗಳನ್ನು ಸೇರಿಸಿಕೊಳ್ಳುತ್ತಾರೆ. ಕುಂಭಮೇಳಗಳಲ್ಲಿ ಇವರುಗಳ ಪಾತ್ರ ವಿಶಿಷ್ಟವಾದುದು.

- ಕುಂಭಮೇಳಗಳು ಧಾರ್ಮಿಕ ದೃಷ್ಟಿಯಿಂದ ಎಷ್ಟು ಪ್ರಖ್ಯಾತವಾಗಿವೆಯೋ ಅಪಖ್ಯಾತಿಗೂ ಅಷ್ಟೇ ಹೆಸರಾಗಿವೆ. ಕೊಲೆ, ಸುಲಿಗೆ, ಮಾನಭಂಗ, ಅಪಹರಣ ಮುಂತಾದುವುಗಳಿಗೆ ಈ ಮೇಳಗಳು ಪ್ರಸಿದ್ಧಿ ಪಡೆದಿವೆ. ಲಕ್ಷಾಂತರ ಜನ ಇಲ್ಲಿ ಸೇರುವುದರಿಂದ ಪ್ಲೇಗು. ಕಾಲರ ಮುಂತಾದ ಅಂಟುಜಾಡ್ಯಗಳು ಸುಲಭವಾಗಿ ಹರಡುತ್ತವೆ. 1760ರಲ್ಲಿ ಹರಿದ್ವಾರದಲ್ಲಿ ನಡೆದ ಕುಂಭಮೇಳದಲ್ಲಿ ಗೋಸಾಯಿಗಳು ಮತ್ತು ಬೈರಾಗಿಗಳಿಗೆ ಯುದ್ಧವಾಗಿ 18,000ಜನ ಸತ್ತರು. ಅದೇ ಸ್ಥಳದಲ್ಲಿ 1795ರಲ್ಲಿ ಸಿಖ್ ಯಾತ್ರಿಕರು 5,000 ಗೋಸಾಹಿಗಳನ್ನು ಕೊಂದರು.

- ಈ ಮೇಳದ ಒಂದು ಅಂಗವಾಗಿ ಹಿಂದೂ ಪಂಥದ ಎಲ್ಲ ವರ್ಗದ ಬೈರಾಗಿಗಳೂ ಸಂನ್ಯಾಸಿಗಳೂ ಸೇರಿ ಹಿಂದೂ ಧರ್ಮದ ಸಮ್ಮೇಳನ ನಡೆಸುವರು. ಇಲ್ಲಿ ಆಧ್ಯಾತ್ಮಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಮಂಥನ ನಡೆಯುವುದು. ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ದಿಗಂಬರ ಸಾಧುಗಳ ಮೆರವಣಿಗೆ, ಭಕ್ತಾದಿಗಳ ಕೈಂಕರ್ಯ-ಇವು ಅದ್ದೂರಿಯಾಗಿ ನಡೆಯುತ್ತವೆ.

### ಯುನೆಸ್ಕೊ ಸಾಂಸ್ಕೃತಿಕ ಪರಂಪರೆ ಪಟ್ಟಿಗೆ ಆಯ್ಕೆಯಾಗಲು ಮಾನದಂಡಗಳು

- ೨೦೦೪ರ ಅಂತ್ಯದವರೆಗೆ ಸಾಂಸ್ಕೃತಿಕ ಪರಂಪರೆಯನ್ನು ಆರು ಮಾನದಂಡಗಳಿಂದ ಹಾಗೂ ಪ್ರಾಕೃತಿಕ ಪರಂಪರೆಯನ್ನು ನಾಲ್ಕು ಮಾನದಂಡಗಳಿಂದ ಅಳೆಯಲಾಗುತ್ತಿತ್ತು. ೨೦೦೫ರಲ್ಲಿ ಈ ಪದ್ಧತಿಯನ್ನು ಮಾರ್ಪಡಿಸಿ ಒಟ್ಟು ಹತ್ತು ಅಂಶಗಳ ಅರ್ಹತಾಪಟ್ಟಿಯನ್ನು ತಯಾರಿಸಲಾಯಿತು. ನಾಮಕರಣಗೊಂಡ ತಾಣವು ಈ ಹತ್ತರ ಪೈಕಿ ಕನಿಷ್ಟ ಒಂದಾದರೂ ಅರ್ಹತೆಯನ್ನು ಹೊಂದಿದ್ದು "ವಿಶ್ವದ ಅಮೂಲ್ಯ ಆಸ್ತಿ" ಯಾಗಿರಬೇಕಾಗಿರುತ್ತದೆ.

### ಸಾಂಸ್ಕೃತಿಕ ಮಾನದಂಡಗಳು

- ಮಾನವ ಸೃಷ್ಟಿಯ ಅದ್ಭುತ ಪ್ರತೀಕವಾಗಿರಬೇಕು.
- ವಾಸ್ತುಶಾಸ್ತ್ರ ಯಾ ತಂತ್ರಜ್ಞಾನ , ಸ್ಮಾರಕಗಳ ನಿರ್ಮಾಣ ಕಲೆ, ನಗರ ಯೋಜನೆ ಅಥವಾ ಭೂಪ್ರದೇಶವನ್ನು ಒಪ್ಪವಾಗಿ ಸಿಂಗರಿಸುವ ಕಲಾವಿನ್ಯಾಸಗಳಲ್ಲಿನ ಪ್ರಗತಿಯನ್ನು ಸಾರುವ ಪ್ರಮುಖ ಮಾನವ ಮೌಲ್ಯಗಳ ವಿನಿಮಯವು ಒಂದು ಕಾಲಾವಧಿಯಲ್ಲಿ ಅಥವಾ ವಿಶ್ವದ ಒಂದು ನಿರ್ದಿಷ್ಟ ಸಾಂಸ್ಕೃತಿಕ ಪ್ರದೇಶದಲ್ಲಿ ಜರುಗಿದುದರ ದ್ಯೋತಕವಾಗಿರಬೇಕು.
- ಒಂದು ಸಾಂಸ್ಕೃತಿಕ ಪರಂಪರೆಯ ಅಥವಾ ಇಂದು ಜೀವಂತವಾಗಿರುವ ಇಲ್ಲವೇ ನಶಿಸಿಹೋಗಿರುವ ನಾಗರಿಕತೆಯೊಂದರ ಅಪ್ರತಿಮ ದ್ಯೋತಕವಾಗಿರಬೇಕು.
- ಮಾನವ ಇತಿಹಾಸದಲ್ಲಿನ ಗಣನೀಯ ಹಂತವೊಂದನ್ನು(ಹಂತಗಳನ್ನು) ಪ್ರತಿಬಿಂಬಿಸುವ ಕಟ್ಟಡ , ವಾಸ್ತುಶಿಲ್ಪ ಯಾ ತಂತ್ರಜ್ಞಾನದ ಸೃಷ್ಟಿ ಅಥವಾ ಭೂವಿನ್ಯಾಸವಾಗಿರಬೇಕು.
- ಪರಂಪರಾಗತ ಮಾನವ ನೆಲೆ ಅಥವಾ ಭೂಮಿಯ ಉಪಯೋಗ ಅಥವಾ ಸಮುದ್ರದ ಉಪಯೋಗದ ಅತ್ಯದ್ಭುತ ಪ್ರತೀಕವಾಗಿರಬೇಕು. ಇಲ್ಲವೇ ತೀವ್ರವಾಗಿ ಬದಲಾವಣೆಗೊಂಡು ಅಪಾಯಕ್ಕೀಡಾಗಿರುವ ಪ್ರಕೃತಿಯೊಡನೆ ಮಾನವನ ಒಡನಾಟದ ಅತ್ಯುತ್ತಮ ದ್ಯೋತಕವಾಗಿರಬೇಕು.
- ಘಟನೆಗಳು, ಜೀವಂತವಿರುವ ಸಂಪ್ರದಾಯಗಳು, ಮಾನವನ ನಂಬಿಕೆಗಳು, ವಿಶ್ವಮಟ್ಟದಲ್ಲಿ ಪ್ರಾಮುಖ್ಯ ಹೊಂದಿರುವ ಕಲಾತ್ಮಕ ಕೃತಿಗಳು ಯಾ ಸಾಹಿತ್ಯ ಕೃತಿಗಳೊಡನೆ ನೇರವಾಗಿ ಅಥವಾ ಸಾಕಷ್ಟು ಮಟ್ಟದ ಸಂಬಂಧ ಹೊಂದಿರಬೇಕು.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 22. ಶಾಮಲೀ

### ಪ್ರಮುಖ ಸುದ್ದಿ

- ರಾಷ್ಟ್ರ ರಾಜಧಾನಿ ವಲಯಕ್ಕೆ ಉತ್ತರ ಪ್ರದೇಶದ ಶಾಮಲೀ ಜಿಲ್ಲೆಯನ್ನು ಸೇರ್ಪಡೆ ಮಾಡಲಾಗಿದೆ. ಈ ಮೂಲಕ, ಈ ವಲಯಕ್ಕೆ ಒಟ್ಟಾರೆ 23 ಜಿಲ್ಲೆಗಳು ಸೇರ್ಪಡೆಯಾದಂತಾಗಿದೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ರಾಷ್ಟ್ರ ರಾಜಧಾನಿ ವಲಯ ಯೋಜನಾ ಮಂಡಳಿಯ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಮುಖ್ಯ ಸಂಗತಿಗಳು

- ಎನ್‌ಸಿಆರ್‌ಗೆ ಸೇರ್ಪಡೆಯಾಗುವ ನಗರಗಳಲ್ಲಿ ಮೂಲಸೌಕರ್ಯ ಕ್ಷೇತ್ರದ ಅಭಿವೃದ್ಧಿಗೆ ಆಕರ್ಷಕ ಬಡ್ಡಿದರಗಳ ಹಣಕಾಸು ಸೌಲಭ್ಯ ಒದಗಿಸಲಾಗುತ್ತದೆ.
- ದೆಹಲಿ ಹೊರತುಪಡಿಸಿ ಪ್ರಸ್ತುತ, 22 ಜಿಲ್ಲೆಗಳು ಎನ್‌ಸಿಆರ್‌ನಲ್ಲಿವೆ. ಇವುಗಳಲ್ಲಿ 13 ಹರಿಯಾಣ, 7 ಉತ್ತರ ಪ್ರದೇಶ, 2 ರಾಜಸ್ತಾನ ರಾಜ್ಯಗಳಿಗೆ ಸೇರಿದ ಜಿಲ್ಲೆಗಳಾಗಿವೆ.

- ಎನ್‌ಸಿಆರ್‌ಗೆ ಸೇರ್ಪಡೆಯಾಗುವ ರಾಜ್ಯಗಳು ಆಯಾ ಜಿಲ್ಲೆಗಳಿಗೆ ಸಂಬಂಧಿಸಿದ ಉಪವಲಯ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಬೇಕು ಹಾಗೂ 2018ರ ಮಾರ್ಚ್ ಒಳಗೆ ಅವುಗಳನ್ನು ಪೂರ್ಣಗೊಳಿಸಬೇಕೆಂದು ನಿರ್ಧರಿಸಲಾಗಿದೆ .

- 1985ರಲ್ಲಿ ರಾಷ್ಟ್ರ ರಾಜಧಾನಿ ವಲಯ ಯೋಜನಾ ಮಂಡಳಿ ಸ್ಥಾಪಿತವಾಗಿದ್ದು, ರಾಜಧಾನಿಗೆ ಸಾಮೀಪ್ಯ ಹೊಂದಿರುವ ಪ್ರದೇಶಗಳ ಭೂಮಿ ಮೇಲೆ ನಿಯಂತ್ರಣ ಹೊಂದಲು ನೀತಿ ರೂಪಿಸುವುದು, ಮೂಲಸೌಕರ್ಯ ಅಭಿವೃದ್ಧಿ ಉತ್ತೇಜಿಸುವುದು ಇದರ ಪ್ರಮುಖ ಕೆಲಸ.

## 23. ಸಲಿಂಗ ವಿವಾಹಕ್ಕೆ ಅಸ್ತು ಎಂದ ಆಸ್ಟ್ರೇಲಿಯಾ

ಪ್ರಮುಖ ಸುದ್ದಿ

- ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಿದ ವಿಶ್ವದ 26 ರಾಷ್ಟ್ರಗಳಲ್ಲಿ ಆಸ್ಟ್ರೇಲಿಯಾವೂ ಇದೀಗ ಸೇರಿಕೊಂಡಿದೆ.
- ಆ ಮೂಲಕ ಈ ಕಾನೂನು ಬಾಹಿರವಾಗಿದ್ದ ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಿದ ಸರಕಾರದ ಕ್ರಮವನ್ನು ಸ್ವಾಗತಿಸಿ, ಸಲಿಂಗ ಪ್ರೇಮಿಗಳು 'ಡೇ ಫಾರ್ ಲವ್' ಎಂದು ಸಂಭ್ರಮಿಸಿದ್ದಾರೆ.

## 24. ಸಮುದ್ರದಾಳದಲ್ಲಿ ರೋಮ್ ಸಾಮ್ರಾಜ್ಯ

ಪ್ರಮುಖ ಸುದ್ದಿ

- ರೋಮನ್ ಕಾಲದಲ್ಲಿದ್ದ ನಗರವೊಂದು ಸಮುದ್ರದಾಳದಲ್ಲಿ ಪತ್ತೆಯಾಗಿದೆ. ಇಟಲಿಯ ಪಶ್ಚಿಮ ಭಾಗದಲ್ಲಿರುವ ಈ ನಗರ ಈಗ ನೀರಿನಿಂದ ಆವೃತವಾಗಿದೆ. 1,700 ವರ್ಷಗಳಿಗಿಂತಲೂ ಹೆಚ್ಚು ಪುರಾತನ ಎಂದು ಗುರುತಿಸಲಾಗಿದೆ.

- ಅಂದು ನಿರ್ಮಾಣ ಮಾಡಲಾದ ಶಿಲಾಮೂರ್ತಿಗಳು ಈಗ ವಿನಾಶದ ಸ್ಥಿತಿ ತಲುಪಿವೆ. ಕೆಲ ಮೂರ್ತಿಗಳ ಕೈ ಮುರಿದು ಹೋದರೆ, ಇನ್ನೂ ಕೆಲ ಮೂರ್ತಿಯ ತಲೆಗಳು ಭಗ್ನಗೊಂಡಿವೆ.

- ಇತ್ತೀಚೆಗೆ ಈ ಭಾಗದಲ್ಲಿ ಜ್ವಾಲಾಮುಖಿ ಚಟುವಟಿಕೆಗಳು ಹೆಚ್ಚುತ್ತಿವೆ. ಈ ಕಾರಣಗಳಿಂದ ಪಳೆಯುಳಿಕೆಗಳು ಇನ್ನಷ್ಟು ವಿನಾಶ ಹೊಂದುತ್ತಿದೆ. ಇಲ್ಲಿ ರಸ್ತೆಗಳು, ಗೋಡೆಗಳು ಸಹ ಪತ್ತೆಯಾಗಿವೆ ಎಂದು ಅಧ್ಯಯನ ತಂಡ ತಿಳಿಸಿದೆ.
- ಅಂದು ಈ ನಗರ ಎಷ್ಟು ಸಮೃದ್ಧಿಯಾಗಿತ್ತು ಎಂಬುದಕ್ಕೆ ಇಲ್ಲಿರುವ ದೇವಾಲಯಗಳು, ಬೃಹತ್ ಮನೆಗಳು ಸಾಕ್ಷಿಯಾಗಿವೆ. ಈ ಭಾಗದ ನೀರಿನಲ್ಲಿ ಇಳಿದರೆ ನಮಗೆ ಇತಿಹಾಸದ ಪುಟದಲ್ಲಿ ಇಳಿದಂತೆ ಭಾಸವಾಗುತ್ತದೆ.
- ಈ ಭಾಗದಲ್ಲಿ ಸುತ್ತಾಡಿದರೆ ಗತಕಾಲದ ವೈಭವ ಕಣ್ಣಮುಂದೆ ಹಾದು ಹೋಗುತ್ತದೆ ಎಂದು ತಜ್ಞರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಈಗಷ್ಟೇ ಅಧ್ಯಯನ ಮಾಡಲು ಅವಕಾಶ ದೊರೆತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ವಿಚಾರಗಳು ಉತ್ಪನನವಾಗುವ ನಿರೀಕ್ಷೆ ಇದೆ.

## 25. ಬೋಧಿ ಪರ್ವ

ಪ್ರಮುಖ ಸುದ್ದಿ

- ಬಿಮ್ ಸ್ಟೆಕ್ ನ 20 ನೇ ವಾರ್ಷಿಕೋತ್ಸವದ ಆಚರಣೆಯ ಅಂಗವಾಗಿ, ಭಾರತವು ಬಿಮ್ ಸ್ಟೆಕ್ ನ ಬೌದ್ಧರ ಪರಂಪರೆ ಹಬ್ಬ ವಾದ "ಬೋಧಿ ಪರ್ವ" 2017 ರ ಆವೃತ್ತಿಯನ್ನು ಆಯೋಜಿಸುತ್ತದೆ.
- ಈ ಉತ್ಸವವನ್ನು ವಿದೇಶಿ ವ್ಯವಹಾರಗಳ ಸಚಿವಾಲಯ (MEA) ಆಯೋಜಿಸುತ್ತಿದೆ.

### ಈ ಹಬ್ಬವನ್ನು ಆಚರಿಸಲು ಮುಖ್ಯ ಕಾರಣಗಳೇನು ?

- ಸಮೃದ್ಧ ಮತ್ತು ಸಾಮಾನ್ಯ ಪರಂಪರೆಯ ಬಗ್ಗೆ ಜಾಗೃತಿ ಮೂಡಿಸಲು ಮತ್ತು BIMSTEC ಈ ವಿಶಿಷ್ಟ ಸಂಸ್ಥೆಯ 20 ನೇ ವಾರ್ಷಿಕೋತ್ಸವವನ್ನು ಗುರುತಿಸಲು.

- ವಿದ್ವಾಂಸರ ಅಂತರರಾಷ್ಟ್ರೀಯ ಪ್ರದರ್ಶನಗಳು, ಚಲನಚಿತ್ರಗಳು, ಕಲೆ, ಪಠಣ, ಧ್ಯಾನ ಮತ್ತು ತತ್ತ್ವಶಾಸ್ತ್ರದ ಸಂಭಾಷಣೆಗಳ ಜ್ಞಾನವು ಬೌದ್ಧಧರ್ಮದ ಮೂಲತತ್ವವನ್ನು ಹೊರತರುತ್ತದೆ.

- ಬೌದ್ಧಧರ್ಮದವರು ಅಭ್ಯಾಸ ಮಾಡುವ ಶಾಂತಿ ಮತ್ತು ಸಹಿಷ್ಣುತೆಯ ಸಾರ್ವತ್ರಿಕ ಸಂದೇಶವನ್ನು ಪ್ರಪಂಚಕ್ಕೆ ಸಾರುವುದರ ಮೂಲಕ ಘರ್ಷಣೆಯ ಮುಖಾಂತರ ಬೆಳೆಯುತ್ತಿರುವ ಅರ್ಥಹೀನತೆಗೆಯನ್ನು ತಡೆಯುವುದು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**_BACK 2 BASICS_**

### ಬೋಧಿ ಪರ್ವದ ಬಗ್ಗೆ

- ಇದು ಬಿಮ್ ಸ್ಟೆಕ್ ನ ಬೌದ್ಧರ ಪರಂಪರೆ ಹಬ್ಬ ಇದರ ಮುಖ್ಯ ಉದ್ದೇಶವೆಂದರೆ ಇಂದಿನ ಸಂದರ್ಭದಲ್ಲಿ 'ಬೌದ್ಧಧರ್ಮ ವನ್ನು ವಿಭಿನ್ನ ದೃಷ್ಟಿಕೋನಗಳಲ್ಲಿ ಗಮನಿಸುವುದು . ಬಿಮ್ ಸ್ಟೆಕ್ ಬೌದ್ಧ ಧರ್ಮದೊಂದಿಗೆ ಆಳವಾದ ಸಂಪರ್ಕವನ್ನು ಹೊಂದಿದೆ.
- ಇದು ದಕ್ಷಿಣ ಏಷ್ಯಾದಲ್ಲಿ ಹುಟ್ಟಿಕೊಂಡು ನಂತರ ಆಗ್ನೇಯ ಏಷ್ಯಾದಲ್ಲಿ ಪ್ರಯಾಣ ಬೆಳೆಸಿದೆ.
- ಬೌದ್ಧಧರ್ಮವು ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ನಡುವಿನ ಸೇತುವೆಯನ್ನು ಹೊಂದಿದೆ.

### ಬಿಮ್‌ಸ್ಟೆಕ್ ಬಗ್ಗೆ

- ಬಿಮ್‌ಸ್ಟೆಕ್ (BIMSTEC) ಎಂದರೆ : 'ದ ಬೇ ಆಫ್ ಬೆಂಗಾಲ್ ಇನಿಶಿಯೇಟಿವ್ ಫಾರ್ ಮಲ್ಟಿ-ಸೆಕ್ಟೋರಲ್ ಟೆಕ್ನಿಕಲ್ ಆ್ಯಂಡ್ ಇಕಾನಮಿಕ್ ಕೋ-ಆಪರೇಶನ್' (ಬಹುಕ್ಷೇತ್ರ ತಾಂತ್ರಿಕ ಹಾಗೂ ಆರ್ಥಿಕ ಸಹಕಾರಕ್ಕಾಗಿ ಬಂಗಾಳ ತೀರ ಸುಧಾರಣಾ ಶೃಂಗಸಭೆ)
- ಇದನ್ನು 1997ರಲ್ಲಿ ಬ್ಯಾಂಕಾಕ್‌ನಲ್ಲಿ ಸ್ಥಾಪಿಸಲಾಯಿತು.

- ಬಿಮ್‌ಸ್ಟೆಕ್‌ನ ಶಾಶ್ವತ ಕಾರ್ಯಾಲಯವನ್ನು ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಢಾಕಾದಲ್ಲಿದೆ.
- ಇದರಲ್ಲಿ .ಏಳು ಸದಸ್ಯ ರಾಷ್ಟ್ರಗಳು- ಬಾಂಗ್ಲಾದೇಶ, ಭೂತಾನ್, ಭಾರತ, ಮ್ಯಾನ್ಮಾರ್, ನೇಪಾಳ, ಶ್ರೀಲಂಕಾ ಹಾಗೂ ಥಾಯ್ಲೆಂಡ್ .

### ಬಿಮ್‌ಸ್ಟೆಕ್ ಸಂಘಟನೆಯ ವೈಶಿಷ್ಟ್ಯಗಳು :

- ಬಿಮ್‌ಸ್ಟೆಕ್ ಸಂಘಟನೆಯು ಏಳು ಸದಸ್ಯ ರಾಷ್ಟ್ರಗಳಾದ ಭಾರತ, ಬಾಂಗ್ಲಾದೇಶ, ಶ್ರೀಲಂಕಾ, ಥಾಯ್ಲೆಂಡ್, ಮ್ಯಾನ್ಮಾರ್, ಭೂತಾನ್ ಹಾಗೂ ನೇಪಾಳ ಜೊತೆಗೂಡಿದಲ್ಲಿ ಜಗತ್ತಿನ ಶೇಕಡ 20ರಷ್ಟು ಜನಸಂಖ್ಯೆಯನ್ನು ಹೊಂದಿದೆ.
- ಏಳು ಸದಸ್ಯ ರಾಷ್ಟ್ರಗಳು ಸೇರಿದಂತೆ ದಕ್ಷಿಣ ಏಶ್ಯ ಹಾಗೂ ಆಗ್ನೇಯ ಏಶ್ಯ ರಾಷ್ಟ್ರಗಳ ನಡುವೆ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಬಿಮ್‌ಸ್ಟೆಕ್ ಮಹತ್ವದ ಪಾತ್ರ ವಹಿಸಲಿದೆ.
- ಬಿಮ್‌ಸ್ಟೆಕ್ ನ ಪ್ರಮುಖ ಆದ್ಯತಾ ವಲಯಗಳು-ಭಯೋತ್ಪಾದನೆ ಹಾಗೂ ಅಪರಾಧಗಳ ತಡೆ, ವ್ಯಾಪಾರ ಹಾಗೂ ಹೂಡಿಕೆ, ಸಾರಿಗೆ ಮತ್ತು ಸಂಪರ್ಕ ಹಾಗೂ ಬಡತನ ನಿರ್ಮೂಲನೆಯಂತಹ ಪ್ರಮುಖ ಆದ್ಯತಾ ವಲಯಗಳನ್ನು ಒಳಗೊಂಡಿದೆ.

## . 26. 27th ವ್ಯಾಸ ಸಮ್ಮಾನ್

ಪ್ರಮುಖ ಸುದ್ದಿ

- 2017ನೇ ಸಾಲಿನ ಪ್ರತಿಷ್ಠಿತ ವ್ಯಾಸ ಸಮ್ಮಾನ್ ಪ್ರಶಸ್ತಿಗೆ ಹಿಂದಿ ಲೇಖಕಿ ಮಮತಾ ಕಾಲಿಯಾ ಅವರನ್ನು ಆಯ್ಕೆ ಮಾಡಲಾಗಿದೆ.

- ಅವರ ದುಃಖಂ ಸುಖಂ ಕಾದಂಬರಿಗೆ ಈ ಗೌರವ ಸಂದಿದೆ. ಖ್ಯಾತ ಲೇಖಕ ವಿಶ್ವನಾಥ್ ಪ್ರಸಾದ್ ತಿವಾರಿ ನೇತೃತ್ವದ ಉನ್ನತ ಮಟ್ಟದ ಆಯ್ಕೆ ಸಮಿತಿ ಮಮತಾ ಕಾಲಿಯಾ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ.

- 2009ರಲ್ಲಿ ಪ್ರಕಟಿತವಾಗಿರುವ ದುಃಖಂ ಸುಖಂ ಕಾದಂಬರಿ, ಕೆಳ ಮಧ್ಯಮವರ್ಗದ ಕುಟುಂಬವೊಂದರ ಮೂರು ತಲೆಮಾರುಗಳ ಕಥಾನಕ. ನಮ್ಮ ಸಮಾಜದಲ್ಲಿ ಆಗುತ್ತಿರುವ ಸ್ಥಿತ್ಯಂತರಗಳ ಬಗ್ಗೆ ಈ ಕಾದಂಬರಿ ವಿಸ್ತೃತವಾಗಿ ಬೆಳಕು ಚೆಲ್ಲಿದೆ.

ವ್ಯಾಸ ಸಮ್ಮಾನ್ ಪ್ರಶಸ್ತಿ ಬಗ್ಗೆ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ವ್ಯಾಸ ಸಮ್ಮಾನ್ ಪ್ರಶಸ್ತಿಯನ್ನು ಕೆ.ಕೆ.ಬಿರ್ಲಾ ಫೌಂಡೇಷನ್ 1991ರಲ್ಲಿ ಆರಂಭಿಸಿದೆ.
- ಇದು ಭಾರತೀಯ ಪ್ರಜೆಗಳು ಕಳೆದ ಹತ್ತು ವರ್ಷಗಳಲ್ಲಿ ರಚಿಸಿದ ಹಿಂದಿ ಕೃತಿಯನ್ನು ಪ್ರಶಸ್ತಿಗೆಪರಿಗಣಿಸುತ್ತದೆ. ಈ ಪ್ರಶಸ್ತಿಯು 3.5 ಲಕ್ಷ ರೂಪಾಯಿ ನಗದು, ಭಿನ್ನವತ್ತಳಿಕೆ ಹಾಗೂ ಪ್ರಶಸ್ತಿಯನ್ನು ಒಳಗೊಂಡಿದೆ.

## 27. ಸ್ವಚ್ಛಭಾರತ: ಸಾರ್ವಜನಿಕ ಶೌಚಾಲಯಕ್ಕೂ ವಿಶೇಷ ಗುರುತಿನ ಚೀಟಿ

ಪ್ರಮುಖ ಸುದ್ದಿ

- ವಿಶೇಷ ಗುರುತಿನ ಚೀಟಿ ಇನ್ನು ಮುಂದೆ ಶೌಚಾಲಯಗಳಿಗೂ ದೊರೆಯಲಿದೆ. ನಗರ ಪ್ರದೇಶಗಳಲ್ಲಿರುವ ಸಾರ್ವಜನಿಕ ಮತ್ತು ಸಾಮುದಾಯಿಕ ಶೌಚಾಲಯಗಳಿಗೆ ಶೀಘ್ರದಲ್ಲೇ ವಿಶೇಷ ಗುರುತಿನ ಸಂಖ್ಯೆ ನೀಡಲು ನಿರ್ಧರಿಸಲಾಗಿದೆ. ಅಲ್ಲದೆ, ಅವುಗಳನ್ನು ಎಲ್ಲರಿಗೂ ಕಾಣಿಸುವಂತೆ ಶೌಚಾಲಯದ ಪ್ರವೇಶ ದ್ವಾರದಲ್ಲಿಡುವಂತೆ ಸಂಬಂಧಪಟ್ಟವರಿಗೆ ಸೂಚನೆ ರವಾನೆಯಾಗಿದೆ.
- ಸ್ವಚ್ಛ ಭಾರತ ಅಭಿಯಾನದಡಿ ಪಬ್ಲಿಕ್ ಟಾಯ್ಲೆಟ್‌ಗಳನ್ನು ಸದಾ ಸುಸ್ಥಿತಿಯಲ್ಲಿಡುವುದು ಇದರ ಉದ್ದೇಶವಾಗಿದೆ.

## ಪ್ರಮುಖ ಸಂಗತಿಗಳು

- ವಿಶೇಷ ಗುರುತಿನ ಚೀಟಿಯ ಜತೆಗೆ, ಶೌಚಾಲಯಗಳು ಅಧೀನಕ್ಕೊಳಪಡುವ ಸ್ಥಳೀಯ ಆಡಳಿತ ಸಂಸ್ಥೆಗಳ ಹೆಸರು, ನಿರ್ವಹಣೆ ಪ್ರಾಧಿಕಾರದ ವಿವರ, ಉಸ್ತುವಾರಿ ಅಥವಾ ಮೇಲ್ವಿಚಾರಕನ ಹೆಸರು ಮತ್ತು ಸಂಪರ್ಕ ಸಂಖ್ಯೆ ಹಾಗೂ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ಮಾಹಿತಿಗಳ ವಿವರ ಸಿಗಲಿದೆ ಎನ್ನಲಾಗಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಸ್ವಚ್ಛ ಭಾರತ ಅಭಿಯಾನದಡಿ ದೇಶಾದ್ಯಂತ ಈಗಾಗಲೇ 2.34 ಲಕ್ಷಕ್ಕೂ ಅಧಿಕ ಸಾರ್ವಜನಿಕ ಮತ್ತು ಸಾಮುದಾಯಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಶೌಚಾಲಯಗಳ ಅಕ್ಕಪಕ್ಕದ ವಠಾರಗಳ ಶುಚಿತ್ವ ಕಾಪಾಡಿಕೊಳ್ಳುವುದು ಕೂಡ ಅಭಿಯಾನದ ಪ್ರಮುಖ ಉದ್ದೇಶವಾಗಿರುವ ಕಾರಣ ಇದೀಗ ಅವುಗಳಿಗೆ ವಿಶೇಷ ಗುರುತಿನ ಚೀಟಿ ನೀಡಲು ನಿರ್ಧರಿಸಲಾಗಿದೆ.

- "ನಿಮ್ಮ ನಗರದಲ್ಲಿರುವ ಎಲ್ಲಾ ಸಾರ್ವಜನಿಕ ಮತ್ತು ಸಾಮುದಾಯಿಕ ಶೌಚಾಲಯಗಳನ್ನು ಗುರುತಿಸಿ ಅವುಗಳಿಗೆ ವಿಶೇಷ ಗುರುತಿನ ಚೀಟಿ ಸಿಗುವಂತೆ ನೋಡಿಕೊಳ್ಳಿ" ಎಂದು ಇತ್ತೀಚೆಗೆ 4,302 ನಗರಗಳಲ್ಲಿರುವ ಸ್ವಚ್ಛ ಭಾರತ ಅಭಿಯಾನದ ರಾಜ್ಯ ಘಟಕದ ನಿರ್ದೇಶಕರು ಹಾಗೂ ನಗರಪಾಲಿಕೆ ಆಯುಕ್ತರಿಗೆ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯ ಪತ್ರ ಬರೆದಿದೆ.

## 28. ಸದ್ಯದಲ್ಲೇ 'ಉಭಯಚರ' ವಿಮಾನ ಸೇವೆ

### ಪ್ರಮುಖ ಸುದ್ದಿ

- ನೀರಿನ ಮೇಲೆ ಹಾಗೂ ಗಾಳಿಯಲ್ಲಿ ಚಲಿಸುವ 'ಉಭಯಚರ' ('ಆ್ಯಂಫಿಬಿಯನ್) ವಿಮಾನಗಳ ವಾಣಿಜ್ಯ ಹಾರಾಟವನ್ನು ಆರಂಭಿಸಲು ಸ್ಪೈಸ್‌ಜೆಟ್ ಭಾರಿ ಸಿದ್ಧತೆ ನಡೆಸಿದೆ. ಇದಕ್ಕಾಗಿ ಮುಂಬಯಿ ಸಮುದ್ರ ತೀರದಲ್ಲಿ ಪ್ರಾಯೋಗಿಕ ಹಾರಾಟವನ್ನೂ ನಡೆಸಿ ಸಂಸ್ಥೆ ಯಶಸ್ವಿಯಾಗಿದೆ.
- ದೇಶದ ಗ್ರಾಮೀಣ ಹಾಗೂ ಪ್ರದೇಶಗಳಿಗೆ ವಿಮಾನಯಾನ ಸಂಪರ್ಕ ಬೆಳೆಸಲು ಸರಕಾರ ಆರಂಭಿಸಿರುವ 'ಉಡಾನ್' ಯೋಜನೆಯ ಮತ್ತೊಂದು ಹಂತ

### ಪ್ರಮುಖ ಅಂಶಗಳು

- ''ಉಭಯಚರ ವಿಮಾನಗಳ ಹಾರಾಟಕ್ಕೆ ಅಗತ್ಯವಾದ ಮೂಲಸೌಕರ್ಯವನ್ನು ಸರಕಾರ ಅಭಿವೃದ್ಧಿಪಡಿಸಲಿದೆ. ನಾಗರಿಕ ವಿಮಾನಯಾನ ಸಚಿವಾಲಯದ ಜತೆ ಸಮಾಲೋಚನೆ ನಡೆಸಿ, ಇಂತಹ ವಿಮಾನ ಸೇವೆಗೆ ಅಗತ್ಯವಾದ ನೀತಿ-ನಿಯಮಗಳನ್ನು ಶೀಘ್ರದಲ್ಲೇ ರೂಪಿಸಲಾಗುವುದು

- ಸ್ಥಳಗಳ ಪರಿಶೀಲನೆ: ಉತ್ತರ ಪ್ರದೇಶ, ಮಹಾರಾಷ್ಟ್ರ, ಅಂಡಮಾನ್, ಲಕ್ಷದ್ವೀಪ, ಮತ್ತು ಇತರ ತೀರ ಪ್ರದೇಶದ ಹಲವು ಸ್ಥಳಗಳಿಂದ 'ಉಭಯಚರ' ವಿಮಾನಗಳ ಸೇವೆ ಆರಂಭಿಸಲು ಸ್ಪೈಸ್‌ಜೆಟ್ ಪರಿಶೀಲನೆ ನಡೆಸುತ್ತಿದೆ.

### ಏನಿದು 'ಸೀಪ್ಲೇನ್' ಯೋಜನೆ?

- ನೀರನ್ನು ಬಳಸಿಕೊಂಡು ಗಾಳಿಯಲ್ಲಿ ಹಾರುವ ತಂತ್ರಜ್ಞಾನ ಆಧರಿತ ಯೋಜನೆ ಇದಾಗಿದೆ. ನದಿ ಅಥವಾ ಆಂತರಿಕ ಜಲಸಾರಿಗೆ ಮೂಲಗಳನ್ನೇ ವಿಮಾನಗಳ ಲ್ಯಾಂಡಿಂಗ್ ಮತ್ತು ಟೇಕಾಫ್‌ಗೆ ಬಳಸಿಕೊಳ್ಳಲಾಗುತ್ತದೆ. ಇದರಿಂದ ಕೋಟ್ಯಂತರ ರೂ. ಖರ್ಚುಮಾಡಿ ವಿಮಾನ ನಿಲ್ದಾಣಗಳನ್ನು ನಿರ್ಮಾಣ ಮಾಡುವ ಮತ್ತು ಅವುಗಳನ್ನು ನಿರ್ವಹಣೆ ಮಾಡುವ ತಲೆನೋವು ತಪ್ಪಲಿದೆ.
- ದೇಶದ ಗ್ರಾಮೀಣ ಪ್ರದೇಶಗಳ ಮೂಲೆಗಳಲ್ಲಿರುವ ಸ್ಥಳಗಳಿಗೆ ವಿಮಾನ ಸಂಪರ್ಕ ಒದಗಿಸಿ, ಆ ಪ್ರದೇಶಗಳನ್ನು ಮುಖ್ಯ ಸಂಪರ್ಕ ಜಾಲಗಳ ಜತೆ ಬೆಸೆಯುವುದು ಮತ್ತು ಪ್ರವಾಸೋದ್ಯಮ ಉತ್ತೇಜನ ಈ ಯೋಜನೆಯ ಉದ್ದೇಶವಾಗಿದೆ. ಮುಖ್ಯವಾಗಿ ನದಿ ಅಥವಾ ಸಮುದ್ರ ತೀರದ ಪಟ್ಟಣಗಳನ್ನು ಈ ಯೋಜನೆಗೆ ಬಳಸಿಕೊಳ್ಳಲಾಗುವುದು.

## 29. ಹಂಬಂತೋಟ ಬಂದರನ್ನು ಚೀನಾಗೆ ಹಸ್ತಾಂತರಿಸಿದ ಶ್ರೀಲಂಕಾ

### ಪ್ರಮುಖ ಸುದ್ದಿ

- ಹಿಂದೂ ಮಹಾಸಾಗರದ ಮೇಲೆ ಪ್ರಭುತ್ವ ಸಾಧಿಸಲು ಹಂಬಲಿಸುತ್ತಿರುವ ಚೀನಾಗೆ ಆಯಕಟ್ಟಿನ ಜಾಗದಲ್ಲಿರುವ ಹಂಬಂತೋಟ ಬಂದರನ್ನು ಶ್ರೀಲಂಕಾ ಶನಿವಾರ ಅಧಿಕೃತವಾಗಿ ಹಸ್ತಾಂತರಿಸಿದೆ.

- ಈ ವಿಷಯದಲ್ಲಿ ತೆರಿಗೆಯಲ್ಲಿ ಭಾರಿ ರಿಯಾಯಿತಿ ನೀಡಲಾಗಿದೆ. ಅಲ್ಲದೆ, ಈ ಒಪ್ಪಂದ ದೇಶವನ್ನು ಮಾರಿಕೊಂಡಂತೆ ಎಂದು ಪ್ರತಿಪಕ್ಷ ಹಾಗೂ ಕಾರ್ಮಿಕ ಸಂಘಟನೆಗಳು ಸರ್ಕಾರದ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿವೆ.

### ಮುಖ್ಯ ಅಂಶಗಳು

- ಶ್ರೀಲಂಕಾ ಬಂದರನ್ನು 99 ವರ್ಷಗಳ ಭೋಗ್ಯಕ್ಕೆ ಚೀನಾಗೆ ಹಸ್ತಾಂತರಿಸಿದೆ. ಬಂದರು ಮತ್ತು ಅದರ ಸುತ್ತಲೂ ಇರುವ ಆರ್ಥಿಕ ವಲಯವನ್ನು ಚೀನಾದ ಹಂಬಂತೋಟ ಇಂಟರ್‌ನ್ಯಾಷನಲ್ ಪೋರ್ಟ್ ಗ್ರೂಪ್ (HIPG) ಮತ್ತು ಹಂಬಂತೋಟ ಇಂಟರ್‌ನ್ಯಾಷನಲ್ ಪೋರ್ಟ್ ಸರ್ವೀಸಸ್ (HIPS) ಕಂಪನಿಗಳು ನಿರ್ವಹಿಸಲಿವೆ.

- ಈ ಕಂಪನಿಗಳ ಉಸ್ತುವಾರಿಯನ್ನು ಶ್ರೀಲಂಕಾ ಪೋರ್ಟ್ ಅಥಾರಿಟಿ ಮತ್ತು ಚೀನಾ ಮರ್ಚೆಂಟ್ಸ್ ಪೋರ್ಟ್ ಹೋಲ್ಡಿಂಗ್ಸ್ ಕಂಪನಿ ಜಂಟಿಯಾಗಿ ನೋಡಿಕೊಳ್ಳಲಿವೆ.

- ಈ ವರ್ಷದ ಏಪ್ರಿಲ್ ತಿಂಗಳಿನಲ್ಲಿ ಚೀನಾಗೆ ಭೇಟಿ ನೀಡಿದ್ದ ಶೀಲಂಕಾ ಪ್ರಧಾನಿ ರನಿಲ್ ವಿಕ್ರಮಸಿಂಘೆ ಅವರು ಹಂಬಂತೋಟ ಬಂದರನ್ನು ಚೀನಾಗೆ ಹಸ್ತಾಂತರಿಸುವ ಸಂಬಂಧ ಒಪ್ಪಂದಕ್ಕೆ ಸಹಿ ಹಾಕಿದ್ದರು.
- ಆ ನಂತರ ಶ್ರೀಲಂಕಾ ಸರ್ಕಾರ ಜುಲೈ ತಿಂಗಳಿನಲ್ಲಿ ಹಂಬಂತೋಟ ಬಂದರಿನ ಶೇ. 70 ಷೇರುಗಳನ್ನು ಚೀನಾಗೆ ಮಾರಾಟ ಮಾಡಲು 1.1 ಬಿಲಿಯನ್ ಅಮೆರಿಕನ್ ಡಾಲರ್ ಒಪ್ಪಂದಕ್ಕೆ ಸಹಿ ಹಾಕಿತ್ತು. ಇದರನ್ವಯ ಚೀನಾ ಮೊದಲ ಕಂತಿನಲ್ಲಿ 300 ಮಿಲಿಯನ್ ಅಮೆರಿಕನ್ ಡಾಲರ್ ಅನ್ನು ಶ್ರೀಲಂಕಾಗೆ ಪಾವತಿಸಿತ್ತು.

- ಶ್ರೀಲಂಕಾದ ಈ ನಿರ್ಣಯದಿಂದಾಗಿ ಭಾರತದ ಭದ್ರತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ. ಚೀನಾ ಈಗಾಗಲೇ ಪಾಕಿಸ್ತಾನದಲ್ಲಿ ಬಂದರನ್ನು ಹೊಂದಿದ್ದು, ಭಾರತದ ಸುತ್ತಲೂ ವಿವಿಧ ರಾಷ್ಟ್ರಗಳಲ್ಲಿ ಬಂದರನ್ನು ಹೊಂದುವ ಯೋಜನೆಯನ್ನು ಹಂತ ಹಂತವಾಗಿ ಜಾರಿಗೆ ತರುತ್ತಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 30. ತಾಂತ್ರಿಕ ಶಿಕ್ಷಣ ಕೋರ್ಸ್ ಶುಲ್ಕಕ್ಕೆ ಕನಿಷ್ಠ-ಗರಿಷ್ಠ ಮಿತಿಗೆ ಎಐಸಿಟಿಇ ಚಾಲನೆ

### ಪ್ರಮುಖ ಸುದ್ದಿ

- ತಾಂತ್ರಿಕ ಶಿಕ್ಷಣ ಕೋರ್ಸ್‌ಗಳಿಗೆ ಕನಿಷ್ಠ ಮತ್ತು ಗರಿಷ್ಠ ಶುಲ್ಕ ನಿಗದಿ ಮಾಡುವ ಪ್ರಕ್ರಿಯೆಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (ಎಐಸಿಟಿಇ) ಚಾಲನೆ ನೀಡಿದೆ.

- ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಕೃಷ್ಣ ಅವರ ನೇತೃತ್ವದ ಸಮಿತಿಗೆ ಈ ಹೊಣೆಯನ್ನು ವಹಿಸಲಾಗಿದೆ.

ಪ್ರಮುಖ ಸಂಗತಿಗಳು

- ಎಂಜಿನಿಯರಿಂಗ್, ಕೃಷಿ, ಮಾಹಿತಿ ತಂತ್ರಜ್ಞಾನ, ಆಡಳಿತ ನಿರ್ವಹಣೆ, ಔಷಧ ಶಾಸ್ತ್ರ ಮತ್ತು ನರ್ಸಿಂಗ್ ಕೋರ್ಸ್‌ಗಳ ಶುಲ್ಕಕ್ಕೆ ಗರಿಷ್ಠ ಮಿತಿ ನಿಗದಿ ಮಾಡಲು ಹತ್ತು ಸದಸ್ಯರ ಸಮಿತಿಯನ್ನು ರಚಿಸಲಾಗಿತ್ತು. ಎರಡು ವರ್ಷ ಹಿಂದೆ ಈ ಸಮಿತಿ ವರದಿ ಸಲ್ಲಿಸಿತ್ತು. ಆ ಸಮಿತಿಗೂ ಕೃಷ್ಣ ಅವರೇ ಮುಖ್ಯಸ್ಥರಾಗಿದ್ದರು.

- 'ಮೊದಲನೆಯ ಸಮಿತಿಯು ಗರಿಷ್ಠ ಶುಲ್ಕ ಮಿತಿಯನ್ನು ಮಾತ್ರ ನಿಗದಿ ಮಾಡಿತ್ತು. ಗರಿಷ್ಠ ಮಿತಿಯ ಜತೆಗೆ ದೇಶದಾದ್ಯಂತ ಏಕರೂಪದ ಕನಿಷ್ಠ ಶುಲ್ಕ ಮಿತಿಯೂ ಇರಬೇಕು ಎಂದು ತಾಂತ್ರಿಕ ಕಾಲೇಜುಗಳು ಒತ್ತಾಯಿಸಿದ್ದರಿಂದ ಸಮಿತಿ ರಚಿಸಲಾಗಿದೆ' ಎಂದು ಮೂಲಗಳು ಹೇಳಿವೆ.

- ಶುಲ್ಕದ ಕನಿಷ್ಠ ಮಿತಿಗೆ ಸಂಬಂಧಿಸಿ ಎಐಸಿಟಿಇಯ ಸ್ಪಷ್ಟ ನಿಯಮ ಇಲ್ಲದ ಕಾರಣ ಕೆಲವು ರಾಜ್ಯ ಸರ್ಕಾರಗಳು ತಮ್ಮದೇ ಆದ ಮಿತಿಯನ್ನು ಹೇರಿವೆ. ಇದನ್ನು ಪಾಲಿಸುವುದು ಸಂಸ್ಥೆಗಳಿಗೆ ಕಷ್ಟವಾದ ಕಾರಣ ಶುಲ್ಕದ ಕನಿಷ್ಠ ಮಿತಿಯನ್ನು ಶಿಫಾರಸು ಮಾಡುವ ಹೊಣೆಯನ್ನು ಸಮಿತಿಗೆ ವಹಿಸಲಾಗಿದೆ.

- ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಲಾಭಖೋರತನವನ್ನು ತಡೆಯುವು ದಕ್ಕಾಗಿ ಟಿಎಂಎ ಪೈ ಪ್ರತಿಷ್ಠಾನ ಪ್ರಕರಣ ದಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನಗ ಳನ್ನು ನೀಡಿದೆ. ಅದರ ಪ್ರಕಾರ ಕೃಷ್ಣ ಸಮಿತಿಯನ್ನು ರಚಿಸಲಾಗಿದೆ.

- ತಾಂತ್ರಿಕ ಶಿಕ್ಷಣದಲ್ಲಿ ಉತ್ಕೃಷ್ಟತೆ ಸಾಧಿಸಲು ಬಯಸುವ ಸಂಸ್ಥೆಗಳಿಗೆ ಹೆಚ್ಚಿನ ಶುಲ್ಕ ವಿಧಿಸಲು ಅವಕಾಶ ಇರಬೇಕು ಎಂದು ಹಿಂದಿನ ವರದಿಯಲ್ಲಿ ಹೇಳಲಾಗಿತ್ತು. ನಿಗದಿಪಡಿಸಲಾದ ಕನಿಷ್ಠ ಮಾನದಂಡಗಳಿಗಿಂತ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಸಂಸ್ಥೆಗಳಿಗೆ ಶುಲ್ಕ ಏರಿಕೆಗೆ ಅವಕಾಶ ನೀಡಬೇಕು ಎಂದು ಆ ವರದಿಯಲ್ಲಿ ಇತ್ತು.

- ಮೂರನೇ ಎರಡಷ್ಟು ಕೋರ್ಸ್‌ಗಳಿಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಮಾನ್ಯತೆ ಪಡೆದ ಸಂಸ್ಥೆಗಳು ನಿಗದಿತ ಮಿತಿಗಿಂತ ಶೇ 20ರಷ್ಟು ಹೆಚ್ಚು ಟ್ಯೂಷನ್ ಶುಲ್ಕ ವಿಧಿಸಬಹುದು. ಹಾಗೆಯೇ, ಸ್ವಾಯತ್ತ ಸ್ಥಾನ ಹೊಂದಿರುವ ಸಂಸ್ಥೆಗಳು ಶೇ 10ರಷ್ಟು ಹೆಚ್ಚುವರಿ ಶುಲ್ಕ ವಿಧಿಸುವುದಕ್ಕೂ ಅವಕಾಶ ನೀಡಲಾಗಿತ್ತು.

ಮುಖ್ಯಾಂಶಗಳು

- ಸಮಿತಿಯ ಶಿಫಾರಸು ಆಧರಿಸಿ ಪರಿಷ್ಕೃತ ಶುಲ್ಕ ಮಿತಿ ಪ್ರಕಟ
- ತಾಂತ್ರಿಕ ಕೋರ್ಸ್‌ಗಳನ್ನು ನಡೆಸುವ ಡೀಮ್ಡ್ ವಿ.ವಿಗಳಿಗೂ ಪರಿಷ್ಕೃತ ಮಿತಿ ಅನ್ವಯ
- 2015ರ ವರದಿಯಲ್ಲಿ ಟ್ಯೂಷನ್ ಮತ್ತು ಅಭಿವೃದ್ಧಿ ಶುಲ್ಕಗಳೆರಡಕ್ಕೂ ಮಿತಿ ಹೇರಲಾಗಿತ್ತು
- ಮೂರು ಹಂತಗಳ ನಗರಗಳಿಗೆ ಭಿನ್ನ ಶುಲ್ಕ ಮಿತಿ ನಿಗದಿ ಮಾಡಲಾಗಿತ್ತು

## 31. ಎಕ್ಸಿಟೋನಿಯಮ್ (Excitonium)

- ವಿಜ್ಞಾನಿಗಳು ಎಕ್ಸಿಟೋನಿಯಮ್ ಎಂಬ ಹೊಸ ರೂಪದ ಅಸ್ತಿತ್ವವನ್ನು ಸಾಬೀತುಪಡಿಸಿದ್ದಾರೆ,
- ಇದು ಸುಮಾರು 50 ವರ್ಷಗಳ ಹಿಂದಿನ ಮೊದಲ ಸಿದ್ಧಾಂತವಾಗಿದೆ.
- ವಸ್ತು ಗಳಲ್ಲಿ ಪ್ರಮುಖ ಇದು ಹಂತ ಗಳಿವೆ ಅವುಗಳೆಂದರೆ- ಘನ ದ್ರವ ಅನಿಲ, ಪ್ಲಾಸ್ಮಾ ಮತ್ತು ಬೋಸ್-ಐನ್ ಸ್ಟಿನ್ ಕಂಡೆನ್ಸೇಟ್ . ಎಕ್ಸಿಟೋನಿಯಮ್ ಒಂದು ಕಂಡೆನ್ಸೇಟ್.
- ಇದನ್ನು ಎಕ್ಸೈಟನ್ಸ್ ಎಂದು ಕರೆಯಲ್ಪಡುವ ಕಣಗಳಿಂದ ಮಾಡಲ್ಪಟ್ಟಿದೆ.
- ಎಕ್ಸಿಟೋನಿಯಮ್ ಸೂಪರ್ ಕಂಡಕ್ಟರ್‌ನಂತಹ ವಿದ್ಯಮಾನಗಳನ್ನು ಪ್ರದರ್ಶಿಸುತ್ತದೆ.

## 32. ಟೈಮ್ ವರ್ಷದ ವ್ಯಕ್ತಿಯಾಗಿ "ಸೈಲೆನ್ಸ್ ಬ್ರೇಕರ್ಸ್"

- ದ ಸೈಲೆನ್ಸ್ ಬ್ರೇಕರ್ಸ್ ನಿಯತಕಾಲಿಕವನ್ನು 2017ನೇ ಸಾಲಿನ ಟೈಮ್ಸ್ ವರ್ಷದ ವ್ಯಕ್ತಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

- ಇದು ಪ್ರಸಕ್ತ ವರ್ಷದಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಕಿರುಕುಳದ ಬಗೆಗಳನ್ನು ಬಹಿರಂಗಗೊಳಿಸುವ, ಬಹುತೇಕ ಮಹಿಳೆಯನ್ನೇ ಒಳಗೊಂಡಿರುವ ಗುಂಪಾಗಿರುತ್ತದೆ, ಅಮೆರಿಕದಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿಗಳು ಎಸಗಿರುವ ಲೈಂಗಿಕ ದೌರ್ಜನ್ಯದ ಸ್ವರೂಪವನ್ನು ಇದು ಬಹಿರಂಗಗೊಳಿಸಿದೆ.

- ಟೈಮ್ ನಿಯತಕಾಲಿಕ ನೀಡುವ ವರ್ಷದ ವ್ಯಕ್ತಿ ಪ್ರಶಸ್ತಿಯು, ವಾರ್ಷಿಕವಾಗಿ ನೀಡುವ ಪ್ರಶಸ್ತಿಯಾಗಿದ್ದು, ಇದನ್ನು 1927ರಲ್ಲಿ ಆರಂಭಿಸಲಾಗಿದೆ. ಇದನ್ನು ಪ್ರತಿ ವರ್ಷದ ಡಿಸೆಂಬರ್ನಲ್ಲಿ ಘೋಷಿಸಲಾಗುತ್ತದೆ.
- ಆ ವರ್ಷದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಸುದ್ದಿಯ ಮೇಲೆ ಪರಿಣಾಮ ಬೀರಿದ ವ್ಯಕ್ತಿಗಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಒಳ್ಳೆಯ ಅಥವಾ ಕೆಟ್ಟ ಕಾರಣಕ್ಕೆ ಪ್ರಚಾರವಾಗುವ ವ್ಯಕ್ತಿಗಳು ಕೂಡಾ ಈ ಪ್ರಶಸ್ತಿಗೆ ಪರಿಗಣಿಸಲ್ಪಡುತ್ತಾರೆ.

## 33. ಹೊಮ್ಮೈ ವ್ಯಾರವಾಲಾ

- ಹೊಮ್ಮೈ ವ್ಯಾರವಾಲಾ ರವರು ಭಾರತದ ಮೊದಲ ಪತ್ರಿಕಾ ಛಾಯಾಗ್ರಾಹಕಿ .
- 1947ರಲ್ಲಿ ದೇಶ ಸ್ವಾತಂತ್ರ್ಯ ಗಳಿಸಿ ಕೆಂಪುಕೋಟೆಯ ಮೇಲೆ ಮೊದಲ ತ್ರಿವರ್ಣ ಧ್ವಜ ಹಾರಿದ ಕ್ಷಣ, ಮಹಾತ್ಮ ಗಾಂಧೀಜಿ ಗುಂಡೇಟಿಗೆ ಹತ್ಯೆಯಾಗಿ ರಕ್ತದ ಮಡುವಿನಲ್ಲಿ ಬಿದ್ದ ಗಳಿಗೆ, ಅಖಂಡ ಭಾರತ ಇಬ್ಭಾಗಿಸಿ ಪಾಕಿಸ್ತಾನ ರಚನೆಗಾಗಿ ಮುಖಂಡರು ನಡೆಸಿದ ಸಭೆಗಳು, ದಲೈಲಾಮಾ ಟಿಬೆಟ್ ಗಡಿ ದಾಟಿ ಭಾರತದ ನೆಲಕ್ಕೆ ಕಾಲಿಟ್ಟ ಕ್ಷಣಗಳನ್ನು ಛಾಯಾಚಿತ್ರಗಳ ಮೂಲಕ ಇತಿಹಾಸದ ಪುಟಗಳಲ್ಲಿ ದಾಖಲಿಸಿದ ಕೀರ್ತಿ ವ್ಯಾರವಾಲಾ ಅವರಿಗೆ ಸಲ್ಲುತ್ತದೆ.

- ಸ್ವತಂತ್ರ ಪೂರ್ವದಲ್ಲಿ ಪುರಷರ ವೃತ್ತಿಯೆಂದೆ ಭಾವಿಸಿದ್ದ ಛಾಯಾಗ್ರಹಣ ಕಲೆ ಕರಗತ ಮಾಡಿಕೊಂಡ ವ್ಯಾರವಾಲಾ ದೇಶದ ಐತಿಹಾಸಿಕ ಘಟನೆಗಳನ್ನು ಚಿತ್ರ ಇತಿಹಾಸದಲ್ಲಿ ಅಚ್ಚಳಿಯದಂತೆ ದಾಖಲಿಸಿದ್ದಾರೆ.

- ಹೊಮ್ಮೈ 1930ರಲ್ಲಿ 'ಇಲ್ಲಸ್ಟ್ರೇಟಡ್ ವೀಕ್ಲಿ ಆಫ್ ಇಂಡಿಯಾ' ನಿಯತಕಾಲಿಕೆಯಲ್ಲಿ ಕೆಲಸ ಆರಂಭಿಸಿ ಎರಡನೇ ಮಹಾಯುದ್ಧದ ಸಂದರ್ಭಗಳನ್ನು ಸೆರೆಹಿಡಿದಿದ್ದಾರೆ.

## 34. ಭಾರತದ ಡಿಎನ್ ಎ ಬೆರಳಚ್ಚು ಮುದ್ರಕ ಪಿತಾಮಹ ಲಾಲ್ ಜೀ ಸಿಂಗ್ ನಿಧನ

- ಖ್ಯಾತ ವಿಜ್ಞಾನಿ ಹಾಗೂ ಭಾರತದ ಡಿಎನ್ ಎ ಬೆರಳಚ್ಚು ಮುದ್ರಕ ಪಿತಾಮಹ ಲಾಲ್ ಜೀ ಸಿಂಗ್ ಮರಣ ಹೊಂದಿದ್ದಾರೆ.

- ಸಿಂಗ್ ಅವರು ಹೈದರಾಬಾದ್ ನ ಸೆಲ್ಯುಲರ್ ಮತ್ತು ಮಾಲಿಕ್ಯೂಲರ್ ಬಯಾಲಜಿ ಕೇಂದ್ರ (ಸಿಸಿಎಂಬಿ) ದ ಸಂಸ್ಥಾಪಕರು, ಹಾಗೂ ಇವರು ಅಂಡಮಾನ್ ನಿಕೋಬಾರ್ ನ ಬುಡಕಟ್ಟು ಜನರಿಗೆ ನೀಡಿದ್ದ ಸಹಾಯಕ್ಕಾಗಿ ಅಂತರಾಷ್ಟ್ರೀಯ ಮೆಚ್ಚುಗೆಗೆ ಪಾತ್ರರಾಗಿದ್ದರು.

- ಇವರು 1998 ಹಾಗೂ 2009.ರ ನಡುವೆ ಸಿಸಿಎಂಬಿ ಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

## 35. "ಸೇಫ್ ಸಿಟಿ ಕಣ್ಗಾವಲು" ಯೋಜನೆ

ಪ್ರಮುಖ ಸುದ್ದಿ

- ಬಿಹಾರ ರಾಜ್ಯದಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ ಮತ್ತು ಇತರ ಅಪರಾಧಗಳನ್ನು ನಿಗ್ರಹಿಸುವ ಉದ್ದೇಶದಿಂದ "ಸುರಕ್ಷಿತ ನಗರ ಕಣ್ಗಾವಲು" ಯೋಜನೆಯನ್ನು ಬಿಹಾರ ರಾಜ್ಯ ಸರ್ಕಾರ ಅನುಮೋದಿಸಿದೆ.

ಯೋಜನೆಯ ಬಗ್ಗೆ:

- ಈ ಯೋಜನೆಯ ಪ್ರಕಾರ ಎಲ್ಲಾ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುವುದು ಮತ್ತು ರಾಜ್ಯದ ಒಟ್ಟಾರೆ ಅಪರಾಧವನ್ನು ನಿಯಂತ್ರಿಸುವುದು.
- ಈ ಯೋಜನೆಯು ವಿಶೇಷವಾಗಿ ಮಹಿಳೆಯರ ಮೇಲೆ ನಡೆಯುವ ಕಿರುಕುಳ ಮತ್ತು ಮುಂತಾದ ಅಪರಾಧವನ್ನು ತಡೆಯಲು ಪ್ರಾರಂಭಿಸಲಾಗಿದೆ . ಇದು ದುಷ್ಕರ್ಮಿಗಳ ಜಾಡನ್ನು ಇರಿಸಿಕೊಳ್ಳುವಲ್ಲಿ ಸಹಾಯ ಮಾಡುತ್ತದೆ.

- ಬಿಹಾರ ರಾಜಧಾನಿ ಪಾಟ್ನಾದಿಂದ ಈ ಯೋಜನೆಯನ್ನು ಹಂತ- ಹಂತವಾಗಿ ಪ್ರಾರಂಭಿಸಲಾಗುತ್ತದೆ.
- ಈ ಯೋಜನೆಯ ಅನುಷ್ಠಾನಕ್ಕಾಗಿ ಬಿಹಾರದ ಗೃಹ ಇಲಾಖೆ ನೋಡಲ್ ಸಂಸ್ಥೆಯಾಗಿದೆ.

## 36. ಸೌದಿ ಅರೇಬಿಯಾದಲ್ಲಿ ಚಲನಚಿತ್ರ ಪ್ರದರ್ಶನಗಳ ಮೇಲಿದ್ದ ನಿಷೇಧ ತೆರವು

### ಪ್ರಮುಖ ಸುದ್ದಿ

- ದೊರೆ ಸಲ್ಮಾನ್ ಬಿನ್ ಅಬ್ದುಲಾಝಿಜ್ ಅಲ್ ಸೌದ್ ಅವರ ಸಾಮಾಜಿಕ ಸುಧಾರಣೆಗಳ ಪರಿಣಾಮ 2018ರಿಂದ ಸೌದಿ ಅರೇಬಿಯಾದಲ್ಲಿ ವಾಣಿಜ್ಯ ಚಲನಚಿತ್ರಗಳು ತೆರೆ ಕಾಣಲಿವೆ.
- ದೊರೆಯ ನಿರ್ದೇಶನದ ಮೇರೆಗೆ ಸಂಸ್ಕೃತಿ ಮತ್ತು ಮಾಹಿತಿ ಸಚಿವಾಲಯವು ವಾಣಿಜ್ಯ ಚಿತ್ರಗಳ ಪ್ರದರ್ಶನಕ್ಕೆ 35 ವರ್ಷಗಳಿಂದ ಜಾರಿಯಲ್ಲಿದ್ದ ನಿಷೇಧವನ್ನು ತೆರೆವುಗೊಳಿಸುವ ನಿರ್ಣಯ ಕೈಗೊಂಡಿದ್ದು, ಮಾಧ್ಯಮಗಳು ಇದೊಂದು ಐತಿಹಾಸಿಕ ನಿರ್ಧಾರ ಎಂದು ಬಣ್ಣಿಸಿವೆ.

### ಪ್ರಮುಖ ಅಂಶಗಳು

- ತೈಲ ಸಂಪತ್ತನ್ನೊಂದೇ ಅವಲಂಬಿಸುವ ಬದಲು ಇತರೆ ಆರ್ಥಿಕ ಸಂಪನ್ಮೂಲಗಳ ಮೂಲಕ ದೇಶದ ಅಭಿವೃದ್ಧಿಯ ಕನಸು ಕಾಣುತ್ತಿರುವ ದೊರೆ ಸಲ್ಮಾನ್ ಅವರ ಸೂಚನೆ ಮೇರೆಗೆ ಸಿನಿಮಾ ಪ್ರದರ್ಶನಕ್ಕಿದ್ದ ನಿಷೇಧ ತೆರವು ನಿರ್ಣಯ ಕೈಗೊಳ್ಳಲಾಗಿದೆ.
- ಕಡು ಸಂಪ್ರದಾಯವಾದಿಗಳ ವಿರೋಧದ ಹೊರತಾಗಿಯೂ 'ವಿಷನ್ 2030' ಭಾಗವಾಗಿ ದೇಶಾದ್ಯಂತ ಸುಮಾರು 300 ಚಿತ್ರಮಂದಿರಗಳನ್ನು ಪುನರುಜ್ಜೀವನಗೊಳಿಸುವ ಉದ್ದೇಶ ಹೊಂದಲಾಗಿದೆ. ಬರುವ ಮಾರ್ಚ್‌ನಲ್ಲಿ ಥೇಟರ್‌ಗಳು ಕಾರ್ಯಾರಂಭ ಮಾಡಲಿವೆ ಎಂದು ಸರಕಾರ ಹೇಳಿದೆ.

### ಏಕೆ ವಿರೋಧವಿತ್ತು?

- ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳಿಗೆ ಧಕ್ಕೆಯಾಗುತ್ತದೆ ಎಂಬ ಸಂಪ್ರದಾಯವಾದಿಗಳ ವಾದ ಮನ್ನಿಸಿ, 1980ರ ದಶಕದಲ್ಲಿ ಅಂದಿನ ಸೌದಿ ಆಡಳಿತ ಈ ದೇಶದಲ್ಲಿ ವಾಣಿಜ್ಯ ಚಿತ್ರಗಳ ಪ್ರದರ್ಶನಕ್ಕೆ ನಿಷೇಧ ಹೇರಿತ್ತು.

ನಮ್ಮ ಐಎಎಸ್ ಅಕಾಡೆಮಿ ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ IAS/KAS

- ಆದರೆ ಇಂದಿನ ಇಂಟರ್‌ನೆಟ್ ಯುಗದಲ್ಲಿ ಇಂತಹ ನಿಷೇಧಕ್ಕೆ ಅರ್ಥವೇ ಇರದ ಕಾರಣ ಇದನ್ನು ತೆರವುಗೊಳಿಸಿ ಪ್ರದರ್ಶನಕ್ಕೆ ಪರವಾನಗಿ ನೀಡಬೇಕು ಎಂಬ ಆಗ್ರಹಗಳು ಕೇಳಿಬಂದಿದ್ದವು. ಸೌದಿಯನ್ನು ಹೊಸ ರಾಷ್ಟ್ರವಾಗಿ ರೂಪಾಂತರಿಸುವ ಕನಸು ಕಾಣುತ್ತಿರುವ ದೊರೆ ಸಲ್ಮಾನ್ ಈ ಆಗ್ರಹ ಮನ್ನಿಸಿದ್ದರಿಂದ ನಿಷೇಧ ತೆರವು ನಿರ್ಧಾರ ಸಾಧ್ಯವಾಗಿದೆ.

## 37. ಲೆಗೆಟಮ್ ಸಮೃದ್ಧಿ ಸೂಚ್ಯಂಕ (Legatum Prosperity Index)

### ಪ್ರಮುಖ ಸುದ್ದಿ

- ಮೂಡೀಸ್ ಹಾಗೂ ವಿಶ್ವಸಂಸ್ಥೆ ಭಾರತದ ಆರ್ಥಿಕ ಅಭಿವೃದ್ಧಿ ಬಗ್ಗೆ ಧನಾತ್ಮಕ ವರದಿ ನೀಡಿದ ಬೆನ್ನಲ್ಲೇ ಇದೀಗ ಲೆಗೆಟಮ್ ಸಮೃದ್ಧಿ ಸೂಚ್ಯಂಕವೂ ಒಳ್ಳೆ ಅಭಿಪ್ರಾಯ ವ್ಯಕ್ತಪಡಿಸಿದೆ. ದೇಶದ ಸಮೃದ್ಧಿಗೆ ಸಂಬಂಧಿಸಿದಂತೆ ಚೀನಾ ಹಾಗೂ ಭಾರತದ ನಡುವಿನ ಅಂತರ ಕಡಿಮೆಯಾಗಿದ್ದು, 2016ರಿಂದೀಚೆಗೆ ನಾಲ್ಕು ಅಂಕ ಏರಿಕೆ ಕಂಡಿದೆ.

### ಪ್ರಮುಖ ಅಂಶಗಳು

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ನೋಟು ಅಮಾನ್ಯೀಕರಣ ಹಾಗೂ ಜಿಎಸ್‌ಟಿ ನೀತಿ ಅಳವಡಿಕೆಯೇ ಮುಂತಾದ ಕಠಿಣ ಸುಧಾರಣಾ ಕ್ರಮಗಳ ಹಿನ್ನೆಲೆಯಲ್ಲಿ ಭಾರತದ ಜಿಡಿಪಿಯಲ್ಲಿ ಅಲ್ಪ ಮಟ್ಟದ ಕುಸಿತ ಕಂಡ ಹಿನ್ನೆಲೆಯಲ್ಲಿ ಸಮೃದ್ಧಿ ಸೂಚ್ಯಂಕದಲ್ಲಿ ಏರಿಕೆಯಾಗಿರುವುದು ಮಹತ್ವದ ಸಂಗತಿ.
- ವ್ಯವಹಾರ ನಡೆಸುವ ವಾತಾವರಣ, ಆರ್ಥಿಕತೆಯ ಗುಣಮಟ್ಟ ಮತ್ತು ಆಡಳಿತ ವ್ಯವಸ್ಥೆಯ ಮೂಲಕ ಭಾರತವು ಚೀನಾದ ಸಮೃದ್ಧಿ ಸೂಚ್ಯಂಕಕ್ಕೆ ಮತ್ತಷ್ಟು ಹತ್ತಿರವಾಗಿದೆ ಎಂದು ಲೆಗಟನ್ ವರದಿ ತಿಳಿಸಿದೆ.
- 'ಶಾಸಕಾಂಗದ ಮೂಲಕ ಭಾರತವು ತನ್ನ ಆಡಳಿತವನ್ನು ಪ್ರಗತಿ ಹಂತಕ್ಕೆ ಕೊಂಡೊಯ್ಯುತ್ತಿರುವ ಬಗ್ಗೆ ಲೆಗೆಟಮ್ ಸಂಸ್ಥೆ ಶ್ಲಾಘಿಸಿದೆ. ಇದರಿಂದಲೇ ನ್ಯಾಯಾಂಗದಿಂದ ಎದುರಾದ ನಿರ್ಬಂಧನಾತ್ಮಕ ಸವಾಲನ್ನು ಎದುರಿಸುವಂಥ ಸಾಮರ್ಥ್ಯವನ್ನು ಭಾರತ ಹೆಚ್ಚಿಸಿಕೊಂಡಿದೆ.
- ಈ ಎಲ್ಲ ಬೆಳವಣಿಗೆಯಿಂದ ಭಾರತದ ವ್ಯವಹಾರ ಹೆಚ್ಚಾಗಿದ್ದು, ಆರ್ಥಿಕ ಅಭಿವೃದ್ಧಿಯಾಗಿದೆ. ಜತೆಗೆ ಬೌದ್ಧಿಕ ಆಸ್ತಿ ಹಕ್ಕು ಹಾಗೂ ಬ್ಯಾಂಕ್ ಖಾತೆ ಹೊಂದಿರುವವರ ಸಂಖ್ಯೆಯೂ ಹೆಚ್ಚಾಗಿದೆ,' ಎಂದೂ ಸೂಚ್ಯಂಕ ವರದಿ ತಿಳಿಸಿದೆ.

- ವ್ಯವಹಾರಿಕ ವಲಯ, ಆಡಳಿತ, ಶಿಕ್ಷಣ, ಆರೋಗ್ಯ, ಸುರಕ್ಷತೆ ಮತ್ತು ಭದ್ರತೆ, ವೈಯಕ್ತಿಕ ಸ್ವಾತಂತ್ರ್ಯ, ಸಾಮಾಜಿಕ ಬಂಡವಾಳ ಮತ್ತು ಪರಿಸರ ಮುಂತಾದ ಕ್ಷೇತ್ರಗಳ ಅಭಿವೃದ್ಧಿ ಬಗ್ಗೆಯೂ ಲೆಗೆಟಮ್ ಸಮೀಕ್ಷೆ ನಡೆಸಿದೆ.
- ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್, ಟಫ್ಟ್ಸ್ ವಿಶ್ವವಿದ್ಯಾಲಯ, ಮತ್ತು ಕ್ಯಾಲಿಫೋರ್ನಿಯಾ ವಿವಿಯಂಥ ಪ್ರತಿಷ್ಠಿತ ಸಂಸ್ಥೆಗಳ ವಿವಿಧ ವಿಷಯ ತಜ್ಞರು ಈ ಅಧ್ಯಯನದಲ್ಲಿ ಪಾಲ್ಗೊಂಡಿದ್ದರು.

- 2017ರಲ್ಲಿ ಲೆಗೆಟಮ್ ಸಮೃದ್ಧಿ ಸೂಚ್ಯಂಕ 149 ದೇಶಗಳ 104 ವಿಷಯಗಳನ್ನು ಮೂಲವಾಗಿಟ್ಟುಕೊಂಡು, ಅಧ್ಯಯನ ನಡೆಸಿದ್ದು, ಆರ್ಥಿಕ ಗುಣಮಟ್ಟ ಮತ್ತು ಶೈಕ್ಷಣಿಕವಾಗಿಯೂ ಭಾರತ ಪ್ರಗತಿ ಪಥದಲ್ಲಿರುವುದು ಕಂಡು ಬಂದಿದೆ. ಭಾರತೀಯರು ತಮ್ಮ ಜೀವನ ಗುಣಮಟ್ಟ ಮತ್ತು ಕೌಟುಂಬಿಕ ಆದಾಯದ ಬಗ್ಗೆ ತೃಪ್ತರಾಗಿದ್ದರೆಂದು, ವರದಿ ಹೇಳಿದೆ.
- ಭಾರತದ ಅಭಿವೃದ್ಧಿ ಪಥದಲ್ಲಿ ಮೇಲೇರಿದ್ದರೆ, ಚೀನಾ ಈ ಸೂಚ್ಯಂಕದಲ್ಲಿ ಕೆಳಗಿಳಿದಿದ್ದು, ಜನರು ವ್ಯವಹರಿಸಲು ಹಲವು ತೊಡಕುಗಳನ್ನು ಎದುರಿಸಬೇಕಾಗಿದ್ದು, ದೇಶದಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸುವವರ ಸಂಖ್ಯೆಯೂ ಕುಸಿದಿದೆ, ಎಂದಿದೆ ವರದಿ.

ನಮ್ಮ ಐಎಎಸ್ ಅಕಾಡೆಮಿ

- ಒಟ್ಟಾರೆಯಾಗಿ ವಿಶ್ವದ ಸಮೃದ್ಧಿ ಸೂಚ್ಯಂಕ ಏರಿದ್ದು, ಇಸ್ಲಾಮಿಕ್ ದೇಶಗಳ ವಿರುದ್ಧ ಯುದ್ಧ, ಭಯೋತ್ಪಾದನೆ, ಪಶ್ಚಿಮ ಏಷ್ಯಾ ಮತ್ತು ಉತ್ತರ ಆಫ್ರಿಕಾದಿಂದ ಜನರ ಸ್ಥಳಾಂತರ ಮುಂತಾದ ಸಮಸ್ಯೆಗಳ ನಡುವೆಯೂ ಕಳೆದ ದಶಕಕ್ಕೆ ಹೋಲಿಸಿದ್ದಲ್ಲಿ ಈ ದಶಕದಲ್ಲಿ ಸಮೃದ್ಧಿ ಸೂಚ್ಯಂಕ ಅತ್ಯುತ್ತಮವಾಗಿದೆ.
- 2007ಕ್ಕೆ ಹೋಲಿಸಿದಲ್ಲಿ ಈ ಸೂಚ್ಯಂಕ ಶೇ.2.6ರಷ್ಟು ಹೆಚ್ಚಾಗಿದೆ. ವಿಶ್ವದ ಮತ್ಯಾವ ಭಾಗದಲ್ಲಿಯೂ ಏಷ್ಯಾ ಪೆಸಿಫಿಕ್‌ನಷ್ಟು ಪ್ರಗತಿ ತ್ವರಿತವಾಗಿಲ್ಲ. ಭಾರತ ಮತ್ತು ಚೀನಾ ಏಷ್ಯಾ ಪೆಸಿಫಿಕ್ ಪ್ರಾಂತ್ಯಕ್ಕೆ ಸೇರಲ್ಪಟ್ಟಿದ್ದು, ವ್ಯವಹಾರ ಪ್ರಗತಿ ಸಾಧಿಸಿದ್ದರೆ, ಪರಿಸರ ಸಂರಕ್ಷಣೆಯಲ್ಲಿ ಈ ದೇಶಗಳು ಹಿಂದೆ ಉಳಿದಿವೆ.

## 38. ಏಕಕಾಲಕ್ಕೆ 2 ಕ್ಷೇತ್ರದಿಂದ ಸ್ಪರ್ಧೆಗೆ ತಡೆ-ಕೇಂದ್ರ ಚುನಾವಣಾ ಆಯೋಗ ಸ್ಪಷ್ಟನೆ

### ಪ್ರಮುಖ ಸುದ್ದಿ

- ತಾತ್ವಿಕವಾಗಿ ಯೋಚಿಸುವುದಾದರೆ ಲೋಕಸಭೆ ಇಲ್ಲವೇ ವಿಧಾನಸಭೆ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಗೆ ಸ್ಪರ್ಧಿಸಲು ಬರುವುದಿಲ್ಲ ಎಂದು ಕೇಂದ್ರ ಚುನಾವಣಾ ಆಯೋಗ ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

### ಪ್ರಮುಖ ಸಂಗತಿಗಳು

- ಒಬ್ಬ ಅಭ್ಯರ್ಥಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಗೆ ಸ್ಪರ್ಧಿಸುವುದಕ್ಕೆ ನಿಷೇಧ ಹೇರುವಂತೆ ಕೇಂದ್ರ ಹಾಗೂ ಆಯೋಗಕ್ಕೆ ಸೂಚನೆ ನೀಡಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಗೆ ಸಂಬಂಧಿಸಿದಂತೆ ಚು.ಆಯೋಗ ಕೋರ್ಟ್‌ಗೆ ತನ್ನ ನಿಲುವನ್ನು ಪ್ರಮಾಣಪತ್ರದಲ್ಲಿ ಸ್ಪಷ್ಟಪಡಿಸಿದೆ.

- ಆದರೆ ಈ ಅರ್ಜಿಯ ವಿಚಾರಣೆ ಕೈಗೊಂಡ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ನ್ಯಾಯಪೀಠವು, ಈ ಬಗ್ಗೆ ಅಟಾರ್ನಿ ಜನರಲ್ ಅವರ ಅಭಿಪ್ರಾಯ ಕೋರಿದ್ದು, ಮನವಿಯ ಪತ್ರಿಗಳನ್ನು ಚುನಾವಣಾ ಆಯೋಗ ಹಾಗೂ ಅಟಾರ್ನಿ ಜನರಲ್‌ಗೆ ಸಲ್ಲಿಸುವಂತೆ ಅರ್ಜಿದಾರರಿಗೆ ಸೂಚಿಸಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### 1951ರ ಜನಪ್ರಾತಿನಿಧ್ಯ ಕಾಯಿದೆ (1951 Representation of People's Act (RPA))

- 1951ರ ಜನಪ್ರಾತಿನಿಧ್ಯ ಕಾಯಿದೆಯು ಅಭ್ಯರ್ಥಿಗೆ ಸಾರ್ವತ್ರಿಕ ಚುನಾವಣೆ ಅಥವಾ ಉಪಚುನಾವಣೆ ಅಥವಾ ದ್ವೈವಾರ್ಷಿಕ ಚುನಾವಣೆಯಲ್ಲಿ ಗರಿಷ್ಠ 2 ಕ್ಷೇತ್ರಗಳಿಂದ ಸ್ಪರ್ಧಿಸಲು ಅವಕಾಶ ಕಲ್ಪಿಸಿದೆ. ಆದರೆ, ಸಾಮಾನ್ಯವಾಗಿ ಎರಡೂ ಕ್ಷೇತ್ರಗಳಲ್ಲಿ ಗೆದ್ದ ಅಭ್ಯರ್ಥಿಗಳು ಒಂದು ಕ್ಷೇತ್ರವನ್ನು ಮಾತ್ರ ಉಳಿಸಿಕೊಂಡು, ಮತ್ತೊಂದಕ್ಕೆ ರಾಜೀನಾಮೆ ನೀಡುತ್ತಾರೆ.

- 1996ರ ಚುನಾವಣಾ ಕಾಯಿದೆಗೆ ತಂದ ತಿದ್ದುಪಡಿಗೆ ಮುನ್ನ ಅಭ್ಯರ್ಥಿಗಳ ಸ್ಪರ್ಧಿಸುವ ಕ್ಷೇತ್ರಗಳ ಸಂಖ್ಯೆಗೆ ನಿರ್ಬಂಧ ಇರಲಿಲ್ಲ.

- ಚುನಾವಣಾ ಆಯೋಗ ತಂದಿರುವ ಚುನಾವಣಾ ಸುಧಾರಣೆಗಳ ಪ್ರಸ್ತಾವನೆಗಳನ್ನು ಈ ತಿಂಗಳ ಆರಂಭದಲ್ಲಿ ಬಿಡುಗಡೆ ಮಾಡಿದ್ದು, ಚುನಾವಣಾ ಕಾಯಿದೆಯ ಸೆಕ್ಷನ್ 33(7)ಕ್ಕೆ ತಿದ್ದುಪಡಿ ತರುವಂತೆ ಕಾನೂನು ಸಚಿವಾಲಯಕ್ಕೆ ಸೂಚಿಸಿದೆ.

- ಚುನಾವಣಾ ಆಯೋಗ 2004ರಲ್ಲಿ ಕೇಂದ್ರ ಸರಕಾರಕ್ಕೆ ಕಳಿಸಿರುವ ತಿದ್ದುಪಡಿ ಪ್ರಸ್ತಾವನೆಯ ಪ್ರಕಾರ, ಒಂದಕ್ಕಿಂತ ಹೆಚ್ಚಿನ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಸ್ಪರ್ಧಿಸುವುದನ್ನು ನಿಷೇಧಿಸದಿದ್ದರೆ, ಗೆದ್ದ ಅಭ್ಯರ್ಥಿ ರಾಜೀನಾಮೆ ನೀಡುವ ಕ್ಷೇತ್ರದಲ್ಲಿ ನಡೆಯುವ ಉಪಚುನಾವಣೆಯ ವೆಚ್ಚ ಭರಿಸಬೇಕು.

- ವಿಧಾನಸಭೆ ಮತ್ತು ಪರಿಷತ್ತಿನ ಚುನಾವಣೆಯಾದರೆ 5 ಲಕ್ಷ ರೂ. ಹಾಗೂ ಲೋಕಸಭಾ ಚುನಾವಣೆಯಾದರೆ 10 ರೂ. ವೆಚ್ಚ ಭರಿಸಬೇಕು ಎಂದು ಆಯೋಗ ಪ್ರಸ್ತಾಪಿಸಿತ್ತು.

- 2 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಒಂದು ಸ್ಥಾನಕ್ಕೆ ರಾಜೀನಾಮೆ ನೀಡಿದಾಗ ನಡೆಯುವ ಉಪಚುನಾವಣೆಯಿಂದಾಗಿ ಸರಕಾರದ ಬೊಕ್ಕಸಕ್ಕೆ ಹಣಕಾಸಿನ ಹೊರೆ ಆಗುವ ಜತೆಗೆ, ಮಾನವ ಮತ್ತು ಇತರೆ ಸಂಪನ್ಮೂಲವೂ ವ್ಯರ್ಥವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ನೆಚ್ಚಿನ ಅಭ್ಯರ್ಥಿಗೆ ಮತ ಹಾಕುವ ಮತದಾರನಿಗೂ ಅನ್ಯಾಯ ಮಾಡಿದಂತಾಗುತ್ತದೆ ಎಂದು ಆಯೋಗ, ತನ್ನ ಪ್ರಸ್ತಾವನೆಯಲ್ಲಿ ತಿಳಿಸಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 39. ಆಸಿಯಾನ್ ಇಂಡಿಯಾ ಸಂಪರ್ಕ ಶೃಂಗಸಭೆ (ASEAN-India Connectivity Summit (AICS))

### ಪ್ರಮುಖ ಸುದ್ದಿ

➢ ಆಸಿಯಾನ್ ಇಂಡಿಯಾ ಸಂಪರ್ಕ ಶೃಂಗಸಭೆ ನವದೆಹಲಿಯಲ್ಲಿ ಇಂದಿನಿಂದ ಆರಂಭವಾಗಲಿದೆ. 21ನೇ ಶತಮಾನದಲ್ಲಿ ಏಷ್ಯಾಗೆ ಡಿಜಿಟಲ್ ಶಕ್ತಿ ಮತ್ತು ಭೌತಿಕ ಸಂಪರ್ಕ ಕಲ್ಪಿಸುವುದು 2 ದಿನಗಳ ಈ ಶೃಂಗಸಭೆಯ ಧ್ಯೇಯವಾಗಿದೆ.

➢ ಸಂಪರ್ಕ ಸಾಧ್ಯತೆಗಳ ಉತ್ತೇಜನ, ಸುಸ್ಥಿರ ನೀತಿಯ ಶಿಫಾರಸ್ಸುಗಳು, ಆರ್ಥಿಕ ಅಭಿವೃದ್ಧಿಯ ಕಾರ್ಯತಂತ್ರ, ಆಸಿಯಾನ್ ಮತ್ತು ಭಾರತ ನಡುವೆ ಕೈಗಾರಿಕೆ ಹಾಗೂ ವ್ಯಾಪಾರ ಸಂಬಂಧಗಳು ಈ ಶೃಂಗಸಭೆಯ ಗುರಿಗಳಾಗಿವೆ.

**ಆಸಿಯಾನ್ ಒಕ್ಕೂಟ ವೈಶಿಷ್ಟ್ಯಗಳು (ಮುಖ್ಯ ಪರೀಕ್ಷೆಗಾಗಿ )**

➢ ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ (ಆಸಿಯಾನ್)ದ ಶೃಂಗ ಸಭೆ . ಆಗ್ನೇಯ ಏಷ್ಯಾದ 10 ಪುಟ್ಟ ರಾಷ್ಟ್ರಗಳು ಒಂದಾಗಿ ರಾಜಕೀಯ ಮತ್ತು ಆರ್ಥಿಕ ಅಭಿವೃದ್ಧಿ ನಿಟ್ಟಿನಲ್ಲಿ ಈ ಒಕ್ಕೂಟವನ್ನು ಸ್ಥಾಪಿಸಿಕೊಂಡಿದ್ದು, ವಿಶ್ವದ ಅತಿ ಪ್ರಬಲ ಒಕ್ಕೂಟಗಳಲ್ಲಿ ಒಂದು ಎಂಬ ಹೆಸರು ಗಳಿಸಿದೆ.

➢ ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ ಇದರ ಪೂರ್ಣ ಹೆಸರು. . ಆಗಸ್ಟ್ 8, 1967 ರಂದು ಥೈಲ್ಯಾಂಡ್ ನ ಬ್ಯಾಂಕಾಕ್ ನಲ್ಲಿ ಆಸಿಯಾನ್ ಘೋಷಣೆ (ಬ್ಯಾಂಕಾಕ್ ಘೋಷಣೆ)ಯಿಂದ ಸ್ಥಾಪನೆ ಮಾಡಲಾಯಿತು

➢ ಆ ವೇಳೆ ಇಂಡೋನೇಷ್ಯಾ, ಮಲೇಷ್ಯಾ, ಫಿಲಿಪಿನ್ಸ್, ಸಿಂಗಾಪುರ, ಥೈಲೆಂಡ್‌ಗಳು ಇದರ ಸದಸ್ಯ ರಾಷ್ಟ್ರಗಳಾಗಿದ್ದವು. ಬಳಿಕ ಸದಸ್ಯತ್ವವನ್ನು ವಿಸ್ತರಿಸಲಾಗಿದ್ದು, ಬ್ರೂನಿ, ಕಾಂಬೋಡಿಯಾ, ಲಾವೋಸ್, ಮ್ಯಾನ್ಮಾರ್, ವಿಯೆಟ್ನಾಂಗಳೂ ಇದರ ಸದಸ್ಯರಾಷ್ಟ್ರಗಳಾಗಿವೆ. ಈ ದೇಶಗಳ ರಾಜಕೀಯ, ಆರ್ಥಿಕ, ಸಾಮಾಜಿಕ ವಿಚಾರಗಳಿಗೆ ಈ ಒಕ್ಕೂಟ ಶ್ರಮಿಸುತ್ತದೆ.

➢ ಮಲೇಷ್ಯಾ ಸದ್ಯ ಆಸಿಯಾನ್ ಒಕ್ಕೂಟದ ಅಧ್ಯಕ್ಷ ರಾಷ್ಟ್ರವಾಗಿದೆ.

- **ಜನಸಂಖ್ಯೆ**: ಆಸಿಯಾನ್ ಒಕ್ಕೂಟ ಜಗತ್ತಿನ ಶೇ.9ರಷ್ಟು ಜನಸಂಖ್ಯೆಯ ಪ್ರತಿನಿಧಿಯಾಗಿದೆ. ಅಂದರೆ ಈ ಒಕ್ಕೂಟದ ರಾಷ್ಟ್ರಗಳಲ್ಲಿ ಸುಮಾರು 63 ಕೋಟಿ ಮಂದಿ ವಾಸಿಸುತ್ತಿದ್ದಾರೆ. ಯುರೋಪಿಯನ್ ಒಕ್ಕೂಟಕ್ಕಿಂತಲೂ ಇಲ್ಲಿ ಹೆಚ್ಚಿನ ಸಂಖ್ಯೆಯ ಜನರಿದ್ದಾರೆ. ಇಂಡೋನೇಷ್ಯಾ ಅತಿ ಹೆಚ್ಚು ಜನಸಂಖ್ಯೆಯಿರುವ ಆಸಿಯಾನ್ ಸದಸ್ಯ ರಾಷ್ಟ್ರವಾಗಿದೆ. ಇಲ್ಲಿ 24.6 ಕೋಟಿ ಜನರಿದ್ದಾರೆ. ಹಾಗೆಯೇ ಅತಿ ಕಡಿಮೆ ಜನಸಂಖ್ಯೆಯ ಆಸಿಯಾನ್ ಸದಸ್ಯ ರಾಷ್ಟ್ರ ಎಂದರೆ ಬ್ರೂನಿ ಇಲ್ಲಿ 4.12 ಲಕ್ಷ ಜನಸಂಖ್ಯೆಯಿದೆ.

- **ಸರ್ಕಾರಗಳು**-ಆಸಿಯಾನ್ ಒಕ್ಕೂಟ ದೇಶಗಳ ಸರ್ಕಾರಗಳೂ ಅಷ್ಟೇ ವಿಚಿತ್ರ. ಇಲ್ಲಿ ಪ್ರಜಾಪ್ರಭುತ್ವ ರಾಷ್ಟ್ರವಿದೆ. ರಾಜಾಡಳಿತವಿರುವ ದೇಶವಿದೆ. ಮಿಲಿಟರಿ ಆಡಳಿತದ, ಮಿಲಿಟರಿ ಆಡಳಿತ ಪ್ರಭಾವದ ಕಮ್ಯೂನಿಸ್ಟ್ ಆಡಳಿತವೂ ಇಲ್ಲಿದೆ.

- **ಧರ್ಮ**-ಆಸಿಯಾನ್ ರಾಷ್ಟ್ರಗಳು ಮೂಲ ನಿವಾಸಿ ಸಮುದಾಯಗಳು, ಬಹು ಭಾಷೆಯ, ವೈವಿಧ್ಯತೆಯ ಜನಾಂಗಗಳನ್ನು, ವಿವಿಧ ಧರ್ಮಗಳನ್ನು ಹೊಂಇದೆ. ಇಂಡೋನೇಷ್ಯಾದಲ್ಲಿ ಶೇ.90ರಷ್ಟು ಇಸ್ಲಾಂ ಧರ್ಮೀಯರಿದ್ದರೆ, ಫಿಲಿಫಿನ್ಸ್‌ನಲ್ಲಿ ಶೇ.80ಕ್ಕೂ ಹೆಚ್ಚು ರೋಮನ್ ಕ್ಯಾಥೋಲಿಕ್ ಸಮಯುದಾಯವಿದೆ. ಹಾಗೆಯೇ ಥೈಲೆಂಡ್‌ನಲ್ಲಿ ಶೇ.95ಕ್ಕೂ ಹೆಚ್ಚು ಬೌದ್ಧ ಧರ್ಮೀಯರು.

IAS/KAS
ನಮ್ಮ ಐಎಎಸ್ ಅಕಾಡೆಮಿ

- ಉಳಿದಂತೆ ಇಲ್ಲೆಲ್ಲ, ಹಿಂದೂಗಳು, ಸಿಖ್, ಟಾವೋಯಿಸಂ ಧರ್ಮೀಯರಿದ್ದಾರೆ. ಈ 10 ರಾಷ್ಟ್ರಗಳಲ್ಲಿ ಮಲೇಷ್ಯಾದಲ್ಲಿ ಬಹು ಸಂಸ್ಕೃತಿ ಇದೆ. ಇಲ್ಲಿ ಮಲಯ, ಚೀನೀ, ಭಾರತೀಯ, ಯುರೋಷ್ಯಾ, ಆದಿವಾಸಿ ಜನಾಂಗದ ಸಂಸ್ಕೃತಿಯಿದೆ.

- **ಸಮಯ ವಲಯ**-ಆಸಿಯಾನ್ ಒಕ್ಕೂಟದ ರಾಷ್ಟ್ರಗಳು ಒಟ್ಟು ನಾಲ್ಕು ಸಮಯವಲಯ (ಟೈಂ ಝೋನ್) ಹೊಂದಿದೆ. ನಾಲ್ಕು ಆಸಿಯಾನ್ ರಾಷ್ಟ್ರಗಳು ಗ್ರೀನ್‌ವಿಚ್ ಸಮಯಕ್ಕಿಂತ 7 ಗಂಟೆ ಮುಂದೆ ಇದ್ದರೆ, ಇಂಡೋನೇಷ್ಯಾ ಸೇರಿದಂತೆ ಪೂರ್ವ ರಾಷ್ಟ್ರಗಳ ಸಮಯ 8-9 ಗಂಟೆಗಳಷ್ಟು ಮುಂದಿದೆ. (ಭಾರತೀಯ ಸಮಯ ಇದಕ್ಕಿಂತ 3 ಗಂಟೆ ಹಿಂದೆ ಇದೆ) ಐದು ರಾಷ್ಟ್ರಗಳ ಸಮಯ 8 ಗಂಟೆಯಷ್ಟು ಮುಂದಿದೆ. ಅದೇ ಮ್ಯಾನ್ಮಾರ್ ಸಮಯ 7 ಗಂಟೆಯಷ್ಟು ಮುಂದಿದೆ. (ಭಾರತದ ಸಮಯ ಮ್ಯಾನ್ಮಾರ್ ಸಮಯಕ್ಕಿಂತ 1 ಗಂಟೆ 63 ನಿಮಿಷ ಹಿಂದಿದೆ)

- **ಆರ್ಥಿಕತೆ**-ಒಂದು ವೇಳೆ ಆಸಿಯಾನ್ ಒಕ್ಕೂಟ ಎಂಬುದು ಒಂದೇ ರಾಷ್ಟ್ರವಾಗಿದ್ದರೆ, ಅದರ ಆರ್ಥಿಕ ಸಾಮರ್ಥ್ಯ ಜಗತ್ತಿನಲ್ಲೇ 7 ನೇ ಅತಿ ದೊಡ್ಡ ಆರ್ಥಿಕತೆಯಾಗಿರುತ್ತಿತ್ತು. ಆಸಿಯಾನ್ ರಾಷ್ಟ್ರಗಳ ಒಟ್ಟು ಒಟ್ಟು ರಾಷ್ಟ್ರೀಯ ಉತ್ಪನ್ನದ ಪ್ರಮಾಣ 237 ಲಕ್ಷ ಕೋಟಿ ರೂ. ಆಗಿದೆ. ಇದು 2020ರ ವೇಳೆಗೆ ದುಪ್ಪಟ್ಟಾಗಲಿದೆ ಎಂದು ಹೇಳಲಾಗಿದೆ. ಅಲ್ಲದೇ 2050ರವೇಳೆಗೆ ಇಲ್ಲಿನ ಆರ್ಥಿಕತೆ ವಿಶ್ವದಲ್ಲೇ ಮೂರನೇ ಸ್ಥಾನವನ್ನು ಪಡೆಯಬಹುದು ಎಂದು ಊಹಿಸಲಾಗಿದೆ. ಇಡೀ ಆಸಿಯಾನ್ ರಾಷ್ಟ್ರಗಳಲ್ಲಿ ಇಂಡೋನೇಷ್ಯಾದ ಆರ್ಥಿಕತೆ ಬಹುಪಾಲನ್ನು ಹೊಂದಿದ್ದು ಶೇ.40ರಷ್ಟನ್ನು ಅಲ್ಲಿನದ್ದು. ಈ ರಾಷ್ಟ್ರಗಳಲ್ಲಿ ಮ್ಯಾನ್ಮಾರ್ ಕನಿಷ್ಠ ಆರ್ಥಿಕ ಪಾಲನ್ನು ಹೊಂದಿದೆ.

- **ಸಿಂಗಾಪುರ ಶ್ರೀಮಂತ**-ಆಸಿಯಾನ್ ರಾಷ್ಟ್ರಗಳಲ್ಲಿ ಸುಮಾರು ಬೆಂಗಳೂರಿನ ವಿಸ್ತೀರ್ಣದಷ್ಟೇ ಇರುವ ಸಿಂಗಾಪುರವೇ ಅತಿ ಶ್ರೀಮಂತ ದೇಶ. ವಿಶ್ವಮಟ್ಟದಲ್ಲೂ ಶ್ರೀಮಂತ ರಾಷ್ಟ್ರವಾಗಿ ಹೆಸರು ಪಡೆದಿದೆ. ಅಭಿವೃದ್ಧಿಯಲ್ಲೂ ಇದೇ ಮುಂದು. ಸಿಂಗಾಪುರ ಲಾವೋಸ್‌ಗಿಂತ 30 ಪಟ್ಟು ಹೆಚ್ಚು ಶ್ರೀಮಂತವಾಗಿದ್ದು, ಕಾಂಬೋಡಿಯಾ, ಮ್ಯಾನ್ಮಾರ್‌ಗಿಂತ 50 ಪಟ್ಟು ಶ್ರೀಮಂತವಾಗಿದೆ.

## 40. ಸಾರಂಗ್‌ಖೇಡಾದಲ್ಲಿ ದೇಶದ ಮೊದಲ ಹಾರ್ಸ್ ಮ್ಯೂಸಿಯಂ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಮುಖ ಸುದ್ದಿ

- ಏಷ್ಯಾದ ಅತ್ಯಂತ ಪುರಾತನ ಕುದುರೆ ಉತ್ಸವಗಳಲ್ಲಿ ಒಂದಾದ ಜಿಲ್ಲೆಯ ಸಾರಂಗ್‌ಖೇಡಾ ಗ್ರಾಮದ ಪ್ರಸಿದ್ಧ ಚೇತಕ್ ಉತ್ಸವಕ್ಕೆ  ಮಹಾ ರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನ ವೀಸ್ ಅವರು ಭೇಟಿ ನೀಡಿದರು. ಇದೇ ಸಂದರ್ಭಲ್ಲಿ ಸಾರಂಗ್‌ಖೇಡಾ ಗ್ರಾಮ ದಲ್ಲಿ ಪ್ರಸ್ತಾವಿತ ದೇಶದ ಮೊದಲ ಕುದು ರೆ ವಸ್ತುಸಂಗ್ರಹಾಲಯಕ್ಕೆ ಅವರು ಭೂ ಮಿ ಪೂಜೆ ನೆರವೇರಿಸಿದರು.

### ಪ್ರಮುಖ ಸಂಗತಿಗಳು

- ಸಾರಂ ಗ್ಖೇಡಾದಲ್ಲಿ ತಲೆ ಎತ್ತಲಿರುವ ಕುದುರೆ ವಸ್ತುಸಂಗ್ರಹಾಲಯವು ವಿಶ್ವ ಆಕರ್ಷ ಣೆಯ ಕೇಂದ್ರವಾಗಲಿದೆ. ಇದರೊಂದಿಗೆ ಪ್ರವಾಸೋದ್ಯಮ ದೃಷ್ಟಿಯಿಂದಲೂ ಸಾರಂಗ್ಖೇಡಾದ ಹೆಸರು ಜಾಗತಿಕ ನಕ್ಷೆಯಲ್ಲಿ ಸ್ಥಾನವನ್ನು ಪಡೆದುಕೊಳ್ಳಲಿದೆ .

- ಮಹಾಭಾರತ ಕಾಲದ ಕೆಲವು ಅವಶೇಷಗಳು ಈ ಕ್ಷೇತ್ರದಲ್ಲಿ ಕಾಣಲು ಸಿಕ್ಕಿವೆ. ಸಾರಂಗ್ಖೇಡಾದ ಕುದುರೆ ಮೇಳವು 300 ವರ್ಷ ಹಳೆಯ ಪರಂಪರೆಯನ್ನು ಹೊಂದಿದೆ. ಇಲ್ಲಿನ ಕುದುರೆ ವಸ್ತುಸಂಗ್ರಹಾಲಯವು ದೇಶದಲ್ಲೇ ಅತಿ ಸುಂದರ ವಸ್ತು ಸಂಗ್ರಹಾಲಯವಾಗಿ ಮೂಡಿಬರಲಿದೆ .

### ಚೇತಕ್ ಕುದುರೆ ಮೇಳದ ಬಗ್ಗೆ

- ಪ್ರತಿ ವರ್ಷ ಡಿಸೆಂಬರ್‌ನಲ್ಲಿ ನಡೆಯುವ ಸಾರಂಗ್ಖೇಡಾ ದ ಚೇತಕ್ ಕುದುರೆ ಮೇಳಕ್ಕೆ ದೇಶದಾದ್ಯಂತ ದೊಡ್ಡ -ದೊಡ್ಡ ಕುದುರೆ ವ್ಯಾಪಾರಿಗಳು ಆಗಮಿಸುತ್ತಾರೆ.
- ಈ ವಾರ್ಷಿಕ ಮೇಳದಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯಾಪಾರ ವಹಿವಾಟು ನಡೆಯುತ್ತದೆ.

### ಹಾರ್ಸ್ ಮ್ಯೂಸಿಯಂ ಬಗ್ಗೆ

- ದೇಶದ ಮೊದಲ ಹಾರ್ಸ್ ಮ್ಯೂಸಿಯಂ ನಂದುರ್ಬಾರ್ ಜಿಲ್ಲೆಯ ಸಾರಂಗ್ಖೇಡಾದಲ್ಲಿ ತಲೆ ಎತ್ತಲಿರುವ ಹಾರ್ಸ್ ಮ್ಯೂಸಿಯಂ (ಕುದುರೆ ವಸ್ತುಸಂಗ್ರಹಾಲಯ) ದೇಶದಲ್ಲಿ ಅಂತಹ ಮೊದಲ ಹಾಗೂ ವಿಶ್ವದಲ್ಲಿ ಮೂರನೇ ಮ್ಯೂಸಿಯಂ ಆಗಿರಲಿದೆ. ಇದರ ನಿರ್ಮಾಣ ಕಾರ್ಯ ಎರಡು ಹಂತಗಳಲ್ಲಿ ಪೂರ್ಣವಾಗಲಿದ್ದು, ಮೊದಲ ಹಂತದ ಅಡಿಯಲ್ಲಿ ಸದ್ಯಕ್ಕೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ

- ತಾಪಿ ನದಿಯ ತಟದಲ್ಲಿ ಸುಮಾರು 6.5 ಎಕರೆ ಜಮೀನಿ ನಲ್ಲಿ ಹಾರ್ಸ್ ಮ್ಯೂಸಿಯಂ ನಿರ್ಮಾಣವಾಗಲಿದ್ದು, ಅದು ಗುಮ್ಮಟಾಕಾರದಲ್ಲಿರಲಿದೆ. ಈ ಸಂಗ್ರಹಾಲಯದಲ್ಲಿ ದೇಶದಾದ್ಯಂತ ಕಾಣಸಿಗುವ ವಿವಿಧ ಜಾತಿಯ ಕುದುರೆಗಳ ಪ್ರತಿಕೃತಿಯನ್ನು ಇಡಲಾಗುವುದು.
- ಜೊತೆಗೆ ಕುದುರೆಗಳ ಇತಿಹಾಸ ಹಾಗೂ ದೇಶದ ಐತಿಹಾಸಿಕ ಪರಂಪರೆಯನ್ನು ಬಿಂಬಿಸುವ ವಸ್ತುಗಳನ್ನೂ ಅಲ್ಲಿ ಪ್ರದರ್ಶನಕ್ಕೆ ಇಡಲಾಗುವುದು. ಈ ಮ್ಯೂಸಿಯಂ ಆರ್ಟ್ ಗ್ಯಾಲರಿ, ಪ್ರದರ್ಶನ ಸ್ಥಳ, ಆಡಿಯೋ

ವಿಶುವಲ್ ರೂಮ್, ರಿಸೆಪ್ಶನ್ ಡೆಸ್ಕ್, ಫುಡ್ ಸ್ಟಾಲ್, ವೈಟಿಂಗ್ ರೂಂ ಹಾಗೂ ಇತರ ಮಳಿಗೆಗಳನ್ನು ಹೊಂದಿರಲಿದೆ.

- ಈ ಯೋಜನೆಯ ಅಡಿಯಲ್ಲಿ ಮ್ಯೂಸಿಯಂನ ಮುಖ್ಯ ದ್ವಾರ, ಪರಿಸರದ, ಉದ್ಯಾನ ಮತ್ತು ತಾಪಿ ನದಿಯ ತಟವನ್ನು ಆಕರ್ಷಣೀಯ ಹಾಗೂ ಸೌಂದರ್ಯೀಕರಣ ಮಾಡಲಾಗುವುದು

- ಮ್ಯೂಸಿಯಂ ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಸಾರಂಗ್‌ಖೇಡಾ ಗ್ರಾ ಮ ಪಂಚಾಯತ್‌ಗೆ ಅದರ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಲಾಗುವುದು. ಪ್ರ ವಾಸಿಗರ ಶುಲ್ಕ ದರವನ್ನು ಗ್ರಾಮ ಪಂಚಾ ಯತ್ ನಿರ್ಣಯಿಸಲಿದೆ. ಈ ಮ್ಯೂಸಿಯಂ ನಿಂದ ಸಾರಂಗ್‌ಖೇಡಾ ಕುದುರೆ ಮೇಳಕ್ಕೆ ಹೊಸ ಮೆರುಗು ಸಿಗಲಿದೆ.

## 41. ಭಾರತದ ದಿವಾಳಿತನ ಮತ್ತು ದಿವಾಳಿ ಘೋಷಣೆ ಮಂಡಳಿ (Insolvency and Bankruptcy Board of India (IBBI) )

### ಪ್ರಮುಖ ಸುದ್ದಿ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಸುಸ್ತಿದಾರರ ಸಾಲ ವಸೂಲಾತಿಗೆ ಬಿಗಿ ಕ್ರಮ ಕೈಗೊಳ್ಳುತ್ತಿರುವ ಭಾರತದ ದಿವಾಳಿತನ ಮತ್ತು ದಿವಾಳಿ ಘೋಷಣೆ ಮಂಡಳಿ(ಐಬಿಬಿಐ), ವೈಯಕ್ತಿಕ ಜಾಮೀನುದಾರರ ಆಸ್ತಿ ಮುಟ್ಟುಗೋಲು ಹಾಕಿ ಕೊಳ್ಳುವುದಕ್ಕೆ ಬ್ಯಾಂಕುಗಳಿಗೆ ಶೀಘ್ರವೇ ಅನು ಮತಿ ನೀಡಲಿದೆ.

### ಪ್ರಮುಖ ಅಂಶಗಳು

- ಕಾರ್ಪೊರೇಟ್ ವಲಯದ ಸುಸ್ತಿ ಸಾಲ ವಸೂಲಿಗೆ ಕಠಿಣ ಕ್ರಮಕ್ಕೆ ಮುಂದಾಗಿರುವ ಮಂಡಳಿ, ವೈಯಕ್ತಿಕ ಜಾಮೀನುದಾರರ ಆಸ್ತಿಯನ್ನು ಸುಸ್ತಿ ಸಾಲ ವಸೂಲಿಗೆ ಮುಟ್ಟುಗೋಲು ಹಾಕುವುದಕ್ಕೆ ಬ್ಯಾಂಕುಗಳಿಗೆ ಅವಕಾಶ ನೀಡುವ ತೀರ್ಮಾನ ಶೀಘ್ರವೇ ಕೈಗೊಳ್ಳಲಿದೆ.

- ತಿಂಗಳ ಅಂತ್ಯದಲ್ಲಿ ಅಧಿಸೂಚನೆ ಪ್ರಕಟವಾಗುವ ನಿರೀಕ್ಷೆ ಇದೆ. ಕಳೆದ ತಿಂಗಳು ಈ ಸಂಬಂಧದ ಕಾಯ್ದೆಗೆ ತಿದ್ದುಪಡಿ ತಂದಿರುವ ಸರ್ಕಾರ, ಉದ್ದೇಶ ಪೂರ್ವಕ ಸುಸ್ತಿದಾರರು ಹಾಗೂ ಸುಸ್ತಿದಾರರ ಪ್ರಮೋಟರ್‌ಗಳು ದಿವಾಳಿತನದ ಪ್ರಕ್ರಿಯೆ ಯಲ್ಲಿ ಪಾಲ್ಗೊಳ್ಳದಂತೆ ನಿಷೇಧ ಹೇರಿತ್ತು. ಇದನ್ನು ಪ್ರಶ್ನಿಸಿ ಪಂಜಾಬ್ ಮತ್ತು ಹರಿಯಾಣದ ಕಂಪನಿಯೊಂದು ಹೈಕೋರ್ಟ್‌ನಲ್ಲಿ ದಾವೆಯನ್ನು ದಾಖಲಿಸಿದೆ.

- ದಿವಾಳಿತನ ಮತ್ತು ದಿವಾಳಿ ಘೋಷಣೆ ನೀತಿ ಪ್ರಕಾರ ಅನೇಕ ದೂರುಗಳು ದಾಖಲಾಗಿವೆ. ದಿವಾಳಿತನ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಿರುವ ದಿವಾಳಿ ಕಂಪನಿಗಳ ಕುರಿತೂ ದೂರುಗಳು ಹೆಚ್ಚಾಗಿವೆ. ಹೀಗಾಗಿಯೇ ದಿವಾಳಿ ಘೋಷಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಕುರಿತ ನಿಯಮ ಬಿಗಿಗೊಳಿಸಲು ಐಬಿಬಿಐ ಮುಂದಾಗಿದ್ದು, ಅದನ್ನು ಹಂತ ಹಂತವಾಗಿ ಜಾರಿಗೊಳಿಸುತ್ತಿದೆ. ಇದರಂತೆ, ಯಾವುದೇ ವೃತ್ತಿಪರ ದಿವಾಳಿತನ ಏಜೆನ್ಸಿ, ದಿವಾಳಿತನ ವೃತ್ತಿಪರ, ದಿವಾಳಿತನ ಸಂಸ್ಥೆ ವಿರುದ್ಧ ದೂರು ದಾಖಲಿಸಬಹುದಾಗಿದೆ ಮತ್ತು ಅವುಗಳ ಕುರಿತ ಮಾಹಿತಿಯನ್ನೂ ಪಡೆಯಬಹುದಾಗಿದೆ.

- ದಿವಾಳಿತನಕ್ಕೆ ಸಂಬಂಧಿಸಿದ ದೂರು ಗಂಭೀರವಾಗಿದ್ದರೆ ಸಂಬಂಧಪಟ್ಟವರಿಗೆ ಶುಲ್ಕ ಹಿಂತಿರುಗಿಸಲಾಗುತ್ತದೆ.ದೂರುಗಳ ಗಂಭೀರತೆ ಆಧರಿಸಿ ಅದರ ತನಿಖೆಗೆ ಆದೇಶ ನೀಡಬೇಕೋ ಅಥವಾ ಸಂಬಂಧಿಸಿದವರಿಗೆ ಶೋಕಾಸ್ ನೋಟಿಸ್ ನೀಡಿ ವಿಚಾರಣೆಗೆ ಆಹ್ವಾನಿಸಬೇಕೋ ಎಂಬುದನ್ನು ಐಬಿಬಿಐ ನಿರ್ಧರಿಸುತ್ತದೆ.

- ದೂರುಗಳು ಮತ್ತು ಅಹವಾಲುಗಳ ವಿಲೇವಾರಿಗೆ ಐಬಿಬಿಐ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಹಾನಿ ಎಸಗುವಂತಹ ಯಾವುದೇ ಸೇವಾ ಪೂರೈಕೆದಾರರನ್ನೂ ಐಬಿಬಿಐ ಸಹಿಸುವುದಿಲ್ಲ. ಸೇವಾ ಪೂರೈಕೆದಾರರು ಪ್ರಾಮಾಣಿಕವಾಗಿದ್ದರೆ ಅವರ ಹಿತರಕ್ಷಣೆಗೂ ಬದ್ಧವಾಗಿದೆ.

## 42.ಲಕ್ಷ್ಯ ಇನಿಶಿಯೇಟಿವ್ (Laqshya Initiative)

- ಭಾರತ ಸರ್ಕಾರ ಇತ್ತೀಚೆಗೆ ಲಕ್ಷ್ಯ-ಲೇಬರ್ ರೂಮ್ ಕ್ವಾಲಿಟಿ ಇಂಪ್ರೂವ್ಮೆಂಟ್ ಉಪಕ್ರಮವನ್ನು ಪ್ರಾರಂಭಿಸಿದೆ.
- ಕಾರ್ಮಿಕ ಕೋಣೆಯಲ್ಲಿ ಒದಗಿಸಿದ ಕಾಳಜಿಯ ಗುಣಮಟ್ಟವನ್ನು ಸುಧಾರಿಸುವ ಮೂಲಕ ತಾಯಿಯ ಮತ್ತು ನವ ಜಾತ ಶಿಶುವಿನ ಮರಣ,(new-born mortality)
- ಮತ್ತು ಅಸ್ವಸ್ಥತೆ (morbidity) ಕಡಿಮೆ ಮಾಡುವುದು ಇದರ ಗುರಿಯಾಗಿದೆ.
- ಇದನ್ನು ಜಿಲ್ಲಾ ವೈದ್ಯಕೀಯ ಆಸ್ಪತ್ರೆ ಮತ್ತು ಉಪ ಜಿಲ್ಲಾ ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಜೊತೆಗೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುವುದು.
- ಈ ಉಪಕ್ರಮವು ಕಾರ್ಮಿಕ ಕೊಠಡಿಗಳ ಗುಣಮಟ್ಟದ ಪ್ರಮಾಣೀಕರಣವನ್ನು ನಡೆಸಲು ಯೋಜಿಸಿದೆ ಮತ್ತು ಗುರಿಗಳನ್ನು ಸಾಧಿಸುವ ಸೌಕರ್ಯಗಳನ್ನು ಉತ್ತೇಜಿಸುತ್ತದೆ.

## 43. ರಂಗನಾಡಿ ಜಲವಿದ್ಯುತ್ ಅಣೆಕಟ್ಟು

- ಇದು ಅರುಣಾಚಲ ಪ್ರದೇಶದ ರಂಗನಾಡಿ ನದಿಯ ಮೇಲೆ ನಿರ್ಮಿಸಿದ (ROR- Run-of-the-River) ಅಣೆಕಟ್ಟು.
- ROR ಎಂಬುದು ಹೈಡ್ರೋಎಲೆಕ್ಟ್ರಿಕ್ ಪೀಳಿಗೆಯ ಒಂದು ವಿಧವಾಗಿದೆ, ಇದರಿಂದಾಗಿ ಕಡಿಮೆ ಅಥವಾ ನೀರಿನ ಸಂಗ್ರಹಣೆ ಒದಗಿಸಲಾಗುತ್ತದೆ.
- ನದಿಯ ಮೇಲಿನ ಭಾಗದ ಗಣನೀಯ ಪ್ರಮಾಣದ ಪ್ರವಾಹವು ROR ಯೋಜನೆಗಳಿಗೆ ಅಗತ್ಯವಿರುವುದಿಲ್ಲ ಹಾಗು ದೊಡ್ಡ ಜಲಾಶಯವು ಅಗತ್ಯವಿಲ್ಲ.
- ಮೀಥೇನ್ ಮತ್ತು ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯನ್ನು ತೆಗೆದುಹಾಕುವ ಮೂಲಕ ಜಲಾಶಯದ ರಚನೆಯ ಅಗತ್ಯವಿರುವುದಿಲ್ಲ.
- ಸಾಂಪ್ರದಾಯಿಕ ಹೈಡ್ರೊ-ಎಲೆಕ್ಟ್ರಿಕ್ ಅಣೆಕಟ್ಟಿನ ಜಲಾಶಯದಲ್ಲಿ ಸಾವಯವ ವಸ್ತುಗಳ ವಿಭಜನೆಯಿಂದ ಹೊರಸೂಸುವಿಕೆಯು ಸಾಮಾನ್ಯವಾಗಿ ಉಂಟಾಗುತ್ತದೆ.

## 44. ದೇಶದ ಮೊಟ್ಟಮೊದಲ ಆಹಾರ, ನೀರಿನ ಗುಣಮಟ್ಟ ಪರೀಕ್ಷೆಗೆ ಸಂಚಾರಿ ಪ್ರಯೋಗಾಲಯ

- ಗೋವಾ ರಾಜ್ಯ ಸರ್ಕಾರ ದೇಶದ ಮೊಟ್ಟಮೊದಲ ಆಹಾರ, ನೀರಿನ ಗುಣಮಟ್ಟ ಪರೀಕ್ಷೆಗೆ ಸಂಚಾರಿ ಪ್ರಯೋಗಾಲಯವನ್ನು ಆರಂಭಿಸಿದೆ.
- ಈ ಸಂಚಾರಿ ಪ್ರಯೋಗಾಲಯಕ್ಕೆ ಕೇಂದ್ರ ಸರಕಾರ ಅನುದಾನ ನೀಡಿದೆ, ಇದು ಐದು ವರ್ಷಗಳವರೆಗೆ ನಿರ್ವಹಣಾ ವೆಚ್ಚವನ್ನು ಸಹ ಹೊಂದುತ್ತದೆ.
- ಈ ವಾಹನದಲ್ಲಿ ಇರುವ ಉಪಕರಣಗಳಿಂದ ಆಹಾರ ಹಾಗೂ ನೀರಿನ ಸ್ವಚ್ಛತೆ, ಇನ್ನಿತರೆ ಅಗತ್ಯ ಅಂಶಗಳ ಗುಣಮಟ್ಟವನ್ನು ಪರೀಕ್ಷಿಸಲಾಗುತ್ತದೆ. ಇದರ ಫಲಿತಾಂಶ ಕೇವಲ 15 ನಿಮಿಷಗಳಲ್ಲಿಯೇ ಬರಲಿದೆ.
- ಅಕಸ್ಮಾತ್ ಪರೀಕ್ಷಿಸಿದ ಆಹಾರದ ಮಾದರಿ ನಿಗದಿತ ಗುಣಮಟ್ಟಕ್ಕಿಂತ ಕಳಪೆಯಾಗಿದ್ದಲ್ಲಿ, ಸಂಬಂಧಿಸಿದ ಕಂಪನಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು, ಎನ್ನಲಾಗಿದೆ.

## 45. ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಕುರಿತು UNWTO / UNESCO ವಿಶ್ವ ಸಮ್ಮೇಳನ

### ಪ್ರಮುಖ ಸುದ್ದಿ

- ಎರಡನೇ ಆವೃತ್ತಿಯ ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಯುಎನ್ಡಬ್ಲ್ಯುಟಿಒ / ಯುನೆಸ್ಕೋ ವಿಶ್ವ ಸಮ್ಮೇಳನವನ್ನು ಓಮಾನ್ ನ ಸುಲ್ತಾನೇಟ್ ಮಸ್ಕಟ್ ನಲ್ಲಿ ನಡೆಸಲಾಗುತ್ತಿದೆ.

### ಈ ಸಮ್ಮೇಳನದ ಉದ್ದೇಶವೇನು?

- ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಕ್ಷೇತ್ರಗಳ ನಡುವಿನ ಪಾಲುದಾರಿಕೆಯನ್ನು ನಿರ್ಮಿಸುವ ಮತ್ತು ಬಲಪಡಿಸುವ ಉದ್ದೇಶದಿಂದ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರು ಮತ್ತು ಖಾಸಗಿ ವಲಯದ ಪಾಲುದಾರರು ಮತ್ತು ತಜ್ಞರರ ನಡುವೆ ಸಾಮರಸ್ಯ ಮೂಡಿಸುವುದು ಹಾಗು ಯುಎನ್ ನ 2030 ಸುಸ್ಥಿರ ಅಭಿವೃದ್ಧಿಗೆ ಅವರ ಪಾತ್ರವನ್ನು ಹೆಚ್ಚಿಸುತ್ತದೆ.

### ಈ ಸಮ್ಮೇಳನದ ಮುಖ್ಯ ಗುರಿಯೇನು ?

- ಈ ಸಮ್ಮೇಳನದಲ್ಲಿ ಪ್ರವಾಸೋದ್ಯಮದಲ್ಲಿ ಅಭಿವೃದ್ಧಿ ಹೊಂದಲು ಆಡಳಿತಾತ್ಮಕ ಮಾದರಿಗಳು, ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಪರಂಪರೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮದ ರಕ್ಷಣೆ, ಮತ್ತು ಪ್ರವಾಸೋದ್ಯಮದಲ್ಲಿ ಸಾಂಸ್ಕೃತಿಕ ಭೂದೃಶ್ಯದ ಅನ್ವೇಷಣೆಯನ್ನು ಒಳಗೊಂಡಂತೆ ವಿಶಾಲ ವ್ಯಾಪ್ತಿಯ ವಿಷಯಗಳ ಕುರಿತು ಸಮಾಲೋಚನೆಯನ್ನು ನಡೆಸುವ ಗುರಿಯನ್ನು ಹೊಂದಿದೆ.

**ಇದರ ಹಿನ್ನೆಲೆಯೇನು ?**

- 2015 ಫೆಬ್ರವರಿ ರಲ್ಲಿ ಕಾಂಬೋಡಿಯಾದಲ್ಲಿ ನಡೆದ ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಮೊದಲ ಯುಎನ್ಡಬ್ಲ್ಯುಟಿಒ / ಯುನೆಸ್ಕೋ ವಿಶ್ವ ಸಮ್ಮೇಳನಕ್ಕೆ ಈ ಸಮಾವೇಶವು ಉತ್ತರಭಾಗವಾಗಿದೆ
- ಪ್ರವಾಸೋದ್ಯಮ ಮತ್ತು ಸಂಸ್ಕೃತಿಯನ್ನು ಅನ್ವೇಷಿಸಲು ಹಾಗು ಸುಸ್ಥಿರ ಅಭಿವೃದ್ಧಿಗೆ ಸಾಮರಸ್ಯದಿಂದ ಕೆಲಸ ಮಾಡುವ ಕ್ಷೇತ್ರಗಳಲ್ಲಿ ವಾಗ್ದಾನ ಮಾಡಿದ ಸೀಮ್ ರೀಪ್ ಘೋಷಣೆಯನ್ನು ಪ್ರತಿಬಿಂಬಿಸಲು ವೇದಿಕೆಯನ್ನು ಒದಗಿಸುತ್ತದೆ.

**UNWTO: ವಿಶ್ವಸಂಸ್ಥೆಯ ವಿಶ್ವ ಪ್ರವಾಸೋದ್ಯಮ ಸಂಸ್ಥೆ ಬಗ್ಗೆ**

- ಇದು 1974 ರಲ್ಲಿ .ಸ್ಥಾಪನೆಗೊಂಡಿದ್ದು. ಇದರ ಕೇಂದ್ರ ಕಾರ್ಯಾಲಯವು ಮ್ಯಾಡ್ರಿಡ್, ಸ್ಪೇನ್ (Madrid, Spain) ನಲ್ಲಿದೆ
- ಸಮರ್ಥನೀಯ ಮತ್ತು ಸಾರ್ವತ್ರಿಕವಾಗಿ ಪ್ರವೇಶಿಸಬಹುದಾದ ಪ್ರವಾಸೋದ್ಯಮದ ಪ್ರಚಾರಕ್ಕಾಗಿ ವಿಶ್ವಸಂಸ್ಥೆಯ ವಿಶ್ವ ಪ್ರವಾಸೋದ್ಯಮ ಸಂಸ್ಥೆಯು
- ಜವಾಬ್ದಾರಿಯುತ, ಸಂಸ್ಥೆಯಾಗಿದೆ .

## 46. ಎಂಎಸ್ಎಂಇ ಸಂಬಂಧ್ (MSME Sambandh)

**ಪ್ರಮುಖ ಸುದ್ದಿ**

ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ
IAS/KAS

- ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸಚಿವಾಲಯವು ಸಾರ್ವಜನಿಕ ಖರೀದಿ ಪೋರ್ಟಲ್, ಎಂಎಸ್ಎಂಇ ಸಂಬಂಧ್‌ಗೆ ಚಾಲನೆ ನೀಡಿದೆ.
- ಇದು ಎಂಎಸ್ಎಂಇಗಳಿಗೆ ಸಾರ್ವಜನಿಕ ಖರೀದಿಗೆ ಅನುಕೂಲ ಮಾಡಿಕೊಡಲಿದೆ.

## ಪ್ರಮುಖ ಸಂಗತಿಗಳು

- ಈ ಪೋರ್ಟಲ್‌ನ ಮುಖ್ಯ ಉದ್ದೇಶವೆಂದರೆ, ಎಂಎಸ್ಎಂಇಗಳಿಂದ ಸಾರ್ವಜನಿಕ ಖರೀದಿ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗೆ ಇದು ಸಹಕಾರಿಯಾಗಲಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಎಂಎಸ್ಎಂಇ ಘಟಕಗಳಿಂದ ಖರೀದಿಸುವ ಸರಕುಗಳಿಗೆ ಇದು ಅನ್ವಯಿಸುತ್ತದೆ.

- ಇದು ಎಂಎಸ್ಎಂಇಗಳಿಗೆ ಖರೀದಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅನುಕೂಲ ಮಾಡಿಕೊಡಲಿದೆ.
- ಇದಲ್ಲದೇ ಇದು ಸಚಿವಾಲಯ ಹಾಗೂ ಇತರ ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಿಗೆ ತಮ್ಮ ಖರೀದಿ ಪ್ರಕ್ರಿಯೆಯ ಕ್ಷಮತೆಯನ್ನು ಮೌಲ್ಯಮಾಪನ ಮಾಡಲು ನೆರವಾಗುತ್ತದೆ. ಜತೆಗೆ 2012ರ ಖರೀದಿ ನೀತಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗಲಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## ಹಿನ್ನೆಲೆ

- 2012ರಲ್ಲಿ ಚಾಲನೆ ನೀಡಲಾದ ಹೊಸ ಖರೀದಿ ನೀತಿಯು, ಕೇಂದ್ರ ಸರ್ಕಾರದ ಇಲಾಖೆಗಳು ಹಾಗೂ ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಅಗತ್ಯವಾದ ಬಿಡಿಭಾಗಗಳನ್ನು ಹಾಗೂ ಇತರ ಬಂಡವಾಳ ಸರಕುಗಳನ್ನು ಎಂಎಸ್ಇಗಳಿಮದ ಖರೀದಿಸುವುದನ್ನು ಕಡ್ಡಾಯ ಮಾಡಿದೆ.

- ಅಂದರೆ ಕೇಂದ್ರ ಸರ್ಕಾರದ ಎಲ್ಲ ಸಚಿವಾಲಯಗಳು, ಇಲಾಖೆಗಳು, ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಎಂಎಸ್ಇಗಳಿಂದ ಖರೀದಿಸುವ ವಾರ್ಷಿಕ ಗುರಿಯನ್ನು ವರ್ಷದ ಆರಂಭದಲ್ಲೇ ನಿಗದಿಪಡಿಸಬೇಕಾಗುತ್ತದೆ.
- ಇದರ ಮುಖ್ಯವಾದ ಉದ್ದೇಶವೆಂದರೆ, ವಾರ್ಷಿಕ ಒಟ್ಟು ಉತ್ಪಾದನೆಯ ಕನಿಷ್ಠ ಶೇಕಡ 20ನ್ನು ಎಂಎಸ್ಇ ಘಟಕಗಳಿಂದ ಖರೀದಿಸುವುದು.

## 47. ರಾಜಕಾರಣಿಗಳ ವಿಚಾರಣೆಗೆ 12 ವಿಶೇಷ ನ್ಯಾಯಾಲಯ

### ಪ್ರಮುಖ ಸುದ್ದಿ

- ಸಂಸದರು ಮತ್ತು ಶಾಸಕರ ವಿರುದ್ಧ ದಾಖಲಾಗಿರುವ 1,571 ಅಪರಾಧ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ಒಂದು ವರ್ಷದ ಅವಧಿಗೆ 12 ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದಾಗಿ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ತಿಳಿಸಿದೆ.

### ಕೇಂದ್ರವು ಏನನ್ನು ಪ್ರಸ್ತಾಪಿಸಿದೆ?

- ರಾಜಕಾರಣಿಗಳ ಅಪರಾಧ ಪ್ರಕರಣಗಳ ವಿಚಾರಣೆಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಸಿದ್ಧ ಎಂದು ಹಣಕಾಸು ಸಚಿವಾಲಯ ತಾತ್ವಿಕ ಒಪ್ಪಿಗೆ ನೀಡಿತ್ತು. ಈ ನ್ಯಾಯಾಲಯಗಳ ಸ್ಥಾಪನೆಗೆ 7.80 ಕೋಟಿ ವೆಚ್ಚವಾಗಲಿದೆ ಎಂದು ಸಚಿವಾಲಯ ಹೇಳಿದೆ.
- ತ್ವರಿತಗತಿ ನ್ಯಾಯಾಲಯಗಳ ರೀತಿ ರಾಜಕಾರಣಿಗಳ ಅಪರಾಧ ಪ್ರಕರಣಗಳ ವಿಚಾರಣೆಗೆ ವಿಶೇಷ ನ್ಯಾಯಾಲಯಗಳನ್ನು ಆರಂಭಿಸುವ ಮೂಲಕ ರಾಜಕಾರಣದ ಅಪರಾಧೀಕರಣ ತಡೆ ಸಾಧ್ಯವಿದೆ ಎಂದು ನ. 1ರಂದು ಸುಪ್ರೀಂ ಕೋರ್ಟ್ ಹೇಳಿತ್ತು.

- ಲೋಕಸಭೆಯ 184 ಮತ್ತು ರಾಜ್ಯಸಭೆಯ 44 ಸದಸ್ಯರ ವಿರುದ್ಧ ಅಪರಾಧ ಪ್ರಕರಣಗಳಿವೆ. ಮಹಾರಾಷ್ಟ್ರದಲ್ಲಿ ಅಪರಾಧ ಪ್ರಕರಣ ಎದುರಿಸುತ್ತಿ
- ರುವ ಅತಿ ಹೆಚ್ಚು ಶಾಸಕರಿದ್ದಾರೆ (160). ಎರಡನೇ ಸ್ಥಾನದಲ್ಲಿರುವ ಉತ್ತರ ಪ್ರದೇಶದ 160 ಮತ್ತು ಮೂರನೇ ಸ್ಥಾನದಲ್ಲಿರುವ ಬಿಹಾರದ 141 ಶಾಸಕರ ವಿರುದ್ಧ ಅಪರಾಧ ದೂರುಗಳು ದಾಖಲಾಗಿವೆ. ಕರ್ನಾಟಕದ 73 ಶಾಸಕರ ವಿರುದ್ಧದ ಅಪರಾಧ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ.

### ಪ್ರಮುಖ ವಿಶ್ಲೇಷಣೆ (ಮುಖ್ಯ ಪರೀಕ್ಷೆಗಾಗಿ )

### ವಿಶೇಷ ನ್ಯಾಯಾಲಯದ ಸ್ಥಾಪನೆಯ ಅಗತ್ಯತೆಯೇನು ?

- ಎದುರಾಳಿಗಳ ಮೇಲೆ ವಿನಾಕಾರಣ ಕಳಂಕ ಹೊರಿಸುವ ಮತ್ತು ಯಾವುದೇ ಸಾಕ್ಷಿ-ಪುರಾವೆ ಅಥವಾ ಪೂರಕ ದಾಖಲೆಗಳಿಲ್ಲದೆ ಅಕ್ರಮ ಚಟುವಟಿಕೆಯ ಆರೋಪ ಹೊರಿಸುವ ಪರಿಪಾಠ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಬೇರುಬಿಟ್ಟಿದೆ.
- ಒಂದು ವೇಳೆ ಇಂಥ ಆಪಾದನೆಗಳಿಗೆ ಗಟ್ಟಿ ನೆಲಗಟ್ಟಿದ್ದು, ಆರೋಪಕ್ಕೊಳಗಾದವರು ನಿರ್ದಿಷ್ಟ ತಪ್ಪು ಅಪರಾಧ-ಅಕ್ರಮವನ್ನು ಎಸಗಿದ್ದೇ ಆದಲ್ಲಿ (ಅದು ಚಿಕ್ಕದೇ ಇರಬಹುದು ಅಥವಾ ಗುರುತರವಾದದ್ದೇ ಇರಬಹುದು), ಈ ನೆಲದ ಕಾಯ್ದೆ-ಕಾನೂನಿನ ಪ್ರಕಾರ ಅನ್ವಯವಾಗುವ ದಂಡನೆಯನ್ನು ಸ್ವೀಕರಿಸಲೇಬೇಕಾಗುತ್ತದೆ.
- ಚಾಲ್ತಿಯಲ್ಲಿರುವ ನೀತಿ-ನಿಯಮಗಳ ಅನುಸಾರ, ನ್ಯಾಯಾಲಯದಿಂದ 'ತಪ್ಪಿತಸ್ಥ/ಅಪರಾಧಿ' ಎಂಬ ಹಣೆಪಟ್ಟಿ ಕಟ್ಟಿಸಿಕೊಂಡಿರುವ ಜನಪ್ರತಿನಿಧಿಗಳು 6 ವರ್ಷಗಳವರೆಗೆ ಸಾರ್ವಜನಿಕ ಚುನಾವಣೆಗಳಲ್ಲಿ ಸ್ಪರ್ಧಿಸುವಂತಿಲ್ಲ. ಆದರೆ ರಾಜಕೀಯ ಎದುರಾಳಿಗಳು ಮಾಡುವ ಆರೋಪಗಳ ಹಿಂದೆ ದುರುದ್ದೇಶವೇ ತುಂಬಿದ್ದು, ಜತೆಗೆ ಪ್ರಕರಣದ ವಿಚಾರಣೆ ಅನಗತ್ಯವಾಗಿ ಎಳೆಸಲ್ಪಡುವಂತಾದಲ್ಲಿ ಆಪಾದಿತರ ಸ್ಥಿತಿ ಅತಂತ್ರವಾಗುವುದರಲ್ಲಿ ಸಂದೇಹವಿಲ್ಲ. ಕಾರಣ, ಕಳಂಕದಿಂದ ಮುಕ್ತರಾಗದಿದ್ದಲ್ಲಿ ಕ್ಷೇತ್ರದ ಜನತೆಗೆ ಮುಖ ತೋರಿಸಲಾಗದೆ ಅಥವಾ ಅವರ ಸಹಜ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಆರೋಪಿತರ ರಾಜಕೀಯ ಭವಿಷ್ಯಕ್ಕೆ ಗ್ರಹಣ ಬಡಿದಂತಾಗುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಇನ್ನು, ನ್ಯಾಯಾಲಯದ ವಿಚಾರಣಾಪರ್ವ ಸುದೀರ್ಘಕಾಲದವರೆಗೆ ಎಳೆಸಲ್ಪಟ್ಟ ಕಾರಣದಿಂದಾಗಿ ಆಪಾದಿತನೊಬ್ಬ ಅಪರಾಧಿಯೋ ನಿರಪರಾಧಿಯೋ ಎಂಬುದು ನಿರ್ಧಾರವಾಗದೆ ಅತಂತ್ರ ಸ್ಥಿತಿ ನಿರ್ಮಾಣವಾದಂಥ ಹಲವು ನಿದರ್ಶನಗಳಿವೆ
- ಅದರ ಬದಲು, ಸಂಸದರು ಮತ್ತು ಶಾಸಕರ ವಿರುದ್ಧದ ಪ್ರಕರಣಗಳು ಕ್ಷಿಪ್ರವಾಗಿ ಇತ್ಯರ್ಥವಾಗುವಂತಾದಲ್ಲಿ, ಆಪಾದಿತರು ಮಾತ್ರವಲ್ಲದೆ ಅವರು ಪ್ರತಿನಿಧಿಸುವ ರಾಜಕೀಯ ಪಕ್ಷ ಹಾಗೂ ಚುನಾವಣಾ ಕ್ಷೇತ್ರದ ಮತದಾರರಿಗೆ ಸ್ಪಷ್ಟ ಸಂದೇಶ ರವಾನೆಯಾದಂತಾಗುತ್ತದೆ.

- ಜತೆಗೆ, ಪ್ರಕರಣವೊಂದರ ವಿಚಾರಣೆ ಸುದೀರ್ಘ ಕಾಲದವರೆಗೆ ಎಳೆಸುವುದರಿಂದ ವ್ಯವಸ್ಥೆಗೆ ಆಗುವ ಅತಿರೇಕದ ಖರ್ಚಿಗೂ ಕಡಿವಾಣ ಬಿದ್ದಂತಾಗುತ್ತದೆ. ನಮ್ಮ ರಾಜಕೀಯ ವ್ಯವಸ್ಥೆಯನ್ನು ಶುದ್ಧೀಕರಿಸಲು, ತನ್ಮೂಲಕ ಪ್ರಜಾಪ್ರಭುತ್ವಕ್ಕೊಂದು ಆರೋಗ್ಯಕರ ಆಯಾಮ ನೀಡಲು ಇಂಥ ಹಲವು ಉಪಕ್ರಮಗಳಿಗೆ ಮುಂದಾಗಬೇಕಿದೆ. ಆದ್ಯತಾನುಸಾರ ಅವಕ್ಕೆ ಚಾಲನೆ ಸಿಗಲಿ ಎಂಬುದು ಆಶಯ.

## 48. ಫೇಮ್ ಇಂಡಿಯಾ ಯೋಜನೆ

### ಪ್ರಮುಖ ಸುದ್ದಿ :

- ಫೇಮ್ ಇಂಡಿಯಾ ಯೋಜನೆ ಅಡಿಯಲ್ಲಿ ಪ್ರೋತ್ಸಾಹಕಗಳನ್ನು ಪಡೆಯಲು ವಿದ್ಯುತ್ ಬಸ್ ಗಳನ್ನೂ ಸರಬರಾಜು ಮಾಡುವ ಯಾವುದೇ ಪ್ರಸ್ತಾಪವನ್ನು ಸ್ವೀಕರಿಸುವ ಮೊದಲು ಮೂಲ ಉಪಕರಣ ತಯಾರಕರು ಬೃಹತ್ ಉದ್ಯಮ ಇಲಾಖೆಯಿಂದ ಅನುಮೋದನೆಯನ್ನು ಪಡೆಯಬೇಕಾಗುತ್ತದೆ.ಈ ಕ್ರಮವು ವಿದ್ಯುತ್ ಬಸ್ಸುಗಳಿಗೆ ಬೇಡಿಕೆ ಪ್ರೋತ್ಸಾಹಧನ ನಿರ್ವಹಣೆಗೆ ಅನುಕೂಲ ಕಲ್ಪಿಸುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಫೇಮ್ ಇಂಡಿಯಾ ಯೋಜನೆ ಬಗ್ಗೆ

- ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರುತ್ತಲೇ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುತ್ತಿದ್ದ ಯೋಜನಾ ಆಯೋಗ ರದ್ದಾಯಿತು. ಇದೀಗ ಆ ಹೊಣೆಗಾರಿಕೆಯನ್ನು ನಿಭಾಯಿಸುತ್ತಿರುವ ನೀತಿ ಆಯೋಗವು ಫಾಸ್ಟರ್ ಅಡಾಪ್ಷನ್ ಆಂಡ್ ಮ್ಯಾನುಫ್ಯಾಕ್ಚರಿಂಗ್ ಆಫ್(ಹೈಬ್ರಿಡ್ ಆಂಡ್) ಇಲೆಕ್ಟ್ರಿಕ್ ವೆಹಿಕಲ್ಸ್ ಇನ್ ಇಂಡಿಯಾ(ಸಂಕ್ಷಿಪ್ತವಾಗಿ ಫೇಮ್ ಇಂಡಿಯಾ) ನೀತಿಗಳನ್ನು ನಿರೂಪಿಸಿತು.
- ಈ ಕುರಿತ ಅಧಿಸೂಚನೆಯನ್ನು ಕೇಂದ್ರ ಸರ್ಕಾರ 2015ರ ಮಾರ್ಚ್ 13ರಂದು ಹೊರಡಿಸಿದೆ. . ಇದರ ಜಾರಿಗೆ ಆರು ವರ್ಷದ ಗಡುವು(2020) ಹಾಕಿಕೊಂಡು ಕೇಂದ್ರ ಸರ್ಕಾರ ಕೆಲಸ ಆರಂಭಿಸಿದೆ. ಯೋಜನೆಯ ಮೊದಲ ಹಂತದ ಅನುಷ್ಠಾನಕ್ಕೆ 2015-16 ಮತ್ತು 2016-17ರ ಅವಧಿಯನ್ನು ನಿಗದಪಡಿಸಲಾಗಿತ್ತು.

- ಈ ಯೋಜನೆಯ ಮುಖ್ಯ ವಿಚಾರಗಳು ನಾಲ್ಕು – ತಂತ್ರಜ್ಞಾನದ ಅಭಿವೃದ್ಧಿ, ಬೇಡಿಕೆ ಸೃಷ್ಟಿ, ಪೈಲಟ್ ಪ್ರಾಜೆಕ್ಟ್ ಮತ್ತು ಮೂಲಸೌಕರ್ಯ ವೃದ್ಧಿ. ಮೊದಲ ಹಂತದ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಒಟ್ಟು 795 ಕೋಟಿ ರೂಪಾಯಿ ಮೀಸಲಿರಿಸಿತ್ತು.

- ಪೆಟ್ರೋಲ್, ಡೀಸೆಲ್ ದರ ಗಗನಕ್ಕೆ ಏರುತ್ತಿರುವುದು ಹಾಗೂ ತೈಲ ಇಂಧನ ಪರಿಣಾಮ ವಾಯುಮಾಲಿನ್ಯ ದಿನದಿಂದ ದಿನಕ್ಕೆ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ಎಲೆಕ್ಟ್ರಿಕ್ ವಾಹನ ಬಳಕೆ ಖಂಡಿತಾ ಪ್ರಯೋಜನಕಾರಿ. ಪ್ರಯಾಣ ದರದಲ್ಲಿಯೂ ಇಳಿಕೆ ನಿರೀಕ್ಷಿತ.

## 49. ಏಷ್ಯಾ ಮೂಲಸೌಕರ್ಯ ಹೂಡಿಕೆ ಬ್ಯಾಂಕ್(AIIB)

### ಪ್ರಮುಖ ಸುದ್ದಿ

- ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮಂಡಳಿಯ ಗವರ್ನರ್ ಗಳ 3 ನೇ ವಾರ್ಷಿಕ ಸಭೆಯನ್ನು ಭಾರತ 2018 ಜೂನ್ 25 ಮತ್ತು 26 ರಂದು ಆಯೋಜಿಸಲಿದೆ.
- ಈ ನಿಟ್ಟಿನಲ್ಲಿ, ಭಾರತ ಸರ್ಕಾರ ಮತ್ತು ಏಷ್ಯಾ ಮೂಲಸೌಕರ್ಯ ಹೂಡಿಕೆ ಬ್ಯಾಂಕ್ (ಎಐಐಬಿ) ಸಚಿವಾಲಯವು ಎಂಒಯುಗೆ ಸಹಿ ಮಾಡಲಾಗಿದೆ
- The Theme of the Annual Meeting, 2018 will be "Mobilizing Finance for Infrastructure: Innovation and Collaboration".

### ಏಷ್ಯಾ ಮೂಲಸೌಕರ್ಯ ಹೂಡಿಕೆ ಬ್ಯಾಂಕ್ ಬಗ್ಗೆ

- ಪ್ರಾದೇಶಿಕ ಅಭಿವೃ-ದ್ಧಿ- ಉದ್ದೇಶದ, ಚೀನಾ ನೇತೃತ್ವದಲ್ಲಿನ ಬಹು-ರಾಷ್ಟ್ರೀಯ 'ಏಷ್ಯಾ ಮೂಲ-ಸೌಕರ್ಯ ಹೂಡಿಕೆ ಬ್ಯಾಂಕ್' (ಎಐಐಬಿ) ಬೀಜಿಂಗ್-ನಲ್ಲಿ ಅಕ್ಟೋಬರ್, 2014 ರಲ್ಲಿ ಸ್ಥಾಪಿತವಾಯಿತು.

- ಇದರ ಮುಖ್ಯ ಗುರಿಗಳೆಂದರೆ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸುವುದು , ಸಂಪತ್ತನ್ನು ಸೃಷ್ಟಿಸುವುದು , ಮೂಲಸೌಕರ್ಯಗಳನ್ನು ಸಾಬೀತುಪಡಿಸಲು ಮತ್ತು ಪ್ರಾದೇಶಿಕ ಸಹಕಾರ ಮತ್ತು ಸಹಭಾಗಿತ್ವವನ್ನು ಉತ್ತೇಜಿಸುವುದು.

- ಇನ್ನು ಬ್ಯಾಂಕ್‌ನಲ್ಲಿ ಚೀನಾ ಶೇ.26.06ರಷ್ಟು ಮತದಾನದ ಹಕ್ಕನ್ನು ಹೊಂದಿದೆ. ಜೊತೆಗೆ ಕೆಲವು ವಿಷಯಗಳಲ್ಲಿ ವಿಟೋ ಅಧಿಕಾರವನ್ನು ಕೂಡಾ ಹೊಂದಿದೆ. 2013ರ ಅಕ್ಟೋಬರ್‌ನಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಎಐಐಬಿ ಬ್ಯಾಂಕ್ ಸ್ಥಾಪನೆಯ ಕುರಿತು ಮೊದಲ ಬಾರಿಗೆ ಪ್ರಕಟಣೆ ನೀಡಿದ್ದರು. ಈ ಬ್ಯಾಂಕ್ ಸ್ಥಾಪನೆಗೆ ಅಮೆರಿಕ ಮತ್ತು ಜಪಾನ್ ವಿರೋಧ ಹೊಂದಿದ್ದವು.

## 50. ಭಾರತ-ಮ್ಯಾನ್ಮಾರ್-ಥೈಲ್ಯಾಂಡ್ (IMT)ಹೆದ್ದಾರಿ

### ಪ್ರಮುಖ ಸುದ್ದಿ

- ಭಾರತ-ಮ್ಯಾನ್ಮಾರ್-ಥೈಲ್ಯಾಂಡ್ 'ತ್ರಿಪಕ್ಷೀಯ 'ಹೆದ್ದಾರಿಯನ್ನು ವಿಯೆಟ್ನಾಮ್ ರವರೆಗೆ ವಿಸ್ತರಿಸಲು ಭಾರತವು ಅಸಿನ್ ದೇಶಗಳೊಂದಿಗೆ ಮಾತುಕತೆ ನಡೆಸಲು ಯೋಜಿಸಿದೆ. ಭಾರತದಿಂದ ಪ್ರಸ್ತಾಪಗಳ ಪ್ರಕಾರ, ಲಾವೋಸ್ ಮತ್ತು ಕಾಂಬೋಡಿಯಾ ಮೂಲಕ ಹೆದ್ದಾರಿಯನ್ನು ವಿಯೆಟ್ನಾಂಗೆ ವಿಸ್ತರಿಸಬಹುದಾಗಿದೆ.

### ಪ್ರಮುಖ ವಿಶ್ಲೇಷಣೆ (ಮುಖ್ಯ ಪರೀಕ್ಷೆಗಾಗಿ )

- ತೊಂಭತ್ತರ ದಶಕದ ಆರಂಭದ ಕಾಲಘಟ್ಟ ಅದು. ನಮ್ಮ ದೇಶ ಉದಾರೀಕರಣ ನೀತಿಗೆ ತೆರೆದುಕೊಂಡ ಅವಧಿಯೂ ಹೌದು. ಅಂದಿನ ಪ್ರಧಾನಮಂತ್ರಿ ನರಸಿಂಹ ರಾವ್ ಭಾರತದ ರಾಷ್ಟ್ರೀಯ ಹಿತಾಸಕ್ತಿ ಗಮನದಲ್ಲಿರಿಸಿಕೊಂಡು ಪ್ರತಿಪಾದಿಸಿದ್ದು ನೀತಿ 'ಲುಕ್ ಈಸ್ಟ್'. ಅಸಿಯಾನ್ ಸದಸ್ಯರಾಷ್ಟ್ರಗಳು, ಜಪಾನ್, ದಕ್ಷಿಣ ಕೊರಿಯಾ ಸೇರಿ ಇತರೆ ಆಗ್ನೇಯ ಏಷ್ಯಾ ರಾಷ್ಟ್ರಗಳ ಜತೆಗೆ ದೀರ್ಘಕಾಲದ ದ್ವಿಪಕ್ಷೀಯ ಬಾಂಧವ್ಯ ಗಟ್ಟಿಗೊಳಿಸುವುದು ಈ ನೀತಿಯ ಮೂಲ ಉದ್ದೇಶವಾಗಿತ್ತು. ನಂತರದ ಸರ್ಕಾರಗಳ ಅವಧಿಯಲ್ಲಿ ಇದಕ್ಕೆ ಅಷ್ಟು ಪ್ರಾಮುಖ್ಯತೆ ಸಿಗಲಿಲ್ಲ.

- ದಶಕಗಳ ಬಳಿಕ ನಮ್ಮ ದೇಶದಲ್ಲಿ ಏಕಪಕ್ಷ ಬಹುಮತ ಪಡೆದು ಸರ್ಕಾರ ರಚಿಸಿದ್ದು 2014ರಲ್ಲಿ. ಇದರೊಂದಿಗೆ ಪೌರಾತ್ಯ ರಾಷ್ಟ್ರಗಳ ಜತೆಗಿನ ಬಾಂಧವ್ಯದ ಹೊಸ ಶಕೆ ಆರಂಭವಾಯಿತು. ಪ್ರಧಾನಮಂತ್ರಿ ನರೇಂದ್ರ ಮೋದಿ 2014ರಲ್ಲಿ ಅಸಿಯಾನ್ ಶೃಂಗಕ್ಕೋಸ್ಕರ ಮ್ಯಾನ್ಮಾರ್‌ನ ರಾಜಧಾನಿ ನೇ ಪಿ ತಾವ್‌ಗೆ ಭೇಟಿ ನೀಡಿದ ಸಂದರ್ಭ ಭಾರತದ 'ಆಕ್ಟ್ ಈಸ್ಟ್ ಪಾಲಿಸಿ'ಯನ್ನು ಘೋಷಿಸಿದರು. ಆಗ್ನೇಯ ಏಷ್ಯಾ ರಾಷ್ಟ್ರಗಳ ಜತೆಗಿನ ಭಾರತದ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸುವ ಇರಾದೆ ಹಾಗೂ ಈ ಪ್ರಾಂತ್ಯದಲ್ಲಿ ಸಕ್ರಿಯ ಪಾತ್ರ ನಿಭಾಯಿಸುವ ಇಚ್ಛೆಯನ್ನು ಪ್ರಧಾನಿ ಮೋದಿ ಅಂದು ವ್ಯಕ್ತಪಡಿಸಿದ್ದರು. ಅದರಂತೆ ಭಾರತದ ನೀತಿಗಳೂ ಬದಲಾದವು.

- ಭಾರತದ ಆಕ್ಟ್ ಈಸ್ಟ್ ಪಾಲಿಸಿಯಲ್ಲಿ ಮ್ಯಾನ್ಮಾರ್‌ಗೆ ಯಾಕಿಷ್ಟು ಮಹತ್ವ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಆ ದೇಶದ ಬಗ್ಗೆ ಕೊಂಚ ತಿಳಿದುಕೊಳ್ಳುವುದು ಸೂಕ್ತ. ಜೇಡ್(ಪಚ್ಚೆ ರತ್ನ) ಮತ್ತು ಜೆಮ್್ಸ(ರತ್ನದ ಹರಳು), ತೈಲ, ನೈಸರ್ಗಿಕ ಅನಿಲಗಳಿಂದ ಸಂಪದ್ಭರಿತವಾದ ನಾಡು ಮ್ಯಾನ್ಮಾರ್. ಅಂದಾಜು 5.1 ಕೋಟಿ ಜನಸಂಖ್ಯೆ. ಶ್ರೀಮಂತ ಸಾಂಸ್ಕೃತಿಕ ಪರಂಪರೆ, ವಿಶೇಷವಾಗಿ ಬೃಹತ್ ದೇವಾಲಯಗಳು ಪ್ರೇರಣಾದಾಯಿಯಾಗಿ ಗಮನಸೆಳೆಯುತ್ತವೆ. ಜನಸಂಖ್ಯೆಯ ಶೇ.88 ಭಾಗ ಬೌದ್ಧ ಮತಾನುಯಾಯಿಗಳು. ಅಲ್ಲಿ 30 ಲಕ್ಷದಷ್ಟು ಭಾರತೀಯ ಮೂಲದವರಿದ್ದಾರೆ. ಮ್ಯಾನ್ಮಾರ್ ಜನರ ಪಾಲಿಗೆ ನಮ್ಮ ಭಾರತ 'ಪವಿತ್ರ ಯಾತ್ರಾ ದೇಶ'. ಅಲ್ಲದೆ, ಎರಡೂ ರಾಷ್ಟ್ರಗಳು ಬಲಿಷ್ಠ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ನಂಟನ್ನು ಹೊಂದಿವೆ.

- ಬ್ರಿಟಿಷ್ ಆಳ್ವಿಕೆಯಿಂದ ಭಾರತ ಸ್ವತಂತ್ರಗೊಂಡ ಮರುವರ್ಷವೇ ಅಂದರೆ 1948ರಲ್ಲಿ ಬರ್ಮ ಕೂಡ ಸ್ವತಂತ್ರವಾಯಿತು. ಅದು ಅತಿರೇಕದ ಜನಾಂಗೀಯ ಸಂಘರ್ಷ, ನಾಗರಿಕ ಸಮರ ಮತ್ತು ಸೇನಾ ಆಳ್ವಿಕೆಯಿಂದ ಸೊರಗಿ ಹೋಗಿತ್ತು. ಇತ್ತೀಚೆಗೆ ಅಂದರೆ 2010ರಲ್ಲಷ್ಟೇ ಅಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಅದರಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಆಂಗ್ ಸಾನ್ ಸೂ ಕಿ ನೇತೃತ್ವದ ನ್ಯಾಷನಲ್ ಲೀಗ್ ಫಾರ್ ಡೆಮಾಕ್ರಸಿ ಉಭಯ ಸದನಗಳಲ್ಲೂ ಭಾರಿ ಬಹುಮತದ ವಿಜಯ ಗಳಿಸಿತು. ನಾಗರಿಕ ಸರ್ಕಾರವೊಂದು 2011ರಲ್ಲಿ ಅಸ್ತಿತ್ವಕ್ಕೆ ಬಂತು. ಮ್ಯಾನ್ಮಾರ್ ಕಾನೂನು ಪ್ರಕಾರ ಸೂ ಕಿ ಪ್ರಧಾನಿಯಾಗಲು ಸಾಧ್ಯವಿಲ್ಲದ ಕಾರಣ ಅವರನ್ನು ಅಷ್ಟೇ ಪ್ರಭಾವಿ ಸ್ಥಾನಮಾನದ 'ಸ್ಟೇಟ್ ಕೌನ್ಸೆಲರ್' ಆಗಿ ಸರ್ಕಾರವನ್ನು ಮುನ್ನಡೆಸುತ್ತಿದ್ದಾರೆ. ಆದರೂ, ಅಲ್ಲಿ ಸೇನೆ ಇನ್ನೂ ತನ್ನ ಪ್ರಭಾವವನ್ನು ಉಳಿಸಿಕೊಂಡಿದೆ.

- ಇನ್ನು ಗಡಿಯ ವಿಚಾರಕ್ಕೆ ಬಂದರೆ, ಮ್ಯಾನ್ಮಾರ್ ಭಾರತ ಜತೆಗಷ್ಟೇ ಅಲ್ಲ, ಚೀನಾ, ಬಾಂಗ್ಲಾದೇಶ, ಥಾಯ್ಲೆಂಡ್ ಮತ್ತು ಲಾವೋಸ್ ಜತೆಗೂ ಗಡಿ ಹಂಚಿಕೊಂಡಿದೆ. ಭಾರತದ ಜತೆಗೆ 1,600 ಕಿ.ಮೀ. ಉದ್ದದ ಸೂಕ್ಷ್ಮ ಹಾಗೂ ಸುಲಭ ಬೇಧ್ಯ ಭೂಗಡಿಯನ್ನು ಹೊಂದಿರುವ ಏಕೈಕ ಆಗ್ನೇಯ ಏಷ್ಯಾ ರಾಷ್ಟ್ರ ಮ್ಯಾನ್ಮಾರ್. ಅಲ್ಲದೆ, ಬಂಗಾಳ ಕೊಲ್ಲಿಯ ಮೂಲಕ ಸಾಗರ ಸಂಪರ್ಕವನ್ನೂ ಅದು ಭಾರತದ ಜತೆಗೆ ಹಂಚಿಕೊಂಡಿದೆ. ನಮ್ಮ ದೇಶದ ಈಶಾನ್ಯದ ನಾಲ್ಕು ರಾಜ್ಯಗಳು- ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ, ಮಿಜೋರಂಗಳು ಮ್ಯಾನ್ಮಾರ್ ಜತೆಗೆ ಗಡಿಯನ್ನು ಹಂಚಿಕೊಂಡಿವೆ.

- ಭಾರತ-ಮ್ಯಾನ್ಮಾರ್ ಸಂಬಂಧ ಯಾಕೆ ಮಹತ್ವ ಪಡೆದುಕೊಳ್ಳುತ್ತದೆ ಎಂದು ಹೇಳುವಾಗ ಕೆಲವು ಪ್ರಮುಖ ಕಾರಣಗಳು ಗಮನಸೆಳೆಯುತ್ತವೆ.

- ಭಾರತದ ಭದ್ರತಾ ಹಿತಾಸಕ್ತಿಗಳ ರಕ್ಷಣೆ- ಮ್ಯಾನ್ಮಾರ್ ಗಡಿಯಲ್ಲಿರುವ ಈಶಾನ್ಯ ರಾಜ್ಯಗಳಲ್ಲಿ ನ್ಯಾಷನಲ್ ಸೋಷಿಯಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್(ಎನ್‌ಎಸ್‌ಸಿಎನ್), ಪೀಪಲ್ಸ್ ಲಿಬರೇಷನ್ ಆರ್ಮಿ(ಪಿಎಲ್‌ಎ), ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್(ಯುಎನ್‌ಎಲ್‌ಎಫ್), ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಅಸ್ಸಾಂ(ಯುಎಲ್‌ಎಫ್‌ಎ) ಮುಂತಾದ ಬಂಡುಕೋರ ಸಂಘಟನೆಗಳ ಚಟುವಟಿಕೆ ನಿಯಂತ್ರಿಸುವುದು ಭಾರತದ ಆದ್ಯತೆಯ ವಿಷಯ. ಈ ಗುಂಪುಗಳಿಗೆ ಚೀನಾದ ಯುನ್ನಾನ್ ಪ್ರಾಂತ್ಯದಿಂದ ಮ್ಯಾನ್ಮಾರ್ ಮೂಲಕ ಶಸ್ತ್ರಾಸ್ತ್ರಗಳ ಪೂರೈಕೆಯಾಗುತ್ತಿದೆ. ಇಂತಹ ಅಕ್ರಮ ಚಟುವಟಿಕೆ ತಡೆಯಲು ಮ್ಯಾನ್ಮಾರ್ ಅಧಿಕಾರಿಗಳ ನೆರವು ಮತ್ತು ಸಹಕಾರ ಅತೀಅವಶ್ಯ. ಈಗ್ಗೆ ಕೆಲವು ವಾರಗಳ ಹಿಂದಷ್ಟೇ ಭಾರತದ ಸೇನೆಯ ಪೌರಾತ್ಯ ವಿಭಾಗ ಇಂಡೋ-ಮ್ಯಾನ್ಮಾರ್ ಗಡಿಯಲ್ಲಿ ಎನ್‌ಎಸ್‌ಸಿಎನ್ ಬಣದ ನಾಗಾ ಬಂಡುಕೋರರ ವಿರುದ್ಧ ಯಶಸ್ವಿ ಕಾರ್ಯಾಚರಣೆ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು.

- ಚೀನಾ ತಂತ್ರಕ್ಕೆ ಪ್ರತಿತಂತ್ರ- ಭಾರತದ ಸೇನೆಯನ್ನು ಸುತ್ತುವರಿದು ಕುಟುಕುವುದಕ್ಕಾಗಿ ಚೀನಾ ರೂಪಿಸುತ್ತಿರುವ 'ಸ್ಟ್ರಿಂಗ್ ಆಫ್ ಪರ್ಲ್ಸ್' ನೀತಿಯನ್ನು ಎದುರಿಸುವುದಕ್ಕೆ ಮ್ಯಾನ್ಮಾರ್ ಸಹಕಾರ ಭಾರತಕ್ಕೆ ಅತೀ ಅಗತ್ಯ. ಚೀನಾ ಕೂಡ ಮ್ಯಾನ್ಮಾರ್ ಜತೆಗೆ ದೀರ್ಘಕಾಲದ ಬಲಿಷ್ಠ ಹಾಗೂ ನಿಕಟ ಬಾಂಧವ್ಯ ಹೊಂದಿದೆ. ಚೀನಾದ ವ್ಯಾಪಾರ ಚಟುವಟಿಕೆಗಳು, ಅದು ನೀಡುತ್ತಿರುವ ಹಣಕಾಸಿನ ನೆರವು ಮತ್ತು ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿಯ ಪಾಲುದಾರಿಕೆಗಳು ಮ್ಯಾನ್ಮಾರ್ ಜತೆಗಿನ ಸಂಬಂಧವನ್ನು

ಇನ್ನಷ್ಟು ನಿಕಟವಾಗಿಸಿದೆ. ಮ್ಯಾನ್ಮಾರ್‌ನ ತೈಲ ಮತ್ತು ನೈಸರ್ಗಿಕ ಅನಿಲಗಳ ಮುಖ್ಯ ಬಳಕೆದಾರನಾಗಿರಲು ಚೀನಾ ಬಯಸುತ್ತಿದೆ. ಅಲ್ಲದೆ, ಮ್ಯಾನ್ಮಾರನ ಸೇನೆಗೆ ಜೆಟ್ ಫೈಟರ್, ನೌಕೆಗಳು ಮತ್ತು ಶಸ್ತ್ರಾಸ್ತ್ರಗಳನ್ನು ಪೂರೈಸುವ ಪ್ರಮುಖ ರಾಷ್ಟ್ರ ಚೀನಾವೇ ಆಗಿದೆ. ಚೀನಾದ ನೆರವಿನೊಂದಿಗೆ ಮ್ಯಾನ್ಮಾರ್ ಬಂಗಾಳ ಕೊಲ್ಲಿಯ ಕ್ಯೌಕ್‌ಪ್ಯೂನಲ್ಲಿ ಆಳ ಸಮುದ್ರ ಬಂದರು ನಿರ್ಮಿಸಿದೆ. ಭಾರತದ ಸ್ವಾಧೀನವಿರುವ ಅಂಡಮಾನ್ ದ್ವೀಪಕ್ಕೆ ಸಮೀಪವಿರುವ ಮ್ಯಾನ್ಮಾರ್ ನಿಯಂತ್ರಣದ ಗ್ರೇಟ್ ಕೊಕೊ ದ್ವೀಪದಲ್ಲಿ ಸೇನಾ ನೆಲೆಯನ್ನು ಚೀನಾ ಸ್ಥಾಪಿಸಿದೆ.

- ಮ್ಯಾನ್ಮಾರ್ ಹೆಬ್ಬಾಗಿಲು- ಪ್ರಧಾನಿ ಮೋದಿಯವರ 'ಆಕ್ಟ್ ಈಸ್ಟ್' ನೀತಿಯ ಯಶಸ್ಸಿಗೆ ಆಗ್ನೇಯ ಏಷ್ಯಾ ರಾಷ್ಟ್ರಗಳ ಜತೆಗಿನ ಸಂಪರ್ಕವೇ ಮುಖ್ಯವಾದುದು. ಅಸಿಯಾನ್ ರಾಷ್ಟ್ರಗಳ ಜತೆಗಿನ ಭಾರತದ ಸಂಪರ್ಕಕ್ಕೆ ಮ್ಯಾನ್ಮಾರ್ ಹೆಬ್ಬಾಗಿಲು. ಉಭಯ ರಾಷ್ಟ್ರಗಳಲ್ಲಿ ಶಾಂತಿ ಸುವ್ಯವಸ್ಥೆ ಮತ್ತು ಅಭಿವೃದ್ಧಿ ಆಗಬೇಕು ಎಂದರೆ, ಎರಡೂ ದೇಶಗಳ ಭದ್ರತೆ, ರಾಷ್ಟ್ರೀಯ ಹಿತಾಸಕ್ತಿಗಳನ್ನು ಗಮನಿಸಿ ಮುಂದುವರಿಯಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಮ್ಯಾನ್ಮಾರ್ ಜತೆಗಿನ ಭಾರತದ ಬಾಂಧವ್ಯ ವೃದ್ಧಿಯಾಗುತ್ತಿದೆ. ಇನ್ನೊಂದೆಡೆ ಚೀನಾದ ಜತೆಗಿನ ಮ್ಯಾನ್ಮಾರ್ ನಂಟು ಕಡಿಮೆಯಾಗತೊಡಗಿದೆ. ಅಲ್ಲಿನ ಹಲವು ಮೂಲಭೂತ ಸೌಕರ್ಯಗಳ ವಿಶೇಷವಾಗಿ ಗಡಿಭಾಗದ ಅಭಿವೃದ್ಧಿಗೆ ಭಾರತ ನೆರವು ನೀಡಿದೆ. ಇದರಲ್ಲಿ, ಮಿಜೋರಂ ಮತ್ತು ಬಂಗಾಳ ಕೊಲ್ಲಿಯನ್ನು ಜೋಡಿಸುವ 'ಕಲಾದನ್ ಬಹು ಮಾದರಿ ಟ್ರಾನ್ಸಿಟ್ ಸಾರಿಗೆ ವ್ಯವಸ್ಥೆ'ಗೆ ಭಾರತ ನೆರವು ನೀಡಿದೆ. ಈ ಯೋಜನೆ ಮ್ಯಾನ್ಮಾರ್‌ನ ಸಮುದ್ರ, ನದಿ ಮತ್ತು ರಸ್ತೆ ಮಾರ್ಗ, ಅಲ್ಲದೆ, ಹ್ರಿ-ಟಿಡಿಮ್ ರಸ್ತೆಯ 80 ಕಿ.ಮೀ. ಅಭಿವೃದ್ಧಿ ಮತ್ತು ಮೇಲ್ದರ್ಜೆಗೇರಿಸುವಿಕೆಯೂ ಒಳಗೊಂಡಿದೆ. ಈಗಾಗಲೇ ಮಣಿಪುರ ಸಂಪರ್ಕಿಸುವ 162 ಕಿ.ಮೀ. ಉದ್ದದ ರಸ್ತೆಯ ನವೀಕರಣ ಮಾಡಿದ ಭಾರತ ಅದನ್ನು ಮ್ಯಾನ್ಮಾರ್‌ಗೆ ಹಸ್ತಾಂತರಿಸಿದೆ. ಅಲ್ಲದೆ, ಮ್ಯಾನ್ಮಾರ್ ಜತೆಗಿನ ರಕ್ಷಣಾ ಸಂಬಂಧವನ್ನು ಬಲಗೊಳಿಸಿರುವ ಭಾರತ ಈಗಾಗಲೇ ಹಲವು ಸಿಬ್ಬಂದಿಗೆ ಭಾರತದಲ್ಲಿ ತರಬೇತಿ ನೀಡಿದೆ. ಇವೆಲ್ಲದರ ಜತೆಗೆ ತ್ರಿಪಕ್ಷೀಯ ಹೆದ್ದಾರಿ ಯೋಜನೆ-ವಿಶೇಷವಾಗಿ ಮಣಿಪುರದ ಮೊರೇಹ್‌ನಿಂದ ಥಾಯ್ಲೆಂಡ್‌ನ ಮಾಯೆ ಸೋಟ್ ಮೂಲಕ ಮ್ಯಾನ್ಮಾರ್‌ಗೆ ಸಂಪರ್ಕ ಕಲ್ಪಿಸುವ ಈ ಯೋಜನೆ ಜಾರಿಗೆ ಭಾರತ ತನ್ನ ಬದ್ಧತೆ ಪ್ರದರ್ಶಿಸಿದೆ. ಇದು ಪೂರ್ಣಗೊಂಡಾಗ ಆಗ್ನೇಯ ಏಷ್ಯಾ ರಾಷ್ಟ್ರಗಳ ಜತೆಗೆ ಭಾರತವನ್ನು ಜೋಡಿಸುವ ಬಹುದೊಡ್ಡ ಸಂಪರ್ಕ ಸೇತುವಾಗಲಿದೆ.

- ವಿಶೇಷವಾಗಿ ಚೀನಾದ ಜತೆಗಿನ ಡೋಕ್ಲಮ್ ಬಿಕ್ಕಟ್ಟಿನ ಯಶಸ್ವಿ ಪರಿಹಾರದ ನಂತರದಲ್ಲಿ ಪ್ರಧಾನಿ ಮೋದಿಯವರ ಇತ್ತೀಚಿನ ಮ್ಯಾನ್ಮಾರ್ ಭೇಟಿ, ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗೆ ಉತ್ತಮ ಅವಕಾಶವನ್ನೇ

ಒದಗಿಸಿತು. ಆದಾಗ್ಯೂ, ಮೋದಿಯವರ ಈ ಮಹತ್ವದ ಭೇಟಿಗೆ ಅನಪೇಕ್ಷಿತ ರೊಹಿಂಗ್ಯಾ ಬಿಕ್ಕಟ್ಟಿನ ಕರಿಛಾಯೆ ಆವರಿಸಿದ್ದು ವಾಸ್ತವ. ಮ್ಯಾನ್ಮಾರ್ ಜತೆಗಿನ ಸಂಬಂಧವನ್ನು ಇನ್ನಷ್ಟು ನಿಕಟಗೊಳಿಸಬೇಕಾದ್ದು ಭಾರತದ ಮಟ್ಟಿಗೆ ಬಹಳ ಮುಖ್ಯವಾದುದು. ಭದ್ರತೆ ಮತ್ತು ರಾಷ್ಟ್ರೀಯ ಹಿತಾಸಕ್ತಿ ಕಾಯ್ದುಕೊಳ್ಳುವಲ್ಲಿ ಇದು ಅನಿವಾರ್ಯ ಕೂಡ.

- ಭಾರತಕ್ಕೆ ಬೇಳೆ ಕಾಳು ಪೂರೈಸುವ ಪ್ರಮುಖ ರಾಷ್ಟ್ರ ಮ್ಯಾನ್ಮಾರ್. ಹೀಗಾಗಿ ಆಹಾರದ ಸುರಕ್ಷತೆ ವಿಷಯದಲ್ಲೂ ಮ್ಯಾನ್ಮಾರ್ ಪಾಲುದಾರಿಕೆಯನ್ನು ಪ್ರಶಂಸಿಸಲೇಬೇಕು. ಆಗ್ನೇಯ ಏಷ್ಯಾ ರಾಷ್ಟ್ರಗಳ ಜತೆಗಿನ ಸಂಪರ್ಕ ಸಾಧಿಸುವ ಭಾರತದ ಪ್ರಯತ್ನಕ್ಕೆ ಮ್ಯಾನ್ಮಾರ್ ಕೇಂದ್ರಬಿಂದು. ಅನುಷ್ಠಾನ ಹಂತದಲ್ಲಿರುವ ಯೋಜನೆಗಳ ತ್ವರಿತ ಪ್ರಗತಿಗಾಗಿ ಭಾರತ ಇನ್ನಷ್ಟು ಶ್ರಮ ಹಾಕಬೇಕು. ಭಾರತದ ಕೆಲವು ತೈಲ ಕಂಪನಿಗಳು ಮ್ಯಾನ್ಮಾರ್‌ನಲ್ಲಿ ತೈಲ ಮತ್ತು ನೈಸರ್ಗಿಕ ಅನಿಲ ನಿಕ್ಷೇಪದ ಮೇಲೆ ಹಕ್ಕು ಸಾಧಿಸಲು ಬೇಕಾದ ಗುತ್ತಿಗೆ ನಿಬಂಧನೆಗಳನ್ನು ಪೂರೈಸುವಲ್ಲಿ ವಿಫಲವಾಗಿವೆ. ಇಂತಹ ಕಂಪನಿಗಳು ಹೊಸ ಒಪ್ಪಂದ ಮಾಡುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನವನ್ನು ನಿಗದಿತ ಸಮಯದ ಚೌಕಟ್ಟಿನೊಳಗೇ ಮಾಡಬೇಕು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮಿಂದ..... ಮೈಸೂರಿಗೆ/ಮೈಸೂರಿಗೆ

## 51. ೧೦ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್

- ಜಪಾನ್‌ನ ವಾಕೋಸಿಟಿಯಲ್ಲಿ ನಡೆಯುತ್ತಿರುವ ೧೦ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಜಿತುರಾಯ್ ಹಾಗೂ ಹೀನಾ ಸಿಧು ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

- ಪುರುಷರ ೧೦ಮೀಟರ್ ಏರ್ ಪಿಸ್ತೂಲ್ ವಿಭಾದಲ್ಲಿ ಜಿತು ಮೂರನೇ ಸ್ಥಾನ ಪಡೆದುಕೊಂಡರೆ, ಮಹಿಳೆಯರ ೧೦ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಹೀನಾ ಕಂಚಿನ ಪದಕ ಗೆದ್ದಿದ್ದಾರೆ.

- ೧೦ ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಭಾರತದ ಪುರುಷರ ತಂಡ ಚಿನ್ನ ಗೆದ್ದುಕೊಂಡಿದೆ.ಜಿತು, ಶಹಜಾರ್ ರಿಜ್ವಿ, ಓಂಕಾರ್‌ಸಿಂಗ್ ತಂಡದಲ್ಲಿದ್ದರು.

- ಹೀನಾ, ಶ್ರೀನಿವೇತಾ, ಹರ್ವೀನ್ ಸಾರೊ ಅವರನ್ನು ಒಳಗೊಂಡ ಮಹಿಳೆಯರ ತಂಡ ಬೆಳ್ಳಿ ಪದಕ ಗೆದ್ದುಕೊಂಡಿದೆ.

- ಜೂನಿಯರ್ ಪುರುಷರ ತಂಡ ೧೦ ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಬೆಳ್ಳಿ ಜಯಿಸಿದ್ದು, ತಂಡದಲ್ಲಿ ಅನ್ಮೋಲ್ ಜೈನ್, ಗೌರವ್ ರಣಾ, ಅಭಿಷೇಕ್ ಆರ್ಯ ಇದ್ದಾರೆ. ಅನ್ಮೋಲ್ ಜೂನಿಯರ್ ವೈಯಕ್ತಿಕ ೧೦ ಮೀಟರ್ ಏರ್ ಪಿಸ್ತೂಲ್ ವಿಭಾಗ್ಲದಲಿ ಕಂಚಿನ ಪದಕ ಜಯಿಸಿದ್ದಾರೆ.

- ಟೂರ್ನಿಯಲ್ಲಿ ಒಟ್ಟು ೧೭ ಪದಕಗಳನ್ನು ಗೆದ್ದುಕೊಂಡಿರುವ ಭಾರತ. ೪ ಚಿನ್ನ, ೬ ಬೆಳ್ಳಿ, ೭ ಕಂಚಿನ ಪದಕಗಳನ್ನು ಗೆದ್ದುಕೊಂಡಿದೆ.

## 52.ಆಧುನಿಕ ನಕ್ಷತ್ರಗಳ ಕೈಪಿಡಿಯಲ್ಲಿ ರೇವತಿ, ಭರಣಿ

- ಭಾರತೀಯ ಪಂಚಾಂಗ ಮತ್ತು ಪ್ರಾಚೀನ ಭಾರತದ ಖಗೋಳಶಾಸ್ತ್ರದ ಪಠ್ಯಗಳಲ್ಲಿ ಬರುವ ರೇವತಿ ಮತ್ತು ಭರಣಿ ನಕ್ಷತ್ರಗಳು ಆಧುನಿಕ ಖಗೋಳ ವಿಜ್ಞಾನದಲ್ಲೂ ಶಾಶ್ವತ ಸ್ಥಾನ ಪಡೆದಿವೆ. ಈ ಹೆಸರುಗಳನ್ನು ಆಧುನಿಕ ನಕ್ಷತ್ರಗಳ ಕೈಪಿಡಿಯಲ್ಲಿ ಸೇರಿಸಲಾಗಿದೆ.

- ಖಗೋಳ ವಿಜ್ಞಾನಿಗಳು ಈ ಹಿಂದೆ ಗುರುತಿಸಿದ್ದ ಝೆಟಾ ಪಿಸಿಯಂ ನಕ್ಷತ್ರಕ್ಕೆ ರೇವತಿ ಎಂದು, 41 ಅರಿಯೆಟಿಸ್ ನಕ್ಷತ್ರಕ್ಕೆ ಭರಣಿ ಎಂದು ಮರು ನಾಮಕರಣ ಮಾಡಲಾಗಿದೆ.

- ಇತ್ತೀಚೆಗೆ ನಡೆದಿದ್ದ ಸಭೆಯಲ್ಲಿ ಅಂತರರಾಷ್ಟ್ರೀಯ ಖಗೋಳವಿಜ್ಞಾನ ಒಕ್ಕೂಟವು ಈ ಮರುನಾಮಕರಣಕ್ಕೆ ಒಪ್ಪಿಗೆ ಸೂಚಿಸಿದೆ. ಒಟ್ಟು 86 ನಕ್ಷತ್ರಗಳ ಮರುನಾಮಕರಣಕ್ಕೆ ಈ ಸಭೆಯಲ್ಲಿ ಅನಮೋದನೆ ನೀಡಲಾಗಿದೆ.

## 53. ಕೃತಕ ಬುದ್ಧಿಮತ್ತೆ ಬಳಸಿ ಹೊಸ ಸೌರ ಮಂಡಲ ಪತ್ತೆ ಹೇಗೆ ಮಾಡಿದ ನಾಸಾ

### ಪ್ರಮುಖ ಸುದ್ದಿ

- ನಮ್ಮ ಸೌರ ಮಂಡಲದ ಗ್ರಹಗಳಂತೆಯೇ ಇರುವ ಇನ್ನೊಂದು ಸೌರ ಮಂಡಲವನ್ನು ಅಮೆರಿಕದ ನಾಸಾದ ಕೆಪ್ಲರ್ ಬಾಹ್ಯಾಕಾಶ ಟೆಲಿಸ್ಕೋಪ್ ಮತ್ತು ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ನೆರವಿನೊಂದಿಗೆ ಪತ್ತೆ ಮಾಡಲಾಗಿದೆ ಎಂದು ನಾಸಾ ತಿಳಿಸಿದೆ.

### ಪ್ರಮುಖ ಸಂಗತಿಗಳು

- 'ನಮ್ಮ ಸೌರವ್ಯೂಹದಂತೆಯೇ ಇರುವ ಇನ್ನೊಂದು ಗ್ರಹ ಮಂಡಲ ಪತ್ತೆಯಾಗಿದೆ. ಆದರೆ ಯಾವುದರಲ್ಲೂ ಜೀವಿಗಳ ಅಸ್ತಿತ್ವ ಇರುವ ಸಾಧ್ಯತೆ ಇಲ್ಲ'

- 8 ಗ್ರಹಗಳಿರುವ ಹೊಸ ಸೌರ ಮಂಡಲ ಬಹುತೇಕ ನಮ್ಮ ಸೌರ ಮಂಡಲವನ್ನೇ ಹೋಲುತ್ತದೆ. ಕೆಪ್ಲರ್ 90 ಎಂದು ಕರೆಯಲಾಗುವ ಸೂರ್ಯನ ಸುತ್ತ ಈ ಗ್ರಹಗಳು ಸುತ್ತುತ್ತಿವೆ. ನಮ್ಮ ಸೌರಮಂಡಲದಿಂದ ಸುಮಾರು 2,545 ಜ್ಯೋತಿರ್ವರ್ಷದಷ್ಟು ದೂರದಲ್ಲಿ ಈ ಹೊಸ ಸೌರ ಮಂಡಲವಿದೆ.

- 'ಕೆಪ್ಲರ್-90 ಸೌರ ಮಂಡಲ ನಮ್ಮ ಸೌರ ಮಂಡಲದ್ದೇ ಪ್ರತಿರೂಪದಂತಿದೆ' ಎಂದು ಆಸ್ಟಿನ್‌ನಲ್ಲಿರುವ ಯುನಿವರ್ಸಿಟಿ ಆಫ್ ಟೆಕ್ಸಾಸ್‌ನವರು ತಿಳಿಸಿದರು.

- 'ಸಣ್ಣ ಗ್ರಹಗಳು ಒಳಗಿನ ಕಕ್ಷೆಯಲ್ಲಿದ್ದು ದೊಡ್ಡ ದೊಡ್ಡ ಗ್ರಹಗಳು ಹೊರಗಿನ ಕಕ್ಷೆಗಳಲ್ಲಿ ಸುತ್ತುತ್ತಿವೆ. ಆದರೆ ಎಲ್ಲವೂ ಪರಸ್ಪರ ಬಹಳ ಹತ್ತಿರದಲ್ಲಿರುವಂತೆ ತೋರುತ್ತಿವೆ'

- ಹೊಸದಾಗಿ ಪತ್ತೆಯಾದ ಗ್ರಹ 'ಕೆಪ್ಲರ್-90ಐ' ನಮ್ಮ ಭೂಮಿಯಂತೆಯೇ ಬಂಡೆಗಲ್ಲುಗಳಿಂದ ಕೂಡಿದೆ. ಆದರೆ ತನ್ನ ಸೂರ್ಯನ ಸುತ್ತ 14.4 ದಿನಗಳಿಗೊಮ್ಮೆ ಒಂದು ಸುತ್ತು ಬರುತ್ತದೆ. ಆ ಗ್ರಹದ ಒಂದು ವರ್ಷ ನಮ್ಮ ಭೂಮಿಯ ಎರಡು ವಾರಗಳಿಗೆ ಸಮನಾಗಿದೆ.

- 'ಕೆಪ್ಲರ್-90ಐ' ಗ್ರಹದ ಮೇಲ್ಮೈ ತುಂಬಾ ಬಿಸಿಯಾಗಿದೆ. ಹೀಗಾಗಿ ಅಲ್ಲಿ ಯಾವುದೇ ಜೀವಿಗಳು ಇರುವ ಸಾಧ್ಯತೆಯಿಲ್ಲ. ಸೂರ್ಯನಿಗೆ ಅತಿ ಸಮೀಪವಿರುವುದರಿಂದ ಅದರ ಮೇಲ್ಮೈ ತಾಪಮಾನ 800 ಡಿಗ್ರಿ ಫ್ಯಾರೆನ್ ಹೀಟ್ (426 ಡಿಗ್ರಿ ಸೆಲ್ಸಿಯಸ್) ನಷ್ಟಿದೆ ಎಂದು ನಾಸಾ ಹೇಳಿದೆ.

## 54. ಭಾರತೀಯ ನೌಕಾಪಡೆ ಸೇರಿದ ಕಲವರಿ

### ಪ್ರಮುಖ ಸುದ್ದಿ

- ಸ್ವದೇಶಿ ನಿರ್ಮಿತ ಮೊದಲ ಸ್ಕಾರ್ಪೀನ್ ದರ್ಜೆಯ 'ಕಲ್ವರಿ' ಜಲಾಂತರ್ಗಾಮಿಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಗುರುವಾರ ನೌಕಾಪಡೆಗೆ ಸೇರ್ಪಡೆಗೊಳಿಸಿದರು. ಸುಸಜ್ಜಿತವಾದ ಕಲ್ವರಿ ಜಲಾಂತರ್ಗಾಮಿಯು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಮೇಕ್ ಇನ್ ಇಂಡಿಯಾ ಅಭಿಯಾನಕ್ಕೆ ಅತ್ಯುತ್ತಮ ಉದಾಹರಣೆಯಾಗಿದ್ದು, ದೇಶದ ರಕ್ಷಣಾ ಸನ್ನದ್ಧತೆಯ ನಿಟ್ಟಿನಲ್ಲಿ ಮಹತ್ವ ನಡೆ. ಶಾಂತಿ ಮತ್ತು ಸ್ಥಿರತೆಯ ನಿಟ್ಟಿನಲ್ಲಿ ಹಲವು ರಾಷ್ಟ್ರಗಳು ಭಾರತದ ಜತೆಗಿರಲು ಬಯಸುತ್ತಿವೆ.
- ಮಾನವೀಯ ದೃಷ್ಟಿಯಿಂದ ಬಲಿಷ್ಠ ಭಾರತ ಅತ್ಯವಶ್ಯ. ಹೊಸ ಜಲಾಂತರ್ಗಾಮಿಯನ್ನು ಭಾರತದ ಭವಿಷ್ಯವನ್ನು ಬದಲಿಸಲಿದೆ.

### ಮುಖ್ಯ ಅಂಶಗಳು

- ಭಾರತೀಯ ನೌಕಾಸೇನೆಯ ಪ್ರಾಜೆಕ್ಟ್-75 ಅಡಿ ಆರು ಜಲಾಂತರ್ಗಾಮಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಆ ಯೋಜನೆಯ ಮೊದಲ ಜಲಾಂತರ್ಗಾಮಿ ಕಲ್ವರಿ. ಎರಡನೇ ಐಎನ್‌ಎಸ್ ಕಲ್ವರಿ 2018ರ ಮಧ್ಯಭಾಗದಲ್ಲಿ ನೌಕಾಪಡೆ ಸೇರಲಿದ್ದು, 2020-21ರ ಸಂದರ್ಭಕ್ಕೆ ಉಳಿದ ಜಲಾಂತರ್ಗಾಮಿಗಳು ನೌಕಾಪಡೆಗೆ ಸೇರ್ಪಡೆಗೊಳ್ಳಲಿವೆ.

- ಟೈಗರ್ ಶಾರ್ಕ್‌ಗೆ ಮಲೆಯಾಳಂನಲ್ಲಿ ಕಲ್ವರಿ ಎನ್ನುತ್ತಾರೆ. ಇದರ ಅರ್ಥ ಚುರುಕುತನ, ಶಕ್ತಿ ಮತ್ತು ಪರಭಕ್ಷಕ ಎಂದರ್ಥ. (ಹಿಂದೂಮಹಾಸಗರದ ಆಳ ಸಮುದ್ರದಲ್ಲಿ ಸಿಗುವ ನರಭಕ್ಷಕ ಮೀನು).

- ಭಾರತೀಯ ನೌಕಾಪಡೆಯ 17ನೇ ಜಲಾಂತರ್ಗಾಮಿ

- 2006ರ ಡಿಸೆಂಬರ್ 14ರಂದು ನಿರ್ಮಾಣ ಆರಂಭ

- ಉದ್ದ 67.5 ಮೀಟರ್, ಎತ್ತರ 12.3 ಮೀಟರ್

- 750 ಕೆ.ಜಿ. ತೂಕದ 360ಬ್ಯಾಟರಿ ಸೆಲ್‌ಗಳಿವೆ.
- ಪರಮಾಣೇತರ ಕಲ್ವರಿಯನ್ನು ನೀರಿನೊಳಗೆ ಪತ್ತೆಹಚ್ಚಲಾಗದು

- 50 ವರ್ಷಗಳಿಂದ ನೌಕಾಪಡೆ ಜಲಾಂತರ್ಗಾಮಿ ಬಳಸುತ್ತಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಕಲ್ವರಿ ಹಿನ್ನೆಲೆ

- 1967ರಲ್ಲಿ ನೌಕಾಪಡೆಗೆ ಸೇರಿಸಲ್ಪಟ್ಟ ಮೊದಲ ಜಲಾಂತರ್ಗಾಮಿಯ ಹೆಸರನ್ನು ಐಎನ್‌ಎಸ್ ಕಲ್ವರಿಗೆ ಇಡಲಾಗಿದೆ

- ಫ್ರಾನ್ಸ್‌ನ ರಕ್ಷಣಾ ಮತ್ತು ವಿದ್ಯುತ್ ಕಂಪನಿ ಡಿಸಿಎನ್‌ಎಸ್ ಡೀಸೆಲ್-ಇಲೆಕ್ಟ್ರಿಕ್ ಕಲ್ವರಿಯನ್ನು ವಿನ್ಯಾಸಗೊಳಿಸಿದೆ

- ಕಲ್ವರಿಯಲ್ಲಿ ಅಳವಡಿಸಲಾಗಿರುವ ಉಪಕರಣಗಳ ಸಾಮರ್ಥ್ಯ ಅಳೆಯುವ ಸಲುವಾಗಿ ಅದನ್ನು ಸತತ 120 ದಿನಗಳ ಕಾಲ ಸಮುದ್ರದಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದೆ.

- ಭಾರತವು 1999ರಲ್ಲಿ ಜಲಾಂತರ್ಗಾಮಿಗಳನ್ನು ನಿರ್ಮಾಣ ಮಾಡುವ ಮಹತ್ವಾಕಾಂಕ್ಷಿ ಯೋಜನೆಗೆ ಒಪ್ಪಿಗೆ ನೀಡಿತ್ತು. ಈ ಯೋಜನೆ ಪ್ರಕಾರ 2030ರ ವೇಳೆಗೆ 24 ನೂತನ ಸಾಂಪ್ರದಾಯಿಕ

ಜಲಾಂತರ್ಗಾಮಿಗಳನ್ನು ನೌಕಾಪಡೆಗೆ ಸೇರಿಸುವ ಗುರಿ ಹೊಂದಲಾಗಿದೆ. 18 ವರ್ಷಗಳ ನಂತರ ಯೋಜನೆ ಭಾಗವಾಗಿ ಕಲ್ವರಿಯನ್ನು ನೌಕಾಪಡೆಗೆ ಸೇರ್ಪಡೆಗೊಳಿಸಲಾಗಿದೆ.

- ಫ್ರಾನ್ಸ್‌ನ ನೌಕಾ ಸಮೂಹದಿಂದ ಪರವಾನಗಿ ಪಡೆದು ಮುಂಬೈನ ಮಜಗೋನ್ ಡಾಕ್ ಶಿಪ್‌ಬಿಲ್ಡರ್ ಆರು ಸ್ಕಾರ್ಪೀನ್ ಜಲಾಂತರ್ಗಾಮಿಗಳನ್ನು ನಿರ್ಮಾಣ ಮಾಡುತ್ತಿದೆ. ಇದರಲ್ಲಿ ಐಎನ್‌ಎಸ್ ಕಲ್ವರಿ ಒಂದು.

- ಐದು ವರ್ಷಗಳ ಹಿಂದೆಯೇ ಕಲ್ವರಿಯು ನೌಕಾಪಡೆಗೆ ಸೇರ್ಪಡೆಗೊಳ್ಳಬೇಕಾಗಿತ್ತು. ಆದರೆ ಜಲಾಂತರ್ಗಾಮಿಗೆ ಸಂಬಂಧಿಸಿದ ತಂತ್ರಜ್ಞಾನವನ್ನು ಸೂಕ್ತ ಸಮಯದಲ್ಲಿ ಹಸ್ತಾಂತರ ಮಾಡದೇ ಇರುವ ಕಾರಣ 23,562 ಕೋಟಿ ರೂ. ಮೌಲ್ಯದ ಪ್ರಾಜೆಕ್ಟ್ -75 ಯೋಜನೆ ಗಡುವಿನಲ್ಲಿ ಪೂರ್ಣಗೊಳ್ಳಲಿಲ್ಲ. ಉಳಿದಂತೆ ಮೂರು ದಶಕಗಳಿಗೂ ಹಳೆಯದಾದ ಜರ್ಮನ್ ಮತ್ತು ರಷ್ಯಾ ಜಲಾಂತರ್ಗಾಮಿಗಳು ಸದ್ಯದ ಸ್ಥಿತಿ ಪೂರಕವಾಗಿಲ್ಲ ಎನ್ನಲಾಗಿದೆ. ಮುಂದಿನ ದಿನಗಳಲ್ಲಿ ಸ್ಕಾರ್ಪೀನ್ ಜಲಾಂತರ್ಗಾಮಿಗಳು ನೌಕಾಪಡೆಯ ಆಧಾರಸ್ತಂಭಗಳಾಗಲಿವೆ.

- ಕಿಲೊ ಕ್ಲಾಸ್ ಜಲಾಂತರ್ಗಾಮಿಯಾದ ಐಎನ್‌ಎಸ್ ಸಿಂಧೂಶಾಸ್ತ್ರ ಜಲಾಂತರ್ಗಾಮಿಯನ್ನು 2000ನೇ ಇಸ್ವಿಯ ಜುಲೈನಲ್ಲಿ ನೌಕಾಪಡೆಗೆ ಸೇರ್ಪಡೆಗೊಳಿಸಲಾಗಿತ್ತು. ಇದನ್ನು ರಷ್ಯಾದಿಂದ ಆಮದು ಮಾಡಿಕೊಳ್ಳಲಾಗಿತ್ತು. ಸಿಂಧೂಶಾಸ್ತ್ರ ಜಲಾಂತರ್ಗಾಮಿಯು 1999ರ ಯೋಜನೆಯ ಭಾಗವಾಗಿರಲಿಲ್ಲ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಪ್ರಬಲ ನೌಕಾಪಡೆ ಹೊಂದಿರುವ ಚೀನಾವು, ಅಷ್ಟೇ ಪ್ರಬಲ ಯುದ್ಧಾಸ್ತ್ರಗಳನ್ನು ಒಳಗೊಂಡಿದ್ದು, 60ಕ್ಕೂ ಹೆಚ್ಚು ಡೀಸೆಲ್-ಇಲೆಕ್ಟ್ರಿಕ್ ದಾಳಿ ನಡೆಸಬಲ್ಲ ಜಲಾಂತರ್ಗಾಮಿಗಳನ್ನು ಹೊಂದಿದೆ. ಅಣು ದಾಳಿ ಮತ್ತು ಅಣ್ವಸ್ತ್ರ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ನಡೆಸಬಲ್ಲ 10 ಜಲಾಂತರ್ಗಾಮಿಗಳನ್ನು ಒಳಗೊಂಡಿದೆ. ಡ್ರ್ಯಾಗನ್ ರಾಷ್ಟ್ರಕ್ಕೆ ಹೋಲಿಕೆ ಮಾಡಿದರೆ ಭಾರತ ಸಾಕಷ್ಟು ಹಿಂದೆ ಬಿದ್ದಿದೆ..

## 55.ಅಂತಾರಾಷ್ಟ್ರೀಯ ನ್ಯಾಯಾಲಯ

### ಪ್ರಮುಖ ಸುದ್ದಿ

- ಕುಲ್‌ಭೂಷಣ್ ಜಾಧವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನ ತನ್ನ ಉತ್ತರವನ್ನು ಅಂತಾರಾಷ್ಟ್ರೀಯ ನ್ಯಾಯಾಲಯಕ್ಕೆ ಸಲ್ಲಿಸಲಿದೆ ಎಂದು ಪಾಕಿಸ್ತಾನದ ಜಿಯೋ ನ್ಯೂಸ್ ವರದಿ ಮಾಡಿದೆ.
- ಭಾರತೀಯ ಪ್ರಜೆ ಜಾಧವ್ ಅವರನ್ನು ಬೇಹುಗಾರಿಕೆ ಆರೋಪದಲ್ಲಿ ಪಾಕಿಸ್ತಾನದ ಮಿಲಿಟರಿ ಕೋರ್ಟ್ ಮರಣದಂಡನೆ ಶಿಕ್ಷೆಗೆ ಗುರಿಪಡಿಸಿದೆ. ಇದನ್ನು ಪ್ರಶ್ನಿಸಿ ಭಾರತ ಅಂತಾರಾಷ್ಟ್ರೀಯ ನ್ಯಾಯಾಲಯದ ಮೆಟ್ಟಿಲೇರಿತ್ತು. ಈ ಹಿನ್ನೆಲೆಯಲ್ಲಿ ಕಳೆದ ಮೇ 18ರಂದು ಐಸಿಜೆ ಜಾಧವ್ ಶಿಕ್ಷೆಗೆ ತಡೆಯೊಡ್ಡಿತ್ತು.
- ಜಾಧವ್ ಅವರು ಭಾರತದ ಗುಪ್ತಚರ ಸಂಸ್ಥೆ 'ರಾ' ಪರವಾಗಿ ಬೇಹುಗಾರಿಕೆ ನಡೆಸುತ್ತಿದ್ದರು ಎಂಬ ಪಾಕ್ ಆರೋಪವನ್ನು ಭಾರತ ಬಲವಾಗಿ ನಿರಾಕರಿಸಿದೆ.

## ಅಂತಾರಾಷ್ಟ್ರೀಯ ನ್ಯಾಯಾಲಯದ ಬಗ್ಗೆ

- ಇದು 1945 ರಲ್ಲಿ UN ಚಾರ್ಟರ್ ನಿಂದ ಸ್ಥಾಪಿಸಲ್ಪಟ್ಟಿತು.ಈ ನ್ಯಾಯಾಲಯವು 1946 ರಲ್ಲಿ ಪರ್ಮನಂಟ್ ಕೋರ್ಟ್ ಆಫ್ ಇಂಟರ್ ನ್ಯಾಶನಲ್ ಜಸ್ಟಿಸ್ (ಅಂತಾರಾಷ್ಟ್ರೀಯ ಶಾಶ್ವತ ನ್ಯಾಯಿಕ ನ್ಯಾಯಾಲಯದ ಉತ್ತರಾಧಿಕಾರಿಯಾಗಿ ತನ್ನ ಅಸ್ತಿತ್ವ ಕಂಡುಕೊಂಡಿತು.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ದಿ ಸ್ಟಾಚುಟ್ ಆಫ್ ಇಂಟರ್ ನ್ಯಾಶನಲ್ ಕೋರ್ಟ್ ಆಫ್ ಜಸ್ಟಿಸ್ ,(ಅಂತಾರಾಷ್ಟ್ರೀಯ ನ್ಯಾಯಾಲಯದ ವಿಧಿ ನಿಯಮಗಳು)ಇದು ತನ್ನ ಹಿಂದಿನ ನ್ಯಾಯಾಂಗ ಅಂಗ ಸಂಸ್ಥೆಗೆ ಪೂರಕವಾಗಿದ್ದು ಇದು ಪ್ರಮುಖ ಸಂವಿಧಾನ ಮತ್ತು ನ್ಯಾಯಾಲಯದ ನಿಯಂತ್ರಣದ ಕುರಿತ ನಿಯಮಗಳನ್ನು ಹೊಂದಿರುತ್ತದೆ.

- ಈ ನ್ಯಾಯಾಲಯದ ಕಾರ್ಯಭಾರವು ವಿಶಾಲ ನ್ಯಾಯಾಧಿಕಾರಣದ ವ್ಯಾಪ್ತಿ ಹೊಂದಿದೆ. ಇದುವರೆಗೂ ICJ ತನ್ನ ಇತಿಹಾಸದಲ್ಲಿ ಕಡಿಮೆ ಪ್ರಮಾಣದ ಪ್ರಕರಣಗಳ ಜೊತೆಗೆ ವ್ಯವಹರಿಸಿದೆ.ಆದರೆ 1980 ರ ನಂತರ ಈ ನ್ಯಾಯಾಲಯದ ಸದುಪಯೋಗಪಡಿಸಿಕೊಳ್ಳಲು ಎಲ್ಲಾ ದೇಶಗಳು ತಮ್ಮ ಇಚ್ಛೆ ವ್ಯಕ್ತಪಡಿಸಿ ಸಮಯಾನುಸಾರ ಅನುಕೂಲ ಹೊಂದಲು ಉತ್ಸುಕವಾಗಿವೆ.ಅದರಲ್ಲೂ ಮುಖ್ಯವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ತಮ್ಮ ಉತ್ಸಾಹವನ್ನು ಪ್ರಕಟಿಸಿವೆ. ಆದರೆ ಯುನೈಟೆಡ್ ಸ್ಟೇಟ್ಸ್ ಕಡ್ಡಾಯ ಅಧಿಕಾರ ವ್ಯಾಪ್ತಿಯ ಬಗ್ಗೆ ತನ್ನ ಅಸಮ್ಮತಿ ಸೂಚಿಸಿ 1986 ರಲ್ಲಿ ನ್ಯಾಯಾಲಯ ಪ್ರಕರಣಗಳ ಆಧಾರದ ಮೇಲೆ ಅದರ ಕಾರ್ಯವ್ಯಾಪ್ತಿ ನಿಗದಿಗೆ ಅದು ಒಪ್ಪಿಗೆ ನೀಡಿದೆ.

### ನ್ಯಾಯಾಲಯದ ಸದಸ್ಯರು:

- ICJ ಗಾಗಿ ಒಟ್ಟು ಒಂಬತ್ತು ವರ್ಷ ಅಧಿಕಾರಾವಧಿ ಹೊಂದಿರುವ ಹದಿನೈದು ನ್ಯಾಯಾಧೀಶರನ್ನು UN ಸಾಮಾನ್ಯ ಮಂಡಳಿಯು ಚುನಾಯಿಸುತ್ತದೆ.

- ಇದರಲ್ಲಿ UN ನ ಭದ್ರತಾ ಮಂಡಳಿಯು ಪರ್ಮನೆಂಟ್ ಕೋರ್ಟ್ ಆಫ್ ಆರ್ಬಿಟ್ರೇಶನ್ (ಕಾಯಂ ವಾದ-ವಿವಾದ ವಿಷಯದ ಶಾಶ್ವತ ನ್ಯಾಯಾಲಯ)ನಲ್ಲಿರುವ ಗುಂಪು ಈ ಸದಸ್ಯರನ್ನು ನಾಮನಿರ್ದೇಶನ ಮಾಡುತ್ತದೆ.

- ನ್ಯಾಯಾಧೀಶರು ಒಂಬತ್ತು ವರ್ಷಗಳ ಕಾಲಾವಧಿಗೆ ಆಯ್ಕೆಯಾಗುತ್ತಾರೆ,ಅವರು ಮತ್ತೆ ಎರಡು ಅವಧಿಗಳ ವರೆಗೆ ಮರು ಚುನಾಯಿಸಿಕೊಳ್ಳುವ ಅವಕಾಶ ಹೊಂದಿರುತ್ತಾರೆ. ಪ್ರತಿ ಮೂರುವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ,ಈ ಸಂದರ್ಭದಲ್ಲಿ ಬಹುತೇಕ ಒಂದು-ಮೂರಾಂಶದಷ್ಟು ನ್ಯಾಯಾಧೀಶರು ನಿವೃತ್ತಿ ಪಡೆಯುತ್ತಾರೆ.(ಸಾಮಾನ್ಯವಾಗಿ ಮರು ಚುನಾವಣೆಗಾಗಿ ಸ್ಪರ್ಧಿಸುವವರಾಗಿರುತ್ತಾರೆ) ಒಂದು ವೇಳೆ ನ್ಯಾಯಾಧೀಶರೊಬ್ಬರು ಅಧಿಕಾರವಧಿ ಇರುವಾಗಲೇ ಮೃತಪಟ್ಟರೆ ಅವರ ಅಧಿಕಾರವಧಿ ಪೂರ್ಣಗೊಳಿಸಲು ಅವರದೇ ರಾಷ್ಟ್ರೀಯತೆ ಹೊಂದಿರುವ ನ್ಯಾಯಾಧೀಶರ ಆಯ್ಕೆ ಮಾಡಲಾಗುತ್ತದೆ. ಆದರೆ ಒಂದೇ ದೇಶದ ಇಬ್ಬರನ್ನು ಈ ಹುದ್ದೆಗೆ ಆಯ್ಕೆ ಮಾಡಲಾಗದು

ನ್ಯಾಯಾಲಯದ 15 ನ್ಯಾಯಾಧೀಶರು ಪ್ರದೇಶಗಳ ಪ್ರಕಾರ ಆಯ್ಕೆ ಮಾಡಲಾಗಿದೆ

- ಆಫ್ರಿಕಾದಿಂದ ಮೂರು.
- ಲ್ಯಾಟಿನ್ ಅಮೆರಿಕಾ ಮತ್ತು ಕ್ಯಾರಿಬೀನ್ನಿಂದ ಎರಡು.
- ಏಷ್ಯಾದಿಂದ ಮೂರು.
- ಪಶ್ಚಿಮ ಯುರೋಪ್ ಮತ್ತು ಇತರ ರಾಷ್ಟ್ರಗಳಿಂದ ಐದು.
- ಪೂರ್ವ ಯೂರೋಪ್ನಿಂದ ಎರಡು

## 56. ಇ–ತ್ಯಾಜ್ಯ(E-WASTE) ನಿರ್ವಹಣೆ

### ಪ್ರಮುಖ ಸುದ್ದಿ

- ಇ–ತ್ಯಾಜ್ಯ ನಿರ್ವಹಣೆ ಲೋಪದಿಂದಾಗಿ ಭಾರತದಾದ್ಯಂತ ತೀವ್ರ ಆರೋಗ್ಯ ಸಮಸ್ಯೆ ಹಾಗೂ ಪರಿಸರ ಹಾನಿ ಉಂಟಾಗುತ್ತಿದೆ ಎಂದು ವಿಶ್ವಸಂಸ್ಥೆಯ 'ಜಾಗತಿಕ ಇ–ತ್ಯಾಜ್ಯ ನಿಗಾ–2017' ವರದಿ ಹೇಳಿದೆ. ಬಳಸಿ ಎಸೆದ ಫೋನ್, ಲ್ಯಾಪ್‌ಟಾಪ್, ಫ್ರಿಡ್ಜ್, ಟಿ.ವಿ ಮೊದಲಾದ ಎಲೆಕ್ಟ್ರಾನಿಕ್ ಉಪಕರಣಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡದಿದ್ದಲ್ಲಿ ಅಪಾಯ ಖಚಿತ ಎಂದು ವರದಿ ಎಚ್ಚರಿಸಿದೆ.

### ಮುಖ್ಯ ಅಂಶಗಳು

- 2 ಟನ್ - 2016ರಲ್ಲಿ ಭಾರತದಲ್ಲಿ ಉತ್ಪಾದನೆಯಾದ ಇ–ತ್ಯಾಜ್ಯ.
- 10 ಲಕ್ಷ ಜನ- ಇ–ತ್ಯಾಜ್ಯ ಮರುಬಳಕೆ ಕೆಲಸವನ್ನು ಅಸಾಂಪ್ರದಾಯಿಕವಾಗಿ ಮಾಡುತ್ತಿರುವವರು(ಈ ಪೈಕಿ ಬಹುತೇಕರು ಅನಕ್ಷರಸ್ಥರು ಹಾಗೂ ಈ ಕೆಲಸ ಅಪಾಯಕಾರಿ ಎಂಬ ತಿಳಿವಳಿಕೆ ಇಲ್ಲದವರು)

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ವರದಿ ಪ್ರಸ್ತಾಪಿಸಿದ ಅಂಶಗಳು:

- ಜಗತ್ತಿನಲ್ಲಿ ವೇಗವಾಗಿ ಬೆಳೆಯುತ್ತಿರುವ ಉದ್ಯಮಗಳ ಪೈಕಿ ಭಾರತದ ಎಲೆಕ್ಟ್ರಾನಿಕ್ ಉದ್ಯಮವೂ ಒಂದು.
- ಆದರೆ ಪ್ರಮುಖ ನಗರಗಳಲ್ಲಿ ತ್ಯಾಜ್ಯ ಮರುಬಳಕೆ ಘಟಕಗಳು ಇನ್ನೂ ಅಭಿವೃದ್ಧಿ ಹಂತದಲ್ಲಿವೆ.
- ಇ–ತ್ಯಾಜ್ಯ ಉತ್ಪಾದನೆ ಪ್ರಮಾಣದಲ್ಲಿ ಕ್ರಮೇಣ ಹೆಚ್ಚಳ; ಮರುಬಳಕೆ ಪ್ರಮಾಣ ಅತ್ಯಲ್ಪ.
- 4.47 ಕೋಟಿ ಟನ್- ಜಗತ್ತಿನಲ್ಲಿ 2016ರಲ್ಲಿ ಉತ್ಪಾದನೆಯಾದ ಇ–ತ್ಯಾಜ್ಯ.
- ಶೇ 20 -ಪುನರ್ಬಳಕೆಯಾದ ಇ–ತ್ಯಾಜ್ಯದ ಪ್ರಮಾಣ.
- 7.4 ಟನ್- ಜಾಗತಿಕವಾಗಿ ಅತಿಹೆಚ್ಚು ಇ–ತ್ಯಾಜ್ಯ ಉತ್ಪಾದಿಸುವ ಮೊದಲ ದೇಶ ಚೀನಾ

### ಭಾರತದ ಸ್ಥಿತಿ:

- ಭಾರತದಲ್ಲಿ ಇ–ತ್ಯಾಜ್ಯ ನಿರ್ವಹಣೆ ಸಂಬಂಧ 3 ನಿಯಮಗಳು ಜಾರಿಯಲ್ಲಿವೆ.
- ಕೈಗಾರಿಕೀಕರಣ, ನಗರೀಕರಣದಿಂದ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಹೆಚ್ಚಳ.
- ಇದರಿಂದ ಸಹಜವಾಗಿ ಇ–ತ್ಯಾಜ್ಯ ಉತ್ಪಾದನೆ ಪ್ರಮಾಣದಲ್ಲಿ ಏರಿಕೆ.
- ಸೆಲ್‌ಫೋನ್, ಇತರ ಉಪಕರಣಗಳು ಕಡಿಮೆ ಬೆಲೆಗೆ ದೊರೆಯುತ್ತಿರುವುದೂ ಸಮಸ್ಯೆ ಸೃಷ್ಟಿಸಿದೆ.
- ಹೊಸದನ್ನು ಖರೀದಿಸುವ ಉಮೇದಿನಿಂದಾಗಿ ಹಳೆಯ ಉಪಕರಣಗಳು ತ್ಯಾಜ್ಯವಾಗಿ ಮಾರ್ಪಾಡಾಗುತ್ತಿವೆ.

## 57. ಸಖಿ ಒನ್ ಸ್ಟಾಪ್ ಸೆಂಟರ್

### ಪ್ರಮುಖ ಸುದ್ದಿ

- ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಸಖಿ ಒನ್ ಸ್ಟಾಪ್ ಕೇಂದ್ರಗಳ ಪಾತ್ರದ ಬಗ್ಗೆ ರಾಷ್ಟ್ರೀಯ ಕಾರ್ಯಾಗಾರವನ್ನು ನವದೆಹಲಿಯಲ್ಲಿ ನಡೆಸಲಾಗುತ್ತಿದೆ.
- ಇದನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಕಾರ್ಯಾಗಾರವನ್ನು ಆಯೋಜಿಸಿದೆ. ಸುಮಾರು 400 ಸಖಿ-ಒನ್ ಸ್ಟಾಪ್ ಸೆಂಟರ್ ಕಾರ್ಯಕರ್ತರು ಮತ್ತು ದೇಶಾದ್ಯಂತ 33 ರಾಜ್ಯಗಳ / ಯು.ಟಿ.ಗಳಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಇಲಾಖೆಯ ಅಧಿಕಾರಿಗಳು ಕಾರ್ಯಾಗಾರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

### ಸಖಿ' ಯೋಜನೆ ಬಗ್ಗೆ

- ಸಖಿ ಎಂದು ಜನಪ್ರಿಯವಾಗಿ ಪರಿಚಿತವಾಗಿರುವ ಈ ಯೋಜನೆಯು ಏಪ್ರಿಲ್ 1, 2015 ರಿಂದ ಜಾರಿಗೊಳಿಸಲಾಗಿದೆ . ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಈ ಯೋಜನೆಯನ್ನು ರಚಿಸಲಾಗಿದೆ
- ವೈದ್ಯಕೀಯ ನೆರವು, ಪೊಲೀಸ್ ನೆರವು, ಕಾನೂನು ನೆರವು / ದೂರು ನಿರ್ವಹಣೆ, ಮಾನಸಿಕ ಸಮಾಲೋಚನೆ ಮತ್ತು ಬಾಧಿತ ಮಹಿಳೆಯರಿಗೆ ತಾತ್ಕಾಲಿಕ ಬೆಂಬಲ ಸೇವೆಗಳು ಸೇರಿದಂತೆ ಸಮಗ್ರ ಶ್ರೇಣಿಯ ಸೇವೆಗಳನ್ನು ಪ್ರವೇಶಿಸಲು ಈ ಯೋಜನೆಯ ಉದ್ದೇಶಿವಾಗಿದೆ
- ಈ ಯೋಜನೆಯಡಿಯಲ್ಲಿ, ಒನ್ ಸ್ಟಾಪ್ ಸೆಂಟರ್ ಅನ್ನು ರಾಷ್ಟ್ರವ್ಯಾಪಿ ಹಂತ ಹಂತವಾಗಿ ಸ್ಥಾಪಿಸಲಾಗುವುದು ಎಂದು ನಿರೀಕ್ಷಿಸಲಾಗಿದೆ.

## 58. ತ್ರಿವಳಿ ತಲಾಖ್ ಮಸೂದೆಗೆ ಕೇಂದ್ರ ಸಚಿವ ಸಂಪುಟ ಅಸ್ತು

### ಪ್ರಮುಖ ಸುದ್ದಿ

- ಸುಪ್ರೀಂ ಕೋರ್ಟ್ ತ್ರಿವಳಿ ತಲಾಖ್ ಅನ್ನು ತಾತ್ಕಾಲಿಕವಾಗಿ ನಿಷೇಧಿಸಿದ್ದು, ಇದೀಗ ಅದನ್ನು ಕಾನೂನಾತ್ಮಕವಾಗಿ ಸಂಪೂರ್ಣ ತೆಗೆದು ಹಾಕಲು ಮುಂದಾಗಿರುವ ಕೇಂದ್ರ ಸರ್ಕಾರ ತ್ರಿವಳಿ ತಲಾಖ್ ತಿದ್ದುಪಡಿ ಮಸೂದೆಯನ್ನು ಸಿದ್ಧಪಡಿಸಿದ್ದು, ಅದಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

### ಹಿನ್ನಲೆ

- ಕಳೆದ ಆಗಸ್ಟ್ 22ರಂದು ಸುಪ್ರೀಂ ಕೋರ್ಟ್ ಮುಸ್ಲಿಮರಲ್ಲಿ ಜಾರಿ ಇರುವ ವಿವಾಹ ವಿಚ್ಛೇದನ ಪದ್ಧತಿಯಾದ ತ್ರಿವಳಿ ತಲಾಖ್ ಅನ್ನು ಆರು ತಿಂಗಳ ಕಾಲ ನಿಷೇಧಿಸಿತ್ತು. ಅಲ್ಲದೆ ಈ ಸಂಬಂಧ ಶಾಸನ ಜಾರಿಗೆ ತರುವಂತೆ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿತ್ತು.
- ಈ ಹಿನ್ನೆಲೆಯಲ್ಲಿ ಕೇಂದ್ರ ಕಾನೂನು ಇಲಾಖೆ ಸಿದ್ಧಪಡಿಸಿದ್ದ ತ್ರಿವಳಿ ತಲಾಖ್ ತಿದ್ದುಪಡಿ ಮಸೂದೆಗೆ ಇಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವ ಕೇಂದ್ರ ಸಂಪುಟ ಒಪ್ಪಗೆ ನೀಡಿದ್ದು, ಅದನ್ನು ಇಂದಿನಿಂದ ಆರಂಭವಾಗಿರುವ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುತ್ತಿದೆ.

- ಮಸೂದೆಯಲ್ಲಿ ತ್ರಿವಳಿ ತಲಾಖ್ ಅಪರಾಧ ಎಂದು ಘೋಷಿಸಲಾಗಿದ್ದು, ತಲಾಖ್ ನೀಡುವ ಪುರುಷರಿಗೆ ದಂಡ, ಮೂರು ವರ್ಷ ಜೈಲು ಶಿಕ್ಷೆ ಹಾಗೂ ಮಹಿಳೆಯರಿಗೆ ಪರಿಹಾರ ನೀಡಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ.
- ಸುಪ್ರೀಂ ಆದೇಶ ಜಾರಿಗೆ ಬಂದ ನಂತರವೂ ಕೆಲವು ಕಡೆ ತ್ರಿವಳಿ ತಲಾಖ್ ಸಂಪ್ರದಾಯದಂತೆ ಮುಸ್ಲಿಂ ಮಹಿಳೆಯರಿಗೆ ವಿಚ್ಛೇದನ ನೀಡಿರುವ ಪ್ರಕರಣಗಳು ಬೆಳಕಿಗೆ ಬಂದಿದ್ದವು. ಈ ನಿಟ್ಟಿನಲ್ಲಿ ಇದಕ್ಕೆ ಕಾನೂನು ರೂಪಿಸಲು ನಿರ್ಧರಿಸಿರುವ ಕೇಂದ್ರ ಸರ್ಕಾರ ಮಸೂದೆ ಸಿದ್ಧಪಡಿಸಲು ಸಚಿವರ ಸಮಿತಿ ರಚಿಸಿತ್ತು.

## 59.ಎಕುವೆರಿನ್(Ekuverin')

### ಪ್ರಮುಖ ಸುದ್ದಿ

- ಭಾರತ ಮತ್ತು ಮಾಲ್ದೀವ್ಸ್ ಸೇನೆಯ ಜಂಟಿ ಸಮರಾಭ್ಯಾಸ ನಮ್ಮದೇ ಕರ್ನಾಟಕದಲ್ಲಿ ನಡೆಯಲಿದೆ ಎಂದು ತಿಳಿದಿದೆ .

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಮುಖ ಸಂಗತಿಗಳು

- ಇದೇ ಡಿಸೆಂಬರ್ 15ರಿಂದ 28ರವರೆಗೆ ನಡೆಯಲಿರುವ ಭಾರತೀಯ ಸೇನೆ ಮತ್ತು ಮಾಲ್ದೀವ್ಸ್ ಸೇನೆಯ 8ನೇ ಆವೃತ್ತಿಯ 'ಎಕುವೆರಿನ್' ಜಂಟಿ ತಾಲಿಮು ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿ ನಡೆಯಲಿದೆ.
- ಈ ಬಗ್ಗೆ ಕೇಂದ್ರ ರಕ್ಷಣಾ  ಸಚಿವಾಲಯ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ಭಾರತ ಮತ್ತು ಮಾಲ್ದೀವ್ಸ್ ದೇಶಗಳ 14 ದಿನಗಳ ದ್ವಿಪಕ್ಷೀಯ ಜಂಟಿ ಸಮರಾಭ್ಯಾಸ ಇದೇ ಡಿಸೆಂಬರ್ 15ರಿಂದ ಆರಂಭವಾಗಲಿದ್ದು, ಡಿಸೆಂಬರ್ 28ರಂದು ಅಂತ್ಯವಾಗಲಿದೆ  ಎಂದು ಮಾಹಿತಿ ನೀಡಿದೆ.

- 2009ರಿಂದ ಭಾರತೀಯ ಸೇನೆ ಹಾಗೂ ಮಾಲ್ದೀವ್ಸ್ ಸೇನೆ 'ಎಕುವೆರಿನ್' ಜಂಟಿ ಸಮರಾಭ್ಯಾಸವನ್ನು ಆಯೋಜಿಸುತ್ತಾ ಬಂದಿದ್ದು, 2016ರ ಡಿಸೆಂಬರ್ ನಲ್ಲಿ 7ನೇ ಆವೃತ್ತಿಯ 'ಎಕುವೆರಿನ್' ಸಮರಾಭ್ಯಾಸ ಮಾಲ್ದೀವ್ಸ್ ನ ಕಧ್ದೂ, ಲಾಮು ಅಟಾಲ್ ನಲ್ಲಿ ನೆರವೇರಿತ್ತು.

- ಇದೀಗ 8ನೇ ಆವೃತ್ತಿಯ ಸಮರಾಭ್ಯಾಸ ಭಾರತದಲ್ಲಿ ಆಯೋಜನೆಯಾಗಿದ್ದು, ಪ್ರಮುಖವಾಗಿ ಕರ್ನಾಟಕದ ಬೆಳಗಾವಿ ಜಿಲ್ಲೆಯಲೇ ಜಂಟಿ ಸಮರಾಭ್ಯಾಸ ನಡೆಯಲಿದೆ.
- ಮಾಲ್ಡೀವ್ಸ್ ನ ಧಿವೆಹಿ ಭಾಷೆಯಲ್ಲಿ ಎಕುವೆರಿನ್ ಎಂದರೆ ಸ್ನೇಹ ಎಂದರ್ಥ. ಹೀಗಾಗಿ ಭಾರತ-ಮಾಲ್ಡೀವ್ಸ್ ಸೇನಾ ಸಮರಾಭ್ಯಾಸಕ್ಕಾಗಿ ಎಕುವೆರಿನ್ ಎಂದೇ ನಾಮಕರಣ ಮಾಡಲಾಗಿತ್ತು.

## 60. ಅಮರನಾಥ ಗುಹೆಯನ್ನು ಶಬ್ದರಹಿತ ಪ್ರದೇಶ ಎಂದು ಘೋಷಣೆ ಮಾಡಿಲ್ಲ: ಎನ್ ಜಿಟಿ ಸ್ಪಷ್ಟನೆ

### ಪ್ರಮುಖ ಸುದ್ದಿ

- ಪವಿತ್ರ ಯಾತ್ರಾ ಸ್ಥಳವಾದ ಅಮರನಾಥ್ ಗುಹೆಯನ್ನು ಶಬ್ದರಹಿತ ಪ್ರದೇಶ ಎಂದು ಘೋಷಣೆ ಮಾಡಿಲ್ಲ ಎಂದು ಹಸಿರು ನ್ಯಾಯಾಧಿಕರಣ ಸ್ಪಷ್ಟನೆ ನೀಡಿದೆ.
- ಅಮರನಾಥ್ ಗುಹೆಯನ್ನು ಶಬ್ದರಹಿತ ಪ್ರದೇಶವಾಗಿ ಘೋಷಣೆ ಮಾಡುವ ಸಂಬಂಧ ಇಂದು ಮುಂದುವರಿದ ವಿಚಾರಣೆಯಲ್ಲಿ ಅಮರನಾಥ್ ಗುಹೆಯನ್ನು ಶಬ್ದರಹಿತ ಪ್ರದೇಶ ಎಂದು ಎನ್ ಜಿಟಿ ಇನ್ನೂ ಘೋಷಣೆ ಮಾಡಿಲ್ಲ ಎಂದು ನ್ಯಾಯಮೂರ್ತಿ ಸ್ವತಂತ್ರ ಕುಮಾರ್ ಹೇಳಿದ್ದಾರೆ.
- ಈ ಹಿಂದೆ ನಡೆದ ವಿಚಾರಣೆಯಲ್ಲಿ ಅಮರನಾಥ್ ಗುಹೆಯೂ ಸೇರಿದಂತೆ ಸುತ್ತಮುತ್ತಲ ಪ್ರದೇಶವನ್ನು ಶಬ್ದ ರಹಿತ ಪ್ರದೇಶ ಎಂದು ಘೋಷಣೆ ಮಾಡುವ ಸಂಬಂಧ ನಿರ್ಧಾರ ಕೈಗೊಳ್ಳುವುದಾಗಿ ಎನ್ ಜಿಟಿ ಹೇಳಿತ್ತು. ಕಾಶ್ಮೀರದಲ್ಲಿ ಚಳಿಗಾಲ ಆರಂಭವಾಗಿದ್ದು, ಈಗಾಗಲೇ ಮೊದಲ ಹಂತದ ಹಿಮಮಳೆ ಕೂಡ ಆರಂಭವಾಗಿದೆ. ಹೀಗಾಗಿ ಅಮರನಾಥ್ ಗುಹೆಯ ಸುತ್ತಮುತ್ತ ಭಾರಿ ಪ್ರಮಾಣದ ಹಿಮ ಶೇಖರಣೆಯಾಗಿದೆ. ಶಬ್ದ ಮಾಡುವುದರಿಂದ ಅಲ್ಲಿನ ಮಂಜುಗೆಡ್ಡೆಗಳ ಮೇಲೆ ಪರಿಣಾಮವಾಗಿ ಅವು ಜಾರುವ ಅಥವಾ ಹಿಮಪಾತವಾಗುವ ಸಾಧ್ಯತೆ ಇದೆ ಎಂದು ಎನ್ ಜಿಟಿ ಅಭಿಪ್ರಾಯಪಟ್ಟಿತ್ತು. ಅಲ್ಲದೆ ಪವಿತ್ರ ಗುಹೆಯನ್ನು ಶಬ್ದರಹಿತ ಪ್ರದೇಶವಾಗಿ ಘೋಷಣೆ ಮಾಡುವ ಇಂಗಿತ ವ್ಯಕ್ತಪಡಿಸಿತ್ತು.
- ಎನ್ ಜಿಟಿ ಹೇಳಿಕೆ ಸಂಬಂಧ ಅಮರನಾಥ್ ಯಾತ್ರಾರ್ಥಿಗಳು ವ್ಯಾಪಕ ಅಸಮಾಧಾನ ವ್ಯಕ್ತಪಡಿಸಿದ್ದರು.

### ಅಮರನಾಥ ಗುಹೆ ಬಗ್ಗೆ

- ಅಮರನಾಥ್ ಹಿಂದೂ ಧರ್ಮದ ದೇವ ಶಿವನಿಗೆ ಸಮರ್ಪಿತವಾಗಿರುವ, ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿರುವ ಒಂದು ಗುಹೆ ದೇವಾಲಯ.
- ಸುಮಾರು ೫೦೦೦ ವರ್ಷಗಳಷ್ಟು ಹಳೆಯದಿರಬಹುದೆಂದು ನಂಬಲಾಗಿರುವ ಈ ದೇವಾಲಯವು ಹಿಂದೂ ಪುರಾಣದಲ್ಲಿ ಮಹತ್ವವನ್ನು ಹೊಂದಿದೆ. ಗುಹೆಯೊಳಗೆ ಮಂಜಿನ ಗೆಡ್ಡೆಯೊಂದು (stalagmite) ಲಿಂಗದ ಆಕಾರವನ್ನು ಹೊಂದಿದ್ದು ಇದನ್ನು ಇಲ್ಲಿ ಪೂಜಿಸಲಾಗುತ್ತದೆ. ೩,೮೮೮ ಮೀಟರ್ ಎತ್ತರದಲ್ಲಿ ಇರುವ ಈ ದೇವಾಲಯವು ಶ್ರೀನಗರದಿಂದ ಸುಮಾರು ೧೪೧ ಕಿ.ಮಿ. ದೂರದಲ್ಲಿದೆ.
- ಅಮರನಾಥ ಪದದ ಅರ್ಥ ಅಮರ ಅಂದರೆ ಚಿರಂಜೀವಿ ಹಾಗು ನಾಥ ಅಂದರೆ ದೇವರು ಎಂಬ ಎರಡು ಪದಗಳಿಂದ ಈ ಸ್ಥಳವು ಅಮರನಾಥ ಎಂಬ ಹೆಸರನ್ನು ಪಡೆದಿದೆ.

- ಗುಹೆಯ ಹೊರಭಾಗದ ಒಂದು ಪಕ್ಕದಲ್ಲಿ ಹರಿಯುತ್ತಿರುವ ಅಮರಗಂಗೆ ಎಂಬ ಸಣ್ಣ ಹಿಮಝರಿಯಾತ್ರಾರ್ಥಿಗಳ ಸ್ನಾನಪಾನಾದಿಗಳಿಗೆ ಪವಿತ್ರವೆನಿಸಿದೆ. ಗುಹೆಯ ಒಂದು ಮೂಲೆಯಲ್ಲಿ ದೊಡ್ಡ ಹಿಮರಾಶಿ ಶಿವಲಿಂಗಾಕಾರದಲ್ಲಿ ಕಾಣಿಸುವುದು. ಇದನ್ನು ಅಮರನಾಥಶಿವ ಎಂದು ಕರೆಯುತ್ತಾರೆ.
- ಈ ದೇವಾಲಯ ಅಲ್ಲಿನ ದೇವನಂತೆ ಕೇವಲ ಪ್ರಾಕೃತಿಕ, ಮಾನವನಿರ್ಮಿತವಲ್ಲ. ಪ್ರಕೃತಿಯ ನಗ್ನೀಕರಣಕಾರಕಗಳಾದ ಮಳೆಗಾಳಿ ಬಿಸಿಲುಗಳು ಈ ಪವಾಡವನ್ನೆಸಗಿವೆ. ಇಲ್ಲಿ ಪ್ರಕೃತಿಯೇ ದೇವ, ದೇಗುಲ. ಯಾತ್ರಾರ್ಥಿಗಳೇ ಪೂಜಾರಿಗಳು. ಈ ವಿಶೇಷಗುಣದಿಂದಾಗಿ ಅಮರನಾಥ ಗುಹೆ ಬಹುಮುಖ್ಯ ಯಾತ್ರಾಸ್ಥಳಗಳಲ್ಲೊಂದಾಗಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 61.ಎಕೊ ನಿವಾಸ್

### ಪ್ರಮುಖ ಸುದ್ದಿ

- ಪ್ರತಿವರ್ಷ ಡಿಸೆಂಬರ್ 14 ರಂದು ರಾಷ್ಟ್ರೀಯ ಶಕ್ತಿ ಸಂರಕ್ಷಣಾ ದಿನವನ್ನಾಗಿ ಆಚರಿಸಲಾಗುತ್ತದೆ. ಇದೆ ಸಂದರ್ಭದಲ್ಲಿ ದೇಶದಲ್ಲಿ ಸಮರ್ಥ ಮತ್ತು ಶಕ್ತಿಯ ಪರಿಣಾಮಕಾರಿ ಬಳಕೆಯ ಬಗ್ಗೆ ಜಾಗೃತಿಯನ್ನು ಮೂಡಿಸಲು ಸಂವಾದಾತ್ಮಕ ಆನ್ಲೈನ್ ಪೋರ್ಟಲ್, ECO-NIWAS ನ್ನು (Energy Conservation – New Indian Way for Affordable & Sustainable homes) ಸರ್ಕಾರ ಅನಾವರಣಗೊಳಿಸಿದೆ.

ರಾಷ್ಟ್ರೀಯ ಶಕ್ತಿ ಸಂರಕ್ಷಣಾ ದಿನದ ಬಗ್ಗೆ

- ಇಂಧನ ಸಂರಕ್ಷಣೆ ದಿನವನ್ನು ಪ್ರತಿವರ್ಷ ಡಿಸೆಂಬರ್ 14 ರಂದು ಕೇಂದ್ರ ಶಕ್ತಿ ಸಚಿವಾಲಯದ ಅಡಿಯಲ್ಲಿ ಇಂಧನ ದಕ್ಷತೆಯ ಬ್ಯೂರೋ (ಬಿಇಇ) ಆಯೋಜಿಸಿದೆ. ಇದರ ಮುಖ್ಯ ಉದ್ದೇಶವೆಂದರೆ ಶಕ್ತಿ ಸಾಮರ್ಥ್ಯ ಮತ್ತು ಸಂರಕ್ಷಣೆಯಲ್ಲಿ ಭಾರತದ ಸಾಧನೆಗಳನ್ನು ಪ್ರದರ್ಶಿಸುವ ಉದ್ದೇಶದಿಂದ, ಮತ್ತು ಸಮಗ್ರ ಅಭಿವೃದ್ಧಿಯ ಮಹತ್ವಾಕಾಂಕ್ಷೆಗಾಗಿ ಕೆಲಸ ಮಾಡುವಾಗ, ಹವಾಮಾನ ಬದಲಾವಣೆ ತಗ್ಗಿಸುವಿಕೆಯನ್ನು ಕಡೆಗೆ ರಾಷ್ಟ್ರದ ಒಟ್ಟಾರೆ ಪ್ರಯತ್ನ.

- ಅದರ ಜಾಗೃತಿ ಪ್ರಭಾವದ ಭಾಗವಾಗಿ, ರಾಷ್ಟ್ರೀಯ ಇಂಧನ ಸಂರಕ್ಷಣೆ ಪ್ರಶಸ್ತಿಗಳೊಂದಿಗೆ ಅವರನ್ನು ಸನ್ಮಾನಿಸುವ ಮೂಲಕ ಕೈಗಾರಿಕೆಗಳ ಪ್ರಯತ್ನಗಳನ್ನು ಬಿಇಇ ಗುರುತಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ. ಇಂಧನ ಸಂರಕ್ಷಣೆಯ ವಾರ್ಷಿಕ ರಾಷ್ಟ್ರೀಯ ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಿ ರಾಷ್ಟ್ರೀಯ ವಿಜೇತರಿಗೆ ಬಿಇಇ ಪ್ರಶಸ್ತಿಗಳನ್ನು ಕೂಡಾ ನೀಡಿದೆ.

## 62. 100 ಕೋಟಿಗೂ ಅಧಿಕ ಭಾರತೀಯರಿಗೆ ಆರೋಗ್ಯ ವಿಮೆ ಇಲ್ಲ:ಜಾಗತಿಕ ವರದಿ

ಪ್ರಮುಖ ಸುದ್ದಿ

- 135 ಕೋಟಿ ಜನಸಂಖ್ಯೆ –ಇರುವ ಭಾರತದಲ್ಲಿ 100 ಕೋಟಿಗೂ ಅಧಿಕ ಜನರಿಗೆ ಆರೋಗ್ಯ ವಿಮೆ ಇಲ್ಲ. ದ ಲ್ಯಾನ್ಸೆಟ್ ಪ್ರಕಟಿಸಿರುವ ಜಾಗತಿಕ ಅಧ್ಯಯನ ವರದಿಯಲ್ಲಿ ಆರೋಗ್ಯ ವಿಮೆ ವಿಷಯದಲ್ಲಿ ಪಟ್ಟಿ ಮಾಡಲ್ಪಟ್ಟಿರುವ 100 ದೇಶಗಳ ಪೈಕಿ ಭಾರತ 56ನೇ ಸ್ಥಾನದಲ್ಲಿರುವ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ.

ಪ್ರಮುಖ ಸಂಗತಿಗಳು

- "ದಿ ಗ್ಲೋಬಲ್ ಮಾನಿಟರಿಂಗ್ ರಿಪೋರ್ಟ್ 2017 (ಜಿಎಂಆರ್ 2017) ನ ವರದಿಯನ್ನು ಟೋಕಿಯೋದ ಯುನಿವರ್ಸಲ್ ಹೆಲ್ತ್ ಕವರೇಜ್ ಫೋರಮ್ ನಲ್ಲಿ ಅನಾವರಣಗೊಳಿಸಲಾಯಿತು.

- ಈ ವರದಿಯ ಪ್ರಕಾರ ವಿಶ್ವ ಜನಂಖ್ಯೆಯ ಅರ್ಧಾಂಶದಷ್ಟು ಜನರಿಗೆ, ಎಂದರೆ 7.3 ಶತಕೋಟಿ ಜನರಿಗೆ ಆರೋಗ್ಯ ವಿಮೆ ಇಲ್ಲದಿರುವುದು ಕಂಡು ಬಂದಿದೆ. ಇದೇ ರೀತಿ ಈ 7.3 ಶತಕೋಟಿ ಜನರಿಗೆ ಆವಶ್ಯಕ ಆರೋಗ್ಯ ಸೇವೆಗಳು ಕೂಡ ಲಭಿಸದಿರುವುದು ಬಹಿರಂಗವಾಗಿದೆ.

- ವರದಿಯ ಪ್ರಕಾರ ವಿಶ್ವ ಜನಸಂಖ್ಯೆಯ ಕೇವಲ ಶೇ.27 ಮಂದಿಗೆ ಮಾತ್ರವೇ ಆರೋಗ್ಯ ರಕ್ಷಣೆ ಸೇವೆಗಳು ಸಿಗುತ್ತಿವೆ; ಅಥವಾ ಅದನ್ನು ಪಡೆಯುವ ಆರ್ಥಿಕ ತಾಕತ್ತು ಅವರಿಗಿದೆ.

- ಈ ವರದಿಯು ಬಹಿರಂಗಪಡಿಸಿರುವ ಜನಾರೋಗ್ಯಕ್ಕೆ ಸಂಬಂಧಿಸಿದ ಕೆಲವು ಗಂಭೀರ ಕಳವಳಕಾರಿ ವಿಷಯಗಳು ಇಂತಿವೆ

- ವಿಶ್ವದ ನೂರು ಕೋಟಿ ಜನರು ಅನಿಯಂತ್ರಿತ ಹೈಪರ್‌ಟೆನ್ಶನ್ ಜತೆಗೆ ಬದುಕುತ್ತಿದ್ದಾರೆ. 20 ಕೋಟಿ ಮಹಿಳೆಯರು ಪರ್ಯಾಪ್ತ ಕುಟುಂಬ ಕಲ್ಯಾಣ ಯೋಜನೆಗಳಿಗೆ ಒಳಪಡುತ್ತಿಲ್ಲ

- ಸುಮಾರು 2 ಕೋಟಿ ಮಕ್ಕಳಿಗೆ ಡಿಪ್‌ತೀರಿಯಾ, ಟಿಟಾನಸ್ ಮತ್ತು ಪೆರ್ಟುಸಿಸ್ ಕಾಯಿಲೆಯಿಂದ ಯಾವುದೇ ವೈದ್ಯಕೀಯ ರಕ್ಷಣೆ ಸಿಗುತ್ತಿಲ್ಲ.

## 63. ಹಿಂದಿ ಭಾಷೆಯಲ್ಲಿ ಇ-ಮೇಲ್ ಐಡಿ ನೀಡಿದ ದೇಶದ ಮೊದಲ ರಾಜ್ಯ  ರಾಜಸ್ಥಾನ್

- ಉಚಿತ ಇ-ಮೇಲ್ ವಿಳಾಸವನ್ನು ಹಿಂದಿಯಲ್ಲಿ ತನ್ನ ರಾಜ್ಯದ ನಿವಾಸಿಗಳಿಗೆ ನೀಡಿರುವ ದೇಶದಲ್ಲೆ ಮೊದಲ ರಾಜ್ಯವೆಂದು ರಾಜಸ್ಥಾನ ಎನಿಸಿಕೊಂಡಿದೆ .
- ಮೇಲ್ ಐಡಿ ಗಳನ್ನೂ ದೇವನಾಗರಿ ಲಿಪಿಯಲ್ಲಿ ನೀಡಿ - ಇಂಗ್ಲಿಷ್ ಇ-ಮೇಲ್ ಐಡಿಗಳೊಂದಿಗೆ ಅನುಕೂಲವಿಲ್ಲದ ಲಕ್ಷಾಂತರ ಹೊಸ ಬಳಕೆದಾರರಿಗೆ ಉಪಯೋಜನಗೊಳಿಸಿದೆ .
- ಈ ಉಪಕ್ರಮವು ಇ-ಆಡಳಿತಕ್ಕೆ ಗರಿಷ್ಠ ಜನರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುತ್ತದೆ ಮತ್ತು ಸ್ಥಳೀಯ ಭಾಷೆಗಳಲ್ಲಿ ಸೌಲಭ್ಯಗಳನ್ನು ಒದಗಿಸುವಂತಾಗಿದೆ.

## 64.ಭಾರತದ ಲಕ್ಷ್ಮೀ ಪುರಿ ಸೇರಿ 6 ರಾಜತಾಂತ್ರಿಕರಿಗೆ ವಿಶ್ವಸಂಸ್ಥೆ 'ಪವರ್ ಆಫ್ ಒನ್' ಪ್ರಶಸ್ತಿ

- ನ್ಯೂಯಾರ್ಕ್: ಬಾರತದ ಲಕ್ಷ್ಮೀ ಪುರಿ ಸೇರಿದಂತೆ ಆರು ಉನ್ನತ ರಾಜತಾಂತ್ರಿಕರಿಗೆ ವಿಶ್ವಸಂಸ್ಥೆ ದಿವಾಳಿ ಪವರ್ ಆಫ್ ಒನ್ (ದೀಪಾವಳಿ ಏಕ ಶಕ್ತಿ) ಪ್ರಶಸ್ತಿ ನೀಡಿ ಗೌರವಿಸಿದೆ. ವಿಶ್ವದಲ್ಲಿ ಶಾಂತಿ ಮತ್ತು ಭದ್ರತೆ ನೆಲೆಗೊಳ್ಳಲು ನೀಡಿದ ಸೇವೆಯನ್ನು ಪರಿಗಣಿಸಿ ಇದೇ ಪ್ರಪ್ರಥಮ ಬಾರಿಗೆ ಈ ಪುರಸ್ಕಾರ ನೀಡಲಾಗಿದೆ.
- ನ್ಯೂಯಾರ್ಕ್‌ನ ವಿಶ್ವಸಂಸ್ಥೆ ಕೇಂದ್ರ ಕಛೇರಿಯಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.
- ವಿಶ್ವಸಂಸ್ಥೆಯ ಮಹಿಳಾ ವಿಭಾಗದ ಮುಖ್ಯಸ್ಥೆ ಲಕ್ಷ್ಮೀ ಪುರಿ, ಲೆಬನಾನ್ ರಾಯಭಾರಿ ನವಾಜ್ ಸಲಾಂ, ಉಕ್ರೇನ್‌ನ ಯುರಿ ಸೆರ್ಗೆವೆವ್, ವಿಶ್ವಸಂಸ್ಥೆಗೆ ಬ್ರಿಟಿಷ್ ರಾಯಭಾರಿ ಮ್ಯಾಥ್ಯೂ ರೇಕ್ರೋಫ್ಟ್, ಹಿರಿಯ ರಾಜತಾಂತ್ರಿಕರಾದ ಈಜಿಪ್ಟ್‌ನ ಮಗೆಡ್ ಅಬ್ದುಲ್ ಅಜಿಜ್, ಮೋಲ್ಡಾವಾದ ಇಯಾನ್ ಬೋಟ್‌ನರು ಅವರುಗಳಿಗೆ ಈ ಪ್ರಶಸ್ತಿ ಸಂದಿದೆ.

- ಕಲೇದ ವರ್ಷ ಅಮೆರಿಕ ಅಂಚೆ ಸೇವೆಗಳ ಇಲಾಖೆ ದೀಪಾವಳಿ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದ್ದು ಈ ಸಂಭ್ರಮಾಚರಣೆಯ ವರ್ಷಾಚರಣೆಯ ಸಮಯ ಈ ಪ್ರಶಸ್ತಿ ಪ್ರಧಾನ ಸಮಾರಂಭ ಆಯೋಜನೆಯಾಗಿತ್ತು.

## 65.ಭಾರತೀಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷರಾಗಿ ನರೀಂದರ್ ಬಾತ್ರಾ

- ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ ಮುಖ್ಯಸ್ಥ ನರೀಂದರ್ ಬಾತ್ರಾ ಅವರು ಭಾರತೀಯ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

- ಈ ಮೂಲಕ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ ಮುಖ್ಯಸ್ಥರಾಗಿದ್ದುಕೊಂಡು ಐಒಎ ಅಧ್ಯಕ್ಷರಾದ ಕೆಲವೇ ಕೆಲವು ಕ್ರೀಡಾ ಆಡಳಿತಗಾರರ ಸಾಲಿಗೆ ಬಾತ್ರಾ(59) ಸೇರ್ಪಡೆಯಾದರು.
- ಚುನಾವಣೆ ಕಣದಲ್ಲಿದ್ದ ಏಷಿಯನ್ ಟೆನಿಸ್ ಫೆಡರೇಷನ್ ಅಧ್ಯಕ್ಷ ಅನಿಲ್ ಖನ್ನಾ ಬಳಿಕ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಹೀಗಾಗಿ ಬಾತ್ರಾ ಆಯ್ಕೆಯಾಗುವುದು ಚುನಾವಣೆಗು ಮೊದಲೇ ಖಚಿತವಾಗಿತ್ತು.

- ಐಒಎ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದ ಖನ್ನಾ, 'ತಾವು ಚುನಾವಣೆಯಿಂದ ಹಿಂದೆ ಸರಿಯುವುದಾಗಿ ಮತ್ತು ಬಾತ್ರಾ ಅವರನ್ನು ಬೆಂಬಲಿಸುವುದಾಗಿ' ತಿಳಿಸಿದ್ದರು. ಭಾರತ ವೇಟ್‌ಲಿಫ್ಟಿಂಗ್ ಫೆಡರೇಷನ್ ಅಧ್ಯಕ್ಷ ಬೀರೇಂದ್ರ ಬೈಶ್ಯ ಅವರೂ ಆರಂಭದಲ್ಲಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದರು. ನಂತರ ಸ್ಪರ್ಧಿಸದಿರಲು ನಿರ್ಧರಿಸಿದ್ದರು.

- ಪ್ರಧಾನ ಕಾರ್ಯದರ್ಶಿಯಾಗಿ ರಾಜೀವ್ ಮೆಹ್ತಾ ಅವರು ಮರು ಆಯ್ಕೆಯಾಗಿದ್ದು ನಾಲ್ಕು ವರ್ಷ ಅವಧಿಗೆ ಮುಂದುವರಿಯಲಿದ್ದಾರೆ.

## 66. ಇಸ್ಲಾಮಿಕ್ ಸಹಕಾರ ಸಂಘಟನೆ(ಒಐಸಿ)

- ಒಐಸಿ ಯು 1969 ರಲ್ಲಿ ಸಂಸ್ಥಾಪಿಸಲ್ಪಟ್ಟ ಅಂತಾರಾಷ್ಟ್ರೀಯ ಸಂಘಟನೆಯಾಗಿದೆ, ಇದರಲ್ಲಿ 57 ಸದಸ್ಯ ರಾಷ್ಟ್ರಗಳು ಸೇರಿವೆ.
- ಇದರ ಆಡಳಿತ ಕೇಂದ್ರವು ಸೌದಿ ಅರೇಬಿಯಾದ ಜೆಡ್ಡಾದಲ್ಲಿದೆ.
- ಟರ್ಕಿ ಪ್ರಸ್ತುತ ಸಂಸ್ಥೆಯ ಅಧ್ಯಕ್ಷತೆ ಹೊಂದಿದೆ.
- ಭಾರತವು ಈ ಸಂಸ್ಥೆಯ ಸದಸ್ಯ ರಾಷ್ಟ್ರವಲ್ಲ
- ಅಂತರಾಷ್ಟ್ರೀಯ ಶಾಂತಿ ಮತ್ತು ಸಾಮರಸ್ಯವನ್ನು ಉತ್ತೇಜಿಸುವ ಆತ್ಮವಿಶ್ವಾಸದಲ್ಲಿ ಹಾಗು ಮುಸಲ್ಮಾನರ ಹಿತಾಸಕ್ತಿಗಳನ್ನು ಕಾಪಾಡುವ ಮತ್ತು ರಕ್ಷಿಸಲು ಸಂಸ್ಥೆಯು ಕಾರ್ಯನಿರ್ವಹಿಸುತ್ತದೆ.
- ಇತ್ತೀಚೆಗೆ ಟರ್ಕಿಯಳ್ಳಿ ನಡೆದ ಶೃಂಗಸಭೆಯಲ್ಲಿ, "ಪೂರ್ವ ಜೆರುಸಲೆಮ್" ಯು ಪ್ಯಾಲೆಸ್ಟೈನ್ ರಾಜಧಾನಿಯಾಗಿ ಘೋಷಿಸಿತು, ಯುಎಸ್ ನ ಈ ನಿಲುವು "ಅಪಾಯಕಾರಿ" ಎಂದು ತಿರಸ್ಕರಿಸಿತು.

## 67. ವೇದಗಳ ಕುರಿತು ವಿಶ್ವ ಸಮ್ಮೇಳನ

- ಈ ಸಮ್ಮೇಳನವನ್ನು ನವ ದೆಹಲಿಯಲ್ಲಿ ಆಯೋಜಿಸಲಾಗಿತ್ತು . ಇದನ್ನು ಉಪರಾಷ್ಟ್ರಪತಿ ಉದ್ಘಾಟಿಸಿದರು
- ವೇದಗಳ ಮತ್ತು ಮನು ಸ್ಮೃತಿಯ ಸುತ್ತಮುತ್ತಲಿನ ವಿವಿಧ ಪುರಾಣಗಳ ಹಾಗು ಪರಾಕಾಷ್ಠೆಗಳ ಬಗ್ಗೆ ಇದು ಆಳವಾದ ಚರ್ಚೆಗಳನ್ನು ಹೊಂದಿರುತ್ತದೆ.
- ವಿಶ್ವ ಸಂಸತ್ತು ಮತ್ತು ಯುಎನ್ ನ ಸಮರ್ಥನೀಯ ಅಭಿವೃದ್ಧಿ ಗುರಿಗಳು (SDGs) ಮತ್ತು ಮಾನವ ಹಕ್ಕುಗಳ ಘೋಷಣೆಯ ವಿಶೇಷ ಅಧಿವೇಶನವು ಸಮ್ಮೇಳನದ ಇತರ ಪ್ರಮುಖ ಲಕ್ಷಣಗಳಾಗಿವೆ.

## 68.ಸರಕಾರದ ಲೆಟರ್‌ಹೆಡ್‌ನಲ್ಲಿ ದೀನದಯಾಳ್ ಉಪಾಧ್ಯಾಯರ ಭಾವಚಿತ್ರವನ್ನು ಅಳವಡಿಸಿಕೊಂಡ ಪ್ರಪ್ರಥಮ ರಾಜ್ಯವಾಗಿ ರಾಜಸ್ತಾನ ಸರಕಾರ

ಪ್ರಮುಖ ಸುದ್ದಿ

- ಸರಕಾರದ ಲೆಟರ್‌ಹೆಡ್‌ನಲ್ಲಿ ಜನಸಂಘದ ಸಂಸ್ಥಾಪಕ ದೀನದಯಾಳ್ ಉಪಾಧ್ಯಾಯರ ಭಾವಚಿತ್ರವನ್ನು ರಾಷ್ಟ್ರಲಾಂಛನದ ಜೊತೆ ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ರಾಜಸ್ತಾನ ಸರಕಾರ ಎಲ್ಲಾ ಇಲಾಖೆಗಳಿಗೆ ಸೂಚನೆ ನೀಡಿದೆ.
- ಇದರೊಂದಿಗೆ ಜನಸಂಘದ ಸ್ಥಾಪಕರ ಭಾವಚಿತ್ರವನ್ನು ಸರಕಾರದ ಲೆಟರ್‌ಹೆಡ್‌ನಲ್ಲಿ ಅಳವಡಿಸಿಕೊಂಡ ಪ್ರಪ್ರಥಮ ರಾಜ್ಯವಾಗಿ ರಾಜಸ್ತಾನ ಸರಕಾರ ಗುರುತಿಸಿಕೊಂಡಿದೆ.

### ಮುಖ್ಯ ಅಂಶಗಳು

- ಎಲ್ಲಾ ಇಲಾಖೆಗಳು, ನಗರಪಾಲಿಕೆ, ನಿಗಮಮಂಡಳಿಗಳು ಹಾಗೂ ಸ್ವಾಯತ್ತ ಇಲಾಖೆಗಳು ದೀನದಯಾಳ್ ಉಪಾಧ್ಯಾಯರ ಭಾವಚಿತ್ರವನ್ನು ಒಳಗೊಂಡಿರುವ ಹೊಸ ಲೆಟರ್‌ಹೆಡ್ ಕಡ್ಡಾಯವಾಗಿ ಬಳಸಬೇಕು .
- ಅಲ್ಲದೆ ಹೊಸ ಲೆಟರ್‌ಹೆಡ್ ಮುದ್ರಣವಾಗಿ ಬರುವವರೆಗೆ ಈಗಿನ ಲೆಟರ್‌ಹೆಡ್‌ಗೆ ದೀನದಯಾಳ್ ಭಾವಚಿತ್ರದ ಸ್ಟಿಕ್ಕರ್ ಅಂಟಿಸಿ ಬಳಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.
- ಈ ಹಿಂದೆ, ಸರಕಾರದ ಜಾಹೀರಾತುಗಳಲ್ಲಿ ದೀನದಯಾಳ್ ಉಪಾಧ್ಯಾಯರ ಲೋಗೋ ಬಳಸುವುದನ್ನು ರಾಜಸ್ತಾನ ಸರಕಾರ ಕಡ್ಡಾಯಗೊಳಿಸಿತ್ತು. ಜೊತೆಗೆ, ಎಲ್ಲಾ ಬಿಜೆಪಿ ಶಾಸಕರೂ ತಮ್ಮ ಅಧಿಕೃತ ಲೆಟರ್‌ಹೆಡ್‌ನಲ್ಲಿ ಉಪಾಧ್ಯಾಯರ ಲೋಗೋ ಬಳಸಬೇಕು ಎಂದು ಸರಕಾರ ಸೂಚಿಸಿತ್ತು.
- ಅಲ್ಲದೆ ಎಲ್ಲಾ ಸರಕಾರಿ ಶಾಲೆಗಳ ಲೈಬ್ರೆರಿಯಲ್ಲಿ ದೀನದಯಾಳ್ ಉಪಾಧ್ಯಾಯರ ಎಲ್ಲಾ ಕೃತಿಗಳು ಹಾಗೂ ಜೀವನಚರಿತ್ರೆಯ ಸಂಪುಟವನ್ನು ಖರೀದಿಸಬೇಕೆಂದು ಸರಕಾರ ಆದೇಶಿಸಿತ್ತು.

## 69.ಸಂಕಲ್ಪ್ ಯೋಜನೆ (SANKALP Project)

### ಪ್ರಮುಖ ಸುದ್ದಿ

- ಜೀವನಾಧಾರಕ್ಕೆ ಬೆಂಬಲ ನೀಡುವ ಮಹತ್ವಾಕಾಂಕ್ಷಿ "ಸ್ಕಿಲ್ ಅಕ್ವಿಸಿಷನ್ ಅಂಡ್ ನಾಲೆಡ್ಜ್ ಅವೇರ್ನೆಸ್ ಫಾರ್ ಲೈವ್ಲಿಹುಡ್ ಪ್ರೊಮೋಷನ್" (ಸಂಕಲ್ಪ್) ಯೋಜನೆಗಾಗಿ ಕೇಂದ್ರ ಸರ್ಕಾರ ವಿಶ್ವಬ್ಯಾಂಕ್‌ನಿಂದ 250 ದಶಲಕ್ಷ ಡಾಲರ್ ಸಾಲ ಪಡೆಯಲು ಒಪ್ಪಂದ ಮಾಡಿಕೊಂಡಿದೆ.

- ವಿಶ್ವಬ್ಯಾಂಕಿನ ನೆರವು ನೀಡುವ ಶಾಖೆಯಾದ ಇಂಟರ್ನ್ಯಾಷನಲ್ ಬ್ಯಾಂಕ್ ಫಾರ್ ರಿ ಕನ್‌ಸ್ಟ್ರಕ್ಷನ್ ಅಂಡ್ ಡೆವಲಪ್‌ಮೆಮಟ್ (ಐಬಿಆರ್ಡಿ) ಈ ಸಾಲವನ್ನು ನೀಡಲಿದ್ದು, ಈ ಯೋಜನೆ ಪೂರ್ಣಗೊಳ್ಳುವ ದಿನಾಂಕ 2023ರ ಮಾರ್ಚ್ 31 ಆಗಿರುತ್ತದೆ.

### ಸಂಕಲ್ಪ್ ಯೋಜನೆ ಬಗ್ಗೆ

### ಇದರ ಯೋಜನೆಯ ಉದ್ದೇಶವೇನು ? (Objective)

- ಕೌಶಲ ಅಭಿವೃದ್ಧಿಗೆ ಸಾಂಸ್ಥಿಕ ವ್ಯವಸ್ಥೆಯನ್ನು ವಿಸ್ತøತಗೊಳಿಸುವುದು ಮತ್ತು ಗುಣಮಟ್ಟ ಮತ್ತು ಮಾರುಕಟ್ಟೆಗೆ ಪ್ರಸ್ತುತ ಎನಿಸುವ ರೀತಿಯಲ್ಲಿ ಕೆಲಸಗಾರರ ಲಭ್ಯತೆಯನ್ನು ಹೆಚ್ಚಿಸುವುದು ಇದರ ಮುಖ್ಯ ಉದ್ದೇಶ.
- ಇದರಲ್ಲಿ ಪ್ರಮುಖವಾಗಿ ಸಾಂಸ್ಥಿಕ ಸುಧಾರಣೆಗಳು ಮತ್ತು ಗುಣಮಟ್ಟ ಅಭಿವೃದ್ಧಿ & ಮಾರುಕಟ್ಟೆ ಪ್ರಸ್ತುತತೆಯನ್ನು ಕೌಶಲ ಅಭಿವೃದ್ಧಿ ತರಬೇತಿ ಯೋಜನೆಗಳಲ್ಲಿ ಧೀರ್ಘಾವಧಿ ಹಾಗೂ ಅಲ್ಪಾವಧಿ ವೃತ್ತಿಪರ ಶಿಕ್ಷಣ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ತರುವುದು ಇದರ ಉದೇಶ.
- ಸಮರ್ಪಕ ಶಿಕ್ಷಣ, ಕೌಶಲ ಮತ್ತು ಉದ್ಯೋಗವನ್ನು ಒದಗಿಸುವ ಮೂಲಕ ಯುವಕರಿಗೆ ಶಕ್ತಿ ತುಂಬುವುದು ಯೋಜನೆಯ ಗುರಿಯಾಗಿದೆ. ಈ ಯೋಜನೆಯಡಿ ಯುವಕರಿಗೆ ಮಾರುಕಟ್ಟೆಗೆ ಪ್ರಸ್ತುತ ಎನಿಸುವ ತರಬೇತಿಯನ್ನು ನೀಡುವ ಮೂಲಕ ಅವರ ಉದ್ಯೋಗಾರ್ಹತೆ ಅಧಿಕವಾಗುವಂತೆ ಹಾಗೂ ಗರಿಷ್ಠ ಉದ್ಯೋಗ ಗಳಿಕೆ ಸಾಧ್ಯತೆಗೆ ಅವರನ್ನು ಸಜ್ಜುಗೊಳಿಸಲಾಗುವುದು.

### ಯೋಜನೆ ಪ್ರಮುಖ ಫಲಿತಾಂಶ ಕ್ಷೇತ್ರಗಳಾವುವು ? (The Key result areas)

- ಸಾಂಸ್ಥಿಕ ಸಬಲೀಕರಣವನ್ನು ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಮಾಡಲಾಗುವುದು. ಇದಕ್ಕಾಗಿ ಕೌಶಲ ಅಭಿವೃದ್ಧಿ ಯೋಜನೆಗಳಿಲ್ಲಿ ಸೂಕ್ತ ಯೋಜನೆ, ಸುಧಾರಿತ ಗುಣಮಟ್ಟ ಮತ್ತು ಮಾರುಕಟ್ಟೆ ಪ್ರಸ್ತುತತೆಯನ್ನು ತರಲಾಗುವುದು. ಉತ್ತಮ ಗುಣಮಟ್ಟದ, ಮಾರುಕಟ್ಟೆಗೆ ಪ್ರಸ್ತುತ ಎನಿಸುವ ತರಬೇತಿಯನ್ನು ನೀಡಲಾಗುವುದು.

- ಮಹಿಳಾ ಅಭ್ಯರ್ಥಿಗಳಿಗೆ ಹಾಗೂ ಇತರ ದುರ್ಬಲ ವರ್ಗದವರಿಗೆ ಕೂಡಾ ಕೌಶಲ ಅಭಿವೃದ್ಧಿಯನ್ನು ಲಭ್ಯವಾಗುವಂತೆ ಮಾಡುವುದು ಹಾಗೂ ಇದನ್ನು ಪೂರ್ಣಗೊಳಿಸಲು ಅನುಕೂಲಕರ ವಾತಾವರಣ ಸೃಷ್ಟಿಸುವುದು ಇದರ ಉದ್ದೇಶ. ಇವೆಲ್ಲದರ ಜತೆಗೆ ಖಾಸಗಿ-ಸರ್ಕಾರಿ ಸಹಭಾಗಿತ್ವ ಯೋಜನೆಯ ಮೂಲಕ ಕೌಶಲ ಅಭಿವೃದ್ಧಿಯನ್ನು ವಿಸ್ತರಿಸಲಾಗುವುದು.

### ಇದರ ಮಹತ್ವವೇನು ? (What it does ? )

- ಈ ಯೋಜನೆಯು ರಾಷ್ಟ್ರೀಯ ಕೌಶಲ ಅಭಿವೃದ್ಧಿ ಮಿಷನ್- 2015ಕ್ಕೆ ಅಗತ್ಯ ಉತ್ತೇಜನ ನೀಡುವಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಇದರ ಜತೆಗೆ ಇತರ ಹಲವು ಉಪ ಮಿಷನ್‌ಗಳಿಗೆ ಕೂಡಾ ಇದು ನೆರವಾಗಲಿದೆ.
- ಈ ಯೋಜನೆಯನ್ನು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಮೇಕ್ ಇನ್ ಇಂಡಿಯಾ, ಸ್ವಚ್ಛತಾ ಅಭಿಯಾನಗಳ ಜತೆಯೂ ಜೋಡಿಸಲಾಗಿದ್ದು, ಜಾಗತಿಕಮಟ್ಟದಲ್ಲಿ ಸ್ಪರ್ಧಾತ್ಮಕ ಕಾರ್ಯಪಡೆಯನ್ನು ದೇಶೀಯ ಹಾಗೂ ಸಾಗರೋತ್ತರ ಅಗತ್ಯತೆಗಳಿಗೆ ಅನುಗುಣವಾಗಿ ಅಭಿವೃದ್ಧಿಪಡಿಸುವಲ್ಲಿ ಈ ಪ್ರಯತ್ನ ಅತ್ಯಂತ ಮಹತ್ವದ್ದೆನಿಸಲಿದೆ.

ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಎಲ್ಲಕ್ಕಿಂತ ಹಹೆಚ್ಚಾಗಿ, ಇದು ವಿವಿಧ ಕೇಂದ್ರೀಯ, ರಾಜ್ಯ ಮತ್ತು ಖಾಸಗಿ ವಲಯದ ಸಂಸ್ಥೆಗಳ ಸಮನ್ವಯದಲ್ಲಿ ಕೌಶಲ ಅಭಿವೃದ್ಧಿ ತರಬೇತಿಯನ್ನು ಒದಗಿಸಲಿದೆ. ಇದು ಚಟುವಟಿಕೆಗಳು ಪುನರಾವರ್ತನೆಯಾಗುವುದನ್ನು ತಡೆಯುವ ಜತೆಗೆ, ವೃತ್ತಿಪರ ತರಬೇತಿಯಲ್ಲಿ ಏಕರೂಪತೆಯಲ್ಲಿ ತರುವ ಮೂಲಕ ಒಳ್ಳೆಯ ಫಲಿತಾಂಶವನ್ನು ನೀಡುವ ಗುರಿ ಹೊಂದಿದೆ.

## 70. ಚೆಕ್ ಅಮಾನ್ಯಕ್ಕೆ ಮಧ್ಯಂತರ ಪರಿಹಾರ?

### ಪ್ರಮುಖ ಸುದ್ದಿ

- ಚೆಕ್ ಅಮಾನ್ಯಗೊಂಡರೆ ಹಣ ಸಲ್ಲಿಕೆಯಾಗಬೇಕಾದವರಿಗೆ ಮಧ್ಯಂತರ ಪರಿಹಾರ ನೀಡುವ ಅವಕಾಶ ಸೃಷ್ಟಿಗಾಗಿ ನೆಗೋಷಿಯೆಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆ 1881ಕ್ಕೆ ತಿದ್ದುಪಡಿಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ

ಮುಖ್ಯ ಅಂಶಗಳು

- ಚೆಕ್ ಅಮಾನ್ಯ ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥವಾಗಲು ದೀರ್ಘ ಸಮಯ ಬೇಕು. ಹಾಗಾಗಿ ಮಧ್ಯಂತರ ಪರಿಹಾರ ನೀಡುವ ಬಗ್ಗೆ ಚಿಂತನೆ ನಡೆಸಲಾಗಿದೆ. ಚೆಕ್ ಮೊತ್ತದ ಸ್ವಲ್ಪ ಭಾಗವನ್ನು ಪರಿಹಾರವಾಗಿ ನೀಡುವುದಕ್ಕೆ ಕಾಯ್ದೆಯ ತಿದ್ದುಪಡಿ ಅವಕಾಶ ಒದಗಿಸಲಿದೆ. ವಿಚಾರಣೆ ಮತ್ತು ಮೇಲ್ಮನವಿ ಹಂತದಲ್ಲಿ ಪರಿಹಾರ ಪಡೆಯಲು ಅವಕಾಶ ಒದಗಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

- ಚೆಕ್ ನೀಡಿದವರು ಖುಲಾಸೆಗೊಂಡರೆ, ಮಧ್ಯಂತರ ಪರಿಹಾರದ ಹಣ ಪಡೆದುಕೊಂಡವರು ಆ ಹಣವನ್ನು ಬಡ್ಡಿಸಹಿತ ಹಿಂದಿರುಗಿಸಬೇಕಾಗುತ್ತದೆ. ಹಾಗೆಯೇ, ಮೇಲ್ಮನವಿ ಸಲ್ಲಿಸುವವರು ವಿಚಾರಣಾ ನ್ಯಾಯಾಲಯ ಆದೇಶಿಸಿದ ಮಧ್ಯಂತರ ಪರಿಹಾರದ ಒಂದು ಭಾಗವನ್ನು ಠೇವಣಿ ಇರಿಸುವಂತೆ ಆದೇಶಿಸುವ ಅವಕಾಶವನ್ನು ತಿದ್ದುಪಡಿಯು ಮೇಲ್ಮನವಿ ನ್ಯಾಯಾಲಯಕ್ಕೆ ನೀಡುತ್ತದೆ.

- ಖಾತೆಯಲ್ಲಿ ಹಣ ಇಲ್ಲ ಎಂಬ ಕಾರಣಕ್ಕೆ ಚೆಕ್ ಅಮಾನ್ಯಗೊಳ್ಳುವುದು ವ್ಯಾಪಾರ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ಗಂಭೀರ ಸಮಸ್ಯೆಗಳಿಗೆ ಕಾರಣವಾಗುತ್ತಿದೆ ಎಂದು ಸರ್ಕಾರ ನಡೆಸಿದ ಅಧ್ಯಯನವೊಂದು ಹೇಳಿದೆ.

- ಚೆಕ್ ಅಮಾನ್ಯ ಪ್ರಕರಣಗಳ ವಿಚಾರಣೆ ದೀರ್ಘ ಕಾಲ ಬಾಕಿಯಾದರೆ ಹಣ ಸಂದಾಯವಾಗಬೇಕಾದವರು ಭಾರಿ ತೊಂದರೆಗೆ ಸಿಲುಕುತ್ತಾರೆ ಎಂದು ಉದ್ಯಮ ಸಮುದಾಯದ ವಿವಿಧ ನಿಯೋಗಗಳು ಹಣಕಾಸು ಸಚಿವಾಲಯಕ್ಕೆ ನೀಡಿದ ಮನವಿಗಳಲ್ಲಿ ಹೇಳಿವೆ.

- ಹಣ ಪಾವತಿಸಲು ಮನಸೇ ಇಲ್ಲದ ಕೆಲವರು ಚೆಕ್ ನೀಡಿ ಅದನ್ನು ಅಮಾನ್ಯಗೊಳಿಸುವುದನ್ನು ಒಂದು ಕಾರ್ಯತಂತ್ರವಾಗಿ ಬಳಸುತ್ತಾರೆ. ಮೇಲ್ಮನವಿ ಸಲ್ಲಿಕೆ ಮತ್ತು ಆದೇಶಗಳಿಗೆ ತಡೆ ಪಡೆದುಕೊಳ್ಳುವ ಮೂಲಕ ಹಣ ಪಾವತಿಸುವುದನ್ನು ವಿಳಂಬ ಮಾಡುವುದು ಅವರ ಕಾರ್ಯತಂತ್ರದ ಭಾಗ. ಹಣ ಪಡೆಯಬೇಕಾದವರು ನ್ಯಾಯಾಲಯಕ್ಕೆ ಹೋಗಿ ಸಾಕಷ್ಟು ಹಣ ಮತ್ತು ಸಮಯ ವ್ಯಯ ಮಾಡಬೇಕಾಗುತ್ತದೆ.

- ನಗದುರಹಿತ ಅರ್ಥವ್ಯವಸ್ಥೆಗೆ ಶಕ್ತಿ ತುಂಬುವ ಯತ್ನ. ಚೆಕ್ ಅನ್ನು ಯಾವ ಊರಿನ ಬ್ಯಾಂಕ್‌ನಲ್ಲಿ ಹಾಕಲಾಗಿದೆಯೋ ಅಲ್ಲಿನ ನ್ಯಾಯಾಲಯದಲ್ಲಿಯೇ ದೂರು ದಾಖಲಿಸಲು ಅನುಕೂಲವಾಗುವಂತೆ 2015ರಲ್ಲಿ ಕಾಯ್ದೆಗೆ ತಿದ್ದುಪಡಿ ಮಾಡಲಾಗಿತ್ತು.

## 71.ಎಟಿಎಲ್ ಸಮುದಾಯ ದಿನ (ATL Community Day )

### ಪ್ರಮುಖ ಸುದ್ದಿ

- ನೀತಿ ಆಯೋಗದ ಅಟಲ್ ಇನ್ನೊವೇಶನ್ ಮಿಷನ್ ಹೊಸದಾಗಿ ಅಟಲ್ ಥಿಂಕರಿಂಗ್ ಪ್ರಯೋಗಾಲಯ ಸಮುದಾಯ ದಿನವನ್ನು ನವದೆಹಲಿಯಲ್ಲಿ ಆಯೋಜಿಸಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಮುಖ ಸಂಗತಿಗಳು

- ಈ ದಿನದ ಅಂಗವಾಗಿ ಸಮುದಾಯ ಚಾಲಿತ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಇದರಲ್ಲಿ 25 ಮಂದಿ ಯುವ ಮಾರ್ಗದರ್ಶಕರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವರು. ಇದುವರೆಗೆ ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸೇರ್ಪಡೆಯಾಗದ ವಿದ್ಯಾರ್ಥಿಗಳಿಗೆ ಇದರ ಪ್ರಯೋಜನ ಲಭಿಸಲಿದೆ.

- ಈ ಮಾರ್ಗದರ್ಶಕರು ನವದೆಹಲಿಯ ನಾಲ್ಕು ಸ್ಥಳಗಳಿಗೆ ಭೇಟಿ ನೀಡಲಿದ್ದು, ವಿವಿಧ ಸ್ವಯಂಸೇವಾ ಸಂಸ್ಥೆಗಳಿಂದ ಆಗಮಿಸಿದ ಮಕ್ಕಳಿಗೆ ಮಾರ್ಗದರ್ಶನ ನೀಡುವರು. ಸಮುದಾಯದ ಸಮಸ್ಯೆಗಳನ್ನು ಬಗೆಹರಿಸಲು ಹೇಗೆ ಅನುಶೋಧನೆಗಳು ನೆರವಾಗಲಿವೆ ಎನ್ನುವ ಬಗ್ಗೆ ಮಾರ್ಗದರ್ಶನ ನೀಡುವರು.

### ಅಟಲ್ ಥಿಂಕರಿಂಗ್ ಲ್ಯಾಬ್ ಸಮುದಾಯ ಚಾಲಿತ ಯೋಜನೆ ಬಗ್ಗೆ

- ಈ ವಿನೂತನ ಯೋಜನೆಯ ಮುಖ್ಯ ಉದ್ದೇಶವೆಂದರೆ ಅಟಲ್ ಥಿಂಗರಿಂಗ್ ಲ್ಯಾಬ್‌ನ ಪರಿಣಾಮವನ್ನು ಗರಿಷ್ಠಗೊಳಿಸುವುದು. ಇದಕ್ಕಾಗಿ ಔಪಚಾರಿಕ ಶಿಕ್ಷಣ ಸಂಸ್ಥೆಗಳಲ್ಲಿ ನೋಂದಣಿಯಾಗದ ಮಕ್ಕಳಿಗೆ ಅನುಶೋಧನೆಯನ್ನು ಪರಿಚಯಿಸುವುದು.

- ಅಟಲ್ ಥಿಂಕರಿಂಗ್ ಲ್ಯಾಬ್‌ನ ಮಾರ್ಗದರ್ಶನದಲ್ಲಿ ಇಂಥ ಮಕ್ಕಳನ್ನು ಸಮಸ್ಯೆಗಳನ್ನು ನಿವಾರಿಸುವ ವರ್ಗವಾಗಿ ಅಭಿವೃದ್ಧಿಪಡಿಸುವುದು ಇದರ ಉದ್ದೇಶ. ಈ ಯೋಜನೆಯಡಿ ಪಾಲ್ಗೊಳ್ಳುವ ಸರ್ಕಾರೇತರ ಸಂಸ್ಥೆಗಳಲ್ಲಿ ಮುಖ್ಯವಾಗಿ ಅಂಗವಿಕಲ ಮಕ್ಕಳು, ಬೀದಿ ಬದಿ ಮಕ್ಕಳು, ಕೆಲಸ ಮಾಡುವ ಮಕ್ಕಳು ಮತ್ತು ಸಮಾಜದ ದುರ್ಬಲ ವರ್ಗದ ಹೆಣ್ಣುಮಕ್ಕಳ ಪರವಾಗಿ ಕೆಲಸ ಮಾಡುವ ಸಂಸ್ಥೆಗಳು ಸೇರುತ್ತವೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಅಟಲ್ ಇನ್ನೊವೇಶನ್ ಮಿಷನ್ ಬಗ್ಗೆ

- ನೀತಿ ಆಯೋಗದ ಅಟಲ್ ಇನ್ನೊವೇಶನ್ ಮಿಷನ್, ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಇದು ದೇಶದಲ್ಲಿ ಉದ್ಯಮಶೀಲತೆ ಮತ್ತು ಅನುಶೋಧನೆಯನ್ನು ಉತ್ತೇಜಿಸುವ ಗುರಿ ಹೊಂದಿದೆ.

- ಈ ನಿಟ್ಟಿನಲ್ಲಿ ಅಟಲ್ ಥಿಂಕರಿಂಗ್ ಲ್ಯಾಬ್‌ಗಳನ್ನು ದೇಶಾದ್ಯಂತ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದು ದೇಶದಲ್ಲಿ ಅನುಶೋಧನೆಯ ಪರಿಸರಕ್ಕೆ ಉತ್ತೇಜನ ನೀಡಲು ಪೂರಕವಾಗಿರುತ್ತದೆ. ಜತೆಗೆ ದೇಶದಲ್ಲಿ ಉದ್ಯಮಶೀಲತೆಯನ್ನು ಬೆಳೆಸುವಲ್ಲಿ ಕೂಡಾ ನೆರವಾಗುತ್ತದೆ.

- ಇದರ ಮಮುಖ್ಯವಾದ ಉದ್ದೇಶವೆಂದರೆ ಅನುಶೋಧನೆಯ ವೇದಿಕೆಯನ್ನು ನಿರ್ಮಿಸಿಕೊಡುವುದು. ಇದರಲ್ಲಿ ಶಿಕ್ಷಣತಜ್ಞರು, ಸಂಶೋಧಕರು ಮತ್ತು ಉದ್ಯಮಿಗಳನ್ನು ತೊಡಗಿಸಿಕೊಳ್ಳಲಾಗುತ್ತದೆ.

- ಜತೆಗೆ ಇದಕ್ಕೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಅನುಭವಗಳನ್ನು ಜೋಡಿಕೊಂಡು, ಭಾರತದಲ್ಲಿ ಸಾಂಸ್ಕೃತಿಕ ಅನುಶೋಧನೆಗೆ ಅನುಕೂಲಕರ ವಾತಾವರಣ ನಿರ್ಮಿಸುವುದು.

- ಇದು ವಿಶ್ವಾದ್ಯಂತ ಜಾಗತಿಕ ಗುಣಮಟ್ಟದ ಅನುಶೋಧನೆ ಹಬ್‌ಗಳನ್ನು ಉತ್ತೇಜಿಸುವುದು ಮಾತ್ರವಲ್ಲದೇ ವಹಿವಾಟು ಕ್ಷೇತ್ರದ ಸ್ಟಾರ್ಟ್ ಅಪ್ ಉದ್ದಿಮೆಗಳನ್ನು ಮತ್ತು ಇತರ ಸ್ವಯಂ ಉದ್ಯೋಗ ಚಟುವಟಿಕೆಗಳನ್ನು ಅದರಲ್ಲೂ ಮುಖ್ಯವಾಗಿ ತಂತ್ರಜ್ಞಾನ ಆಧರಿತ ವಲಯಕ್ಕೆ ಒತ್ತು ನೀಡುವುದು ಇದರ ಉದ್ದೇಶವಾಗಿದೆ.

## 72. ಹೊಸ ಖಾತೆಗೆ ಆಧಾರ್ ನೋಂದಣಿ ಚುರುಕುಗೊಳಿಸಿ: ಬ್ಯಾಂಕುಗಳಿಗೆ ಯುಐಡಿಎಐ ನಿರ್ದೇಶನ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಮುಖ ಸುದ್ದಿ

- ಸರಕಾರದ ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳಿಗೆ ಆಧಾರ್ ಜೋಡಣೆ ಕಡ್ಡಾಯಗೊಳಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಆಧಾರ್ ಜೋಡಣೆಗೆ ತಡೆಯೊಡ್ಡಲು ನಿರಾಕರಿಸಿತು.
- ಅದೇ ವೇಳೆ, ಆಧಾರ್ ಲಿಂಕ್ ಗಡುವನ್ನು ಮುಂದಿನ ವರ್ಷ ಮಾರ್ಚ್ 31ಕ್ಕೆ ವಿಸ್ತರಿಸಿ ಮಧ್ಯಾಂತರ ಆದೇಶ ಹೊರಡಿಸಿದೆ. ಮೊಬೈಲ್ ಸಂಖ್ಯೆಗೆ ಆಧಾರ್ ಸಂಖ್ಯೆ ಜೋಡಿಸಲು ಇದಕ್ಕೂ ಮೊದಲು 2018ರ ಫೆಬ್ರವರಿ 6ಕ್ಕೆ ಅಂತಿಮ ಗಡುವು ವಿಧಿಸಲಾಗಿತ್ತು.

### ಮುಖ್ಯ ಅಂಶಗಳು

- ಹೊಸದಾಗಿ ಖಾತೆ ತೆರೆಯಬಯಸುವ ಗ್ರಾಹಕರಿಗಾಗಿ ಆಧಾರ್ ನೋಂದಣಿ ಚುರುಕುಗೊಳಿಸುವ ನಿಟ್ಟಿನಲ್ಲಿ ತಮ್ಮ ಶಾಖೆಗಳ ಪೈಕಿ ಶೇಕಡ 10ರಷ್ಟು ಶಾಖೆಗಳಲ್ಲಿ ಬೆರಳ ಗುರುತು ಹಾಗೂ (ಕಣ್ಣಿನ) ಪಾಪೆ ಪೊರೆ ಸ್ಕ್ಯಾನರ್‌ಗಳನ್ನು ಅಳವಡಿಸುವಂತೆ ಬ್ಯಾಂಕುಗಳಿಗೆ ಭಾರತೀಯ ವಿಶೇಷ ಗುರುತಿನ ಚೀಟಿ ಪ್ರಾಧಿಕಾರ (ಯುಐಡಿಎಐ) ನಿರ್ದೇಶನ ನೀಡಿದೆ.

- ಗ್ರಾಹಕರು ಆಧಾರ್ ಇಲ್ಲದೆಯೂ ಹೊಸ ಬ್ಯಾಂಕ್ ಖಾತೆಗಳನ್ನು ತೆರೆಯಬಹುದು. ಆದರೆ, 12 ಅಂಕಿಗಳ ಗುರುತಿನ ಸಂಖ್ಯೆಗೆ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತೆದಾರ ಪುರಾವೆ ನೀಡಬೇಕು ಎಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿತು.
- ದೇಶಾದ್ಯಂತ ಬ್ಯಾಂಕ್ ಶಾಖೆಗಳಲ್ಲಿ ಇಲ್ಲಿಯವರೆಗೆ 3 ಸಾವಿರಕ್ಕೂ ಹೆಚ್ಚು ಆಧಾರ್ ನೋಂದಣಿ ಕೇಂದ್ರಗಳನ್ನು ತೆರೆಯಲಾಗಿದೆ. ಅವರು (ಬ್ಯಾಂಕ್‌ನವರು) ಒಟ್ಟಾರೆ 14 ಸಾವಿರ ಬ್ಯಾಂಕ್ ಶಾಖೆಗಳಲ್ಲಿ ನೋಂದಣಿ ಕೇಂದ್ರಗಳನ್ನು ತೆರೆಯಬೇಕಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 73. ಹೊಳೆಯುವ ಗಿಡ ಸೃಷ್ಟಿ (Plants that can glow)

### ಪ್ರಮುಖ ಸುದ್ದಿ

- ಎಂಐಟಿ ವಿಜ್ಞಾನಿಗಳು ವಿನೂತನವಾದ ಗಿಡವೊಂದನ್ನು ಸೃಷ್ಟಿಸಿದ್ದು, ಇದು ಮಬ್ಬು ಬೆಳಕಿನಲ್ಲಿ ಮತ್ತು ಕತ್ತಲೆಯಲ್ಲಿ ಕೂಡಾ ಹೊಳೆಯುವ ವಿಶಿಷ್ಟ ಗುಣಲಕ್ಷಣವನ್ನು ಹೊಂದಿದೆ. ಇದರ ಎಲೆಗಳಿಗೆ ನ್ಯಾನೊ ಕಣಗಳನ್ನು ಜೋಡಿಸಿರುವುದರಿಂದ ಈ ಗಿಡ ರಾತ್ರಿಯ ವೇಳೆಯಲ್ಲಿ ಹೊಳೆಯುತ್ತದೆ.

### ಮುಖ್ಯ ಸಂಗತಿಗಳು

- ಈ ಪ್ರಯೋಗದ ಮುಖ್ಯ ಉದ್ದೇಶವೆಂದರೆ, ಗಿಡಗಳನ್ನು ಡೆಸ್ಕ್ ಲ್ಯಾಂಪ್ ಆಗಿ ಬಳಸುವುದಾಗಿದೆ.
- ಇದಕ್ಕೆ ಗಿಡದ ಜೀರ್ಣಾಂಗ ವ್ಯವಸ್ಥೆಯನ್ನೇ ಆಧಾರವಾಗಿ ಇಟ್ಟುಕೊಳ್ಳಲಾಗಿದ್ದು, ಇ
- ದಕ್ಕೆ ಯಾವುದೇ ವಿದ್ಯುತ್ ಸಂಪರ್ಕದ ಅಗತ್ಯ ಇರುವುದಿಲ್ಲ.
- ಈ ಹೊಳೆಯುವ ಗಿಡಗಳನ್ನು ಸೃಷ್ಟಿಸಲು ವಿಜ್ಞಾನಿಗಳು ಲುಸಿಫೆರೆಸ್ (luciferase)ಎಂಬ ವಿಶಿಷ್ಟ ಎಂಝೈಮ್‌ಗಳನ್ನು ಬಳಸಿದ್ದು, ಇದು ಅಗತ್ಯ ಹೊಳೆಯುವ ಅಂಶವನ್ನು ಒದಗಿಸುತ್ತದೆ.

- ಲೂಸಿಫೆರೆಸ್ ಲ್ಯೂಸಿಫೆರಿನ್ ಎಂಬ ಕಣವಾಗಿ ಕಾರ್ಯ ನಿರ್ವಹಿಸಲಿದ್ದು, ಇದು ಬೆಳಕಿನ ವಿಕಿರಣದ ಸಾಮಥ್ರ್ಯ ಹೊಂದಿರುತ್ತದೆ. ಇದರ ಜತೆಗೆ ಇದು ಕೋ ಎಂಝಿಮ್ ಎಂಬ ಇನ್ನೊಂದು ಕಣವನ್ನೂ ಬಳಸಿಕೊಳ್ಳಲಿದ್ದು, ಉತ ಉತ್ಪನ್ನಗಳ ರಾಸಾಯನಿಕ ಕ್ರಿಯೆಯನ್ನು ಇದು ತಡೆಯುತ್ತದೆ.

- ಈ ಮೂರು ವಿಶೇಷ ಅಂಶಗಳನ್ನು ಪ್ಯಾಕೇಜ್ ರೂಪದಲ್ಲಿ ಸಿಲಿಕಾ ನ್ಯಾನೊಕಣಗಳಲ್ಲಿ ಅಳವಡಿಸಿ ನೀಡಲಾಗುತ್ತದೆ. 10 ನ್ಯಾನೊಮೀಟರ್ ವ್ಯಾಸದ ಈ ಕಣ ಲ್ಯೂಸಿಫೆರೆಸ್‌ಗಳನ್ನು ಹಿಡಿದಿಡುತ್ತದೆ. ಇವು ಸ್ವಲ್ಪ ದೊಡ್ಡದಾದ ಪಿಎಲ್‌ಜಿಎ ಪಾಲಿಮರ್ ಕಣಗಳನ್ನು ಕೂಡಾ ಬಳಸಿಕೊಳ್ಳಲಿದ್ದು, ಲ್ಯೂಸಿಫೆರಿನ್ ಮತ್ತು ಸಹ ಎಂಝೋಮ್ ಎ ಕಣಗಳನ್ನು ಇದು ಹಿಡಿದಿಟ್ಟುಕೊಳ್ಳುತ್ತದೆ.

- ಗಿಡದ ಎಲೆಗಳಿಗೆ ನ್ಯಾನೊ ಕಣಗಳನ್ನು ಪಡೆಯುವ ಸಲುವಾಗಿ ವಿಜ್ಞಾನಿಗಳು ಮೊದಲು ಅಮಾನತುಗೊಂಡ ಕಣಗಳ ಮಿಶ್ರಣವನ್ನು ತಯಾರಿಸುತ್ತಾರೆ. ಬಳಿಕ ಎಲೆಗಳನ್ನು ಈ ಮಿಶ್ರಣದಲ್ಲಿ ಮುಳುಗಿಸಿ, ಬಳಿಕ ಅಧಿಕ ಒತ್ತಡಕ್ಕೆ ಇದನ್ನು ತೆರೆಯಲಾಗುತ್ತದೆ. ಇದರಿಂದಾಗಿ ಕಣಗಳು ಎಲೆಗಳ ಒಳಗೆ ಸ್ಟೊಮಾಟಾ ಎಂಬ ಸಣ್ಣ ರಂಧ್ರಗಳ ಮೂಲಕ ಪ್ರವೇಶಿಸುತ್ತವೆ.

- ಈ ಕಣಗಳು ಲ್ಯೂಸಿಫೆರೆನ್ ಮತ್ತು ಸಹ ಎಂಝೀಮ್‌ಗಳನ್ನು ಬಿಡುಗಡೆ ಮಾಡುತ್ತದೆ. ಎಲೆಯ ಒಳಪದರದಲ್ಲಿ, ಸಣ್ಣ ಕಣಗಳು ಬೆಳಕನ್ನು ಸೂಸುತ್ತವೆ. ಪಿಎಲ್‌ಜಿಎ ಕಣಗಳು ನಿಧಾನವಾಗಿ ಲ್ಯೂಸಿಫೆರೆನ್‌ಗಳನ್ನು ಬಿಡುಗಡೆ ಮಾಡುತ್ತವೆ. ಇವು ಗಿಡಗಳ ಕೋಶಗಳನ್ನು ಪ್ರವೇಶಿಸುತ್ತವೆ. ಲ್ಯೂಸಿಫೆರೆಸ್ ರಾಸಾಯನಿಕ ಕ್ರಿಯೆಗಳನ್ನು ನಡೆಸಿ, ಹೊಳೆಯುವಂತೆ ಮಾಡುತ್ತದೆ. ಈ ಪ್ರಯೊಘದಲ್ಲಿ ಲ್ಯೂಸಿಫೆರೆನ್‌ಯುಕ್ತ ಗಿಡಗಳು ಸುಮಾರು 45 ನಿಮಿಷಗಳ ಕಾಲ ಹೊಳೆಯುತ್ತವೆ.

- ಕೆಲಸದ ಸ್ಥಳಗಳಲ್ಲಿ ಗಿಡಗಳನ್ನು ಹೊಳೆಯುವಂತೆ ಮಾಡಿ ಬೆಳಕಿನ ಮೂಲವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. ಈ ತಂತ್ರಜ್ಞಾನದ ಆಧಾರದಲ್ಲಿ ಕಡಿಮೆ ತೀವ್ರತೆಯ ಕೊಠಡಿಯೊಳಗಿನ ಬೆಳಕಿನ ವ್ಯವಸ್ಥೆ ಅಥವಾ ಮರಗಳನ್ನೇ ಬೀದಿದೀಪವಾಗಿ ಬಳಸುವ ಸಾಧ್ಯತೆಯನ್ನು ತೆರೆದುಕೊಟ್ಟಿದೆ.

## 74. ರೈಲ್ವೆ ಸಚಿವಾಲಯವು ಪ್ರಾರಂಭಿಸಿರುವ ಮುಖ್ಯ ಉಪಕ್ರಮಗಳು (Initiatives)

- ಸ್ರೇಸ್ತ (SRESTHA) - ಎದು ರೈಲ್ವೆಯಲ್ಲಿ ಭವಿಷ್ಯದ ತಂತ್ರಜ್ಞಾನದ ಅಗತ್ಯಗಳನ್ನು ಪೂರೈಸಲು ಹೊಸ ಆರ್ & ಡಿ ಸಂಸ್ಥೆ.
- ಸುತ್ರ (SUTRA) - ಸಾರಿಗೆ ಸಂಶೋಧನೆ ಮತ್ತು ವಿಶ್ಲೇಷಣೆಗಾಗಿ ವಿಶೇಷ ಘಟಕ. ಇದರಲ್ಲಿನ ತಂಡವು ವಿಶ್ವ ದರ್ಜೆಯ ಡಾಟಾ ಅನಾಲಿಟಿಕ್ಸ್, ಸಿಮ್ಯುಲೇಶನ್ ಸಾಫ್ಟ್ ವೇರ್ ಗಳು , ನೆಟ್ವರ್ಕ್ ಆಪ್ಟಿಮೈಸೇಶನ್ ವ್ಯವಸ್ಥೆಗಳಲ್ಲಿ ತೊಡಗಿಸಿಕೊಳ್ಳುತ್ತದೆ.
- ನಿವಾರಾನ್ (NIVARAN) - ಎದು ಸೇವೆ ಸಲ್ಲಿಸುತ್ತಿರುವ ಮತ್ತು ಮಾಜಿ ರೈಲ್ವೆಯ ನೌಕರರ ಬಗೆಗಿನ ಅಸಮಾಧಾನವನ್ನು ಬಗೆಹರಿಸಲು ಹಾಗು ಪರಿಹಾರ ದೂರುಗಳ ಪೋರ್ಟಲ್ ಮತ್ತು ರೈಲ್ವೆ ಇಲಾಖೆಯ ಮೊದಲ ಐಟಿ ಅಪ್ಲಿಕೇಶನ್.

IAS/KAS

## 75.ತುಯಿರಿಯಾಲ್ ಜಲವಿದ್ಯುತ್ ಯೋಜನೆ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮಿಂದ..... ಮಸ್ಸೂರಿಗೆ/ಮೈಸೂರಿಗೆ

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಿಜೊರಾಂನಲ್ಲಿ ತುಯಿರಿಯಾಲ್ ಜಲವಿದ್ಯುತ್ ಯೋಜನೆಯನ್ನು ಉದ್ಘಾಟಿಸಿದರು.
- ಸಿಕ್ಕಿಂ, ತ್ರಿಪುರ ರಾಜ್ಯಗಳ ಬಳಿಕ ಇದೀಗ ಮಿಜೋರಾಂ ಜಲವಿದ್ಯುತ್ ಯೋಜನೆಯನ್ನು ಹೊಂದಿದ ಈಶಾನ್ಯದ ಮೂರನೇ ಹೆಚ್ಚುವರಿ ರಾಜ್ಯವಾಯಿತು.

- ಪ್ರತಿವರ್ಷ 251 ದಶಲಕ್ಷ ಯೂನಿಟ್ ವಿದ್ಯುತ್ ಶಕ್ತಿಯನ್ನು ಉತ್ಪಾದಿಸಲಾಗುತ್ತದೆ. ಇದರಿಂದ ರಾಜ್ಯದ ಆರ್ಥಿಕ ಅಭಿವೃದ್ಧಿಯೂ ಸಾಧ್ಯವಾಗುತ್ತದೆ .
- 1998ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರವು ಈ ಯೋಜನೆಯನ್ನು ಘೋಷಿಸಿತ್ತು. ಇದು ಮೀಜೋರಾಂನಲ್ಲಿ ಆರಂಭವಾದ ಕೇಂದ್ರದ ಮಹತ್ವದ ಯೋಜನೆಯಾಗಿದೆ.

## 76.ರೇರಾ ಆಡಳಿತವು ನಗರ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ

### ಪ್ರಮುಖ ಸುದ್ದಿ

- ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ನ್ನು ಸ್ಥಾಪಿಸಲು ಆದೇಶ ನೀಡುವ ರಿಯಲ್ ಎಸ್ಟೇಟ್ (ರೆಗ್ಯುಲೇಷನ್ ಅಂಡ್ ಡೆವಲಪ್ಮೆಂಟ್) 2016 ರ ಕಾಯಿದೆಯನ್ನು , ಕಾರ್ಯವನ್ನು ನಗರ ವ್ಯವಹಾರಗಳ ಸಚಿವಾಲಯ ನೋಡಿಕೊಳ್ಳಲಿದೆ.

- ಈ ನಿಟ್ಟಿನಲ್ಲಿ ಕೇಂದ್ರ ಸರಕಾರವು 1961 ರ ಭಾರತ ಸರ್ಕಾರ (ವ್ಯವಹಾರ ಹಂಚಿಕೆ) ನಿಯಮಗಳನ್ನು ತಿದ್ದುಪಡಿ ಮಾಡಿದೆ.

### ರಿಯಲ್ ಎಸ್ಟೇಟ್ (ರೆಗ್ಯುಲೇಷನ್ ಅಂಡ್ ಡೆವಲಪ್ಮೆಂಟ್) 2016 ರ ಕಾಯಿದೆ ಬಗ್ಗೆ

- ರೇರಾ ದ ಮುಖ್ಯ ಉದ್ದೇಶವೆಂದರೆ ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಪ್ರಾಧಿಕಾರಕ್ಕಾಗಿ ದಕ್ಷ ಮತ್ತು ಪಾರದರ್ಶಕ ರೀತಿಯಲ್ಲಿ ಪ್ಲಾಟ್, ಅಪಾರ್ಟ್ಮೆಂಟ್ ಅಥವಾ ಕಟ್ಟಡದ ಮಾರಾಟವನ್ನು ಖಚಿತಪಡಿಸುವುದು ಮತ್ತು ರಿಯಲ್ ಎಸ್ಟೇಟ್ ವಲಯದಲ್ಲಿನ ಗ್ರಾಹಕರ ಆಸಕ್ತಿಯನ್ನು ರಕ್ಷಿಸುವುದು.

### ಕಾಯ್ದೆಯ ಉಪಯೋಗ

- ಎಲ್ಲ ವ್ಯವಹಾರ ಏಕಗವಾಕ್ಷಿ ಪದ್ದತಿಯಲ್ಲಿ ನಡೆಯುವುದರಿಂದ ಒಂದೇ ಸೂರಿನಡಿ ಗ್ರಾಹಕರಿಗೆ ಮಾಹಿತಿ ಲಭಿಸಲಿದೆ.
- ಅತಿ ಕಡಿಮೆ ಸಮಯದಲ್ಲಿ ಯೋಜನೆ ಪೂರ್ಣಗೊಂಡು ಗ್ರಾಹಕರಿಗೆ ಅನುಕೂಲ ಮಾಡಿಕೊಡುತ್ತದೆ.
- ವೇಗವಾಗಿ ಯೋಜನೆ ಪೂರ್ಣಗೊಳ್ಳುವುದರಿಂದ ಬಿಲ್ಡರ್‌ಗಳಿಗೆ ತಮ್ಮ ಯೋಜನೆಗೆ ಮಾಡುವ ಸಾಲದ ಬಡ್ಡಿಯಲ್ಲಿ ಹೆಚ್ಚು ಪ್ರಮಾಣದ ಉಳಿತಾಯ ಸಾಧ್ಯವಾಗುತ್ತದೆ.

- ಕಾನೂನಾತ್ಮಕ ವ್ಯವಹಾರವೇ ಪ್ರಧಾನವಾಗುವುದರಿಂದ ಲಂಚ ಇತ್ಯಾದಿ ಸೋರಿಕೆ ಇಳಿಕೆಯಾಗುತ್ತದೆ. ಇದರಿಂದ ಶೇ.10 ಉಳಿತಾಯ ಬಿಲ್ಡರ್‌ಗಳಿಗೆ ಆಗಲಿದೆ.
- ಗುಣಮಟ್ಟಕ್ಕೆ ಆದ್ಯತೆ ನೀಡುವುದರಿಂದ ಗ್ರಾಹಕರಲ್ಲಿ ಹೆಚ್ಚು ನಂಬಿಕೆ ಗಳಿಸುವಲ್ಲಿ ಉದ್ಯಮಿಗಳು ಯಶಸ್ವಿಯಾಗುತ್ತಾರೆ.
- ಉದ್ಯಮಿಗಳು ಕೇವಲ ಗ್ರಾಹಕರ ಆಕರ್ಷಣೆಗಾಗಿ ಮಾಹಿತಿ ಹಾಕುವುದು ತಪ್ಪುತ್ತದೆ.

## 77. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಬದಲು ನ್ಯಾಷನಲ್ ಮೆಡಿಕಲ್ ಕಮಿಷನ್: ಮಸೂದೆಗೆ ಕೇಂದ್ರ ಸಂಪುಟ ಅನುಮೋದನೆ

### ಪ್ರಮುಖ ಸುದ್ದಿ

- ಈಗಿರುವ ಭಾರತೀಯ ವೈದ್ಯಕೀಯ ಮಂಡಳಿ (ಮೆಡಿಕಲ್ ಎಜುಕೇಶನ್ ರೆಗ್ಯುಲೇಟರ್ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ-ಎಂಸಿಐ) ಬದಲಾಗಿ ರಾಷ್ಟ್ರೀಯ ವೈದ್ಯಕೀಯ ಆಯೋಗ (ನ್ಯಾಷನಲ್ ಮೆಡಿಕಲ್ ಕಮಿಷನ್) ಸ್ಥಾಪಿಸುವ ಮಸೂದೆಗೆ ಸಂಪುಟ ಅನುಮೋದನೆ ನೀಡಿದೆ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮಸೂದೆಯ ಪ್ರಮುಖ ಲಕ್ಷಣಗಳು:.

- ವೈದ್ಯಕೀಯ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು, ಪದವಿಪೂರ್ವ ಹಾಗೂ ಸ್ನಾತಕೋತ್ತರ ಶಿಕ್ಷಣ, ಮೌಲ್ಯಮಾಪನ ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಡಿಯಲ್ಲಿ ಚಿಕಿತ್ಸೆ ನೀಡುತ್ತಿರುವ ವೈದ್ಯರ ನೋಂದಣಿ ನಿರ್ವಹಿಸಲು ನಾಲ್ಕು ಸ್ವಾಯತ್ತ ಮಂಡಳಿ ರೂಪಿಸಲು ಈ ಮಸೂದೆ ಅವಕಾಶ ಕಲ್ಪಿಸಲಿದೆ.
- ಈ ಆಯೋಗ ಸರಕಾರದಿಂದ ನಾಮನಿರ್ದೇಶಿತ ಅಧ್ಯಕ್ಷರು, ಸದಸ್ಯರನ್ನು ಹೊಂದಲಿದೆ. ಸಂಪುಟ ಕಾರ್ಯದಶಿ ಅಡಿಯಲ್ಲಿ ಬರುವ ಶೋಧನಾ ಸಮಿತಿ ಈ ಮಂಡಳಿಗೆ ಸದಸ್ಯರನ್ನು ಆಯ್ಕೆ ಮಾಡಲಿದೆ. ಆಯೋಗದಲ್ಲಿ 5 ಮಂದಿ ಚುನಾಯಿತರು ಹಾಗೂ 12 ಮಂದಿ ನಿವೃತ್ತ ಅಧಿಕಾರಿಗಳು ಸದಸ್ಯರಾಗಿ ಇರಲಿದ್ದಾರೆ.

- ಸಾಮಾನ್ಯ ಪ್ರವೇಶ ಪರೀಕ್ಷೆ ಹಾಗೂ ಎಲ್ಲ ವೈದ್ಯಕೀಯ ಸ್ನಾತಕೋತ್ತರರು ಚಿಕಿತ್ಸೆ ನೀಡಲು ಪರವಾನಿಗೆ ಪಡೆಯಲು ಪರೀಕ್ಷೆ ನಡೆಸುವ ಪ್ರಸ್ತಾಪವನ್ನು ಈ ಮಸೂದೆ ಹೊಂದಿದೆ. ಈ ಪ್ರಸ್ತಾಪಿತ ಮಸೂದೆಯಂತೆ ಹೊಸ ಸ್ನಾತಕೋತ್ತರ ಕೋರ್ಸ್ ಆರಂಭಿಸಲು ಹಾಗೂ ಸೀಟಿನ ಸಂಖ್ಯೆ ಹೆಚ್ಚಿಸಲು ಯಾವುದೇ ಅನುಮತಿ ಅಗತ್ಯತೆ ಇಲ್ಲ.

**ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಬಗ್ಗೆ**

- 1933 ರಲ್ಲಿ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾವನ್ನು ಇಂಡಿಯನ್ ಮೆಡಿಕಲ್ ಕೌನ್ಸಿಲ್ ಆಕ್ಟ್, 1933 ರ ಅಡಿಯಲ್ಲಿ ಮೊದಲ ಬಾರಿಗೆ ಸ್ಥಾಪಿಸಲಾಯಿತು.
- ಈ ಕಾಯಿದೆಯನ್ನು 1956 ರಲ್ಲಿ ರದ್ದುಪಡಿಸಿ ಮತ್ತು ಹೊಸ ಕಾಯಿದೆಯಾಗಿ ಬದಲಿಸಲಾಯಿತು. 1956 ರ ಕಾಯಿದೆಯಡಿಯಲ್ಲಿ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಉದ್ದೇಶಗಳು ಸೇರಿವೆ:

**ಇದರ ಉದ್ದೇಶಗಳು**

- ವೈದ್ಯಕೀಯ ಶಿಕ್ಷಣದಲ್ಲಿ ಪಠ್ಯಕ್ರಮದ ಮಾರ್ಗಸೂಚಿ , , ಕಾಲೇಜುಗಳು, ಕೋರ್ಸ್‌ಗಳು ಅಥವಾ ಹೆಚ್ಚಿನ ಸಂಖ್ಯೆಯ ಸೀಟುಗಳನ್ನು ತೆಗೆದುಕೊಳ್ಳಲು ಮಾನದಂಡಗಳನ್ನು ರೂಪಿಸುವುದು
- ವೈದ್ಯ ಶಿಕ್ಷಣ ಕೋರ್ಸ್‌ಗಳಿಗೆ ಮಾನ್ಯತೆ ನೀಡುವುದು .
- ವೈದ್ಯರ ನೋಂದಣಿ ಮತ್ತು ಅಖಿಲ ಭಾರತ ವೈದ್ಯಕೀಯ ನೋಂದಣಿಯ ನಿರ್ವಹಣೆ.
- ತಪ್ಪು ಮಾಡುವ ವೈದ್ಯರು ವಿರುದ್ಧ ಕ್ರಮ ತೆಗೆದುಕೊಳ್ಳುವ ಮೂಲಕ ವೈದ್ಯಕೀಯ ವೃತ್ತಿಯ ನಿಯಂತ್ರಣ

## 78. ಮೆಟ್ರೋ ರೈಲು ಸುರಕ್ಷತೆ ಆಯುಕ್ತರು (Commissioner of Metro Railway Safety)

**ಪ್ರಮುಖ ಸುದ್ದಿ**

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, ನಾಗರಿಕ ವಿಮಾನಯಾನ ಸಚಿವಾಲಯದ ಅಡಿಯಲ್ಲಿ ರೈಲ್ವೆ "ಮೆಟ್ರೊ ರೈಲು (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯಿದೆ, 2002" ಅಡಿಯಲ್ಲಿ ರೂಪಿಸಲಾದ ಮೆಟ್ರೋ ರೈಲು ಸುರಕ್ಷತೆಯ ಆಯೋಗದ

ಕಾರ್ಯಗಳನ್ನು ನಿರ್ವಹಿಸಲು ಎಲ್ಲಾ ಪೂರಕ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ಮೆಟ್ರೊ ರೈಲು ಸುರಕ್ಷತೆ ಆಯುಕ್ತರ ಒಂದು ವೃತ್ತ ಕಚೇರಿ(ಸಿಎಂಆರ್.ಎಸ್) ಯನ್ನು ಸ್ಥಾಪಿಸಲು ತನ್ನ ಅನುಮೋದನೆ ನೀಡಿದೆ.

## ಪ್ರಮುಖ ಅಂಶಗಳು

- ಹಾಲಿ ಇರುವ ಇಬ್ಬರು ರೈಲ್ವೆ ಸುರಕ್ಷತೆ ಆಯುಕ್ತರು(ಸಿಆರ್.ಎಸ್)ಗಳಿಗೆ ಎರಡು ವೃತ್ತಗಳ ಹೆಚ್ಚುವರಿ ಜವಾಬ್ದಾರಿ ವಹಿಸಲೂ ಸಂಪುಟ  ಅನುಮತಿ ನೀಡಿದೆ, ಅವರು ತಮ್ಮ ಅಧಿಕಾರವನ್ನು ತಮ್ಮ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ಬಳಸುತ್ತಾರೆ. ಈ ವೃತ್ತಗಳು ನವದೆಹಲಿಯ ಸಿ.ಎಂ.ಆರ್.ಎಸ್. ವ್ಯಾಪ್ತಿಯಡಿ ಬರುವುದಿಲ್ಲ.

- ಮೆಟ್ರೋ ರೈಲು ಸುರಕ್ಷತೆ ಆಯುಕ್ತರ ಹುದ್ದೆಯು ನಾಗರಿಕ ವಿಮಾನಯಾನ ಸಚಿವಾಲಯದಡಿಯಲ್ಲಿನ ರೈಲು ಸುರಕ್ಷತೆ ಆಯೋಗದಲ್ಲಿ ಎಚ್.ಎ.ಜಿ. (ವೇತನ ಶ್ರೇಣಿ 15)ರಲ್ಲಿರುತ್ತದೆ. ಒಂದು ವೃತ್ತ ಕಚೇರಿಯ ಸಂಬಳದ ವೆಚ್ಚವು ಸಂಸ್ಥೆಯ ಪ್ರಾರಂಭಿಕ ಸ್ಥಾಪನಾ ವೆಚ್ಚದ ಹೊರತಾಗಿ ವಾರ್ಷಿಕ 59,39,040 ರೂಪಾಯಿ ಆಗಬಹುದು ಎಂದು ಅಂದಾಜು ಮಾಡಲಾಗಿದೆ. ವೃತ್ತ ಕಚೇರಿಯ ವಾರ್ಷಿಕ ವೆಚ್ಚ 7,50,000 ಆಗಲಿದೆ.

- ಈ ಹುದ್ದೆಗಳ ಸೃಷ್ಟಿಯು, ನಾಗರಿಕ ವಿಮಾನಯಾನ ಸಚಿವಾಲಯದಡಿಯಲ್ಲಿನ ರೈಲ್ವೆ ಸುರಕ್ಷತಾ ಆಯೋಗದಲ್ಲಿ ಮೆಟ್ರೋ ರೈಲು (ಕಾರ್ಯಾಚರಣೆ ಮತ್ತು ನಿರ್ವಹಣೆ)ಕಾಯಿದೆ 2002ರಲ್ಲಿ ನಮೂದಿಸಿರುವಂತೆ ಪ್ರಯಾಣಿಕರ ಸುರಕ್ಷತೆ ಮತ್ತು ಮೆಟ್ರೋ ರೈಲು ಕಾರ್ಯಾಚರಣೆ ಸಂಬಂಧಿತ ವಿಚಾರಗಳ ಮೇಲೆ ಅಂದರೆ, ಹಾಲಿ ಇರುವ ಮತ್ತು ಮುಂದಿನ ಮೆಟ್ರೋ ರೈಲು ಯೋಜನೆಗಳ ಬಗ್ಗೆ ಗಮನ ಹರಿಸುವುದನ್ನು ಖಾತ್ರಿಪಡಿಸುತ್ತದೆ.

## ಅನುಷ್ಠಾನದ ಕಾರ್ಯತಂತ್ರ ಹಾಗೂ ಗುರಿಗಳು:

- ಮೆಟ್ರೋ ರೈಲು ಸುರಕ್ಷತೆ ಆಯುಕ್ತರ ಹುದ್ದೆಯನ್ನು ನಾಗರಿಕ ವಿಮಾನಯಾನ ಸಚಿವಾಲಯವು, ಭಾರತೀಯ ರೈಲು ಎಂಜನಿಯರಿಂಗ್ ಸೇವೆ (ಐ.ಆರ್.ಎಸ್.ಇ., ಐ.ಆರ್.ಎಸ್.ಇ.ಇ., ಐ.ಆರ್.ಎಸ್.ಎಸ್.ಇ., ಆರ್.ಎಸ್.ಎಂ.ಇ) ಮತ್ತು ಐಆರ್.ಟಿ.ಎಸ್.ನಿಂದ, ರೈಲ್ವೆ ಇಲಾಖೆಯ ಇಚ್ಛಿತ ಅಧಿಕಾರಿಗಳನ್ನು ಯುಪಿಎಸ್.ಸಿ.ಯೊಂದಿಗೆ ಸಮಾಲೋಚಿಸಿ, ಆರಂಭದಲ್ಲಿ ರೈಲ್ವೆ ಸುರಕ್ಷತೆ ಆಯೋಗದಲ್ಲಿ ರೈಲ್ವೆ ಸುರಕ್ಷತಾ ಆಯುಕ್ತರ ನೇಮಕಾತಿ ನಿಯಮಗಳನ್ವಯ ಭರ್ತಿ ಮಾಡುತ್ತದೆ, ಈ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ಎರಡು ತಿಂಗಳಲ್ಲಿ ಆರಂಭಿಸಲಾಗುತ್ತದೆ.

- ಮೆಟ್ರೋ ರೈಲು ಸುರಕ್ಷತೆ ಉಪ ಆಯುಕ್ತರ (ಡಿವೈ.ಸಿಎಂ.ಆರ್.ಎಸ್.) ಮತ್ತು ಬೆಂಬಲಿತ ಸಿಬ್ಬಂದಿಯ ಹುದ್ದೆಗಳ ಸೃಷ್ಟಿಯ ಪ್ರಸ್ತಾಪ ಕುರಿತಂತೆ ಹಣಕಾಸು ಸಚಿವಾಲಯದ ವೆಚ್ಚ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತದೆ. ಅವರ ಅನುಮೋದನೆ ಬಂದ ಬಳಿಕ, ಹುದ್ದೆಗಳ ಸೃಷ್ಟಿಯ ಆದೇಶವನ್ನು ತಕ್ಷಣವೇ ಹೊರಡಿಸಲಾಗುತ್ತದೆ.

### ಹಿನ್ನೆಲೆ:

- ರೈಲು ಸುರಕ್ಷತೆ ಆಯೋಗವು ನಾಗರಿಕ ವಿಮಾನಯಾನ ಸಚಿವಾಲಯ (ಭಾರತ ಸರ್ಕಾರ)ದ ಆಡಳಿತ ನಿಯಂತ್ರಣದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ರೈಲು ಸಂಚಾರ ಸುರಕ್ಷತೆ ಮತ್ತು ರೈಲು ಕಾರ್ಯಾಚರಣೆಗೆ ಸಂಬಂಧಿಸಿದ ಹಾಗೂ ರೈಲ್ವೆ ಕಾಯಿದೆ 1989ರಲ್ಲಿ ಸೂಚಿಸಲಾಗಿರುವ ಕೆಲವು ಶಾಸನಾತ್ಮಕ ಕಾರ್ಯಗಳನ್ನು ನಿರ್ವಹಿಸಲಿದೆ.
- ಈ ಕಾರ್ಯಗಳು ಪರೀಕ್ಷಾತ್ಮಕ, ತನಿಖಾತ್ಮಕ ಮತ್ತು ಸಲಹೆಯ ಸ್ವರೂಪದಲ್ಲಿರುತ್ತದೆ.
- ಆಯೋಗವು ರೈಲ್ವೆ ಕಾಯಿದೆ ಅಡಿಯಲ್ಲಿ ರೂಪಿಸಲಾಗಿರುವ ಕೆಲವು ನಿಯಮಗಳ ಅನುಸಾರ ಮತ್ತು ಕಾಲ ಕಾಲಕ್ಕೆ ಸೂಚಿಸಲಾಗುವ ಕಾರ್ಯಕಾರಿ ನಿರ್ದೇಶನಗಳಂತೆ ಕಾರ್ಯನಿರ್ವಹಿಸಲಿದೆ.
- ಆಯೋಗದ ಮಹತ್ವದ ಕಾರ್ಯವೆಂದರೆ, ಪ್ರಯಾಣಿಕರ ಸಂಚಾರಕ್ಕೆ ಮುಕ್ತವಾಗುವ ಯಾವುದೇ ಹೊಸ ರೈಲು ಮಾರ್ಗ ರೈಲ್ವೆ ಸಚಿವಾಲಯ ಸೂಚಿಸಿರುವ ಗುಣಮಟ್ಟ ಮತ್ತು ನಿರ್ದಿಷ್ಟ ವೈಶಿಷ್ಟ್ಯ ಮತ್ತು ಹೊಸ ಮಾರ್ಗವು ಪ್ರಯಾಣಿಕರ ಸಂಚಾರಕ್ಕೆ ಎಲ್ಲ ರೀತಿಯಿಂದಲೂ ಸುರಕ್ಷಿತ ಎಂಬುದನ್ನು ಖಾತ್ರಿ ಪಡಿಸುವುದಾಗಿರುತ್ತದೆ.

- ಇದು ಇತರ ಕಾರ್ಯಗಳಾದ ಗೇಜ್ ಪರಿವರ್ತನೆ, ಜೋಡಿ ಮಾರ್ಗ ರಚನೆ ಮತ್ತು ಹಾಲಿ ಮಾರ್ಗಗಳ ವಿದ್ಯುದ್ದೀಕರಣ ಇತ್ಯಾದಿಗೂ ಅನ್ವಯವಾಗುತ್ತದೆ. ಭೀಕರ ರೈಲು ಅಪಘಾತಗಳಿಗೆ ಸಂಬಂಧಿಸಿದಂತೆ ಆಯೋಗವು ಶಾಸನಾತ್ಮಕ ತನಿಖೆಯನ್ನೂ ನಡೆಸುತ್ತದೆ ಮತ್ತು ಭಾರತದಲ್ಲಿ ರೈಲ್ವೆಯ ಸುರಕ್ಷತೆ ಸುಧಾರಣೆಗೆ ಶಿಫಾರಸು ಮಾಡುತ್ತದೆ.
- ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಮತ್ತು ಸುರಕ್ಷತೆಯ ಪ್ರಮಾಣ ಪತ್ರದಲ್ಲಿ ಏಕರೂಪತೆಯ ಖಾತ್ರಿಗಾಗಿ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಮೆಟ್ರೋ ರೈಲು (ಕಾರ್ಯಚರಣೆ ಮತ್ತು ನಿರ್ವಹಣೆ) ಕಾಯಿದೆ 2002 ರೂಪಿಸುವ ವೇಳೆ, ಮೆಟ್ರೋ ರೈಲಿನಲ್ಲೂ ಇದೇ ರೀತಿಯ ಕಾರ್ಯಕ್ರಮಗಳನ್ನು ಮೆಟ್ರೋ ರೈಲು ಸುರಕ್ಷತೆ ಆಯುಕ್ತರಿಗೆ (ಸಿಎಂಆರ್.ಎಸ್.)ಅವರಿಗೆ ವಹಿಸಿತು. ಸಿಎಂಆರ್.ಎಸ್. ಆಡಳಿತಾತ್ಮಕವಾಗಿ ನಾಗರಿಕ ವಿಮಾನ ಯಾನ ಸಚಿವಾಲಯದಡಿಯ ಮುಖ್ಯ ರೈಲ್ವೆ ಸುರಕ್ಷತೆ ಆಯುಕ್ತರ ಅಡಿಯಲ್ಲಿರುತ್ತಾರೆ.

## 79. ಸಿಗರೇಟ್ ಪ್ಯಾಕ್‌ಗಳ ಎರಡೂ ಕಡೆ ಚಿತ್ರ ಸಹಿತ ಎಚ್ಚರಿಕೆ ಸಂದೇಶ ಮುದ್ರಿಸುವ ಆದೇಶವನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಪ್ರಮುಖ ಸುದ್ದಿ

- ಸಿಗರೇಟು,ಬೀಡಿ ಸೇರಿದಂತೆ ಎಲ್ಲ ತಂಬಾಕು ಉತ್ಪನ್ನಗಳ ಮೇಲೆ ಪ್ಯಾಕ್‌ನ ಎರಡೂ ಬದಿಯಲ್ಲಿ ಶೇಕಡ 85ರಷ್ಟು ಚಿತ್ರಸಹಿತ ಎಚ್ಚರಿಕೆ ಸಂದೇಶ ಕಡ್ಡಾಯವಾಗಿ ಮುದ್ರಿಸಬೇಕೆಂಬ ಕೇಂದ್ರದ ತಿದ್ದುಪಡಿ ನಿಯಮವನ್ನು ಕಾನೂನುಬಾಹಿರವೆಂದು ಹೈಕೋರ್ಟ್ ರದ್ದುಪಡಿಸಿದೆ.

- ಟೊಬ್ಯಾಕೋ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾ ಸೇರಿದಂತೆ ಹಲವು ಸಿಗರೇಟು ಉತ್ಪಾದಿಸುವ ಕಂಪನಿಗಳು ಸಲ್ಲಿಸಿದ್ದ 50ಕ್ಕೂ ಹೆಚ್ಚು ಅರ್ಜಿಗಳ ವಿಚಾರಣೆ ನಡೆಸಿ ತೀರ್ಪು ಕಾಯ್ದಿರಿಸಿದ್ದ ನ್ಯಾ.ಬಿ.ಎಸ್.ಪಾಟೀಲ್ ಮತ್ತು ನ್ಯಾ.ಬಿ.ವಿ.ನಾಗರತ್ನ ಅವರಿದ್ದ ವಿಶೇಷ ವಿಭಾಗೀಯ ಪೀಠ ಈ ತೀರ್ಪು ಪ್ರಕಟಿಸಿದೆ.

ಪ್ರಮುಖ ಅಂಶಗಳು

- ಸಿಗರೇಟು ಉತ್ಪಾದನಾ ಕಂಪನಿಗಳ ಅರ್ಜಿಗಳನ್ನು ಭಾಗಶಃ ಮಾನ್ಯ ಮಾಡಿದೆ.ಅದು "ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯಿದೆ(ಪ್ಯಾಕೇಜಿಂಗ್ ಮತ್ತು ಲೇಬಲಿಂಗ್)ನಿಯಮ 2014 ಅನ್ನು ರದ್ದುಗೊಳಿಸಿ,ಅದು ಸಂವಿಧಾನಬಾಹಿರವಾದುದು ಎಂದು ಹೇಳಿದೆ.ಆದರೆ,ಕೇಂದ್ರ ಸರಕಾರ,ನಿಯಮಗಳಿಗೆ ಅನುಗುಣವಾಗಿ ಕೋರ್ಟ್ ಮಾಡಿರುವ ವಿಶ್ಲೇಷಣೆ ಮತ್ತು ಅಭಿಪ್ರಾಯಗಳನ್ನು ಗಮನಲ್ಲಿರಿಸಿಕೊಂಡು ಸಂವಿಧಾನದ ಕಲಂ 77(3)ರಲ್ಲಿ ರಚಿಸಿರುವ ನಿಯಮಗಳನುಸಾರ ಹೊಸದಾಗಿ ಈ ಕುರಿತು ತಿದ್ದುಪಡಿ ಮಾಡಬಹುದು" ಎಂದು ನ್ಯಾಯಾಲಯ ತನ್ನ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

- ಅಲ್ಲದೆ, ಅಲ್ಲಿಯವರೆಗೆ 2008ರಲ್ಲಿ ರೂಪಿಸುರುವ ನಿಯಮದಂತೆ ಶೇ.40 ಎಚ್ಚರಿಕೆ ಸಂದೇಶ ಕಡ್ಡಾಯದ ಆದೇಶ ಮುಂದುವರಿಯಲಿದೆ ಎಂದು ನ್ಯಾಯಾಲಯ ಹೇಳಿದೆ.

- ಕೇಂದ್ರ ಸರಕಾರ 2014ರಲ್ಲಿ ನಿಯಮ ತಿದ್ದುಪಡಿ ಮಾಡಿ, ಎಲ್ಲ ಬಗೆಯ ತಂಬಾಕು ಉತ್ಪನ್ನಗಳ ಮೇಲೆ ಪ್ಯಾಕ್‌ನ ಎರಡೂ ಬದಿಯಲ್ಲಿ ಶೇಕಡ 85ರಷ್ಟು ಚಿತ್ರಸಹಿತ ಎಚ್ಚರಿಕೆ ಸಂದೇಶ ಕಡ್ಡಾಯವಾಗಿರಬೇಕೆಂದು ಆದೇಶ ನೀಡಿತ್ತು.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಅದಕ್ಕೂ ಮುನ್ನ 2008ರಲ್ಲಿ ಕೋಟ್ಪಾ ನಿಯಮಕ್ಕೆ ತಿದ್ದುಪಡಿ ಮಾಡಿದ್ದ ಕೇಂದ್ರ ಸರಕಾರ,ತಂಬಾಕು ಉತ್ಪನ್ನಗಳ ಪ್ಯಾಕೇಟ್‌ನ ಒಂದು ಬದಿಯಲ್ಲಿ ಶೇ.40ರಷ್ಟು ಚಿತ್ರ ಸಹಿತ ಎಚ್ಚರಿಕೆ ಸಂದೇಶ ಇರಬೇಕು ಎಂಬುದನ್ನು ಕಡ್ಡಾಯ ಮಾಡಿತ್ತು.ಅದನ್ನೂ ಸಹ ಕಾನೂನು ಬಾಹಿರ ಕ್ರಮ ಎಂದು ಸಿಗರೇಟು ತಯಾರಿಕಾ ಕಂಪನಿ ಪ್ರಶ್ನಿಸಿದ್ದವು.ಆದರೆ ಕೋರ್ಟ್,ಅವರ ವಾದವನ್ನು ತಳ್ಳಿಹಾಕಿದೆ.

- ಮೊದಲು ತಂಬಾಕು ಉತ್ಪನ್ನಗಳ ಪ್ಯಾಕೇಟ್‌ಗಳ ತಂಬಾಕು ಉತ್ಪನ್ನಗಳ ಕಾಯಿದೆ(ಪ್ಯಾಕೇಜಿಂಗ್ ಮತ್ತು ಲೇಬಲಿಂಗ್)ನಿಯಮ 2008 ಕಾನೂನು ಬದ್ಧವಾಗಿದೆ, ಅದನ್ನು ಊರ್ಜಿತಗೊಳಿಸಲಾಗಿದೆ ಎಂದು ಆದೇಶಿಸಿದೆ.

ಹಿನ್ನಲೆ

- ಕೇಂದ್ರ ಸರಕಾರ ಎಚ್ಚರಿಕೆ ಸಂದೇಶದ ಪ್ರಮಾಣವನ್ನು ಶೇ.85ಕ್ಕೆ ಹೆಚ್ಚಳ ಮಾಡಿ 2014ರ ಅ.15ರಂದು ಅಧಿಸೂಚನೆ ಹೊರಡಿಸಿತ್ತು.ಆದರೆ ಅದು ಜಾರಿಯಾಗಿದ್ದು 2015ರ ಏ.1ರಿಂದ.
- ಅದನ್ನು ಪ್ರಶ್ನಿಸಿ ತಂಬಾಕು ಉತ್ಪನ್ನಗಳ ತಯಾರಿಕಾ ಕಂಪನಿಗಳು ರಾಜಸ್ತಾನ, ಗುಜರಾತ್,ದೆಹಲಿ,ಕರ್ನಾಟಕ, ಬಾಂಬೆ ಮತ್ತು ಕಲ್ಕತ್ತಾ ಹೈಕೋರ್ಟ್‌ಗಳಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದವು. ನಂತರ ಸುಪ್ರೀಂಕೋರ್ಟ್ 2016ರ ಮೇ ತಿಂಗಳಲ್ಲಿ ಎಲ್ಲ ಕೇಸುಗಳನ್ನು ಕರ್ನಾಟಕ ಹೈಕೋರ್ಟ್‌ಗೆ ವರ್ಗಾಯಿಸಿ ವಿಚಾರಣೆ ನಡೆಸಿ ತೀರ್ಪು ನೀಡುವಂತೆ ಆದೇಶ ನೀಡಿತ್ತು.

## 80. ರಾಷ್ಟ್ರೀಯ ಆಯುಷ್ ಮಿಷನ್ (ನಾಮ್)

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, 2400 ಕೋಟಿ ರೂಪಾಯಿ ವೆಚ್ಚದಲ್ಲಿ ಕೇಂದ್ರ ಪ್ರಾಯೋಜಿತ ರಾಷ್ಟ್ರೀಯ ಆಯುಷ್ ಅಭಿಯಾನ (ನಾಮ್) ಅನ್ನು 01.04.2017 ರಿಂದ 31.03.2020ರವರೆಗೆ ಮೂರು ವರ್ಷಗಳ ಅವಧಿಗೆ ಮುಂದುವರಿಸಲು ತನ್ನ ಅನುಮೋದನೆ ನೀಡಿದೆ. ಈ ಅಭಿಯಾನವನ್ನು 2014ರ ಸೆಪ್ಟೆಂಬರ್ ನಲ್ಲಿ ಆರಂಭಿಸಲಾಗಿತ್ತು.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ವೈಶಿಷ್ಟ್ಯಗಳು:

- ಕಡಿಮೆ ವೆಚ್ಚದಲ್ಲಿ ಆಯುಷ್ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಆಯುಷ್ ಸಚಿವಾಲಯವು ಸಾರ್ವತ್ರಿಕ ಪ್ರವೇಶದೊಂದಿಗೆ ನಾಮ್ ಅನ್ನು ಅನುಷ್ಠಾನಕ್ಕೆ ತಂದಿದೆ.
- ಆಯುಷ್ ಆಸ್ಪತ್ರೆಗಳನ್ನು ಮತ್ತು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವುದು,
- ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್.ಸಿ.), ಸಮುದಾಯ ಆರೋಗ್ಯ ಕೇಂದ್ರ(ಸಿಎಚ್.ಸಿ) ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಆಯುಷ್ ಸೌಲಭ್ಯವನ್ನೂ ಕಲ್ಪಿಸುವುದು,

- ಆಯುಷ್ ಶೈಕ್ಷಣಿಕ ಸಂಸ್ಥೆಗಳು, ರಾಜ್ಯ ಸರ್ಕಾರ, ಎ.ಎಸ್.ಯು ಮತ್ತು ಎಚ್ ಔಷಧ ಮಳಿಗೆಗಳನ್ನು ನವೀಕರಿಸುವ ಮೂಲಕ ರಾಜ್ಯ ಮಟ್ಟದಲ್ಲಿ ಸಾಂಸ್ಥಿಕ ಸಾಮರ್ಥ್ಯವನ್ನು ಬಲಪಡಿಸುವುದು.

- ಔಷಧ ಪರೀಕ್ಷಾ ಪ್ರಯೋಗಾಲಯಗಳು ಮತ್ತು ಎ.ಎಸ್.ಯು. ಮತ್ತು ಎಚ್ ಜಾರಿ ವ್ಯವಸ್ಥೆ,

- ಸುಸ್ಥಿರ ಗುಣಮಟ್ಟದ ಕಚ್ಚಾ ಸಾಮಗ್ರಿಗಳ ಪೂರೈಕೆಗಾಗಿ ಉತ್ತಮ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಔಷಧ ಸಸ್ಯಗಳ ಕೃಷಿಗೆ ಬೆಂಬಲ ನೀಡುವುದು ಮತ್ತು ಔಷಧ ಸಸ್ಯಗಳ ದಾಸ್ತಾನು ಮತ್ತು ಮಾರುಕಟ್ಟೆಗಾಗಿ ಮೂಲಸೌಕರ್ಯ ಅಭಿವೃದ್ಧಿಪಡಿಸುವುದು.

- ಆಯುಷ್ ಆರೋಗ್ಯ ಸೇವೆ/ಶಿಕ್ಷಣ ಒದಗಿಸಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರದ ಪ್ರಯತ್ನಗಳಿಗೆ ಬೆಂಬಲ ನೀಡುವ ಮೂಲಕ ದೇಶದಲ್ಲಿ ಅದರಲ್ಲೂ ಅತಿ ಸೂಕ್ಷ್ಮ ಮತ್ತು ದೂರದ ಪ್ರದೇಶಗಳಲ್ಲಿ ಆರೋಗ್ಯ ಸೇವೆಯಲ್ಲಿನ ಕಂದಕವನ್ನು ನಾಮ್ ನಿವಾರಿಸುತ್ತಿದೆ. ನಾಮ್ ಅಡಿಯಲ್ಲಿ ಅಂಥ ಕ್ಷೇತ್ರಗಳ ನಿರ್ದಿಷ್ಟ ಅಗತ್ಯಗಳಿಗೆ ಮತ್ತು ತಮ್ಮ ವಾರ್ಷಿಕ ಯೋಜನೆಯಲ್ಲಿ ಉನ್ನತ ಸಂಪನ್ಮೂಲಗಳಿಗೆ ಹೆಚ್ಚಿನ ಹಂಚಿಕೆ ಮಾಡಲು ವಿಶೇಷ ಒತ್ತು ನೀಡಲಾಗುತ್ತಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಈ ಅಭಿಯಾನದ ನಿರೀಕ್ಷಿತ ಫಲಶ್ರುತಿ ಈ ಕೆಳಗಿನಂತಿದೆ:**

- ಆಯುಷ್ ಸೇವೆ ಒದಗಿಸುವ ಆರೋಗ್ಯ ಸೇವೆಗಳ ಸೌಲಭ್ಯಗಳ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ ಆಯುಷ್ ಆರೋಗ್ಯ ಸೇವೆಗಳ ಉತ್ತಮ ಲಭ್ಯತೆ ಮತ್ತು ಔಷಧಗಳ ಮತ್ತು ಮಾನವ ಸಂಪನ್ಮೂಲದ ಲಭ್ಯತೆ.

- ಆಯುಷ್ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚಿಸುವ ಮೂಲಕ ಆಯುಷ್ ಶಿಕ್ಷಣದ ಸುಧಾರಣೆ.

- ಕಠಿಣ ಜಾರಿ ಕಾರ್ಯವಿಧಾನವೂ ಸೇರಿದಂತೆ ಗುಣಮಟ್ಟದ ಔಷಧ ಮಳಿಗೆಗಳ ಮತ್ತು ಔಷಧ ಪರೀಕ್ಷಾ ಪ್ರಯೋಗಾಲಯಗಳ ಸಂಖ್ಯೆಯಲ್ಲಿ ಹೆಚ್ಚಳ ಮಾಡುವ ಮೂಲಕ ಗುಣಮಟ್ಟದ ಆಯುಷ್ ಔಷಧಗಳ ಲಭ್ಯತೆಯಲ್ಲಿನ ಸುಧಾರಣೆ.
- ಯೋಗಾ ಮತ್ತು ಪ್ರಕೃತಿ ಚಿಕಿತ್ಸೆಯನ್ನು ರೋಗತಡೆ ವಿಧಾನದ ಆರೋಗ್ಯ ವ್ಯವಸ್ಥೆಯಾಗಿ ಅಂಗೀಕರಿಸುವ ಕುರಿತು ಜಾಗೃತಿ ಹೆಚ್ಚಿಸುವುದು.

- ಗಿಡಮೂಲಿಕೆಯ ಕಚ್ಚಾ ಸಾಮಗ್ರಿಗಳ ಹೆಚ್ಚುತ್ತಿರುವ ದೇಶೀಯ ಬೇಡಿಕೆಯನ್ನು ಪೂರೈಸಲು ಮತ್ತು ರಫ್ತು ಉತ್ತೇಜಿಸಲು.

**ಹಿನ್ನೆಲೆ:**

- ಆಯುರ್ವೇದ, ಸಿದ್ಧ, ಯುನಾನಿ ಮತ್ತು ಹೋಮಿಯೋಪತಿ (ಎ.ಎಸ್.ಯು ಮತ್ತು ಎಚ್) ಯಂತಹ ಪ್ರಾಚೀನ ವೈದ್ಯ ಪದ್ಧತಿಯ ಮೂಲಕ ಪ್ರತಿನಿಧಿಸಲ್ಪಟ್ಟಿರುವ ಭಾರತದ ಅನುಪಮ ಪರಂಪರೆಯ ಮೇಲೆ ರೋಗ ತಡೆಗಟ್ಟುವ ಮತ್ತು ಉತ್ತೇಜಕ ಆರೋಗ್ಯ ರಕ್ಷಣೆಗಾಗಿ ಜ್ಞಾನದ ನಿಧಿಯಾಗಿ ನಿರ್ಮಾಣ ಮಾಡುವ ಉದ್ದೇಶವನ್ನು ರಾಷ್ಟ್ರೀಯ ಆಯುಷ್ ಅಭಿಯಾನ ಹೊಂದಿದೆ.
- ಭಾರತೀಯ ವೈದ್ಯ ಪದ್ಧತಿಗಳ ಧನಾತ್ಮಕ ವೈಶಿಷ್ಟ್ಯಗಳು ಅದರ ವೈವಿಧ್ಯತೆ ಮತ್ತು ನಮ್ಯತೆ; ಲಭ್ಯತೆ; ಕೈಗೆಟಕುವ ದರ, ದೊಡ್ಡ ಸಂಖ್ಯೆಯ ಸಾರ್ವಜನಿಕರ ವಿಸ್ತೃತ ಅಂಗೀಕಾರ, ತುಲನಾತ್ಮಕವಾಗಿ ಅತ್ಯಂತ ಕಡಿಮೆ ವೆಚ್ಚ ಮತ್ತು ಹೆಚ್ಚುತ್ತಿರುವ ಆರ್ಥಿಕ ಮೌಲ್ಯವಾಗಿದ್ದು, ದೊಡ್ಡ ವರ್ಗದ ಜನರ ಅಗತ್ಯವಾಗಿರುವ ಆರೋಗ್ಯ ರಕ್ಷಣೆಯಲ್ಲಿ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿವೆ.

## 81. ಈಶಾನ್ಯ ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (NESIDS)

**ಪ್ರಮುಖ ಸುದ್ದಿ**

- ಕೇಂದ್ರ ಸರ್ಕಾರ ಕೇಂದ್ರ ಪ್ರಾಯೋಜಿತ ಈಶಾನ್ಯ ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗೆ ಒಪ್ಪಿಗೆ ನೀಡಿದೆ. 2017-18ನೇ ಸಾಲಿನಲ್ಲಿ ಇದು ಜಾರಿಗೆ ಬರಲಿದೆ.

- ಈ ಯೋಜನೆಗೆ ಶೇಕಡ 100ರಷ್ಟು ಅನುದಾನವನ್ನು ಕೇಂದ್ರ ಸರ್ಕಾರವೇ ಒದಗಿಸುತ್ತದೆ ಹಾಗೂ 2020ರ ಮಾರ್ಚ್‌ವರೆಗೆ ಈಶಾನ್ಯ ರಾಜ್ಯಗಳಲ್ಲಿ ನಿರ್ದಿಷ್ಟ ಮೂಲಸೌಕರ್ಯ ವಲಯದಲ್ಲಿನ ಅಂತರವನ್ನು ಬಗೆಹರಿಸಲು ಇದು ಪೂರಕವಾಗಲಿದೆ.

## ಎನ್‌ಇಎಸ್‌ಐಡಿಎಸ್ ಪ್ರಮುಖ ಲಕ್ಷಣಗಳು

- ಕೇಂದ್ರ ಪ್ರಾಯೋಜಿತ ಈಶಾನ್ಯ ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯು ಮುಖ್ಯವಾಗಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವ ಉದ್ದೇಶ ಹೊಂದಿದ್ದು ಪ್ರಮುಖವಾಗಿ ಈ ಕೆಳಗಿನ ಕ್ಷೇತ್ರಗಳನ್ನು ಇದು ಒಳಗೊಳ್ಳುತ್ತದೆ.

- ಭೌತಿಕ ಮೂಲಸೌಕರ್ಯವಾದ ನೀರು ಸರಬರಾಜು, ವಿದ್ಯುತ್, ಸಂಪರ್ಕ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಯೋಜನೆಯನ್ನು ಒಳಗೊಳ್ಳಲಿದೆ.
- ಸಾಮಾಜಿಕ ವಲಯದ ಮೂಲಸೌಕರ್ಯಗಳು. ಇದರಲ್ಲಿ ಮುಖ್ಯವಾಗಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡಲಾಗುತ್ತದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## ಈಶಾನ್ಯ ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಪ್ರಯೋಜನಗಳು

- ಕೇಂದ್ರ ಸರ್ಕಾರದ ಕೇಂದ್ರ ಪ್ರಾಯೋಜಿತ ಈಶಾನ್ಯ ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಸೃಷ್ಟಿಸಲಾದ ಮೂಲಸೌಕರ್ಯದಿಂದ ಕೇವಲ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯ ಕ್ಷೇತ್ರಗಳನ್ನು ಬಲಪಡಿಸುವುದು ಮಾತ್ರವಲ್ಲದೇ, ಈಶಾನ್ಯ ರಾಜ್ಯಗಳಲ್ಲಿ ಹೆಚ್ಚಾಗಿ ಪ್ರಚಾರವಾಗದೇ ಇರುವ ಪ್ರವಾಸೋದ್ಯಮ ವಲಯದ ಅವಕಾಶಗಳನ್ನು ಕೂಡಾ ಬಳಕೆ ಮಾಡಿಕೊಳ್ಳುವುದು ಇದರ ಉದ್ದೇಶ.
- ಈ ಮೂಲಕ ಸ್ಥಳೀಯ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸಿಕೊಡಲಾಗುತ್ತದೆ. ಈ ಯೋಜನೆಯು ಇಡೀ ಈಶಾನ್ಯ ರಾಜ್ಯಗಳ ಅಭಿವೃದ್ಧಿಯ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸಲಿದೆ.

ಎನ್‌ಎಲ್‌ಸಿಪಿಆರ್ ನಿಧಿ ಬಗ್ಗೆ

- ಇದಕ್ಕಾಗಿ ಕೇಂದ್ರ ಸರ್ಕಾರವು ಹಾಲಿ ಇರುವ ಲ್ಯಾಪ್ಸ್ ಆಗದ ಕೇಂದ್ರೀಯ ಸಂಪನ್ಮೂಲಗಳ ನಿಧಿಯನ್ನು ಮುಂದುವರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. 2020ರ ಮಾರ್ಚ್‌ವರೆಗೆ ಈ ಯೋಜನೆ ಜಾರಿಯಲ್ಲಿರುತ್ತದೆ.
- ಇದರ ಅನುದಾನ ಹಂಚಿಕೆ ಪ್ರಮಾಣ 90 : 10 ಅಂತರದಲ್ಲಿರುತ್ತದೆ. ಇದಕ್ಕೆ 53 ಸಾವಿರ ಕೋಟಿ ರೂಪಾಯಿ ಅನುದಾನ ಮಂಜೂರು ಮಾಡಲಾಗಿದೆ. ಇದು ಎಲ್ಲ ಜಾರಿ ಹಂತದಲ್ಲಿರುವ ಯೋಜನೆಗಳು ಪೂರ್ಣಗೊಳ್ಳಲು ನೆರವಾಗಲಿದೆ.

- ಇದರ ವಿಸ್ತಂತವಾದ ಉದ್ದೇಶವೆಂದರೆ, ಈಶಾನ್ಯ ರಾಜ್ಯಗಳಲ್ಲಿ ಸಾಮಾಜಿಕ ಮೂಲಸೌಕರ್ಯ ವಲಯದಲ್ಲಿ ತ್ವರಿತವಾದ ಅಭಿವೃದ್ಧಿ ಸಾಧಿಸಲು ನೆರವಾಗುವುದು. ಅದರಲ್ಲೂ ಮುಖ್ಯವಾಗಿ ಕೆಲ ವಲಯಗಳಿಗೆ ಸಿಕ್ಕಿಂನಲ್ಲಿ ಭಾರಿ ಪ್ರಮಾಣದ ನೆರವು ಬರುತ್ತಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳುವುದು.

- ಈಶಾನ್ಯ ರಾಜ್ಯಗಳ ಅಭಿವೃದ್ಧಿ ಸಚಿವಾಲಯ ಎನ್‌ಎಲ್‌ಸಿಪಿಆರ್‌ನಿಂದ ಇದಕ್ಕೆ ಅನುದಾನ ಮಂಜೂರು ಮಾಡಲಿದ್ದು, ವಿವಿಧ ಈಶಾನ್ಯ ರಾಜ್ಯಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಇದು ನೆರವಾಗಲಿದೆ. ಎನ್‌ಎಲ್‌ಸಿಪಿಆರ್ ಕೇಂದ್ರ ಯೋಜನೆಯಡಿ ಸಾಮಾನ್ಯ ಬಜೆಟ್‌ನಲ್ಲಿ ಇದಕ್ಕೆ ಅಗತ್ಯವಾದ ನೆರವು ನೀಡಲಾಗುತ್ತದೆ.

## 82. ಸಾಗರ ಶಾಸ್ತ್ರ ಕಾರ್ಯಕಾಚರಣೆಯ ಅಂತಾರಾಷ್ಟ್ರೀಯ ತರಬೇತಿ ಕೇಂದ್ರ (International Training Centre for Operational Oceanography)

ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಹೈದ್ರಾಬಾದ್ ನಲ್ಲಿ ಯುನೆಸ್ಕೋದ ಪ್ರವರ್ಗ-2 ಕೇಂದ್ರ (ಸಿ 2 ಸಿ) ಆಗಿ ಸಮುದ್ರಶಾಸ್ತ್ರ ಕಾರ್ಯಚರಣೆಯ ಅಂತಾರಾಷ್ಟ್ರೀಯ ತರಬೇತಿ ಕೇಂದ್ರವನ್ನು ಸ್ಥಾಪಿಸಲು ತನ್ನ ಅನುಮೋದನೆ ನೀಡಿದೆ.

- ಹಿಂದೂ ಮಹಾಸಾಗರದ ಅಂಚಿನ (ಐಓಆರ್) ರಾಷ್ಟ್ರಗಳು, ಹಿಂದೂ ಮಹಾಸಾಗರ ಮತ್ತು ಅಟ್ಲಾಂಟಿಕ್ ಸಾಗರದ ಗಡಿಯ ಆಫ್ರಿಕಾ ದೇಶಗಳು, ಯುನೆಸ್ಕೋ ಚೌಕಟ್ಟಿನಡಿಯಲ್ಲಿ ಬರುವ ಸಣ್ಣ ದ್ವೀಪಗಳ ಸಾಮರ್ಥ್ಯ ಅಭಿವೃದ್ಧಿಯ ನಿಟ್ಟಿನಲ್ಲಿ ತರಬೇತಿ ಕೇಂದ್ರ ಸ್ಥಾಪಿಸುವುದು ಈ ಒಪ್ಪಂದದ ಉದ್ದೇಶವಾಗಿದೆ.

## ಸಾಗರಶಾಸ್ತ್ರ ಕಾರ್ಯಚರಣೆ ಎಂದರೇನು ?

- ಸಾಗರಶಾಸ್ತ್ರ ಕಾರ್ಯಚರಣೆಯು ಮೀನುಗಾರ, ವಿಪತ್ತು ನಿರ್ವಹಣೆ, ಹಡಗು, ಬಂದರುಗಳು, ಕರಾವಳಿ ರಾಷ್ಟ್ರಗಳು, ನೌಕಾಪಡೆ, ಕರಾವಳಿ ಭದ್ರತೆ, ಪರಿಸರ, ಕಡಲಾಚೆಯ ಉದ್ಯಮಗಳ ದೈನಂದಿನ ಕಾರ್ಯಾಚರಣೆ ಒಳಗೊಂಡಂತೆ ವಿವಿಧ ಕ್ಷೇತ್ರಗಳಿಗೆ ಮಾಹಿತಿ ಸೇವೆಗಳನ್ನು ಒದಗಿಸುವ ಸಲುವಾಗಿ ವ್ಯವಸ್ಥಿತ ಸಮುದ್ರಶಾಸ್ತ್ರದ ಅಧ್ಯಯನಗಳನ್ನು ನಡೆಸುವ ಒಂದು ಚಟುವಟಿಕೆಯಾಗಿದೆ.

## ಮಹತ್ವ

- ಈ ಕೇಂದ್ರವು ಸಾಮರ್ಥ್ಯವರ್ಧನೆ ಮತ್ತು ತರಬೇತಿ, ಜ್ಞಾನ ವಿನಿಮಯ ಮತ್ತು ಮಾಹಿತಿಯ ವಿನಿಮಯ ಕ್ಷೇತ್ರದಲ್ಲಿ ನೆರವು ಒದಗಿಸುತ್ತದೆ ಮತ್ತು ಯುನೆಸ್ಕೋದ ಕ್ರಮದ ಪರಿಣಾಮ ಮತ್ತು ಯುನೆಸ್ಕೋದ ಮತ್ತು ದೃಷ್ಟಿಯನ್ನು ಹೆಚ್ಚಿಸುವ ಮೂಲಕ ಅದರ ಅಂತರ ಸರ್ಕಾರೀಯ ಸಾಗರಶಾಸ್ತ್ರ ಆಯೋಗ (ಐಓಸಿ) ಮೌಲ್ಯಯುತ ಸಂಪನ್ಮೂಲ ಪ್ರತಿನಿಧಿಸುತ್ತದೆ.

- ಯುನೆಸ್ಕೋ ಪ್ರವರ್ಗ -2 ಕೇಂದ್ರ ಸ್ಥಾಪನೆಯು ಭಾರತಕ್ಕೆ ಹಿಂದೂ ಮಹಾಸಾಗರದಲ್ಲಿ ಪ್ರಮುಖ ರಾಷ್ಟ್ರವಾಗಿ ಹೊರಹೊಮ್ಮಲು ಅವಕಾಶ ಒದಗಿಸುತ್ತದೆ. ಇದು ಹಿಂದೂ ಮಹಾಸಾಗರದ ಗಡಿಯ

ಆಫ್ರಿಕಾ ದೇಶಗಳು ಹಾಗೂ ದಕ್ಷಿಣ ಏಷ್ಯಾ ಸೇರಿದಂತೆ ಹಿಂದೂ ಮಹಾಸಾಗರದಂಚಿನ ರಾಷ್ಟ್ರಗಳೊಂದಿಗೆ ಸಹಕಾರ ಮತ್ತು ಕಾರ್ಯಕ್ರಮಗಳ ಸುಧಾರಣೆ ಸಾಧಿಸಲು ಭಾರತಕ್ಕೆ ನೆರವಾಗಲಿದೆ.

- ಕೇಂದ್ರದ ಸ್ಥಾಪನೆಯು ಸಾಗರ ಮತ್ತು ಕರಾವಳಿ ಸಮರ್ಥನೀಯತೆಯ ಸಮಸ್ಯೆಗಳನ್ನು ಬಗೆಹರಿಸಲು ವಿಶ್ವಾದ್ಯಂತ ಹೆಚ್ಚುತ್ತಿರುವ ತಾಂತ್ರಿಕ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ನಿರ್ಮಿಸುವ ಅಗತ್ಯಕ್ಕೆ ಸ್ಪಂದಿಸುತ್ತದೆ ಮತ್ತು ಸಾಗರ ನೈಸರ್ಗಿಕ ಅಪಾಯಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸಲು ಸಜ್ಜುಗೊಳಿಸುತ್ತದೆ. ಈ ಕೇಂದ್ರವು,ಭೌಗೋಳಿಕ ಪ್ರದೇಶದಲ್ಲಿ ಸಾಗರ ವೈಜ್ಞಾನಿಕ ಸಂಶೋಧನಾ ಸಾಮರ್ಥ್ಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸುಸ್ಥಿರ ಅಭಿವೃದ್ಧಿ ಗುರಿ -14 (ಎಸ್.ಡಿ.ಜಿ 14) ಗುರಿ ಸಾಧನೆಗೂ ಕೊಡುಗೆ ನೀಡಲಿದೆ, ಇದು ಮುಂದುವರಿಯುತ್ತಿರುವ ಸಣ್ಣ ದ್ವೀಪರಾಷ್ಟ್ರಗಳು, ಅತಿ ಕಡಿಮೆ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೆ ಬೆಂಬಲ ನೀಡುವ ಬದ್ಧತೆಯನ್ನೂ ಪೂರೈಸಲಿದೆ.

- ಈ ಸಿ2ಸಿ ವಿದ್ಯಾರ್ಥಿಗಳ ಮತ್ತು ಇತರ ಸ್ಪರ್ಧಿಗಳ ಕೌಶಲ ಸುಧಾರಣೆಯ ಇಂಗಿತ ಹೊಂದಿದೆ, ಇದು ಭಾರತದೊಳಗೆ ಮತ್ತು ಹೊರಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲಿದೆ. ಸಿ2ಸಿ ಸ್ಥಾಪನೆಯು ಭಾರತದಲ್ಲಿ ಉದ್ಯೋಗ ಸೃಷ್ಟಿಗೆ ಪೂರಕ ಬೆಳವಣಿಗೆ ಒದಗಿಸುತ್ತದೆ ಎಂದೂ ನಿರೀಕ್ಷಿಸಲಾಗಿದೆ. ಈ ಕೇಂದ್ರವು ಪ್ರಸ್ತುತ ಹೈದ್ರಾಬಾದ್ ನ ಭಾರತೀಯ ಸಾಗರ ಮಾಹಿತಿ ಸೇವೆಗಳ ಕೇಂದ್ರ (ಐಎನ್.ಸಿ.ಓ.ಐ.ಎಸ್.)ದಲ್ಲಿ ಲಭ್ಯವಿರುವ ಅತ್ಯಾಧುನಿಕ ಸೌಲಭ್ಯಗಳನ್ನು ಬಳಸಿಕೊಂಡು ಕಾರ್ಯಾರಂಭ ಮಾಡುತ್ತಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 83. ಭಾರತ ಮತ್ತು ಕೊಲಂಬಿಯಾ ನಡುವೆ ಕೃಷಿ ಮತ್ತು ಮೀನುಗಾರಿಕೆ ಕ್ಷೇತ್ರದಲ್ಲಿನ ತಿಳಿವಳಿಕೆ ಒಪ್ಪಂದಕ್ಕೆ ಸಂಪುಟದ ಅನುಮೋದನೆ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಕೃಷಿ ಮತ್ತು ಮೀನುಗಾರಿಕೆ ಕ್ಷೇತ್ರದಲ್ಲಿ ಭಾರತ ಮತ್ತು ಕೊಲಂಬಿಯಾ ನಡುವೆ ತಿಳಿವಳಿಕೆ ಒಪ್ಪಂದಕ್ಕೆ ಅಂಕಿತ ಹಾಕಲು ತನ್ನ ಅನುಮೋದನೆ ನೀಡಿದೆ.

**ಈ ತಿಳಿವಳಿಕೆ ಒಪ್ಪಂದವು ಕೃಷಿ ಮತ್ತು ಮೀನುಗಾರಿಕೆ ಕ್ಷೇತ್ರದಲ್ಲಿ ಈ ಕೆಳಗಿನ ಸಹಕಾರವನ್ನು ಒದಗಿಸುತ್ತದೆ:**

- ನಾವಿನ್ಯಪೂರ್ಣ ಕೃಷಿ ಪದ್ಧತಿಗಳು/ದೃಷ್ಟಿಕೋನಗಳು
- ಹೊಸ ಕೃಷಿ ಯಾಂತ್ರೀಕರಣ

**ಕೃಷಿ ಮಾರುಕಟ್ಟೆಯಲ್ಲಿನ ಯಶಸ್ವೀ ಮಾದರಿಗಳು**

- ಬಿತ್ತನೆಬೀಜ ಉತ್ಪಾದನೆಗಾಗಿ ಕೃಷಿ ಕಂಪನಿಗಳ ಸಹಯೋಗದೊಂದಿಗೆ ಯೋಜನೆ ಅಭಿವೃದ್ಧಿಪಡಿಸುವುದು.

- ತೋಟಗಾರಿಕೆ (ತರಕಾರಿ, ಹಣ್ಣು ಮತ್ತು ಹೂವು)ಯಲ್ಲಿ ನಾವಿನ್ಯಪೂರ್ಣ ಉತ್ಪಾದನೆ ಮಾದರಿ ಮತ್ತು ಮೌಲ್ಯ ಸೃಷ್ಟಿ ಪ್ರಕ್ರಿಯೆಗಳು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಮಾಹಿತಿಯ ವಿನಿಮಯ/ಎಸ್.ಪಿ.ಎಸ್. ತಜ್ಞರ ಭೇಟಿ ವಿನಿಮಯ

**ತೈಲ ತಾಳೆ ಮತ್ತು ಎಣ್ಣೆ ಕಾಳು ಸಂಶೋಧನೆಯಲ್ಲಿ ಸಹಕಾರ**

- ಮೀನುಗಾರಿಕಾ ಕ್ಷೇತ್ರದಲ್ಲಿ ಸಾಗರ ಕೈಗಾರಿಕಾ ಮೀನುಗಾರಿಕೆ, ಅಕ್ವಾ ಕಲ್ಚರ್ ಮತ್ತು ಸಂಶೋಧನೆ ಹಾಗೂ ತರಬೇತಿ,

- ಸಣ್ಣ ಮತ್ತು ದೊಡ್ಡದಾಗಿ ಮೆಲುಕು ಹಾಕುವ ಪ್ರಾಣಿಗಳು (ಜಾನುವಾರು, ಕುರಿ ಮತ್ತು ಮೇಕೆ) ಹಾಗೂ ಹಂದಿ ಉತ್ಪಾದಕತೆ, ಕಾಯಿಲೆಗಳು ಮತ್ತು ರೋಗಪತ್ತೆ, ಮತ್ತು

- ಹಂದಿ ಮಾಂಸ ಸಂಸ್ಕರಣೆ ಮತ್ತು ಮೌಲ್ಯವರ್ಧನೆ.

- ಈ ತಿಳಿವಳಿಕೆ ಒಪ್ಪಂದದ ಅಡಿಯಲ್ಲಿ, ಮುಂದಿನ ಎರಡು ವರ್ಷಗಳಲ್ಲಿ ಕೆಲಸದ ಯೋಜನೆಗಳನ್ನು ತಯಾರಿಸಲು / ಅಂತಿಮಗೊಳಿಸಲು, ಆ ಅವಧಿಯಲ್ಲಿ ಕೈಗೊಳ್ಳಬೇಕಾದ / ಚಟುವಟಿಕೆಗಳನ್ನು ನಿರ್ಧಿಷ್ಟಪಡಿಸಲು ಒಂದು ಜಂಟಿ ಕಾರ್ಯ ಗುಂಪು (ಜೆಡಬ್ಲ್ಯುಜಿ)ಯನ್ನು ಸ್ಥಾಪಿಸಲಾಗುತ್ತದೆ.

- ಈ ತಿಳಿವಳಿಕೆ ಒಪ್ಪಂದವು ಮೊದಲಿಗೆ ಐದು ವರ್ಷಗಳ ಅವಧಿಯದ್ದಾಗಿರುತ್ತದೆ ಮತ್ತು ಇಬ್ಬರೂ ಪಕ್ಷಕಾರರು ಅದನ್ನು ರದ್ದುಪಡಿಸುವ ಇಂಗಿತ/ ಇಚ್ಛೆ ವ್ಯಕ್ತಪಡಿಸದಿದ್ದಲ್ಲಿ ತಂತಾನೆ ಮುಂದಿನ ಐದು ವರ್ಷಗಳ ಅವಧಿಗೆ ವಿಸ್ತರಣೆಯಾಗಲಿದೆ.

## 84. ನ್ಯಾಯ ಗ್ರಾಮ್ ಯೋಜನೆ

- ಇದು ಅಲಹಾಬಾದ್ ಹೈಕೋರ್ಟ್ ನಲ್ಲಿ ನ್ಯಾಯಾಂಗ ಅಕಾಡೆಮಿ ಮತ್ತು ಆಡಿಟೋರಿಯಂನೊಂದಿನ ಮಾದರಿ ಪಟ್ಟಣ
- ಇದಕ್ಕೆ ಯು.ಪಿ. ರಾಜ್ಯ ಸರ್ಕಾರವು ಈ ನ್ಯಾಯಾಂಗ ಮೂಲಸೌಕರ್ಯಕ್ಕೆ ಹಣವನ್ನು ಒದಗಿಸಿದೆ.
- ಯು.ಪಿ ಸಾರ್ವಜನಿಕ ಕಾರ್ಯಗಳ ಇಲಾಖೆ ನಾಮನಿರ್ದೇಶಿತ ನಿರ್ಮಾಣ ಸಂಸ್ಥೆಯಾಗಿದೆ.
- ಸಮಕಾಲೀನ ಶಾಸನ ಮತ್ತು ಕಾನೂನಿನ ಕ್ಷೇತ್ರದಲ್ಲಿನ ಬೆಳವಣಿಗೆಯಲ್ಲಿ ನ್ಯಾಯಾಧೀಶರಿಗೆ ಸಹಾಯ ಮಾಡುತ್ತದೆ.

## 85. ಐಎಎಫ್'ನಲ್ಲಿ 45 ವರ್ಷ ಸುದೀರ್ಘ ಸೇವೆ ಸಲ್ಲಿಸಿದ್ದ ಎಂಐ-8 ಪ್ರತಾಪ್ ಹೆಲಿಕಾಪ್ಟರ್'ಗೆ ವಿದಾಯ

- ಭಾರತೀಯ ವಾಯುಪಡೆಯಲ್ಲಿ (ಐಎಎಫ್) 45 ವರ್ಷಗಳ ಕಾಲ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದ ಎಂಐ-8 ಹೆಲಿಕಾಪ್ಟರ್ ಪ್ರತಾಪ್ ಇತ್ತೀಚೆಗೆ ವಾಯುನೆಲೆಯಲ್ಲಿ ತನ್ನ ಕೊನೆಯ ಹಾರಾಟ ನಡೆಸಿದವು.

- ಸುಮಾರು 50 ರಾಷ್ಟ್ರಗಳ ಸೇನೆಯಲ್ಲಿ ಬಳಕೆಯಿದ್ದ ಎಂಐ-8 ಹೆಲಿಕಾಪ್ಟರ್, 2015ರವರೆಗೆ ಮೂರನೇ ಅತೀ ಹೆಚ್ಚು ಬಳಕೆಯ ಹೆಲಿಕಾಪ್ಟರ್ ಆಗಿ ಗುರುತಿಸಿಕೊಂಡಿತ್ತು. 1971ರಲ್ಲಿ ರಷ್ಯಾದಿಂದ ದೇಶಕ್ಕೆ ಆಮದಾದ ಎಂಐ-8 ಹೆಲಿಕಾಪ್ಟರ್ ಭಾರತೀಯ ವಾಯುಪಡೆಗೆ 1972ರಲ್ಲಿ ಸೇರ್ಪಡೆಯಾಗಿತ್ತು.
- 1971ರಿಂದ 1988ರವರೆಗೆ ಒಟ್ಟು 107 ಎಂಐ-8 ಹೆಲಿಕಾಪ್ಟರ್ ಗಳನ್ನು ಪ್ರತಾಪ್ ಹೆಸರಿನಲ್ಲಿ ಸೇರ್ಪಡೆಗೊಳಿಸಿದ್ದು, ದೇಶದ ಆಂತರಿಕ ಭದ್ರತೆ, ಯುದ್ಧ ವಿಪತ್ತು ನಿರ್ವಹಣೆ ಸಂದರ್ಭದಲ್ಲಿ ಗಮನಾರ್ಹ ಕೊಡುಗೆಗಳನ್ನು ನೀಡಿವೆ.

## 86.ಡೆಬಿಟ್ ಕಾರ್ಡ್/ಭೀಮ್ ಯುಪಿಐ/ಎಇಪಿಎಸ್ ವಹಿವಾಟುಗಳ ಮೇಲಿನ ಎಂ.ಡಿ.ಆರ್. ಶುಲ್ಕಕ್ಕೆ ಸಹಾಯಧನ ನೀಡಲು ಸಂಪುಟದ ಅನುಮೋದನೆ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಎಲ್ಲ ಡೆಬಿಟ್ ಕಾರ್ಡ್ /ಭೀಮ್ ಯುಪಿಐ/ ಆಧಾರ್ ಸಂಪರ್ಕಿತ ಪಾವತಿ ವ್ಯವಸ್ಥೆ (ಎಇಪಿಎಸ್)ಗಳ ಮೂಲಕ ನಡೆಸುವ 2000 ರೂ. ಸೇರಿದಂತೆ ಆ ಮೌಲ್ಯದವರೆಗಿನ ವಹಿವಾಟಿನ ಮೇಲೆ ವ್ಯಾಪಾರಿಗಳ ರಿಯಾಯಿತಿ ದರ (ಎಂ.ಡಿ.ಆರ್.) ಶುಲ್ಕ ಅನ್ವಯವಾಗಲಿದ್ದು, ಅದನ್ನು ಬ್ಯಾಂಕ್ ಗಳಿಗೆ ಹಿಂತಿರುಗಿಸುವ ಮೂಲಕ ಜನವರಿ 1 2018ರಿಂದ ಎರಡು ವರ್ಷಗಳ ಅವಧಿಗೆ ಸರ್ಕಾರವೇ ಭರಸಲು ತನ್ನ ಅನುಮೋದನೆ ನೀಡಿದೆ.

### ಪ್ರಮುಖ ಅಂಶಗಳು

- ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಮತ್ತು ಭಾರತೀಯ ರಾಷ್ಟ್ರೀಯ ಪಾವತಿ ನಿಗಮ (ಎನ್.ಪಿ.ಸಿ.ಐ) ಸಿ.ಇ.ಓ. ಅವರನ್ನು ಒಳಗೊಂಡ ಸಮಿತಿಯು ಮರುಪಾವತಿ ಮಟ್ಟವನ್ನು ನಿರ್ಧರಿಸಲು ಆಧಾರವಾಗಿರುವ ಅಂತಹ ವಹಿವಾಟಿನ ಉದ್ಯಮ ವೆಚ್ಚದ ವಿನ್ಯಾಸವನ್ನು ನೋಡಿಕೊಳ್ಳುತ್ತದೆ.

- ಈ ಅನುಮೋದನೆಯ ಫಲವಾಗಿ, 2000 ರೂ. ಮೌಲ್ಯಕ್ಕಿಂತ ಕಡಿಮೆ ಮೊತ್ತದ ಎಲ್ಲ ವಹಿವಾಟುಗಳಿಗೆ ಗ್ರಾಹಕರು ಮತ್ತು ವ್ಯಾಪಾರಿಗಳು ಎಂ.ಡಿ.ಆರ್. ಸ್ವರೂಪದಲ್ಲಿ ಯಾವುದೇ ಹೆಚ್ಚಿನ ಹೊರೆಯನ್ನು ಅನುಭವಿಸುವುದಿಲ್ಲ, ಇದು ಇಂಥ ವಹಿವಾಟುಗಳಿಗೆ ಡಿಜಿಟಲ್ ಪಾವತಿಯ ಹೆಚ್ಚಿನ ಅಳವಡಿಕೆಗೆ ಇಂಬು ನೀಡುತ್ತದೆ. ಅಂತಹ ವಹಿವಾಟುಗಳ ಗಣನೀಯ ಶೇಕಡಾವಾರು ವಹಿವಾಟು ಪರಿಮಾಣಕ್ಕೆ ಕಾರಣವಾದರೆ, ಇದು ಕಡಿಮೆ ನಗದು ಆರ್ಥಿಕತೆಗೆ ರಾಷ್ಟ್ರ ತೆರಳಲು ಸಹಾಯ ಮಾಡುತ್ತದೆ.

- 2000 ರೂ.ಗಿಂತ ಕಡಿಮೆ ಮೌಲ್ಯದ ವಹಿವಾಟಿಗೆ ಸಂಬಂಧಿಸಿದಂತೆ 2018-19ರ ಹಣಕಾಸು ವರ್ಷದಲ್ಲಿ 1,050 ಕೋಟಿ ರೂಪಾಯಿ ಮತ್ತು 2019-20ರ ಹಣಕಾಸು ವರ್ಷದಲ್ಲಿ 1,462 ಕೋಟಿ ರೂಪಾಯಿಗಳ ಮೊತ್ತದ ಎಂ.ಡಿ.ಆರ್. ಅನ್ನು ಬ್ಯಾಂಕ್ ಗಳಿಗೆ ಮರು ಪಾವತಿ ಮಾಡಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

- ಮರ್ಚೆಂಟ್ ಪಾಯಿಂಟ್ ಆಫ್ ಸೇಲ್ ಮೂಲಕ ಪಾವತಿ ಮಾಡಿದಾಗ, ವ್ಯಾಪಾರಿಗಳು ಬ್ಯಾಂಕ್ ಗಳಿಗೆ ಎಂ.ಡಿ.ಆರ್. ಪಾವತಿಸಬೇಕಾಗುತ್ತದೆ. ಇದರಿಂದಾಗಿ ಅನೇಕರು ಡೆಬಿಟ್ ಕಾರ್ಡ್ ಗಳು ಇದ್ದಾಗ್ಯೂ ನಗದು ಪಾವತಿ ಮಾಡುತ್ತಿದ್ದಾರೆ. ಅದೇ ರೀತಿ, ಭೀಮ್ ಯುಪಿಐ ಮತ್ತು ಎಇಪಿಎಸ್ ಮೂಲಕ ವ್ಯಾಪಾರಿಗಳಿಗೆ ಮಾಡಲಾದ ಪಾವತಿಗೂ ಎಂ.ಡಿ.ಆರ್. ಶುಲ್ಕ ಅನ್ವಯವಾಗುತ್ತಿತ್ತು.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- **ವ್ಯಾಪಾರಿಗಳ ರಿಯಾಯಿತಿ ದರ (ಎಂಡಿಆರ್) ಎಂದರೇನು ?**

- ಎಂಡಿಆರ್ ಎನ್ನುವುದು ವ್ಯಾಪಾರಿಗಳ ಮೇಲೆ ಬ್ಯಾಂಕ್‌ಗಳು ವಿಧಿಸುವ ಶುಲ್ಕವಾಗಿದೆ. ಗ್ರಾಹಕರಿಂದ ಪಾವತಿಗೆ ಪ್ರತಿಯಾಗಿ ಶೇಕಡಾವಾರು ಪ್ರಮಾಣವನ್ನು ಬ್ಯಾಂಕುಗಳು ಶುಲ್ಕವಾಗಿ ವಿಧಿಸುತ್ತದೆ.
- ಗ್ರಾಹಕರು ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್ ಮೂಲಕ ಹಣ ಪಾವತಿಸಿದಾಗ ಈ ಶುಲ್ಕವನ್ನು ಬ್ಯಾಂಕ್‌ಗಳು ವಿಧಿಸುತ್ತವೆ. ಎಂಡಿಆರ್ ಶುಲ್ಕವನ್ನು ಸಾಮಾನ್ಯವಾಗಿ ಮೊದಲೇ ಮಾಡಿಕೊಂಡ ಒಪ್ಪಂದದ ಅನ್ವಯ ವಿಧಿಸಲಾಗುತ್ತದೆ.
- ಎಂಡಿಆರ್ ಬ್ಯಾಂಕ್ ವಿತರಿಸುವ ಕಾರ್ಡ್‌ಗೆ ಪರಿಹಾರ ದೊರಕಿಸಿಕೊಡುತ್ತದೆ. ಸ್ವೈಪಿಂಗ್ ಮಿಷನ್ ಅಳವಡಿಸಿದ ಬ್ಯಾಂಕ್‌ಗೆ ಈ ಶುಲ್ಕವನ್ನು ಆಕರಿಸಲಾಗುತ್ತದೆ. ಅಂತೆಯೇ ನೆಟ್‌ವರ್ಕ್ ಸೇವೆ ಒದಗಿಸುವ ಮಾಸ್ಟರ್‌ಕಾರ್ಡ್ ಅಥವಾ ವೀಸಾದಂಥ ಕಂಪನಿಗಳಿಗೆ ಈ ಸೇವಾ ಶುಲ್ಕ ನೀಡಲಾಗುತ್ತದೆ. ಭಾರತದಲ್ಲಿ

ಭಾರತೀಯ ರಿಸರ್ವ್ ಬ್ಯಾಂಕ್, ಗರಿಷ್ಠ ಎಂಡಿಆರ್ ನಿಗದಿಪಡಿಸಿದೆ. ಈ ಮೊತ್ತವನ್ನು ಪ್ರತಿ ವಹಿವಾಟಿನ ಮೇಲೆ ವಿಧಿಸಲು ಅವಕಾಶವಿದೆ.

## 87. ಭಾರತ- ಮೊರಾಕ್ಕೊ ಒಪ್ಪಂದ

ಪ್ರಮುಖ ಸುದ್ದಿ

- ಭಾರತ- ಮೊರಾಕ್ಕೊ ಆರೋಗ್ಯ ವಲಯದಲ್ಲಿ ಪರಸ್ಪರ ಸಹಕಾರಕ್ಕೆ  ಒಪ್ಪಂದ ಮಾಡಿಕೊಂಡಿವೆ. ಈ ಒಪ್ಪಂದದ ಅಡಿಯಲ್ಲಿ ಉಭಯ ದೇಶಗಳು ಗುರುತಿಸಲಾದ ಕ್ಷೇತ್ರಗಳಲ್ಲಿ ಜಂಟಿಯಾಗಿ ಕಾರ್ಯ ನಿರ್ವಹಿಸಲಿವೆ.
- ಇದು ಆರೋಗ್ಯ ಕ್ಷೇತ್ರದಲ್ಲಿ ಸೇವೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಇದು ಇದು ಉಭಯ ದೇಶಗಳಿಗೆ ನೆರವಾಗಲಿವೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಒಪ್ಪಂದದ ಮುಖ್ಯ ವಲಯಗಳು

- ಉತ್ತಮ ವಿಧಾನಗಳ ವಿನಿಮಯಕ್ಕಾಗಿ ಆಸ್ಪತ್ರೆಗಳ ನಡುವೆ ಸಂಪರ್ಕ ಸಾಧಿಸುವುದು
- ಆರೋಗ್ಯ ಸೇವೆಗಳ ಮತ್ತು ಆಸ್ಪತ್ರೆಗಳ ಆಡಳಿತ ಮತ್ತು ನಿರ್ವಹಣೆಗೆ ಸೂಕ್ತ ತರಬೇತಿ ವ್ಯವಸ್ಥೆಯನ್ನು ರೂಪಿಸುವುದು.
- ಸಾಂಕ್ರಾಮಿಕವಲ್ಲದ ಇತರ ರೋಗಗಳಾದ ಮಕ್ಕಳ ಹೃದಯ ರೋಗ ಮತ್ತು ಕ್ಯಾನ್ಸರ್ ರೋಗಕ್ಕೆ ಹೆಚ್ಚಿನ ಗಮನ ಹರಿಸುವುದು.
- ಹೆರಿಗೆ, ಮಕ್ಕಳ ಅಭಿವೃದ್ಧಿ ಮತ್ತು ನವಜಾತ ಶಿಶುಗಳ ಆರೋಗ್ಯ

## 88. 157 ಅನ್ಯ ದಾಳಿಕೋರ ಪ್ರಾಣಿ ಪ್ರಬೇಧಗಳ ಪಟ್ಟಿ (Alien invasive animal species)

## ಪ್ರಮುಖ ಸುದ್ದಿ

- ಮೊಟ್ಟಮೊದಲ ಬಾರಿಗೆ 157 ಅನ್ಯ ದಾಳಿಕೋರ ಪ್ರಾಣಿ ಪ್ರಬೇಧವನ್ನು ಝೂಲಾಜಿಕಲ್ ಸರ್ವೆ ಆಫ್ ಇಂಡಿಯಾ ( ZSI) ಪಟ್ಟಿ ಮಾಡಿದೆ .

- ರಾಷ್ಟ್ರೀಯ ದಾಳಿಕೋರ ಅನ್ಯ ಪ್ರಭೇಧಗಳ ಸಮ್ಮೇಳನದ ವೇಳೆ ಈ ಪಟ್ಟಿಯನ್ನು ಪ್ರಕಟಿಸಲಾಯಿತು.
- ZSI ಹಾಗೂ ಬಟಾನಿಕಲ್ ಸರ್ವೇ ಆಫ್ ಇಂಡಿಯಾ ಜಂಟಿಯಾಗಿ ಈ ಸಮ್ಮೇಳನವನ್ನು ಆಯೋಜಿಸಿದ್ದವು.

- ಝಡ್‌ಎಸ್‌ಐ ಒಟ್ಟು 157 ಪ್ರಬೇಧಗಳನ್ನು ಪಟ್ಟಿ ಮಾಡಿದ್ದು, ಈ ಪೈಕಿ 58 ನೆಲ ಮತ್ತು ಜಲ ಸಂಪನ್ಮೂಲದಲ್ಲಿ ಇವೆ. 99 ಪ್ರಬೇಧಗಳು ಸಾಗರ ಪರಿಸರದಲ್ಲಿ ಕಂಡುಬರುತ್ತವೆ. 58 ಆಕ್ರಮಣಕಾರಿ ಪ್ರಬೇಧಗಳು ನೆಲ ಮತ್ತು ಸಿಹಿ ನೀರಿನಲ್ಲಿ ಕಂಡುಬರುತ್ತವೆ. ಇದರಲ್ಲಿ 19 ಮೀನು ಪ್ರಬೇಧ, 31 ಆರ್ಥೋಪಾಡ್, 3 ಮೊಲ್ಯುಸೆಸ್ ಹಾಗೂ ಹಕ್ಕಿಗಳು, ಒಂದು ಸರೀಸೃಪ ಹಾಗೂ 2 ಸಸ್ತನಿಗಳು ಸೇರಿವೆ.

## ದಾಳಿಕೋರ ಪ್ರಾಣಿ ಪ್ರಬೇಧಗಳು ಎಂದರೇನು ?

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ದಾಳಿಕೋರ ಪ್ರಬೇಧದ ಪ್ರಾಣಿಗಳು ಸಾಮಾನ್ಯವಾಗಿ ಉದ್ದೇಶಪೂರ್ವಕ ಅಥವಾ ಆಕಸ್ಮಿಕವಾಗಿ ತಮ್ಮ ಸಹಜ  ಸ್ಥಳಗಳಿಂದ ಹೊರಹಾಕಲ್ಪಟ್ಟಾಗ, ಇವು ಬೇರೆಡೆ ಆಕ್ರಮಣಕಾರಿಯಾಗುತ್ತವೆ ಹಾಗೂ ಇದು ಪರಿಸರ ಸಮತೋಲನಕ್ಕೆ ಧಕ್ಕೆಯಾಗಲು ಕಾರಣವಾಗುತ್ತವೆ. ದಾಳಿಕೋರ ಪ್ರಾಣಿ ಪ್ರಭೇಧಗಳು ಜೀವವೈವಿಧ್ಯ ಹಾಗೂ ಮಾನವ ಕಲ್ಯಾಣಕ್ಕೆ ಅಪಾಯಕಾರಿಯಾಗಿವೆ. ಇವು ಕೃಷಿ ಹಾಗೂ ಜೀವವೈವಿಧ್ಯಕ್ಕೆ ಹಾನಿಯನ್ನುಂಟು ಮಾಡುತ್ತವೆ.

- ಇಂಥ ದಾಳಿಕೋರ ಪ್ರಬೇಧಗಳ ಸಾಮಾನ್ಯ ಲಕ್ಷಣಗಳೆಂದರೆ ಕ್ಷಿಪ್ರ ಪುನರುತ್ಪತ್ತಿ ಮತ್ತು ಅಭಿವೃದ್ಧಿ, ಅತ್ಯಧಿಕ ಖಿನ್ನತೆಯ ಸಾಮರ್ಥ್ಯ, ವಿವಿಧ ಆಹಾರ ವಿಧಾನದಲ್ಲಿ ಉಳಿದುಕೊಳ್ಳುವ ಸಾಮರ್ಥ್ಯ. ಜತೆಗೆಇದು ಹೊಸ ವಾತಾವರಣಕ್ಕೆ ಸುಲಭವಾಗಿ ಒಗ್ಗಿಕೊಳ್ಳುವ ಸಾಮರ್ಥ್ಯ ಹೊಂದಿವೆ.

ಕೆಲವು ಉದಾಹರಣೆ ಪ್ರಬೇಧಗಳು .

- ಪರಾಕಸೊಸ್ ಮಾರ್ಜಿನಟಸ್ (ಪಪಯಾ ಮೆಲೆ ಬಗ್): ಇದು ಕೇಂದ್ರ ಅಮೆರಿಕದ ಮೆಕ್ಸಿಕೊ ಮೂಲದ ಪ್ರಭೇಧ. ಇದು ಅಸ್ಸಾಂ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದಲ್ಲಿ ದೊಡ್ಡ ಪ್ರಮಾಣದಲ್ಲಿ ಪಪ್ಪಾಯಿ ನಾಶಕ್ಕೆ ಕಾರಣವಾಗಿದೆ.

- ಓಎನಾಕೊಕಸ್ ಸೊನೆಲೋಪ್ಸಿಸ್ (ಹತ್ತಿ ಹೇನು): ಇದು ಉತ್ತರ ಅಮೆರಿಕ ಮೂಲದ್ದು. ಇದು ಡೆಕ್ಕನ್ ಪ್ರಾಂತ್ಯದಲ್ಲಿ ಹತ್ತಿ ಬೆಳೆ ನಾಶಕ್ಕೆ ಕಾರಣವಾಗಿದೆ.

- ಫೆರಿಗೊಪಿಲಿಕ್ಸಸ್ ಪರ್ಡಾಲೀಸ್ (ಅಮೆಜಾನ್ ಸೈಲಿಫಿನ್ ಕ್ಯಾಟ್‌ಫಿಶ್): ಇದು ಕೊಲ್ಕತ್ತಾದ ಜೌಗು ಪ್ರದೇಶದ ಮೀನು ಪ್ರಬೇಧ ನಾಶಕ್ಕೆ ಕಾರಣವಾಗಿದೆ.

- ಅಕಾಟಿನಾ ಫ್ಯುಲಿಕಾ (ಆಫ್ರಿಕಲ್ ಆಪಲ್ ಬಸವನಹುಳು): ಇದು ಅತ್ಯಂತ ಆಕ್ರಮಣಕಾರಿಯಾಗಿದ್ದು, ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿ ಮೊಟ್ಟಮೊದಲು ಕಾಣಿಸಿಕೊಂಡಿದೆ. ಇದು ದೇಶಾದ್ಯಂತ ಇದ್ದು, ಹಲವು ದೇಶಿ ಪ್ರಬೇಧಗಳ ನಾಶಕ್ಕೆ ಇದು ಕಾರಣವಾಗಿದೆ.

## 89. ಪಾದರಕ್ಷೆ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗಾಗಿ ವಿಶೇಷ ಪ್ಯಾಕೇಜ್ ಗೆ ಸಂಪುಟದ ಅನುಮೋದನೆ

ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಚರ್ಮ ಮತ್ತು ಪಾದರಕ್ಷೆ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗಾಗಿ ವಿಶೇಷ ಪ್ಯಾಕೇಜ್ ಗೆ ತನ್ನ ಅನುಮೋದನೆ ನೀಡಿದೆ.

- ಈ ಪ್ಯಾಕೇಜ್ ಕೇಂದ್ರ ವಲಯದ ಯೋಜನೆ 'ಭಾರತೀಯ ಪಾದರಕ್ಷೆ, ಚರ್ಮ ಮತ್ತು ಪರಿಕರಗಳ ಅಭಿವೃದ್ಧಿ ಕಾರ್ಯಕ್ರಮ'ವನ್ನು 2600 ಕೋಟಿ ರೂಪಾಯಿ ವೆಚ್ಚದಲ್ಲಿ 2017-18ರಿಂದ 2019-20ರ ಅವಧಿಯ ಮೂರು ಹಣಕಾಸು ವರ್ಷದಲ್ಲಿ ಜಾರಿಗೊಳಿಸುವುದನ್ನೂ ಒಳಗೊಂಡಿದೆ.

## ಪ್ರಮುಖ ಪರಿಣಾಮಗಳು

- ಈ ಯೋಜನೆಯು ಚರ್ಮ ವಲಯದ ಮೂಲಸೌಕರ್ಯ ಅಭಿವೃದ್ಧಿಗೆ ಇಂಬು ನೀಡುತ್ತದೆ, ಚರ್ಮ ವಲಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಪರಿಸರಾತ್ಮಕ ಕಾಳಜಿಯನ್ನೂ ನಿರ್ವಹಿಸುತ್ತದೆ, ಹೆಚ್ಚುವರಿ ಹೂಡಿಕೆಗೂ ಅವಕಾಶ ಕೊಡುತ್ತದೆ, ಉದ್ಯೋಗ ಸೃಷ್ಟಿ ಮತ್ತು ಉತ್ಪಾದನೆ ಹೆಚ್ಚಿಸುತ್ತದೆ.
- ಹೆಚ್ಚಿಸಲಾದ ತೆರಿಗೆ ಪ್ರೋತ್ಸಾಹಕಗಳು ಈ ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆಯನ್ನು ಆಕರ್ಷಿಸುತ್ತದೆ ಮತ್ತು ವಲಯದಲ್ಲಿ ಋತುಮಾನದ ಪ್ರಕೃತಿಯ ದೃಷ್ಟಿಯಿಂದ ಕಾರ್ಮಿಕ ಕಾನೂನಿನ ಸುಧಾರಣೆಯು ಆರ್ಥಿಕತೆಯ ಪ್ರಮಾಣವನ್ನು ಬೆಂಬಲಿಸುತ್ತದೆ.

- ಈ ವಿಶೇಷ ಪ್ಯಾಕೇಜ್ 3 ವರ್ಷಗಳಲ್ಲಿ 3.24 ಲಕ್ಷ ಹೊಸ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಪಾದರಕ್ಷೆ, ಚರ್ಮ ಮತ್ತು ಪರಿಕರ ವಲಯದಲ್ಲಿ ಸಂಚಿತ ಪರಿಣಾಮದ 2 ಲಕ್ಷ ಉದ್ಯೋಗವನ್ನು ಔಪಚಾರೀಕರಿಸಲು ನೆರವಾಗುತ್ತದೆ.

## ಭಾರತೀಯ ಪಾದರಕ್ಷೆ, ಚರ್ಮ ಮತ್ತು ಪರಿಕರ ಅಭಿವೃದ್ಧಿ ಕಾರ್ಯಕ್ರಮದ ವಿವರಗಳು

- **ಮಾನವ ಸಂಪನ್ಮೂಲ ಅಭಿವೃದ್ಧಿ (ಎಚ್.ಆರ್.ಡಿ.) ಉಪ ಯೋಜನೆ**: ಎಚ್ಆರ್.ಡಿ. ಉಪ ಯೋಜನೆಯು ನಿರುದ್ಯೋಗಿ ಜನರಿಗೆ ಉದ್ಯೋಗಾವಕಾಶ ಸಂಪರ್ಕಿತ ಕೌಶಲ ಅಭಿವೃದ್ಧಿ ತರಬೇತಿಗಾಗಿ ಪ್ರತಿಯೊಬ್ಬರಿಗೆ 15,000 ರೂ. ನಂತೆ, ಉದ್ಯೋಗದಲ್ಲಿರುವ ಕಾರ್ಮಿಕರಿಗೆ ಕೌಶಲ ವರ್ಧನೆ ತರಬೇತಿಗಾಗಿ ತಲಾ 5,000 ರೂ. ಮತ್ತು ತರಬೇತುದಾರರ ತರಬೇತಿಗಾಗಿ ಪ್ರತಿ ವ್ಯಕ್ತಿಗೆ 2 ಲಕ್ಷ ರೂಪಾಯಿ ಒದಗಿಸುವ ಉದ್ದೇಶ ಹೊಂದಿದೆ. ಕೌಶಲ ಅಭಿವೃದ್ಧಿ ತರಬೇತಿ ವರ್ಗದಲ್ಲಿ ನೆರವು ಪಡೆಯಲು ತರಬೇತಿ ಪಡೆದವರಲ್ಲಿ ಶೇ.75ರಷ್ಟು ಉದ್ಯೋಗ ಕೊಡಿಸುವುದು ಕಡ್ಡಾಯವಾಗಿರುತ್ತದೆ. ಈ ಉಪ

ಯೋಜನೆ ಪ್ರಸ್ತಾಪದ ಅಡಿಯಲ್ಲಿ 3 ವರ್ಷಗಳ ಅವಧಿಯಲ್ಲಿ 4.32 ಲಕ್ಷ ನಿರುದ್ಯೋಗಿ ಜನರಿಗೆ ತರಬೇತಿ/ಕೌಶಲ, 75000 ಹಾಲಿ ಉದ್ಯೋಗಿಗಳಿಗೆ ಕೌಶಲ ವರ್ಧನೆ ಮತ್ತು 150 ತರಬೇತುದಾರರಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ 696 ಕೋಟಿ ರೂಪಾಯಿ ಹಂಚಿಕೆ ಮಾಡಲಾಗಿದೆ.

- **ಚರ್ಮ ವಲಯದ ಸಮಗ್ರ ಅಭಿವೃದ್ಧಿ (ಐಡಿಎಲ್.ಎಸ್.) ಉಪ ಯೋಜನೆ:** ಐ.ಡಿ.ಎಲ್.ಎಸ್. ಉಪ ಯೋಜನೆಯು ಉದ್ಯೋಗ ಸೃಷ್ಟಿ ಸೇರಿದಂತೆ ಹೂಡಿಕೆ ಮತ್ತು ಉತ್ಪಾದನೆ ಪ್ರೋತ್ಸಾಹಿಸಲು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆ (ಎಮ್‌ಎಸ್‌ಎಮ್‌ಇ)ಗಳಿಗೆ ಹೊಸ ಘಟಕ ಮತ್ತು ಯಂತ್ರೋಪಕರಣಗಳ ಶೇ.30ರಷ್ಟು ವೆಚ್ಚ ಮತ್ತು ಅಸ್ತಿತ್ವದಲ್ಲಿರುವ ಇತರ ಘಟಕಗಳಲ್ಲಿ ಆಧುನೀಕರಣ / ತಂತ್ರಜ್ಞಾನ ಅಭಿವೃದ್ಧಿಗಾಗಿ ಮತ್ತು ಹೊಸ ಘಟಕ ಸ್ಥಾಪನೆಗೆ ಘಟಕ ಮತ್ತು ಯಂತ್ರೋಪಕರಣಗಳ ಶೇ.20ರಷ್ಟು ವೆಚ್ಚವನ್ನು ಬ್ಯಾಕ್ ಎಂಡ್ ಹೂಡಿಕೆ ಅನುದಾನ/ಸಬ್ಸಿಡಿಯನ್ನು ಒದಗಿಸಲು ಉದ್ದೇಶಿಸಿದೆ. ಈ ಉಪ ಯೋಜನೆಯಡಿಯಲ್ಲಿನ ಪ್ರಸ್ತಾವನೆಯು ಚರ್ಮ, ಪಾದರಕ್ಷೆ ಮತ್ತು ಪೂರಕ ಉಪಕರಣ ಮತ್ತು ಸಲಕರಣೆಗಳ ವಲಯದಲ್ಲಿ ಮುಂದಿನ ಮೂರು ವರ್ಷಗಳಲ್ಲಿ 1000 ಘಟಕಗಳನ್ನು 425 ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರೋತ್ಸಾಹಿಸಲುದ್ದೇಶಿದೆ.

- **ಸಾಂಸ್ಥಿಕ ಸೌಲಭ್ಯ ಸ್ಥಾಪನೆಯ ಉಪ ಯೋಜನೆ**:ಈ ಉಪ ಯೋಜನೆಯು ಪಾದರಕ್ಷೆ ವಿನ್ಯಾಸ ಮತ್ತು ಅಭಿವೃದ್ಧಿ ಸಂಸ್ಥೆ (ಎಫ್.ಡಿಡಿಐ)ಗೆ ಎಫ್.ಡಿಡಿಐನ ಹಾಲಿ ಇರುವ ಕೆಲವು ಕ್ಯಾಂಪಸ್ ಗಳನ್ನು "ಉತ್ಕೃಷ್ಟತೆಯ ಕೇಂದ್ರ"ಗಳಾಗಿ ಮೇಲ್ದರ್ಜೆಗೇರಿಸಲು ಮತ್ತು 3 ಹೊಸ ಸಂಪೂರ್ಣ ಸುಸಜ್ಜಿತ ಕೌಶಲ ಕೇಂದ್ರಗಳ ಜೊತೆಗೆ ಮುಂಬರುವ ಬೃಹತ್ ಚರ್ಮ ಘಟಕಕ್ಕಾಗಿ ಯೋಜನಾ ಪ್ರಸ್ತಾವನೆಗನುಗುಣವಾಗಿ 3 ವರ್ಷಗಳಲ್ಲಿ 147 ಕೋಟಿ ರೂಪಾಯಿ ಹಂಚಿಕೆ ಪ್ರಸ್ತಾಪ ಹೊಂದಿದೆ.

- **ಬೃಹತ್ ಚರ್ಮ, ಪಾದರಕ್ಷೆ ಮತ್ತು ಪೂರಕ ಪರಿಕರಗಳ ಕ್ಲಸ್ಟರ್ (ಎಂ.ಎಲ್.ಎಫ್.ಎ.ಸಿ.) ಉಪ ಯೋಜನೆ**:ಎಂ.ಎಲ್.ಎಫ್.ಎ.ಸಿ. ಉಪ ಯೋಜನೆಯು ಬೃಹತ್ ಚರ್ಮ, ಪಾದರಕ್ಷೆ ಮತ್ತು ಅದಕ್ಕೆಪೂರಕ ಪರಿಕರ ಕ್ಲಸ್ಟರ್ ಸ್ಥಾಪಿಸುವ ಮೂಲಕ ಪಾದರಕ್ಷೆ ಮತ್ತು ಅದಕ್ಕೆಪೂರಕ ಪರಿಕರ ವಲಯಕ್ಕೆ ಮೂಲಸೌಕರ್ಯ ಬೆಂಬಲ ನೀಡಲು ಉದ್ದೇಶಿಸಿದೆ. 125 ಕೋಟಿ ರೂಪಾಯಿಗಳ ಸರ್ಕಾರದ ಗರಿಷ್ಠ ನೆರವಿನ ಮಿತಿಯೊಳಗೆ ಭೂಮಿಯ ವೆಚ್ಚ ಹೊರತುಪಡಿಸಿ ಅರ್ಹ ಯೋಜನೆಯ ಶೇ.50ರವರೆಗೆ

ಶ್ರೇಯಾಂಕಿತ ನೆರವು ಒದಗಿಸಲು ಉದ್ದೇಶಿಸಲಾಗಿದೆ. ಮೂರು ವರ್ಷಗಳಲ್ಲಿ 3-4 ಹೊಸ ಎಂ.ಎಲ್.ಎಫ್.ಎ.ಸಿ.ಗಳನ್ನು ಬೆಂಬಲಿಸಲು 360 ಕೋಟಿ ರೂಪಾಯಿ ಹಂಚಿಕೆ ಮಾಡಲಾಗಿದೆ.

- **ಚರ್ಮ ತಂತ್ರಜ್ಞಾನ, ನಾವಿನ್ಯ ಮತ್ತು ಪರಿಸರ ವಿಷಯಗಳ ಉಪ ಯೋಜನೆ:** ಈ ಉಪ ಯೋಜನೆ ಅಡಿಯಲ್ಲಿ, ಸಾಮಾನ್ಯವಾಗಿ ಹೊರ ಹಾಕಲಾಗುವ ನೀರಿನ ಸಂಸ್ಕರಣೆ ಘಟಕಗಳ (ಸಿಇಟಿಪಿ) ಸ್ಥಾಪನೆ/ಮೇಲ್ದರ್ಜೆಗೇರಿಸಲು ಯೋಜನಾ ವೆಚ್ಚದ ಶೇ.70ರಂತೆ ನೆರವು ನೀಡಲಾಗುತ್ತದೆ. ಈ ಉಪ ಯೋಜನೆಯು ರಾಷ್ಟ್ರೀಯ ಮಟ್ಟದ ವಲಯವಾರು ಕೈಗಾರಿಕೆ ಮಂಡಳಿ/ಸಂಸ್ಥೆಗಳಿಗೆ ಬೆಂಬಲ ನೀಡಲಿದೆ ಮತ್ತು ಚರ್ಮದ ಪಾದರಕ್ಷೆ ಮತ್ತು ಪೂರಕ ಪರಿಕರ ವಲಯದ ಮುನ್ನೋಟದ ದಸ್ತಾವೇಜು ತಯಾರಿಕೆಗೆ ಬೆಂಬಲ ನೀಡುತ್ತದೆ. ಈ ಉಪ ಯೋಜನೆಗೆ ಪ್ರಸ್ತಾಪಿತ ಹಣ ಹಂಚಿಕೆ 3 ವರ್ಷಗಳಿಗೆ 782 ಕೋಟಿ ರೂಪಾಯಿಯಾಗಿದೆ.

- **ಚರ್ಮ, ಪಾದರಕ್ಷೆ ಮತ್ತು ಪೂರಕ ಪರಿಕರ ವಲಯದಲ್ಲಿ ಭಾರತೀಯ ಬ್ರ್ಯಾಂಡ್ ಉತ್ತೇಜನಕ್ಕೆ ಉಪ ಯೋಜನೆ**: ಈ ಯೋಜನೆಯಡಿಯಲ್ಲಿ ಬ್ರ್ಯಾಂಡ್ ಉತ್ತೇಜನಕ್ಕಾಗಿ ಅನುಮೋದನೆಗೊಂಡ ಅರ್ಹ ಘಟಕಗಳಿಗೆ ನೆರವು ನೀಡಲುದ್ದೇಶಿಸಲಾಗಿದೆ. ಸರ್ಕಾರದ ನೆರವು ಒಟ್ಟು ಯೋಜನಾ ವೆಚ್ಚದ ಶೇ.50ರಷ್ಟಾಗಿದ್ದು, ಪ್ರತಿ ಬ್ರ್ಯಾಂಡ್ ಗೆ 3 ವರ್ಷಗಳಿಗೆ ಪ್ರತಿ ವರ್ಷಕ್ಕೆ 3 ಕೋಟಿ ರೂಪಾಯಿಯಾಗಿರುತ್ತದೆ. ಈ ಉಪ ಯೋಜನೆಯಡಿ 10 ಭಾರತೀಯ ಬ್ರ್ಯಾಂಡ್ ಗಳನ್ನು 90 ಕೋಟಿ ರೂಪಾಯಿ ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತೇಜಿಸಲು ಪ್ರಸ್ತಾಪಿಸಲಾಗಿದೆ.

- **ಚರ್ಮ, ಪಾದರಕ್ಷೆ ಮತ್ತು ಪೂರಕ ಉಪಕರಣ ವಲಯದಲ್ಲಿ ಹೆಚ್ಚುವರಿ ಉದ್ಯೋಗ ಉಪಕ್ರಮದ ಉಪ ಯೋಜನೆ**: ಈ ಯೋಜನೆಯಡಿ ಇಪಿಎಫ್‌ಒನಲ್ಲಿ ನೋಂದಣಿಯಾಗುವ ಚರ್ಮ, ಪಾದರಕ್ಷೆ ಮತ್ತು ಪೂರಕ ಪರಿಕರ ವಲಯದಲ್ಲಿನ ಎಲ್ಲ ಹೊಸ ಉದ್ಯೋಗಳಿಗೆ ಅವರ ಮೊದಲ ಮೂರು ವರ್ಷಗಳ ಉದ್ಯೋಗದಲ್ಲಿ ಕಾರ್ಮಿಕರಿಗೆ ಮಾಲೀಕರು ನೀಡುವ ಭವಿಷ್ಯನಿಧಿಯ ಶೇ.3.67 ದೇಣಿಗೆಯನ್ನು ಒದಗಿಸಲು ಉದ್ದೇಶಿಸಲಾಗಿದೆ.ಈ ಉಪ ಯೋಜನೆಯು 15 ಸಾವಿರ ರೂಪಾಯಿವರೆಗಿನ ಸಂಬಳ ಪಡೆಯುವ ಉದ್ಯೋಗಿಗಳಿಗೆ ಮಾತ್ರವೇ ಅನ್ವಯಿಸುತ್ತದೆ. ವಲಯದಲ್ಲಿ ಅಂದಾಜು 2 ಲಕ್ಷ ಉದ್ಯೋಗ ರೂಪಿಸಲು ನೆರವಾಗಲು 100 ಕೋಟಿ ರೂಪಾಯಿ ಹಂಚಿಕೆ ಮಾಡಲುದ್ದೇಶಿಸಲಾಗಿದೆ.

**ಈ ವಿಶೇಷ ಪ್ಯಾಕೇಜ್ ಕಾರ್ಮಿಕ ಕಾಯಿದೆಗಳ ಸರಳೀಕರಣ ಕ್ರಮ ಮತ್ತು ಉದ್ಯೋಗ ಸೃಷ್ಟಿಯ ಉಪಕ್ರಮಗಳನ್ನೂ ಒಳಗೊಂಡಿದ್ದು, ಈ ಕೆಳಗಿನಂತಿದೆ:**

- ಆದಾಯ ತೆರಿಗೆ ಕಾಯಿದೆ 80 ಜೆಜೆಎಎ ಸೆಕ್ಷನ್ ನ ಹೆಚ್ಚಿನ ವ್ಯಾಪ್ತಿ:ಕಾರ್ಖಾನೆಗಳಲ್ಲಿ ಸರಕುಗಳನ್ನು ತಯಾರಿಕೆಯಲ್ಲಿ ತೊಡಗಿಕೊಂಡಿರುವ ಭಾರತೀಯ ಕಂಪನಿಗಳ ಹೊಸ ಕಾರ್ಮಿಕನಿಗೆ ಮೂರು ವರ್ಷಗಳವರೆಗೆ ನೀಡಲಾಗುವ ಹೆಚ್ಚುವರಿ ವೇತನದ ಮೇಲೆ ಕಡಿತವನ್ನು, ಆದಾಯ ತೆರಿಗೆ ಕಾಯಿದೆಯ ವಿಭಾಗ 80ಜೆಜೆಎಎ ಅಡಿಯಲ್ಲಿ ವರ್ಷದಲ್ಲಿ ಕನಿಷ್ಠ 240 ದಿನಗಳ ಉದ್ಯೋಗದ ನಿಬಂಧನೆಗಳನ್ನು ಮತ್ತಷ್ಟು ಸಡಿಲಿಸಿ ಪಾದರಕ್ಷೆ, ಚರ್ಮ ಮತ್ತು ಪೂರಕ ಪರಿಕರಗಳ ವಲಯಕ್ಕೆ ಈ ದಿನಗಳ ಋತುಮಾನದ ಸ್ವರೂಪವಾಗಿ ಪರಿಗಣಿಸಿ 150 ದಿನಗಳಿಗೆ ನಿಗದಿ ಮಾಡಲಾಗಿದೆ.

- ನಿರ್ದಿಷ್ಟ ಅವಧಿಯ ಉದ್ಯೋಗದ ಪರಿಚಯ:ಜಾಗತಿಕ ಮಟ್ಟದಿಂದ ದೊಡ್ಡ ಪ್ರಮಾಣದಲ್ಲಿ ಬಂಡವಾಳವನ್ನು ಆಕರ್ಷಿಸಲು, ಕಾರ್ಮಿಕರಿಗೆ ಸಂಬಂಧಿಸಿದ ನಿಯಂತ್ರಣ ಚೌಕಟ್ಟಿನ ವಿಷಯಗಳನ್ನು ಚರ್ಮ, ಪಾದರಕ್ಷೆ ಮತ್ತು ಪೂರಕ ಪರಿಕರಣ ಕೈಗಾರಿಕೆಯ ಋತುಮಾನದ ಸ್ವರೂಪ ಪರಿಗಣಿಸಿ ಕೈಗಾರಿಕಾ ನೇಮಕಾತಿ (ಸ್ಥಾಯಿ ಆದೇಶ) ಕಾಯಿದೆ 1946ರ ಸೆಕ್ಷನ್ 15 ಸಬ್ ಸೆಕ್ಷನ್ (1)ರಡಿ ನಿರ್ದಿಷ್ಟ ಅವಧಿಯ ಉದ್ಯೋಗದ ಮೂಲಕ ನಿಭಾಯಿಸಲು ಪ್ರಸ್ತಾಪಿಸಲಾಗಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 90. ಜಾಗತಿಕ ಆವಿಷ್ಕಾರ ಸೂಚ್ಯಂಕ (Global Innovation Index)

- ಈ ಸೂಚ್ಯಂಕವನ್ನು ಕಾರ್ನೆಲ್ U.S ವಿಶ್ವವಿದ್ಯಾಲಯ , WIPO(World Intellectual Property Organization) ಮತ್ತು INSEAD (ಫ್ರಾನ್ಸ್ ಮೂಲದ ಇಂಟರ್ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್) ಬಿಡುಗಡೆ ಮಾಡಿದೆ.
- ಇದು 80 ಕ್ಕೂ ಹೆಚ್ಚು ಸೂಚಕಗಳನ್ನು ಬಳಸಿಕೊಂಡು ಅವರ ನಾವೀನ್ಯತೆ ಸಾಮರ್ಥ್ಯಗಳನ್ನು ಆಧರಿಸಿ ಶ್ರೇಣಿಗಳನ್ನು ನೀಡುತ್ತದೆ
- ಭಾರತವು -60 ನೇ ಸ್ಥಾನ(2017), 66 ನೇ ಸ್ಥಾನ (2016 ರಲ್ಲಿ) 81 ನೇ ಸ್ಥಾನ (2015 ರಲ್ಲಿ)

- ಸ್ವೀಡನ್, ನೆದರ್ಲ್ಯಾಂಡ್ಸ್, ಯುಎಸ್ ಮತ್ತು ಯುಕೆ ನಂತರ ಸ್ವಿಟ್ಜರ್ಲೆಂಡ್ ಅತ್ಯಂತ ನವೀನ ರಾಷ್ಟ್ರವಾಗಿದೆ.
- ಚೀನಾ ಮೊದಲ ಮಧ್ಯಮ-ಆದಾಯದ ರಾಷ್ಟ್ರವಾಗಿದ್ದು, ಇದು ಅಗ್ರ 25 ಶ್ರೇಯಾಂಕದಲ್ಲಿದೆ.

## 91. ಕ್ರಿಯಾತ್ಮಕ ಸಾಮಗ್ರಿಗಳ ಕುರಿತು ಜಾಗತಿಕ ಸಮ್ಮೇಳನ

- ಕ್ರಿಯಾತ್ಮಕ ಸಾಮಗ್ರಿಗಳ ಕುರಿತಾದ ಅಂತರಾಷ್ಟ್ರೀಯ ಸಮ್ಮೇಳನವನ್ನು ತೆಲಂಗಾಣದಲ್ಲಿ ನಡೆಸಲಾಗುತ್ತಿದೆ.
- ಈ ಸಮ್ಮೇಳನವು ಪ್ರಸ್ತುತ ಸಾಮಾಜಿಕ ವೈಜ್ಞಾನಿಕ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಯುವ ಸಂಶೋಧಕರಲ್ಲಿ ವೈಜ್ಞಾನಿಕ ಉದ್ವೇಗವನ್ನು ಉಂಟುಮಾಡುವ ಉದ್ದೇಶವನ್ನು ಹೊಂದಿದೆ .
- ಈ ಸಮ್ಮೇಳನವನ್ನು ರಾಜೀವ್ ಗಾಂಧಿ ಜ್ಞಾನ ತಂತ್ರಜ್ಞಾನ ವಿಶ್ವವಿದ್ಯಾಲಯ (ಆರ್.ಜಿ.ಕೆ.ಕೆ.ಟಿ) ಆಯೋಜಿಸಿದೆ.
- Theme: 'Applications of smart materials in the areas of nano-science and nano-technology, synthetic chemistry, sensors and computational materials science'.

## 92. ವಿದೇಶಗಳಲ್ಲೂ ಐಐಎಂ ಕ್ಯಾಂಪಸ್, ಪದವಿ ಪ್ರದಾನಕ್ಕೆ ಸಂಸತ್ ಅಸ್ತು

### ಪ್ರಮುಖ ಸುದ್ದಿ

- ಭಾರತೀಯ ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಗಳು 'ರಾಷ್ಟ್ರೀಯ ಮಹತ್ವದ ಸಂಸ್ಥೆಗಳಾಗಿದ್ದು' ವಿದೇಶಗಳಲ್ಲಿ ಕ್ಯಾಂಪಸ್ ಸ್ಥಾಪಿಸಿ ಹಾಗು ಸ್ನಾತಕೋತ್ತರ ಡಿಪ್ಲೊಮಗಳ ಬದಲಿಗೆ ಡಿಗ್ರಿ ನೀಡುವ ಅಧಿಕಾರಕ್ಕೆ ಅನುಮತಿ ನೀಡುವ ವಿಧೇಯಕವನ್ನು ಸಂಸತ್ತು ಸರ್ವಾನುಮತದಿಂದ ಅಂಗೀಕರಿಸಿದೆ.

### ಮಸೂದೆಯ ಪ್ರಮುಖ ಲಕ್ಷಣಗಳು:

- ಮುಂಚೂಣಿಯಲ್ಲಿರುವ ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಗಳಿಗೆ ಮತ್ತಷ್ಟು ಸ್ವಾಯತ್ತೆ ನೀಡುವ ಉದ್ದೇಶವುಳ್ಳ ಈ ವಿಧೇಯಕವನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಲೋಕಸಭೆಯಲ್ಲಿ ಫೆಬ್ರವರಿ ರಂದು ಮಂಡಿಸಿದ್ದರು. ಕೆಳಮನೆಯಲ್ಲೂ ಈ ವಿಧೇಯಕ ಸರ್ವಾನುಮತದ ಅನುಮೋದನೆ ಪಡೆದಿತ್ತು.

- ಐಐಎಂಗಳಿಗೆ ಶಾಸನಬದ್ಧ ಅಧಿಕಾರ ನೀಡುವ ಈ ವಿಧೇಯಕವು, ಕೇಂದ್ರ ಸರಕಾರ ಕಾಲಕಾಲಕ್ಕೆ ನೀಡುವ ಮಾರ್ಗದರ್ಶನಗಳಿಗೆ ಅನುಗುಣವಾಗಿ ವಿದೇಶಗಳಲ್ಲಿ ಮ್ಯಾನೇಜ್‌ಮೆಂಟ್ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಣ ನೀಡುವ ಅವಕಾಶ ಒದಗಿಸುತ್ತದೆ.

- ಪ್ರತಿ ಐಐಎಂನ ಆಡಳಿತ ಮಂಡಳಿ (ಬೋರ್ಡ್ ಆಫ್ ಗವರ್ನರ್ಸ್)ಯೂ ಪ್ರಧಾನ ಕಾರ್ಯನಿರ್ವಹಣಾ ಸಂಸ್ಥೆಯಾಗಿದ್ದು, ತಮ್ಮದೇ ಆಯ್ಕೆಯ ಮುಖ್ಯಸ್ಥರನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ಈ ವಿಧೇಯಕ ನೀಡುತ್ತದೆ.
- ಕೇಂದ್ರ ಸರಕಾರಕ್ಕೆ ಬದಲಾಗಿ, ಆಡಳಿತ ಮಂಡಳಿಯೇ ತನ್ನ ನಿರ್ದೇಶಕರನ್ನು (ಈಗ ಸಿಇಓ ಎಂದು ಕರೆಯಲಾಗುತ್ತಿದೆ) ನೇಮಿಸಿಕೊಳ್ಳಬಹುದು. ಅಲ್ಲದೆ ಅನ್ವೇಷಣೆ ಮತ್ತು ಆಯ್ಕೆ ಸಮಿತಿಯನ್ನು ಆಡಳಿತ ಮಂಡಳಿಯೇ ರಚಿಸಿಕೊಳ್ಳುತ್ತದೆ.
- ಈ ಸಮಿತಿಯಲ್ಲಿ ಬೋರ್ಡ್ ಮುಖ್ಯಸ್ಥರು ಮತ್ತು ಮೂವರು ಸದಸ್ಯರಿರುತ್ತಾರೆ. ಈ ಸದಸ್ಯರನ್ನು ಗಣ್ಯ ಆಡಳಿತಗಾರರು, ಉದ್ಯಮಿಗಳು, ಶಿಕ್ಷಣ ತಜ್ಞರು, ವಿಜ್ಞಾನಿಗಳು, ತಂತ್ರಜ್ಞರು ಮತ್ತು ಮ್ಯಾನೇಜ್‌ಮೆಂಟ್ ತಜ್ಞರ ವಲಯದಿಂದ ಆರಿಸಿಕೊಳ್ಳಬೇಕಾಗುತ್ತದೆ.

- ಪ್ರತಿ ಐಐಎಂನ ಗವರ್ನರ್ ಮಂಡಳಿಯಲ್ಲಿ ಒಬ್ಬ ಮುಖ್ಯಸ್ಥರು, ಕೇಂದ್ರ ಮತ್ತು ರಾಜ್ಯ ಸರಕಾರದಿಂದ ನಾಮಕರಣಗೊಳ್ಳುವ ಇಬ್ಬರು ಸದಸ್ಯರು, ಒಬ್ಬ ಮಹಿಳೆಯೂ ಸೇರಿದಂತೆ ನಾಲ್ವರು ಶ್ರೇಷ್ಠ ವ್ಯಕ್ತಿಗಳು ಸದಸ್ಯರಾಗಿರುತ್ತಾರೆ.
- ಈ ನಾಲ್ವರನ್ನು ಶಿಕ್ಷಣ, ಉದ್ಯಮ, ವಾಣಿಜ್ಯ, ಸಮಾಜಸೇವೆ ಅಥವಾ ಸಾರ್ವಜನಿಕ ಆಡಳಿತ ಕ್ಷೇತ್ರದಿಂದ ಆರಿಸಿಕೊಳ್ಳಲಾಗುತ್ತದೆ. ಇಬ್ಬರು ಬೋಧಕ ಸಿಬ್ಬಂದಿಗಳು, ಎಸ್‌ಸಿ ಅಥವಾ ಎಸ್‌ಟಿ ವಿಭಾಗದಿಂದ ಒಬ್ಬ

ಸದಸ್ಯ ಮತ್ತು ಹಳೆ ವಿದ್ಯಾರ್ಥಿಗಳ ಬಳಗದಿಂದ ಐವರು ಈ ಬೋರ್ಡ್‌ನ ಸದಸ್ಯರಾಗಿರುತ್ತಾರೆ. ಕನಿಷ್ಠ ಮೂವರು ಮಹಿಳಾ ಸದಸ್ಯರು ಇರುವುದು ಕಡ್ಡಾಯ.

- ಹಳೆಯ ಕರಡು ವಿಧೇಯಕದಲ್ಲಿ ಅಧ್ಯಕ್ಷರು ವೀಕ್ಷಕರಾಗಿದ್ದು ನಿರ್ದೇಶಕರನ್ನು ಆರಿಸುತ್ತಾರೆ ಎನ್ನಲಾಗಿತ್ತು. ಆದರೆ ಎಚ್‌ಆರ್‌ಡಿ ಸಚಿವಾಲಯ ಈ ಅಂಶವನ್ನು ತೆಗೆದುಹಾಕಿ ಈ ಸಂಸ್ಥೆಗಳನ್ನು ಮತ್ತಷ್ಟು ಸ್ವಾಯತ್ತಗೊಳಿಸಲು ಮುಂದಾಗಿದೆ. ಐಐಎಂಗಳು ಇದುವರೆಗೂ ಸೊಸೈಟಿಗಳಾಗಿ ನೋಂದಣಿಯಾಗಿದ್ದವು. ಹೀಗಾಗಿ ತಮ್ಮ ವಿದ್ಯಾರ್ಥಿಗಳಿಗೆ ಪಿಎಚ್.ಡಿ ಸೇರಿದಂತೆ ಪದವಿ ಪ್ರದಾನ ಮಾಡಲು ಸಾಧ್ಯವಾಗುತ್ತಿರಲಿಲ್ಲ.

## 93. ಇ-ಸಿಗರೇಟ್ ತಡೆ: ಕೇಂದ್ರ ಚಿಂತನೆ

### ಪ್ರಮುಖ ಸುದ್ದಿ

- ಎಲೆಕ್ಟ್ರಾನಿಕ್ ಧೂಮಪಾನ (ಇ-ಸ್ಮೋಕಿಂಗ್) ತಡೆಗಟ್ಟಲು ಆರೋಗ್ಯ ಸಚಿವಾಲಯ ರಚಿಸಿದ್ದ ಮೂರು ಸಮಿತಿಗಳು ನೀಡಿದ ವರದಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಕೇಂದ್ರ ಸಚಿವವಾಲಯ ತಿಳಿಸಿದೆ.

- ರಾಜ್ಯಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ಇ-ಸ್ಮೋಕಿಂಗ್‌ನ ಅಪಾಯಗಳ ಕುರಿತು ಸದಸ್ಯರು ವ್ಯಕ್ತಪಡಿಸಿದ ಆತಂಕಕ್ಕೆ ಉತ್ತರಿಸಿದ ಅವರು, ಈ ಚಟವು ಆರೋಗ್ಯದ ಮೇಲೆ ಬೀರುವ ಪರಿಣಾಮ ಹಾಗೂ ಈ ಸಂಬಂಧಿತ ಕಾನೂನು ಸಮಸ್ಯೆಗಳ ಅಧ್ಯಯನ ನಡೆಸಲು ಮೂರು ಸಮಿತಿಗಳನ್ನು ರಚಿಸಲಾಗಿತ್ತು. ಕೆಲ ದೇಶಗಳು ಇ-ಸ್ಮೋಕಿಂಗ್‌ಗೆ ಅನುಮತಿ ನೀಡಿವೆ, ಮತ್ತೆ ಕೆಲವು ನಿಷೇಧಿಸಿವೆ. ಈ ನಿಟ್ಟಿನಲ್ಲಿ ನಾವು ಕೂಡಾ ಸರಿಯಾದ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

### ಏನಿದು ಇ- ಸಿಗರೇಟ್?

- ಹೊರ ನೋಟಕ್ಕೆ ಸಾಮಾನ್ಯ ಸಿಗರೇಟಿನಂತೆ ಕಂಡರೂ ಅವುಗಳಂತೆ ಹೊಗೆಯಂಥಹದನ್ನು ಹೊರಡಿಸಿದರೂ ಇವು ನಿಕೋಟಿನ್ ಆಧಾರಿತ ಹೊಗೆಯಲ್ಲ. ಇದು ಹಬೆ..ಅಂದರೆ ಇದರಲ್ಲಿ ಕ್ಯಾನ್ಸರ್

ತರಬಹುದಾದ ತಂಬಾಕಿನ ಅಪಾಯಕರ ಅಂಶ ಇರುವುದಿಲ್ಲ. ಇದು ಒಂದು ಚಾಕೋಲೇಟ್ ಪರಿಮಳದ ನಿಕೋಟಿನ್ ಹಬೆ. ಇದಕ್ಕೆ ಬೆಂಕಿ ತಗುಲಿಸುವ ಅಗತ್ಯ ಇಲ್ಲ.

- ಈ ನಿಯಂತ್ರಣದ ಪ್ರತಿಪಾದಕರು ಧೂಮಪಾನವು ಮತ್ತೆ ಹೊಸ ರೂಪದಲ್ಲಿ ಸಾಮಾಜಿಕ ಮನ್ನಣೆ ಗಳಿಸುವತ್ತ ದಾಪುಗಾಲು ಹಾಕುತ್ತಿದೆ ಎನ್ನುತ್ತಾರೆ. ಅದರಲ್ಲೂ ವಿಶೇಷವಾಗಿ ಹದಿಹರೆಯದವರು ವಿವಿಧ ಸುವಾಸನೆ ಹೊರ ಹೊಮ್ಮಿಸುವ ಇ-ಸಿಗರೇಟಿನ ಪ್ರಿಯರಾಗುತ್ತಿದ್ದಾರೆ.

- ಇ.ಸಿಗರೇಟುಗಳು ಸಾಧಾರಣವಾಗಿ ಸಿಲಿಂಡರಿನ ಆಕಾರದಲ್ಲಿ ಪೆನ್ನಿನಂತೆ ಇರುವವು. ಆದರೆ ವಿವಿಧ ರೂಪದಲ್ಲೂ ಇರಹುದು. ಬಳಸಿ ಬಿಸಾಕುವ ಇಲ್ಲವೆ ಮರುಪೂರಣ ಮಾಡುವ ಎರಡು ರೀತಿಯ. ಸಿಗರೇಟುಗಳು ಇವೆ.
- ಇದರಲ್ಲಿ ಮೂರುಭಾಗಗಳು. ಬ್ಯಾಟರಿ, ಆಟೊಮೈಜರ್‌ಮತ್ತು ದ್ರವಪೂರೈಸುವ ಸಾಧನ ಇರುವವು.
- ಗುಂಡಿ ಅದುಮಿದಾಗ ದ್ರವವು ಕಾದ ತಂತಿಯ ಮೇಲೆ ಹಾಯ್ದು ಅದು ಆವಿಯಾಗಿ ಹೊರಬರುವುದು. ಅದನ್ನು ಸೇವಿಸಿದಾಗ ಧೂಮಪಾನದ ಅನುಭವ ಆಗುವುದು.ಶೀತ ಆದಾಗ ಬಿಸಿನೀರಲ್ಲಿ ಅಮೃತಾಂಜನ ಹಾಕಿ ಹಬೆಯನ್ನು ಸೇವಿಸುವ ಹಾಗೆ, ಅಥವ ಅಸ್ತಮಾದವರು ಇನ್‌ಹೇಲರ್ ಬಳಸುವ ಹಾಗೆ. ಇದು ಒಂದು ಹಬೆ ಹೊಮ್ಮಿಸುವ ಎಲೆಕ್ಟ್ರಾನಿಕ್ ಸಾಧನ.
- ಅಟೊಮೈಜರ್,ಕಾರ್ಟೊಮೈಜರ್, ಕ್ಲಿಯರ್ಟೊ ಮೈಜರ್ ಮೊದಲಾದ ಹಲವು ವಿಭಿನ್ನ ತಂತ್ರಜ್ಞಾನ ಬಳಸುವ ಇ. ಸಿಗರೇಟುಗಳಿವೆ

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಇ.ಸಿಗರೇಟು ಸಾಂಪ್ರದಾಯಿಕ ಧೂಮಪಾನದ ಸಂತಸ ( ಸ್ಪರ್ಶ ಮತ್ತು ಅನುಭವ) ನೀಡುವುದು. ಆದರೆ ತಂಬಾಕಿನಲ್ಲಿರುವ ೧೦೦೦ಕ್ಕೂ ಹೆಚ್ಚಿನ ಅಪಾಯಕಾರಿ ರಸಾಯನಿಕಗಳು ಇದರಲ್ಲಿ ಇಲ್ಲ.ಇದಕ್ಕೆ ಬೆಂಕಿ ತಗುಲಿಸ ಬೇಕಿಲ್ಲ...ಶ್ವಾಸಕೋಶಕ್ಕ ಧಕ್ಕೆಬಾರದು ಅನಿಯಂತ್ರಿತ ಕೆಮ್ಮು ಇರದು.

- ಇ.ಸಿಗರೇಟಿನಲ್ಲಿ ಆವಿಯನ್ನು ಉಂಟುಮಾಡುವ ದ್ರವವನ್ನು ಇ-.ಜ್ಯೂಸ್ ಅಥವ ಇ. ದ್ರವ ಎನ್ನವರು.ಅದುಪ್ರೊಪಿಲಿನ್, ಗ್ಲಿಜರಿನ್ ಅಥವ ಪಾಲಿಥಿಲಿನ್ ಗ್ಲೈಕಾಲ್ ಆಗಿರುವುದು ಜೊತೆಗೆ ಬೇಕಾದ ಪರಿಮಳ ಮತ್ತು ಬೇಕೆಂದರೆ ವಿವಿಧ ಪ್ರಭಲತೆಯ ನಿಕೊಟಿನ್ ಸಾರವೂ ಇರುತ್ತದೆ.

- ಈ ದ್ರಾವಣವನ್ನು ಶೀಶೆ ಅಥವ ಮೊದಲೇ ಭರ್ತಿ ಮಾಡಿದ ಕ್ಯಾಟ್ರಿಜ್‌ನಲ್ಲಿ ದೊರೆಯುವುದು.ಅದರ ಮೇಲೆ mg/ml ಎಂದು ನಿಕೋಟಿನ್ ಪ್ರಮಾಣವನ್ನು ನಮೂದಿಸಿರುವರು.
- ಇದರಲ್ಲಿ ನೀರು ನಿಕೊಟಿನ್ ಮತ್ತು ಪ್ರೊಪಿಲಿನ್ ಗ್ಲೈ ಕಾಲ್ ( ಜಲಾಧಾರಿತ ಔಷಧಿಗಳಲ್ಲಿ ಬಳಸುವ ಮತ್ತುಆರೋಗ್ಯಕ್ಕೆ ಹಾನಿಮಾಡದ ವಸ್ತು )ಇರುವವು.

- ಆದರೆ ಇತ್ತೀಚಿನ ಸಂಶೋಧನೆಯ ಪ್ರಕಾರ ಇ-ಸಿಗರೆಟ್ ನಲ್ಲಿ ಅದೇ ರೀತಿಯ ಅಪಾಯಕಾರಿ ರಾಸಾಯನಿಕಗಳನ್ನು ಒಳಗೊಂಡಿರುತ್ತದೆ ಎಂದು ವಿಜ್ಞಾನಿಗಳು ಖಚಿತಪಡಿಸಿದ್ದಾರೆ.

## 94. ಇ-ಕಾರು; ಭಾರತ ಏನನ್ನು ಕಲಿತುಕೊಳ್ಳಬಹುದು?

### ಸನ್ನಿವೇಶ

- 2030ರ ಹೊತ್ತಿಗೆ ಭಾರತವು ಸಂಪೂರ್ಣವಾಗಿ ವಿದ್ಯುತ್ ಕಾರುಗಳನ್ನು ಮಾತ್ರ ಮಾರಾಟ ಮಾಡುವ ಮಹಮಹತ್ವಾಕಾಂಕ್ಷೆಯ ಗುರಿಯನ್ನಿಟ್ಟುಕೊಂಡಿದೆ.

### ಪ್ರಮುಖ ಸಂಗತಿಗಳು

- ಇ-ವಾಹನಗಳತ್ತ ಕಣ್ಣಾಯಿಸಿದಾಗ ಮುಂಚೂಣಿಯಲ್ಲಿರುವ ನಾರ್ವೆ ದೇಶವು ಸದೃಢವಾದ ಎಲೆಕ್ಟ್ರಿಕ್ ಮೂಲ ಸೌಕರ್ಯಗಳನ್ನು ಹೊಂದಿದೆ. 1990ರ ದಶಕಗಳಲ್ಲಿ ಆರಂಭವಾದ ನಾರ್ವೆ ಯೋಜನೆಯು 2025ರ ವೇಳೆಗೆ ಸಂಪೂರ್ಣ ಇ-ಕಾರುಗಳ ಚಾಲನೆಯ ಗುರಿಯನ್ನಿಟ್ಟುಕೊಂಡಿದೆ.

- ವಿದ್ಯುತ್ ಚಲನಶೀಲತೆ ಆಳವಡಿಸಿಕೊಳ್ಳುವಲ್ಲಿ ನಾರ್ವೆ ಅನುಸರಿಸಿರುವ ತಂತ್ರಗಾರಿಕೆಯನ್ನು ಅರಿತುಕೊಳ್ಳಲು ನಮ್ಮ ಪ್ರತಿನಿಧಿಗಳು ನೇರವಾಗಿ ನಾರ್ವೆಗೆ ಪ್ರಯಾಣ ಬೆಳೆಸಿತ್ತು. ವಿವಿಧ

ವಿಭಾಗದವರೊಂದಿಗೆ ಚರ್ಚಿಸಿದ ಬಳಿಕ ತಿಳಿದು ಬಂದಿರುವ ವಿಚಾರವೆಂದರೆ ಬಲವಾದ ರಾಜಕೀಯ ಇಚ್ಛಾಶಕ್ತಿ, ಸರಕಾರದ ತೆರಿಗೆ ಪ್ರೋತ್ಸಾಹ ಮತ್ತು ವಿದ್ಯುತ್ ಮೂಲ ಸೌಕರ್ಯಗಳ ವೃದ್ಧಿಯಿಂದಾಗಿ ಈ ಮಹತ್ತರ ಯೋಜನೆ ಫಲಪ್ರದವಾಗಿದೆ.

- ಪರಿಸರ ಪ್ರಜ್ಞೆಯ ನಾಗರಿಕರು ಸಹ ಪ್ರಮುಖ ಪಾತ್ರ ವಹಿಸಿರುವುದು ಇಲ್ಲಿ ಕಂಡುಬಂದಿರುವ ಗಮನಾರ್ಹ ಅಂಶ. ಸಮೀಕ್ಷೆಯು ಸೂಚಿಸುವ ಪ್ರಕಾರ ನಾರ್ವೆಯಲ್ಲಿ ಅತಿ ಹೆಚ್ಚು ಮಾಲಿನ್ಯದ ವಾಹನಗಳ ಮೇಲೆ ಅತೀವ ತೆರಿಗೆ ವಿಧಿಸಲಾಗುತ್ತದೆ ಅಥವಾ ಮುಟ್ಟುಗೋಲುಗೊಳಿಸಲಾಗುತ್ತದೆ.

- ಇವೆಲ್ಲದಕ್ಕೂ ಮಿಗಿಲಾಗಿ ಸಾರ್ವಜನಿಕರಿಂದ ಬೆಂಬಲ ಸಿಗುತ್ತಿದೆ. ಚೀನಾ, ಯುರೋಪ್ ಮತ್ತು ಅಮೆರಿಕ ಇ-ವಾಹನದತ್ತ ಬದಲಾಗುತ್ತಿದೆ. ಎಲೆಕ್ಟ್ರಿಕ್ ವಾಹನಗಳು ಅಗ್ಗವಾಗಬೇಕು. ಚಾಲನಾ ವೆಚ್ಚ ಕಡಿಮೆಯಾಗಬೇಕು

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮೂಲಸೌಕರ್ಯ ಕೊರತೆ.

- ಭಾರತವು ಎಲೆಕ್ಟ್ರಿಕ್ ಚಾರ್ಜಿಂಗ್ ಪಾಯಿಂಟ್‌ಗಳ ಕೊರತೆಯನ್ನು ಎದುರಿಸುತ್ತಿದೆ. ಇನ್ನು ಬೇಸರದ ಸಂಗತಿಯೆಂದರೆ ಸದ್ಯ ಎಲೆಕ್ಟ್ರಿಕ್ ವಾಹನಗಳನ್ನು ಮಾರಾಟ ಮಾಡುವ ಏಕೈಕ ಸಂಸ್ಥೆ ಮಹೀಂದ್ರ ಆ್ಯಂಡ್ ಮಹೀಂದ್ರ ಮಾತ್ರವಾಗಿದೆ.

- ಟಾಟಾ ಮೋಟಾರ್ಸ್ ಸಹ ವಿದ್ಯುತ್ ವಾಹನದತ್ತ ಒಲವು ತೋರಿದರೂ ಇದುವರೆಗೆ ವಾಣಿಜ್ಯ ಮಾರಾಟದತ್ತ ಕಾಲಿಟ್ಟಿಲ್ಲ. ಮಹೀಂದ್ರ ಇ-ವೆರಿಟೊದಂತೆಯೇ ಸಂಸ್ಥೆಯು ಈಗಷ್ಟೇ ಟಾಟಾ ಟಿಗೋರ್ ಎಲೆಕ್ಟ್ರಿಕ್ ವಾಹನವನ್ನು ಪರಿಚಯಿಸಿದೆ. ಸರಕಾರದ 2030 ಎಲೆಕ್ಟ್ರಿಕ್ ಯೋಜನೆಗೆ ದೇಶದ ಅತಿ ದೊಡ್ಡ ಕಾರು ಸಂಸ್ಥೆ ಮಾರುತಿ ಸುಜುಕಿ ಸಹ ಕೈಜೋಡಿಸಿದರೂ ಇದುವರೆಗೆ ಎಲೆಕ್ಟ್ರಿಕ್ ವಾಹನಗಳ ಬಗ್ಗೆ ಯಾವುದೇ ಯೋಜನೆ ಘೋಷಿಸದಿರುವುದು ಖೇದಕರ ಸಂಗತಿ.

- ನಾರ್ವೆ ದೇಶವನ್ನೇ ಉದಾಹರಣೆಯಾಗಿ ಪರಿಗಣಿಸಿದಾಗ ನಿರ್ಮಾಣ ಒಂದು ಸಮಸ್ಯೆಯಲ್ಲ ಎಂಬುದು ತಿಳಿದು ಬರುತ್ತದೆ. ಯಾಕೆಂದರೆ ನಾರ್ವೆಯಲ್ಲಿ ಎಲೆಕ್ಟ್ರಿಕ್ ವಾಹನ ನಿರ್ಮಾಣ ಘಟಕಗಳಿಲ್ಲ. ಆದರೂ ಎಲೆಕ್ಟ್ರಿಕ್ ಮೂಲ ಸೌಕರ್ಯ ವೃದ್ಧಿಸುವ ಮತ್ತು ತೆರಿಗೆ ವಿನಾಯಿತಿ ಮೂಲಕ ತನ್ನ ಗುರಿಯತ್ತ ತುಲುಪುತ್ತಿದೆ.

- ನಾರ್ವೆಯಲ್ಲಿ ಮಾಲಿನ್ಯ ಕಾರುಗಳಿಗೆ ಅತಿ ಹೆಚ್ಚಿನ ತೆರಿಗೆ ವಿಧಿಸಲಾಗುತ್ತದೆ. ಅಂದರೆ ಡೀಸೆಲ್ ಕಾರುಗಳ ಮೇಲೆ ಆರು ಪಟ್ಟು ಹೆಚ್ಚು ತೆರಿಗೆ ವಿಧಿಸಲಾಗುತ್ತದೆ.

### ನಿರೀಕ್ಷೆಯಲ್ಲಿ ಭಾರತ..

- 2020ರ ವೇಳೆಗೆ ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳ ಬ್ಯಾಟರಿ ವೆಚ್ಚ ಗಣನೀಯವಾಗಿ ಕುಸಿತ ಕಾಣುವ ನಿರೀಕ್ಷೆಯನ್ನು ಹೊಂದಲಾಗಿದೆ. ಇದು ಎಲೆಕ್ಟ್ರಿಕ್ ವಾಹನಗಳು ಅಗ್ಗದ ದರದಲ್ಲಿ ಲಭ್ಯವಾಗಲು ನೆರವಾಗಲಿದೆ. ಸದ್ಯಕ್ಕೆ ಲಿಥಿಯಂ-ಇಯಾನ್ ಬ್ಯಾಟರಿಗಳು ದುಬಾರಿ ವೆಚ್ಚವಾಗಿದೆ.

- ಈ ಎಲ್ಲದರ ನಿಟ್ಟಿನಿಂದ ಸುಸ್ಥಿರ ಪರಿಸರಕ್ಕಾಗಿ ಎಲೆಕ್ಟ್ರಿಕ್ ವಾಹನಗಳ ಮೂಲಸೌಕರ್ಯಗಳ ವೃದ್ಧಿಯತ್ತ ಸರಕಾರ ಈ ಕೂಡಲೇ ಪ್ರಬಲ ಇಚ್ಛಾಶಕ್ತಿಯೊಂದಿಗೆ ಕಾರ್ಯ ಪ್ರವೃತ್ತರಾಗಬೇಕಾಗಿರುವುದು ಅತ್ಯಂತ ಮುಖ್ಯ.

## 95. 5 ಲಕ್ಷ ಬಿಟ್ ಕಾಯಿನ್ ಬಳಕೆದಾರರಿಗೆ ಐಟಿ ನೋಟಿಸ್

### ಪ್ರಮುಖ ಸುದ್ದಿ

- ಬಿಟ್ ಕಾಯಿನ್ ಹೂಡಿಕೆ ಮತ್ತು ವಹಿವಾಟಿನ ಮೇಲೆ ತನಿಖೆ ಮುಂದುವರಿಸಿರುವ ಆದಾಯ ತೆರಿಗೆ ಇಲಾಖೆಯು, ದೇಶದಲ್ಲಿ ಬಿಟ್ ಕಾಯಿನ್ ವಹಿವಾಟು ನಡೆಸಿರುವ 5 ಲಕ್ಷಕ್ಕೂ ಹೆಚ್ಚು ಶ್ರೀಮಂತರಿಗೆ ನೋಟಿಸ್ ಜಾರಿಗೊಳಿಸಿದೆ.

### ಪ್ರಮುಖ ಸಂಗತಿಗಳು

- ಇತ್ತೀಚೆಗೆ ಆದಾಯ ತೆರಿಗೆ ಇಲಾಖೆಯು ಬೆಂಗಳೂರು ಸೇರಿದಂತೆ 9 ನಗರಗಳಲ್ಲಿ ಬಿಟ್ ಕಾಯಿನ್ ವಿನಿಮಯ ಕೇಂದ್ರಗಳ ಪರಿಶೀಲನೆ ನಡೆಸಿತ್ತು. ತೆರಿಗೆ ವಂಚನೆ ತಡೆಯುವ ನಿಟ್ಟಿನಲ್ಲಿ ಇಲಾಖೆ ಈ ಕ್ರಮ ತೆಗೆದುಕೊಂಡಿದೆ.
- ಈ ವಿನಿಮಯ ಕೇಂದ್ರಗಳಲ್ಲಿ ಸುಮಾರು 20 ಲಕ್ಷ ಮಂದಿ ನೋಂದಣಿ ಮಾಡಿದ್ದು, 4ರಿಂದ 5 ಲಕ್ಷ ಮಂದಿ ಸಕ್ರಿಯರಾಗಿದ್ದಾರೆ. ನೋಟಿಸ್ ಪಡೆದವರು ಬಿಟ್ ಕಾಯಿನ್ ಹೂಡಿಕೆಗೆ ಸಂಬಂಧಿಸಿ ಕ್ಯಾಪಿಟಲ್ ಗೇನ್ ಟ್ಯಾಕ್ಸ್ ನೀಡಬೇಕಾಗುತ್ತದೆ ಎಂದು ತಿಳಿಸಿವೆ.

## ಏನಿದು ಬಿಟ್ ಕಾಯಿನ್?

- ಇದೊಂದು ವಿಶ್ವದ ಮೊದಲ, ಯಾರ ಅಂಕೆಗೂ ಸಿಗದ ವಿಕೇಂದ್ರೀಕೃತ ಖಾಸಗಿ ಡಿಜಿಟಲ್ ಕರೆನ್ಸಿ. ಇದಕ್ಕೆ ಭೌತಿಕ ಮುಖಬೆಲೆ ಇಲ್ಲ. ಮಾರುಕಟ್ಟೆಯಲ್ಲಿ ಚಲಾವಣೆಯಲ್ಲಿ ಇರುವ ಕರೆನ್ಸಿಗಳಿಗೆ (ಡಾಲರ್, ಪೌಂಡ್, ರೂಪಾಯಿ) ಪರ್ಯಾ-ಯವಾಗಿ ಡಿಜಿಟಲ್ ರೂಪದಲ್ಲಿ ಇರುವ ಮತ್ತು ಇಂಟರ್‌ನೆಟ್‌ನಲ್ಲಿ ಮಾತ್ರ ವಹಿವಾಟು ನಡೆಸಬಹುದಾದ ಕರೆನ್ಸಿ-ಗಳಿಗೆ 'ಬಿಟ್ ಕಾಯಿನ್' ಎನ್ನುತ್ತಾರೆ. ಬೇರೆ, ಬೇರೆ ಹೆಸರಿನಲ್ಲಿ ಇಂತಹ ಕರೆನ್ಸಿಗಳು ಬಳಕೆಗೆ ಬಂದಿದ್ದರೂ, ಹೂಡಿಕೆದಾರರಲ್ಲಿ ಬಿಟ್‌ಕಾಯಿನ್ ಹೆಚ್ಚು ಜನಪ್ರಿಯವಾಗಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ...... ಮಸೂರಿಗೆ/ಮೈಸೂರಿಗೆ

- ನಮ್ಮ ಕಿಸೆ, ಪರ್ಸ್‌ನಲ್ಲಿ ಇರುವ ನಾಣ್ಯ ಅಥವಾ ನೋಟುಗಳಂತೆ ಈ ಕರೆನ್ಸಿಗೆ ಭೌತಿಕ ಸ್ವರೂಪ ಇಲ್ಲ. ಇದು ಅಂತರ್ಜಾಲದಲ್ಲಿಮಾತ್ರ ಅಸ್ತಿತ್ವದಲ್ಲಿ ಇರುತ್ತದೆ. ನಮ್ಮ ಆರ್‌ಬಿಐನಂತಹ ಇತರ ಕೇಂದ್ರೀಯ ಬ್ಯಾಂಕ್ ಮತ್ತು ಸರ್ಕಾರಗಳು ಇವುಗಳನ್ನು ಮುದ್ರಿಸುವುದಿಲ್ಲ. ಅಂದರೆ, ಇವು ಚಲಾವಣೆಯಲ್ಲಿ ಇರುವ ಮಾನ್ಯತೆ ಪಡೆದ ಕರೆನ್ಸಿ ಆಗಿರುವುದಿಲ್ಲ. ಹೂಡಿಕೆದಾರರ ಖರೀದಿ ಮತ್ತು ಮಾರಾಟ ಆಧರಿಸಿ ಇವುಗಳ ಬೆಲೆ ನಿಗದಿಯಾಗುತ್ತದೆ. ತೆರಿಗೆ ಪಾವತಿಸಲು, ಸಾಲ ಮರುಪಾವತಿಸಲೂ ಇವುಗಳನ್ನು ಬಳಸುವಂತಿಲ್ಲ. ಯುರೋಪಿನ ಕೆಲ ದೇಶಗಳಲ್ಲಿ ಬಿಟ್‌ಕಾಯಿನ್ ಎಟಿಎಂಗಳಿವೆ. ಈ ಎಟಿಎಂಗಳು ವರ್ಚುವಲ್ ಟೋಕನ್ಸ್ ನೀಡುತ್ತವೆ.

## ಬಳಕೆ ಹೇಗೆ?

- ಮೊಬೈಲ್ ಫೋನ್‌ಗಳನ್ನೇ ಬಿಟ್‌ಕಾಯಿನ್ ಡೆಬಿಟ್ ಕಾರ್ಡ್‌ನಂತೆ ಬಳಸಲೂ ಅವಕಾಶ ಇದೆ. ಇದಕ್ಕೆ ಯಾರ ಸಮ್ಮತಿಯೂ ಬೇಕಾಗಿಲ್ಲ. ಗಡಿಯಾಚೆಗಿನ ವಹಿವಾಟನ್ನೂ ಇವುಗಳ ಮೂಲಕ ಸುಲಭವಾಗಿ ನಿರ್ವಹಿಸಬಹುದು.

### ಇವುಗಳ ಸೃಷ್ಟಿ ಹೇಗೆ?

- ಅದೊಂದು ತುಂಬ ಸಂಕೀರ್ಣ ಸ್ವರೂಪದ ಪ್ರಕ್ರಿಯೆ. ಗಣಿತ ಸೂತ್ರ ಮತ್ತು ತಂತ್ರಜ್ಞಾನದ ನೆರವಿನಿಂದ ಇವುಗಳನ್ನು ಸೃಷ್ಟಿಸಲಾ
- ಗುವುದು. ಗಣಿತದ ಸಮಸ್ಯೆಗಳನ್ನು ಪರಿಹರಿಸುವ ಸಾಫ್ಟ್‌ವೇರ್ ನೆರವು ಪಡೆಯಲಾಗುತ್ತದೆ. ಇದಕ್ಕೆ ಮೈನಿಂಗ್ (mining) ಎನ್ನುತ್ತಾರೆ. ಕಂಪ್ಯೂಟರ್ ಜಾಲದ ಮೂಲಕ ಅವುಗಳ ವಹಿವಾಟನ್ನು ನಿರ್ವಹಿಸಲಾಗುತ್ತಿದೆ. ಸದ್ಯಕ್ಕೆ 1.65 ಕೋಟಿ ಬಿಟ್‌ಕಾಯಿನ್‌ಗಳು ಚಲಾವಣೆಯಲ್ಲಿ ಇವೆ.

### ಎಲ್ಲೆಲ್ಲಿ ಚಲಾವಣೆ ಇದೆ?

- ಮಾನ್ಯತೆ ಪಡೆದ ಕೆಲ ಸಂಸ್ಥೆಗಳು ತಮ್ಮ ವಹಿವಾಟಿನಲ್ಲಿ ಬಿಟ್ ಕಾಯಿನ್ ಸ್ವೀಕರಿಸಲು ಆರಂಭಿಸಿವೆ. ಸರಕು ಮತ್ತು ಸೇವೆಗಳ ಖರೀದಿಗೂ  ಬಳಸಬಹುದು. ಮೈಕ್ರೊಸಾಫ್ಟ್ ಮತ್ತು ಪ್ರವಾಸಿ ಸಂಸ್ಥೆ ಎಕ್ಸ್‌ಪೇಡಿಯಾನಂತಹ ಬಹುರಾಷ್ಟ್ರೀಯ ಸಂಸ್ಥೆಗಳು, ಒಂದೆರಡು ರೆಸ್ಟೊರಂಟ್ಸ್, ಲಂಡನ್ನಿನ ಕಲಾ ಗ್ಯಾಲರಿಯಲ್ಲಿ ಇವುಗಳ ಬಳಕೆ ನಿಧಾನವಾಗಿ ಜಾರಿಗೆ ಬರುತ್ತಿದೆ. ಬಿಟ್ ಕಾಯಿನ್ ಹೊಂದಿರುವವರಲ್ಲಿ ಬಹುಸಂಖ್ಯಾತರು ಸರಕುಗಳ ಖರೀದಿಗೆ ಇವುಗಳನ್ನು ಬಳಸುತ್ತಿಲ್ಲ. ಹೂಡಿಕೆ ಉದ್ದೇಶಕ್ಕೆ ಮಾತ್ರ ಇವುಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ.

### ಬೆಲೆ ಎಷ್ಟು?

- 2009ರಲ್ಲಿ ಅಸ್ತಿತ್ವಕ್ಕೆ ಬಂದಾಗ ಇದರ ಬೆಲೆ ಮೊದಲು ತುಂಬ ಅಗ್ಗವಾಗಿತ್ತು. 2011ರಲ್ಲಿ 2 ಡಾಲರ್‌ಗೆ ಒಂದು ಬಿಟ್‌ಕಾಯಿನ್ ದೊರೆಯುತ್ತಿತ್ತು. ಈಗ ಇದು 18 ಸಾವಿರ ಡಾಲರ್‌ವರೆಗೂ ಏರಿಕೆಯಾಗಿತ್ತು.

### ದುರ್ಬಳಕೆ ಹೇಗೆ?

- ಹೂಡಿಕೆದಾರರು ಹೆಚ್ಚು ಲಾಭ ಗಳಿಸಲು ಇವುಗಳ ಖರೀದಿಗೆ ಮುಗಿ ಬಿದ್ದಿದ್ದಾರೆ. ಅಕ್ರಮ ಹಣ ವರ್ಗಾವಣೆ ಮತ್ತು ಕಳ್ಳಸಾಗಾಣಿಕೆಯಲ್ಲಿಯೂ ಇವುಗಳನ್ನು ಬಳಸಲಾಗುತ್ತಿದೆ. ಇಲ್ಲಿ ವಹಿವಾಟು ನಡೆಸುವವರು ಅನಾಮಧೇಯರಾಗಿಯೇ ಉಳಿಯುವುದರಿಂದ ಬಳಕೆದಾರರನ್ನು ಗುರುತಿಸಲು ಸಾಧ್ಯವಾಗಲಾರದು.

### ಅಪಾಯಗಳೇನು?

- ಇವುಗಳಿಗೆ ಸದ್ಯಕ್ಕೆ ಕಾನೂನಿನ ಮಾನ್ಯತೆ ಇಲ್ಲ. ಅಂತರ್ಜಾಲಕ್ಕೆ ಕನ್ನ ಹಾಕುವವರು (hackers) ಈ ಕರೆನ್ಸಿಗಳನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಳ್ಳುವ ಅಪಾಯ ಇರುತ್ತದೆ. 2014ರಲ್ಲಿ ಮೌಂಟ್ ಗಾಕ್ಸ್ ವಿನಿಮಯ ಕೇಂದ್ರದಲ್ಲಿನ 6.50 ಲಕ್ಷ ಬಿಟ್‌ಕಾಯಿನ್‌ಗಳನ್ನು ಹ್ಯಾಕರ್ಸ್ ಕದ್ದಿದ್ದರು. 24 ಸಾವಿರ ಗ್ರಾಹಕರು ಲಕ್ಷಾಂತರ ಡಾಲರ್ ಕಳೆದುಕೊಂಡಿದ್ದರು.

- ಈಗ ವಿಶ್ವದ ಅತಿದೊಡ್ಡ ಪದಾರ್ಥ ವಿನಿಮಯ ಕೇಂದ್ರವು ಬಿಟ್‌ಕಾಯಿನ್ ವಾಯಿದಾ ವಹಿವಾಟು ಆರಂಭಿಸಿರುವುದು ಹೂಡಿಕೆದಾರರಲ್ಲಿ ಹೊಸ ಆತಂಕ ಮೂಡಿಸಿದೆ.

- ಇದೊಂದು ಸಂಪೂರ್ಣ ಸಟ್ಟಾ ವ್ಯಾಪಾರವಾಗಿರುವುದರಿಂದ ಬಿಟ್‌ಕಾಯಿನ್ ಬೆಲೆ ಅತಿ ಎನ್ನುವಷ್ಟು ಭಾರಿ ಏರಿಳಿತ ಕಾಣಲಿದೆ. ಒಂದು ವೇಳೆ ಬೆಲೆಯಲ್ಲಿ ತೀವ್ರ ಕುಸಿತ ಉಂಟಾದರೆ ಹೂಡಿಕೆದಾರರ ಸಂಪತ್ತು ಅಪಾರ ಪ್ರಮಾಣದಲ್ಲಿ ಕರಗಿ ಹೋಗಲಿದೆ. ಇದರ ಜತೆಗೆ ಹ್ಯಾಕ್ ಮಾಡುವ, ಕದಿಯುವ ಅಪಾಯವೂ ಇರಲಿದೆ.

## 96. ಭದ್ರತಾ ಮಂಡಳಿ ನಿರ್ಣಯ ವಿರುದ್ಧ ಅಮೆರಿಕದ ವಿಟೋ

### ಪ್ರಮುಖ ಸುದ್ದಿ

- ಇಸ್ರೇಲ್ ರಾಜಧಾನಿಯಾಗಿ ಜೆರು ಸಲೇಂ ಗುರುತಿಸಿರುವ ಟ್ರಂಪ್ ನಡೆ ಹಿಂತೆಗೆತಕ್ಕೆ ವಿಶ್ವಸಂಸ್ಥೆ ಭದ್ರತಾ ಮಂಡಳಿ ಮಂಡಿಸಲು ಮುಂದಾಗಿದ್ದ ನಿರ್ಣಯದ ವಿರುದ್ಧವಾಗಿ ಅಮೆರಿಕ ವಿಟೋ ಅಧಿಕಾರ ಬಳಸಿದೆ. ಕಳೆದ 6 ವರ್ಷಗಳಲ್ಲಿ ಅಮೆರಿಕ ಇದೇ ಮೊದಲ ಸಲ ವಿಟೋ ಅಧಿಕಾರ ಚಲಾಯಿಸಿದೆ.

### ಪ್ರಮುಖ ಅಂಶಗಳು

- ಅಮೆರಿಕ ಸಾರ್ವಭೌಮತ್ವ ಸಂರಕ್ಷಣೆಗಾಗಿ ನಾವು ಹೀಗೆ ಮಾಡಿದ್ದೇವೆ. ಮಧ್ಯಪೂರ್ವ ರಾಷ್ಟ್ರಗಳಲ್ಲಿ ಶಾಂತಿ ಸ್ಥಾಪನೆಗೆ ಶ್ರಮಿಸುತ್ತಿರುವ ಅಮೆರಿಕಗೆ ಮುಖಭಂಗವಾಗದಂತೆ ತಡೆಯಲು ವಿಟೋ ನಮಗೆ ಅನಿವಾರ್ಯವಾಗಿತ್ತು. ಆದರೆ ಮಂಡಳಿ ಎದುರು ಅಮೆರಿಕಕ್ಕೆ ಅವಮಾನ ಮಾಡಲಾಗಿದೆ ಎಂದು ವಿಶ್ವಸಂಸ್ಥೆಗೆ ಅಮೆರಿಕದ ರಾಯಭಾರಿ ನಿಕ್ಕಿ ಹ್ಯಾಲೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

- ಬ್ರಿಟನ್, ಜಪಾನ್, ಫ್ರಾನ್ಸ್ ಸೇರಿ ಮಂಡಳಿಯಲ್ಲಿರುವ 14 ಅಮೆರಿಕ ಮಿತ್ರ ರಾಷ್ಟ್ರಗಳು ನಿರ್ಣಯದ ಪರವಾಗಿ ಮತ ಚಲಾಯಿಸಿದ್ದು ವಿಶೇಷ. ಅಮೆರಿಕದ ಏಕಪಕ್ಷೀಯ ನಿರ್ಧಾರಕ್ಕೆ ನಮ್ಮ ಬೆಂಬಲವಿಲ್ಲ ಎಂದು ಬ್ರಿಟನ್ ಮೂಗುಮುರಿದಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಡಿ. 6ರಂದು ಟ್ರಂಪ್ ಜೆರುಸಲೇಂನ್ನು ಇಸ್ರೇಲ್‌ನ ನೂತನ ರಾಜಧಾನಿ ಎಂದು ಗುರುತಿಸಿ, ಅಮೆರಿಕ ರಾಯ ಭಾರ ಕಚೇರಿಯನ್ನು ಟೆಲ್ ಅವೀವ್‌ನಿಂದ ಸ್ಥಳಾಂತರಕ್ಕೆ ಆದೇಶಿಸಿದ್ದರು.

### ಏನಿದು ವಿಟೋ ಅಧಿಕಾರ ?

- ವಿಶ್ವಸಂಸ್ಥೆ ಭದ್ರತಾ ಮಂಡಳಿ ಕಾಯಂ ಸದಸ್ಯರಿಗೆ ಮಾತ್ರ ನೀಡಲಾಗುವ ಪರಮೋಚ್ಚ ಹಕ್ಕು. ಸ್ವತಂತ್ರ ನಿರ್ಣಯಗಳನ್ನು ಮಂಡಳಿಯಲ್ಲಿ ಅನುಮೋದನೆಗಾಗಿ ಮಂಡಿಸಿದಾಗ ಕಾಯಂ ರಾಷ್ಟ್ರಗಳ ಸಮ್ಮತಿಯಿಲ್ಲದೆ ಅದನ್ನು ಅಂಗೀಕರಿಸುವಂತಿಲ್ಲ.

- ಒಂದು ವೇಳೆ ನಿರ್ಣಯದ ವಿರುದ್ಧ ಅಸಮಾಧಾನವಿದ್ದರೆ, ಅದರ ಅನುಮೋದನೆ ತಡೆಯಲು ರಾಷ್ಟ್ರಗಳು ವಿಟೋ ಅಧಿಕಾರ ಬಳಸುತ್ತವೆ. ಅಸಮ್ಮತಿಗೆ ಕಾರಣವಾಗಿರುವ ಅಂಶ ಇತ್ಯರ್ಥ ಆಗುವವರೆಗೂ ನಿರ್ಣಯಕ್ಕೆ ವಿಟೋ ಮೂಲಕ ಹಾಕಲಾಗಿರುವ ತಡೆ ಮುಂದುವರಿಯುತ್ತದೆ. ಪ್ರಸ್ತುತ ಭದ್ರತಾ ಮಂಡಳಿಯಲ್ಲಿ 5 ರಾಷ್ಟ್ರಗಳಿಗೆ ಮಾತ್ರ ವಿಟೋ ಅಧಿಕಾರವಿದೆ.

## 97. ಕನಿಷ್ಠ ಪರಿಹಾರ ನಿಗದಿಗೆ ನಿಯಮ ರೂಪಿಸದ ಕೇಂದ್ರ ಸರಕಾರ

### ಪ್ರಮುಖ ಸುದ್ದಿ

- ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತದಲ್ಲಿ ಮಕ್ಕಳು ಸಾವನ್ನಪ್ಪುತ್ತಿರುವ ಪ್ರಕರಣಗಳು ದಿನೇದಿನೆ ಹೆಚ್ಚಾಗುತ್ತಿವೆ.ಆದರೆ ಅಂತಹ ಪ್ರಕರಣಗಳಲ್ಲಿ ಸೂಕ್ತ ಪರಿಹಾರ ನಿಗದಿಗೆ ಕೇಂದ್ರ ಸರಕಾರ ನಿಯಮಗಳನ್ನು ರೂಪಿಸದ ಪರಿಣಾಮ, ಸಂತ್ರಸ್ತ ಕುಟುಂಬಗಳಿಗೆ ಉತ್ತಮ ಪರಿಹಾರ 'ಗಗನಕುಸುಮ'ವಾಗಿದೆ.

### ಪ್ರಮುಖ ಅಂಶಗಳು

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಸುಪ್ರೀಂಕೋರ್ಟ್ ಪದೇಪದೆ ಈ ಕುರಿತು ಕೇಂದ್ರ ಸರಕಾರಕ್ಕೆ ನಿರ್ದೇಶನಗಳನ್ನು ನೀಡಿದ್ದಾಗ್ಯೂ ಸರಕಾರ, 23 ವರ್ಷಗಳಿಂದ ಮೋಟಾರು ವಾಹನ ಕಾಯಿದೆಗೆ ತಿದ್ದುಪಡಿ ಮಾಡಿ ಪರಿಹಾರ ದರ ನಿಗದಿಪಡಿಸಿಲ್ಲ.ಅದರಿಂದಾಗಿ ಕೋರ್ಟ್‌ಗಳಲ್ಲೂ ಗೊಂದಲ ಏರ್ಪಡುವ ಜೊತೆಗೆ ಒಂದೊಂದು ನ್ಯಾಯಾಲಯಗಳು ಒಂದೊಂದು ಬಗೆಯ ಪರಿಹಾರವನ್ನು ನಿಗದಿ ಮಾಡುತ್ತಿವೆ.

- ಇಂತಹ ಹಲವು ಪ್ರಕರಣಗಳಲ್ಲಿ ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿಗಳು ಆದೇಶಿಸುವ ಪರಿಹಾರ ಮೊತ್ತವನ್ನು ಪ್ರಶ್ನಿಸಿ,ಒಂದೋ ಸಂತ್ರಸ್ತರು ಅಥವಾ ವಿಮಾ ಕಂಪನಿ ಹೈಕೋರ್ಟ್ ಮೆಟ್ಟಿಲೇರುವುದು ಸರ್ವೇ ಸಾಮಾನ್ಯವಾಗಿದೆ. ಹೈಕೋರ್ಟ್‌ನಲ್ಲಿ ಇಂತಹ ಪ್ರಕರಣಗಳು ದಿನನಿತ್ಯ ಬರುತ್ತಲೇ ಇವೆ. ಬಹುತೇಕ ಪ್ರಕರಣಗಳು ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಂದಾಗಲೂ, ಕೇಂದ್ರ ಸರಕಾರ ಇನ್ನೂ ಏಕೆ ಪರಿಹಾರ ಮೊತ್ತ ನಿಗದಿಗೆ ನಿಯಮಗಳನ್ನು ರೂಪಿಸಿಲ್ಲ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

### ಸುಪ್ರೀಂಕೋರ್ಟ್ ಆದೇಶವೇನು?

- ರಸ್ತೆ ಅಪಘಾತ ಪ್ರಕರಣಗಳಲ್ಲಿ ಮಕ್ಕಳು ಮೃತಪಟ್ಟ ಸಂದರ್ಭದಲ್ಲಿ ಪರಿಹಾರ ನಿಗದಿಗೆ 1994ರಲ್ಲೇ ಸುಪ್ರೀಂಕೋರ್ಟ್, ಕೇಂದ್ರ ಮೋಟಾರು ವಾಹನ ಕಾಯಿದೆಗೆ ತಿದ್ದುಪಡಿ ಮಾಡುವಂತೆ ಆದೇಶಿಸಿತ್ತು. ಆದರೂ ಸಹ ಕೇಂದ್ರ ಸರಕಾರ ಯಾವುದೇ ರೀತಿಯ ಕ್ರಮ ಕೈಗೊಂಡಿರಲಿಲ್ಲ.

- ಆನಂತರ 2013ರಲ್ಲಿ ಪುಟ್ಟಮ್ಮ ವರ್ಸಸ್ ಕೆ.ಎಲ್.ನಾರಾಯಣರೆಡ್ಡಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್,ಮೋಟಾರು ವಾಹನ ಕಾಯಿದೆ 1988ರ ಸೆಕ್ಷನ್ 163(ಎ)(3)ಗೆ ತಿದ್ದುಪಡಿ ಮಾಡದಿರುವ ಕೇಂದ್ರ ಸರಕಾರದ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿ ತರಾಟೆಗೆ ತೆಗೆದುಕೊಂಡಿತ್ತು.ಅಷ್ಟೇ ಅಲ್ಲದೆ, ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಸ್ಪಷ್ಟ ನಿರ್ದೇಶನ ನೀಡಿದ್ದ ಕೋರ್ಟ್, ಪ್ರಸ್ತುತ ಇರುವ ಜೀವನ ನಿರ್ವಹಣಾ ವೆಚ್ಚ, ಮಕ್ಕಳ ವಯಸ್ಸು ಮತ್ತಿತರ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಕಾನೂನು ತಿದ್ದುಪಡಿ ಮಾಡಲೇಬೇಕು ಎಂದು ಆದೇಶಿಸಿತ್ತು.

- ಅಲ್ಲದೆ, ಕೇಂದ್ರ ಸರಕಾರ ತಿದ್ದುಪಡಿ ಮಾಡಿ ನಿಯಮಗಳನ್ನು ರೂಪಿಸುವವರೆಗೆ 5 ವರ್ಷದೊಳಗಿನ ಮಕ್ಕಳಿಗೆ 1ಲಕ್ಷ ಹಾಗೂ ಐದು ವರ್ಷ ಮೇಲ್ಪಟ್ಟ ಮಕ್ಕಳಿಗೆ 1.5ಲಕ್ಷ ಪರಿಹಾರ ನೀಡಬೇಕೆಂದು ಆದೇಶ ನೀಡಿತ್ತು. 2013ರಿಂದ ಬಹುತೇಕ ಅದೇ ನಿಯಮಗಳನ್ನು ಎಂವಿಸಿಟಿ ಕೋರ್ಟ್‌ಗಳು ಪಾಲನೆ ಮಾಡುತ್ತಿವೆ.

### ನ್ಯಾಯಾಲಯಗಳಲ್ಲೂ ಗೊಂದಲ

- ಒಂದು ಅಪರೂಪದ ಪ್ರಕರಣದಲ್ಲಿ ಹೈಕೋರ್ಟ್ 5 ಲಕ್ಷ ರೂ. ಪರಿಹಾರವನ್ನು ನೀಡುವಂತೆ ವಿಮಾ ಕಂಪನಿಗೆ ಆದೇಶ ನೀಡಿತ್ತು. ಹಾಗಾಗಿ ಬಹುತೇಕ ವಕೀಲರು ಅದೇ ನಿಯಮವನ್ನು ಮುಂದಿಟ್ಟುಕೊಂಡು ಪರಿಹಾರದ ಬೇಡಿಕೆಯೊಡ್ಡುತ್ತಿದ್ದಾರೆ. ನ್ಯಾಯಾಲಯಗಳು ಕೂಡ ಒದೊಂದು ಪ್ರಕರಣಗಳಲ್ಲಿ ಒಂದೊಂದು ಮೊತ್ತದ ಪರಿಹಾರವನ್ನು ಆದೇಶಿಸುತ್ತಿವೆ. ಇದರಿಂದಾಗಿ ಒಟ್ಟಾರೆ ಗೊಂದಲ ಏರ್ಪಟ್ಟಿದೆ.

- ಮಕ್ಕಳನ್ನು ಕಳೆದುಕೊಂಡ ಕುಟುಂಬಕ್ಕೆ ಸೂಕ್ತ ಪರಿಹಾರ ಸಿಗಬೇಕೆಂದರೆ ಕೇಂದ್ರ ಸರಕಾರ ಆದಷ್ಟು ಬೇಗ ಕಾನೂನು ತಿದ್ದುಪಡಿ ಮಾಡಬೇಕು ಎನ್ನುತ್ತಾರೆ ಕಾನೂನು ತಜ್ಞರು. ಇಲ್ಲವಾದರೆ ಕೋರ್ಟ್‌ಗಳು ಒಂದೊಂದು ಪ್ರಕರಣಗಳಲ್ಲಿ ಒಂದೊಂದು ಮೊತ್ತದ ಪರಿಹಾರಕ್ಕೆ ಆದೇಶ ನೀಡುತ್ತದೆ, ಕೆಲವರಿಗೆ ದೊಡ್ಡ ಮೊತ್ತ, ಕೆಲವರಿಗೆ ಅಲ್ಪ ಮೊತ್ತದ ಪರಿಹಾರ ಸಿಗುತ್ತದೆ ಎಂಬುದು ಅವರ ಅಭಿಪ್ರಾಯ.

- "ರಸ್ತೆ ಅಪಘಾತಗಳಲ್ಲಿ ಮೃತಪಟ್ಟ ಮಕ್ಕಳಿಗೆ ಪರಿಹಾರ ನೀಡುವ ಕುರಿತಂತೆ ಸುಪ್ರೀಂಕೋರ್ಟ್ ನೀಡಿರುವ ನಿರ್ದೇಶನದಂತೆ ಮೋಟಾರು ವಾಹನ ಕಾಯಿದೆಗೆ ತಿದ್ದುಪಡಿ ಮಾಡಿ ಪರಿಹಾರ ನಿಗದಿಗೆ ಮಾನದಂಡದ ನಿಯಮಗಳನ್ನು ರೂಪಿಸದೇ ಇರುವುದರಿಂದ ಕೋರ್ಟ್‌ಗಳಿಂದಲೂ ಗೊಂದಲಕಾರಿ ಆದೇಶಗಳು ಬರುತ್ತಿವೆ. ಹಾಗಾಗಿ ಕೇಂದ್ರ ಸರಕಾರ ಆದಷ್ಟು ಬೇಗ ನಿಯಮ ರೂಪಿಸಿದರೆ ಒಳ್ಳೆಯದು"

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 98.ರಾಷ್ಟ್ರೀಯ ಹೆದ್ದಾರಿ ಹೂಡಿಕೆ ಉತ್ತೇಜನ ಘಟಕ (National Highways Investment Promotion Cell -NHIPC)

### ಪ್ರಮುಖ ಸುದ್ದಿ

- ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹೆದ್ದಾರಿ ಯೋಜನೆಗಳಿಗೆ ದೇಶೀಯ ಮತ್ತು ವಿದೇಶಿ ಹೂಡಿಕೆಯನ್ನು ಆಕರ್ಷಿಸಲು ರಾಷ್ಟ್ರೀಯ ಹೆದ್ದಾರಿ ಹೂಡಿಕೆ ಉತ್ತೇಜನ ಘಟಕ ಯನ್ನು ರಚಿಸಿದೆ.

### ರಾಷ್ಟ್ರೀಯ ಹೆದ್ದಾರಿ ಹೂಡಿಕೆ ಉತ್ತೇಜನ ಘಟಕದ ಬಗ್ಗೆ

- ರಸ್ತೆ ಮೂಲಸೌಕರ್ಯ ಯೋಜನೆಗಳಲ್ಲಿ ಜಾಗತಿಕ ಸಂಸ್ಥೆ ಹೂಡಿಕೆದಾರರು, ನಿರ್ಮಾಣ ಕಂಪನಿಗಳು, ಅಭಿವರ್ಧಕರು ಮತ್ತು ನಿಧಿಯ ವ್ಯವಸ್ಥಾಪಕರು ಪಾಲ್ಗೊಳ್ಳುವಿಕೆಯ ಮೇಲೆ ಈ ಘಟಕವು ಕೇಂದ್ರೀಕರಿಸುತ್ತದೆ.

- ಬಂಡವಾಳವನ್ನು ಆಕರ್ಷಿಸಲು ಎನ್‌ಐಐಪಿಸಿ ಯು ಕೇಂದ್ರ ರಾಜ್ಯ ಸರ್ಕಾರಗಳ ವಿವಿಧ ಸಂಪರ್ಕ ಸಚಿವಾಲಯಗಳು ಮತ್ತು ಇಲಾಖೆಗಳೊಂದಿಗೆ ಸಹಕಾರ ಪಡೆದು ಕೊಳ್ಳಲಿದೆ . ಸಿಐಐ, ಫಿಕಿ , ಅಸ್ಸೋಚ್ಯಾಮ್ ಮತ್ತು ಇನ್ವೆಸ್ಟ್ ಇಂಡಿಯಾ ಮುಂತಾದ ವಾಣಿಜ್ಯೋದ್ಯಮ ಸಂಘಟನೆಯೊಂದಿಗೆ ಜೊತೆಗೂಡಿ ಕಾರ್ಯನಿರ್ವಹಿಸುತ್ತಿದೆ.

**ಇದರ ಉದ್ದೇಶವೇನು ?**

- ಭಾರತ್ ಮಾಲಾ ಯೋಜನೆಯಡಿಯಲ್ಲಿ ಸರ್ಕಾರವು 35,000 ಕಿ.ಮೀ. ಹೆದ್ದಾರಿ ನಿರ್ಮಾಣದ ಮಹತ್ವಾಕಾಂಕ್ಷೆಯ ಗುರಿಯನ್ನು ಹೊಂದಿದೆ.

- ಈ ಯೋಜನೆಗೆ ಮುಂದಿನ ಐದು ವರ್ಷಗಳಲ್ಲಿ 5. 35 ಲಕ್ಷ ಕೋಟಿ. ಅನದಾನದ ಅಗತ್ಯವಿದ್ದು , ಸಾರ್ವಜನಿಕ ಮತ್ತು ಖಾಸಗಿ ವಲಯದಿಂದ, ವಿದೇಶಿ ಮತ್ತು ದೇಶೀಯ ಹೂಡಿಕೆಯ ವಲ ಯದಿಂದ ಬಂಡವಾಳವನ್ನು ಆಕರ್ಷಿಸಲು ಇದನ್ನು ರಚಿಸಲಾಗಿದೆ.
- ವಿದೇಶಿ ರಾಯಭಾರ ಕಚೇರಿಗಳು ಮತ್ತು ಭಾರತೀಯ ರಾಯಭಾರ ಕಚೇರಿಗಳು ವಿದೇಶಗಳಲ್ಲಿ ನೆಲೆಗೊಂಡ ಮಿಷನ್ಗಳೊಂದಿಗೆ ಸಹ ನಿಕಟವಾಗಿ ಸಹಕರಿಸುತ್ತದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ರಾಷ್ಟ್ರೀಯ ಯ ಹೆದ್ದಾರಿ ಪ್ರಾಧಿಕಾರದ ಬಗ್ಗೆ**

- ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಾಯಿದೆ-1988 ರಡಿಯಲ್ಲಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ. 1995 ರಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಅಂಗೀಕರಿಸಲಾಯಿತು.

- ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೇಂದ್ರ ಸರ್ಕಾರದ ಸ್ವಾಯತ್ತ ಸಂಸ್ಥೆ ಆಗಿದೆ. ಸುಮಾರು 70,000 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ನಿರ್ವಹಣೆ ಮಾಡುವುದು ಪ್ರಾಧಿಕಾರದ ಕರ್ತವ್ಯ.
- ರಾಷ್ಟ್ರೀಯ ಹೆದ್ದಾರಿ ನಿರ್ಮಾಣ, ಅಭಿವೃದ್ಧಿ ಮತ್ತು ನಿರ್ವಹಣೆ ಮಾಡುವುದು ಇದರ ಹೊಣೆಗಾರಿಕೆ ಆಗಿದೆ.

## 99. ಸಮೀಪ್ ಯೋಜನೆ

### ಪ್ರಮುಖ ಸುದ್ದಿ

- ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯ ದೇಶಾದ್ಯಂತ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ ಸಮೀಪ್ (ಸ್ಟೂಡೆಂಟ್ಸ್ ಅಂಡ್ ಎಂಇಎ ಎಂಗೇಜ್‌ಮೆಂಟ್ ಪ್ರೋಗ್ರಾಂ) ಎಂಬ ಯೋಜನೆಯನ್ನು ಜಾರಿಗೆ ತಂದಿದೆ.

### ಸಮೀಪ್ ಯೋಜನೆ ಬಗ್ಗೆ

- ಇದು ಭಾರತದ ವಿದೇಶಾಂಗ ನೀತಿಯ ವಿಸ್ತರಣಾ ಯೋಜನೆಯಾಗಿದ್ದು, ವಿದ್ಯಾರ್ಥಿ ಸ್ನೇಹಿ ವಿದೇಶಾಂಗ ನೀತಿಯನ್ನು ಜಾರಿಗೊಳಿಸುವ ಉದ್ದೇಶ ಹೊಂದಿದೆ.

- ಭಾರತದ ವಿದೇಶಾಂಗ ನೀತಿ ಹಗೂ ಜಾಗತಿಕ ಕ್ರಿಯಾಶೀಲತೆಯನ್ನು ವಿದ್ಯಾರ್ಥಿಗಳ ಬಳಿಗೆ ಒಯ್ಯುವ ಜತೆಗೆ ರಾಜತಾಂತ್ರಿಕತೆಯನ್ನು ವಿದ್ಯಾರ್ಥಿಗಳು ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳಲು ಇರುವ ಅವಕಾಶಗಳನ್ನು ತೋರಿಸಿಕೊಡಲಿದೆ.
- ಈ ಹೆಸರನ್ನು ಜನಸಮುದಾಯದ ಮೂಲದಿಂದ ಪಡೆಯಲಾಗಿದ್ದು, ಮೈ ಗೋವ್ ಪೋರ್ಟಲ್ ಮತ್ತು 550 ಸಲಹಾ ಎಂಟ್ರಿಗಳಿಂದ ಇದನ್ನು ಪಡೆಯಲಾಗಿದೆ.

- ಈ ವಿಸ್ತರಣಾ ಯೋಜನೆಯ ಮುಖ್ಯ ಉದ್ದೇಶವೆಂದರೆ, ಭಾರತದ ಮೂಲೆ ಮೂಲೆಗಳ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನಿಡುವುದು ಮತ್ತು ಅದನ್ನು ವಿಸ್ತøತವಾಗಿ ಪರಿಚಯಿಸುವುದು.
- ಇದು ಭಾರತದ ವಿದೇಶಾಂಗ ನೀತಿಯ ಪ್ರಮುಖ ಅಂಶಗಳ ಬಗ್ಗೆ ಕೂಡಾ ಜಾಗೃತಿ ಮೂಡಿಸುವಲ್ಲಿ ಇದು ನೆರವಾಗಲಿದೆ. ಜತೆಗೆ ಇಂಥ ನೀತಿಗಳ ಯಶೋಗಾಥೆಯ ಬಗ್ಗೆಯೂ ವಿವರಿಸಲಾಗುತ್ತದೆ.

- ಇದು ವಿದೇಶಾಂಗ ವ್ಯವಹಾರಗಳ ಖಾತೆ ಕಚೇರಿಗಳ ಅಧಿಕಾರಿಗಳು ಮತ್ತು ಅಧೀನ ಕಾರ್ಯದರ್ಶಿಗಿಂತ ಮೇಲಿನ ಅಧಿಕಾರಿಗಳು ತಮ್ಮ ಹುಟ್ಟೂರಿನ ಶಾಲೆ- ಕಾಲೇಜುಗಳಿಗೆ ತೆರಳಿ ಅಗತ್ಯ ಮಾಹಿತಿ ಹಾಗೂ ಮಾರ್ಗದರ್ಶನ ನೀಡುವ ಉದ್ದೇಶ ಹೊಂದಿದೆ.

- ವಿದೇಶಾಂಗ ವ್ಯವಹಾರಗಳ ಖಾತೆ ಕಚೇರಿಗಳ ಅಧಿಕಾರಿಗಳು ಮತ್ತು ಅಧೀನ ಕಾರ್ಯದರ್ಶಿಗಿಂತ ಮೇಲಿನ ಅಧಿಕಾರಿಗಳು ರಜಾಕಾಲದಲ್ಲಿ ಹಾಗೂ ಇತರ ಅವಧಿಯಲ್ಲಿ ತಮ್ಮ ಹುಟ್ಟೂರಿನ ಶಾಲೆ-ಕಾಲೇಜುಗಳಿಗೆ ತೆರಳಿ ವಿದ್ಯಾರ್ಥಿಗಳ ಜತೆ ವಿದೇಶಾಂಗ ವ್ಯವಹಾರಗಳ ಬಗ್ಗೆ ಸಂವಾದ ನಡೆಸುವರು.

- ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಗೆ ಕಾರ್ಯನಿರ್ವಹಿಸುತ್ತದೆ, ಹೇಗೆ ರಾಜತಾಂತ್ರಿಕ ನೀತಿ ಅನುಸರಿಸಲಾಗುತ್ತದೆ ಹಾಗೂ ಇದನ್ನು ವೃತ್ತಿ ಅವಕಾಶವಾಗಿ ವಿದ್ಯಾರ್ಥಿಗಳು ಹೇಗೆ ಕೈಗೊಳ್ಳಬಹುದು ಎಂಬ ಬಗ್ಗೆ ಅಗತ್ಯ ಮಾಹಿತಿ ಹಾಗೂ ಮಾರ್ಗದರ್ಶನ ನೀಡಲಿದ್ದಾರೆ.

- ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಇಂಥ ಅಧಿಕಾರಿಗಳಿಗಾಗಿ ಗುಣಮಟ್ಟದ ಪ್ರಸ್ತುತಿಯನ್ನು ಕೂಡಾ ಈ ಉದ್ದೇಶಕ್ಕೆ ಸಿದ್ಧಪಡಿಸಿದೆ. ಇದನ್ನು ಸುಧಾರಿಸುವ ನಿಟ್ಟಿನಲ್ಲಿ ಹಾಗೂ ತಮ್ಮ ವೈಯಕ್ತಿಕ ಅನುಭವವನ್ನು ಸೇರಿಸುವ ನಿಟ್ಟಿನಲ್ಲಿ ಬದಲಾವಣೆ ಮಾಡಿಕೊಳ್ಳಬಹುದಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 100. ರಾಷ್ಟ್ರೀಯ ಸೇವಾ ಯೋಜನ ಪ್ರಶಸ್ತಿ

### ಪ್ರಮುಖ ಸುದ್ದಿ

- ಇತ್ತೀಚೆಗೆ ರಾಷ್ಟ್ರಪತಿ ಶ್ರೀ ರಾಮ್ ನಾಥ್ ಕೋವಿಂದ್ ರವರು 2016-17ರ ರಾಷ್ಟ್ರೀಯ ಸೇವಾ ಯೋಜನೆ ಪ್ರಶಸ್ತಿಗಳನ್ನು ಪ್ರಧಾನ ಮಾಡಿದರು.

### ಎನ್ಎಸ್ಎಸ್ ಪ್ರಶಸ್ತಿ ಉದ್ದೇಶ

- ಎನ್‌ಎಸ್‌ಎಸ್ ಅನ್ನು ಮತ್ತಷ್ಟು ಉತ್ತೇಜಿಸುವ ದೃಷ್ಟಿಯಿಂದ ವಿಶ್ವವಿದ್ಯಾನಿಲಯಗಳು / ಸೀನಿಯರ್ ಸೆಕೆಂಡರಿ ಗಳು (+2) ಎನ್‌ಎಸ್‌ಎಸ್ ಘಟಕಗಳು / ಪ್ರೋಗ್ರಾಮ್ ಅಧಿಕಾರಿಗಳು ಮಾಡುವ ಸ್ವಯಂಪ್ರೇರಿತ ಸಮುದಾಯ ಸೇವೆಗೆ ಅತ್ಯುತ್ತಮವಾದ ಕೊಡುಗೆಗಳನ್ನು ಗುರುತಿಸಿ ಗೌರವಿಸುವುದು.

### ರಾಷ್ಟ್ರೀಯ ಸೇವಾ ಯೋಜನೆ ಬಗ್ಗೆ

- ರಾಷ್ಟ್ರೀಯ ಸೇವಾ ಯೋಜನೆ ಎನ್ನುವುದು ಭಾರತ ಸರ್ಕಾರದಿಂದ ಪ್ರಾಯೋಜಿತವಾದ ಸಾರ್ವಜನಿಕ ಸೇವಾ ಸಂಸ್ಥೆ. ಇದನ್ನು ನಡೆಸುವವರು ಭಾರತ ಸರ್ಕಾರದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ (Department of Youth Affairs and Sports).
- ಗಾಂಧೀಜಿಯವರ ಶತವರ್ಷವಾದ ೧೯೬೯ರಲ್ಲಿ ಈ ಯೋಜನೆಗೆ ಚಾಲನೆ ನೀಡಲಾಯಿತು.

- ಈ ಸಂಸ್ಥೆಯ ಮುಖ್ಯ ಉದ್ದೇಶವು ಭಾರತೀಯ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಸಾರ್ವಜನಿಕ ಸೇವೆಯ ಮೂಲಕ ಅಭಿವೃದ್ಧಿಗೊಳಿಸುವುದಾಗಿದೆ. ಈ ಸ್ವಯಂಪ್ರೇರಿತ ಸಂಸ್ಥೆಯ ಮೂಲ ತತ್ವವು ವಿದ್ಯಾರ್ಥಿಗಳಿಗೆ ಲೋಕಸೇವೆಯ ಮೂಲಕ ರಾಷ್ಟ್ರನಿರ್ಮಾಣದ ಕಾರ್ಯಗಳಲ್ಲಿ ಒಳಗೊಂದಂತಹ ಅನುಭವವನ್ನು ನೀಡುವುದು, ಹಾಗೂ ಇದರೊಂದಿಗೆ ರಾಷ್ಟ್ರಪ್ರೇಮ ಮತ್ತು ಸೇವಾ ಭಾವನೆಗಳನ್ನು ಬೆಳೆಸುವುದಾಗಿದೆ.

- ರಾಷ್ಟ್ರೀಯ ಸೇವಾ ಯೋಜನೆ ಈ ಸಂಘಟನೆಯನ್ನು ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ ಸಮಾಜ ಸೇವೆಯ ಬಗೆಯಲ್ಲಿ ತಿಳಿಯಲು ಇರುವು ಒಂದು ಸರಕಾರದ ಯೋಜನೆ. ಗಾಂಧೀಜಿ ಯವರ ಸರ್ವೋದಯ ತತ್ವದ ನೆಲೆಯಲ್ಲಿ ಯೋಚನೆ ಮಾಡುವಾಗ, ಇಂತಹ ಒಂದು ವಿಚಾವರನ್ನು ಅನುಷ್ಠಾನಕ್ಕೆ ತಂದರು. ಹೀಗೆ ಎನ್.ಎಸ್.ಎಸ್. ಎಂಬ ಪರಿಕಲ್ಪನೆ ಬಂತು. ಮೊದಲು ಪದವಿ ಕಾಲೇಜುಗಳಲ್ಲಿ ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಇದ್ದ ಎನ್.ಎಸ್.ಎಸ್.ನಂತರ ಪಿ.ಯು.ಸಿ ವಿಭಾಗದ ವಿದ್ಯಾರ್ಥಿಗಳಿಗೂ ವಿಸ್ತರಣೆಯಾಯಿತು.

### ಎನ್.ಎಸ್.ಎಸ್. ಧ್ಯೇಯ ವಾಕ್ಯ

- ಎನ್.ಎಸ್.ಎಸ್. ಒಂದು ಅನುಭವ. ಎನ್. ಎಸ್. ಎಸ್. ಧ್ಯೇಯವಾಕ್ಯ - ನನಗಲ್ಲ, ನಿನಗೆ - Not me, but you ಆಗಿದೆ. ಪ್ರಜಾಪ್ರಭುತ್ವ ದೇಶದಲ್ಲಿ ಬದುಕುನ ಹಾಗೇನೆ ನಿಸ್ವಾರ್ಥ ಸೇವೆಯಲ್ಲಿ ಮತ್ತು ಬೇರೆ

ವ್ಯಕ್ತಿಗಳೊಂದಿಗೆ ಮೆಚ್ಚಿಕೆಯಾಗಿ ಗುರುತಿಸಿಕೊಂಡು ಮಾನವೀಯತೆಯನ್ನು ಎತ್ತಿ ತೋರಿಸುವ ಅಗತ್ಯವನ್ನು ಎನ್.ಎಸ್.ಎಸ್. ಧ್ಯೇಯ ವಾಕ್ಯ ಪ್ರತಿಬಿಂಬಿಸುತ್ತದೆ.

ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶ

- ಪರಿಸರ ಸಂರಕ್ಷಣೆ , ಆರೋಗ್ಯ ಜಾಗೃತಿ,ಶ್ರಮದಾನ, ಪ್ರಗತಿಪರ ಚಿಂತನೆ,ಪ್ರಾಕೃತಿಕ ವಿಕೋಪ ಮತ್ತು ಪ್ರಕೃತಿ ಸಂರಕ್ಷಣೆ,ಶೈಕ್ಷಣಿಕಮತ್ತು ಸಾಂಸ್ಕೃತಿಕ ಚಟುವಟಿಕೆಗಳು,ಮಕ್ಕಳು ಮತ್ತು ಮಹಿಳಾ ಜಾಗೃತಿ,ಪ್ರಾಚ್ಯವಸ್ತುಗಳ ಸಂರಕ್ಷಣೆ ರಾಷ್ಟ್ರೀಯ ಜಾಗೃತಿ ಮೂಡಿಸುವುದು.

## 101. ದರ್ಪಣ್ ಯೋಜನೆ

### ಪ್ರಮುಖ ಸುದ್ದಿ

- ಕೇಂದ್ರ ಸಂವಹನ ಸಚಿವಾಲಯವು ಡಿಜಿಟಲ್ ಅಡ್ವಾನ್ಸ್‌ಮೆಂಟ್ ಆಫ್ ರೂರಲ್ ಪೋಸ್ಟ್ ಆಫೀಸ್ ಫಾರ್ ಎ ನ್ಯೂ ಇಂಡಿಯಾ (ದರ್ಪಣ್) ಯೋಜನೆಗೆ ಚಾಲನೆ ನೀಡಿದೆ. ಇದು ಗ್ರಾಮೀಣ ಪ್ರದೇಶದಲ್ಲಿ, ಬ್ಯಾಂಕಿಂಗ್ ಸೌಲಭ್ಯ ಇಲ್ಲದ ಭಾಗಗಳ ಜನರ ವಿತ್ತೀಯ ಸೇರ್ಪಡೆಗೆ ಪೂರಕವಾಗಲಿದ್ದು, ಗ್ರಾಮೀಣ ಭಾಗಕ್ಕೆ ಗುಣಮಟ್ಟದ ಸೇವೆ ಒದಗಿಸಲು ಮತ್ತು ಸೇವೆಗಳ ಮೌಲ್ಯವರ್ಧನೆಗೆ ಅನುಕೂಲಕರವಾಗಲಿದೆ.

- ದರ್ಪಣ್ ಯೋಜನೆಯು ಮಾಹಿತಿ ತಂತ್ರಜ್ಞಾನ ಆಧುನೀಕರಣ ಯೋಜನೆಯಾಗಿದ್ದು, ವಿತ್ತೀಯ ಸೇರ್ಪಡೆಯನ್ನು ಕಾರ್ಯರೂಪಕ್ಕೆ ತರುವ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಅದರಲ್ಲೂ ಮುಖ್ಯವಾಗಿ ಬ್ಯಾಂಕ್‌ಗಳಿಲ್ಲದ ಗ್ರಾಮೀಣ ಜನರಿಗೆ ಗುಣಮಟ್ಟದ ಸೇವೆ ಒದಗಿಸುವುದು ಇದರ ಉದ್ದೇಶ. ಇದು ಎಲ್ಲ ಖಾತೆದಾರರಿಗೆ ಕೋರ್ ಬ್ಯಾಂಕಿಂಗ್ ಸೌಲಭ್ಯ ಒದಗಿಸುವ ಗುರಿ ಹೊಂದಿದೆ.

### ದರ್ಪಣ್ ಯೋಜನೆ ಬಗ್ಗೆ

- ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ಕಡಿಮೆ ವಿದ್ಯುತ್ ತಂತ್ರಜ್ಞಾನ ಪರಿಹಾರವನ್ನು ಎಲ್ಲ ಅಂಚೆ ಕಚೇರಿ ಶಾಖೆಗಳಿಗೆ ಒದಗಿಸುವುದು. ಇದು ದೇಶದಲ್ಲಿ ಸುಮಾರು 1.29 ಲಕ್ಷ ಅಂಚೆ ಕಚೇರಿ ಶಾಖೆಗಳು ಸೇವಾ ವಿತರಣೆಯನ್ನು ಸುಧಾರಿಸಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಲಿದೆ.

- ಇದರ ಮುಖ್ಯ ಉದ್ದೇಶವೆಂದರೆ ಅಂಚೆ ಇಲಾಖೆಯ ಗ್ರಾಮೀಣ ಹರವನ್ನು ವಿಸ್ತರಿಸುವುದು ಹಾಗೂ ಬ್ಯಾಂಕಿಂಗ್ ಕಾರ್ಯಾಚರಣೆಗೆ ಪೂರಕವಾಗಿ ಕೆಲಸ ನಿರ್ವಹಿಸುವುದು. ಇದು ಎಲ್ಲ ಹಣಕಾಸು ಸ್ವೀಕೃತಿ, ಉಳಿತಾಯ ಖಾತೆ, ಗ್ರಾಮೀಣ ಅಂಚೆ ಜೀವ ವಿಮಾ ಸೇವೆ ಮತ್ತು ಕ್ಯಾಶ್ ಸರ್ಟಿಫಿಕೇಟ್ ಸೇವೆಗಳನ್ನು ಗ್ರಾಮೀಣ ಜನರಿಗೆ ಒದಗಿಸುವಲ್ಲಿ ಇದು ಮಹತ್ವದ ಪಾತ್ರ ವಹಿಸಲಿದೆ. ಇದು ಅಂಚೆ ಕಾರ್ಯಾಚರಣೆ ಪ್ರಕ್ರಿಯೆಯನ್ನು ಸುಧಾರಿಸುವಲ್ಲಿ ಕೂಡಾ ನೆರವಾಗಲಿದ್ದು, ವಿಶ್ವಾಸಾರ್ಹ ಅಂಶಗಳ ಸ್ವಯಂಚಾಲಿತ ಬುಕ್ಕಿಂಗ್ ಮತ್ತು ವಿತರಣೆಗೆ ಕೂಡ ಇದು ನೆರವಾಗುತ್ತದೆ.

- ಚಿಲ್ಲರೆ ಅಂಚೆ ವಹಿವಾಟನ್ನು ಹೆಚ್ಚಿಸುವ ಮೂಲಕ ಆದಾಯ ಹೆಚ್ಚಳಕ್ಕೂ ಇದು ಸಹಕಾರಿಯಾಗಲಿದ್ದು, ಇದು ಎಂನರೇಗಾದಂಥ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಮತ್ತು ಮೂರನೇ ಪಕ್ಷದ ಅನ್ವಯಿಕೆಯ ನಿಟ್ಟಿನಲ್ಲಿ ಕೂಡಾ ನೆರವಾಗಲಿದೆ. ಈ ಯೋಜನೆಗೆ 1400 ಕೋಟಿ ರೂಪಾಯಿ ಅನುದಾನ ನಿಗದಿಪಡಿಸಿದ್ದು, 2018ರ ಮಾರ್ಚ್ ವೇಳೆಗೆ ಇದು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

- ಇದರ ಮಹತ್ವ
- ಅಂಚೆ ಇಲಾಖೆಯು ತುದಿಯಿಂದ ತುದಿಗೆಎ ಮಾಹಿತಿ ತಂತ್ರಜ್ಞಾನ ಆಧುನೀಕರಣ ಯೋಜನೆಯನ್ನು ಕೂಡಾ ಕೈಗೆತ್ತಿಕೊಂಡಿದ್ದು, ಇದಕ್ಕೆ ಅಗತ್ಯವಾದ ಆಧುನಿಕ ಸಾಧನಗಳು ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ನಿರ್ಧರಿಸಿದೆ. ಈ ಆಧುನೀಕರಣ ಯೋಜನೆ ಮುಖ್ಯ ಉದ್ದೇಶವೆಂದರೆ, ಹೆಚ್ಚಿನ ಗ್ರಾಹಕ ಸಂವಾದ ಮಾರ್ಗಗಳ ಮೂಲಕ ದೇಶದ ಜನರನ್ನು ವಿಸ್ತøತವಾಗಿ ತಲುಪುವ ಜತೆಗೆ ಗ್ರಾಹಕ ಸೇವೆಯನ್ನು ಸುಧಾರಿಸುವಲ್ಲಿ ಕೂಡಾ ಇದು ನೆರವಾಗಲಿದೆ.

- ಇದರ ಅಂಗವಾಗಿ ಅಂಚೆ ಇಲಾಖೆಯ ತನ್ನ ಕಾರ್ಯಕ್ಷೇತ್ರವನ್ನು ಆಧುನೀಕರಿಸುವ ವಿಶ್ವಾಸ ಹೊಂದಿದ್ದು, ಈ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಇದು ನೆರವಾಗಲಿದೆ. ಇದುವರೆಗೆ ಅಂಚೆ ಇಲಾಖೆಯು 991 ಎಟಿಎಂಗಳನ್ನು ದೇಶಾದ್ಯಂತ ಸ್ಥಾಪಿಸಿದೆ. ಇವುಗಳು ಪರಸ್ಪರ ಸಂಬಂಧದಿಂದ ಕಾರ್ಯನಿರ್ವಹಿಸಲು ಸಮರ್ಥವಾಗಿದ್ದು, ಇತರ ಬ್ಯಾಂಕ್‌ಗಳು ಹಾಗೂ ಜನಸಾಮಾನ್ಯರು ಇದರ ವಿಸ್ತøತವಾದ ಜಾಲದಿಂದ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳ ಜನರು ಪ್ರಯೋಜನ ಪಡೆಯಲಿದ್ದಾರೆ.

## 102. ಕಾಳಧನಿಕರ ಬೇಟೆಗೆ ಭಾರತ-ಸ್ವಿಸ್ ಒಪ್ಪಂದ: ಹೊಸ ವರ್ಷದಿಂದಲೇ ಮಾಹಿತಿ ವಿನಿಮಯ

### ಪ್ರಮುಖ ಸುದ್ದಿ

- ಕಪ್ಪು ಹಣದ ವಿರುದ್ಧದ ಪ್ರಧಾನಿ ನರೇಂದ್ರ ಮೋದಿ ಅವರ ಹೋರಾಟಕ್ಕೆ ಫಲ ದೊರೆತಿದ್ದು, ಕಾಳಧನಿಕರ ಮಾಹಿತಿ ವಿನಿಮಯ ಸಂಬಂಧ ಭಾರತ ಮತ್ತು ಸ್ವಿಜರ್‌ಲೆಂಡ್ ಒಪ್ಪಂದಕ್ಕೆ ಸಹಿ ಹಾಕಿವೆ.
- ತೆರಿಗೆ ವಂಚಕರ ಸ್ವರ್ಗವೆಂದೇ ಕರೆಸಿಕೊಳ್ಳುವ ಸ್ವಿಜರ್‌ಲೆಂಡ್‌ನ ಬ್ಯಾಂಕುಗಳಲ್ಲಿ ಕಾಳಧನಿಕರು ಇಟ್ಟಿರುವ ಹಣದ ಮಾಹಿತಿಯನ್ನು ಭಾರತಕ್ಕೆ ಹಸ್ತಾಂತರಿಸಲು ಸ್ವಿಜರ್‌ಲೆಂಡ್ ಒಪ್ಪಿಗೆ ಸೂಚಿಸಿದೆ.
- ಈ ಒಪ್ಪಂದದನ್ವಯ ಸ್ವಿಜರ್‌ಲೆಂಡ್ ಕಾಳಧನಿಕರ ಮಾಹಿತಿಯನ್ನು 2018ರ ಜನವರಿ 1 ರಿಂದ ಭಾರತದೊಂದಿಗೆ ವಿನಿಮಯ ಮಾಡಿಕೊಳ್ಳಲಿದೆ. ಸ್ವಿಜರ್‌ಲೆಂಡ್ ನೀಡುವ ಮಾಹಿತಿಯ ಗೋಪ್ಯತೆಯನ್ನು ಕಾಯ್ದುಕೊಳ್ಳಲು ಭಾರತ ಸರ್ಕಾರ ಬದ್ಧವಿದೆ. ಈ ಮೊದಲು ಉಭಯ ಸರ್ಕಾರಗಳು ಮಾಡಿಕೊಂಡಿದ್ದ ಒಪ್ಪಂದದಂತೆ ಕಾಳಧನಿಕರ ಮಾಹಿತಿ ವಿನಿಮಯ 2019ರಲ್ಲಿ ಪ್ರಾರಂಭವಾಗಬೇಕಿತ್ತು. ಹೊಸ ಒಪ್ಪಂದದಂತೆ ಒಂದು ವರ್ಷ ಮೊದಲೇ ಮಾಹಿತಿ ವಿನಿಮಯ ಪ್ರಾರಂಭವಾಗಲಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಇದರ ಮಹತ್ವ

- ಭಾರತದಲ್ಲಿ ತೆರಿಗೆ ವಂಚಿಸಿ, ಸ್ವಿಜರ್‌ಲೆಂಡ್ ಬ್ಯಾಂಕ್‌ಗಳಲ್ಲಿ ಬೃಹತ್ ಪ್ರಮಾಣದಲ್ಲಿ ಶಂಕಿತ ಕಪ್ಪು ಹಣ ಇಟ್ಟಿರುವ ಭಾರತೀಯರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಬಗೆಗಿನ ಸಮಗ್ರ ಮಾಹಿತಿಯನ್ನು ಭಾರತ ಸರಕಾರದ ಜತೆ ವಿನಿಮಯ ಮಾಡಿಕೊಳ್ಳಲಾಗುವುದು ಎಂದು ಅದು ತಿಳಿಸಿದೆ.
- ಕಪ್ಪು ಹಣವನ್ನು ಮರಳಿ ದೇಶಕ್ಕೆ ತರಬೇಕೆಂಬ ಭಾರತದ ನಿರಂತರ ಪ್ರಯತ್ನಗಳಿಗೆ ಇದರಿಂದ ತುಸು ಬೆಂಬಲ ಸಿಕ್ಕಂತಾಗಿದೆ.

- ಭಾರತ, ಸ್ವಿಸ್ ನಡುವಿನ ದ್ವಿಪಕ್ಷೀಯ ಮಾಹಿತಿ ವಿನಿಮಯ ಒಪ್ಪಂದದ ಪ್ರಕಾರ, ಕಪ್ಪು ಹಣ ಕುರಿತು ಮಾಹಿತಿ ವಿನಿಮಯ ಮಾಡಿಕೊಳ್ಳದಿದ್ದರೆ ಈ ವಿಷಯವನ್ನು ಜಿ-8 ರಾಷ್ಟ್ರಗಳ ಶೃಂಗಸಭೆಯ ವೇದಿಕೆಯಲ್ಲಿ ಪ್ರಸ್ತಾಪಿಸುವುದಾಗಿ ಎಚ್ಚರಿಸಿದ್ದರು.

- ಈ ಎಚ್ಚರಿಕೆಯ ಪತ್ರಕ್ಕೆ ಸ್ವಿಜರ್‌ಲೆಂಡ್ ಇದೀಗ ಸ್ಪಂದಿಸಿದೆ. ಸ್ವಿಸ್ ಬ್ಯಾಂಕ್‌ಗಳಲ್ಲಿ ಶಂಕಿತ ಕಪ್ಪು ಹಣ ಹೊಂದಿರುವ ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳ ಹೆಸರುಗಳು ಸ್ವಿಜರ್‌ಲೆಂಡ್ ಸರಕಾರದ ಪರಿಶೀಲನೆಗೆ ಒಳಪಟ್ಟಿವೆ. ರೆ.

- ಭಾರತೀಯ ಮೂಲದ ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳು ಭಾರತ ಹೊರತುಪಡಿಸಿ ಇತರೆ ರಾಷ್ಟ್ರಗಳ ಟ್ರಸ್ಟ್‌ಗಳು, ಕಂಪನಿಗಳು ಮತ್ತು ಇತರೆ ಕಾನೂನುಬದ್ಧ ಸಂಸ್ಥೆಗಳ ಮೂಲಕ ಕಪ್ಪು ಹಣವನ್ನು ಸ್ವಿಸ್ ಬ್ಯಾಂಕ್‌ಗಳಲ್ಲಿ ಇಟ್ಟಿರುವ ಕುರಿತು ಸಂಶಯಗಳಿವೆ

- ಆದರೆ, ಅವರು ವ್ಯಕ್ತಿ ಮತ್ತು ಸಂಘ ಸಂಸ್ಥೆಗಳ ಹೆಸರು, ಕಪ್ಪು ಹಣದ ಪ್ರಮಾಣ ಕುರಿತು ವಿವರ ನೀಡಲು ನಿರಾಕರಿಸಿದ್ದಾರೆ. ಭಾರತ, ಸ್ವಿಸ್ ನಡುವಿನ ದ್ವಿಪಕ್ಷೀಯ ಮಾಹಿತಿ ವಿನಿಮಯ ಒಪ್ಪಂದದಂತೆ ಗೌಪ್ಯತೆ ಕಾಪಾಡಬೇಕಿರುವುದರಿಂದ ಈಗಲೇ ಎಲ್ಲಾ ಮಾಹಿತಿಯನ್ನು ಪ್ರಕಟಿಸುವುದು ತಪ್ಪಾಗುತ್ತದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಸ್ವಿಸ್ ಬ್ಯಾಂಕ್‌ಗಳಲ್ಲಿ ಭಾರತದ ಹಣ ಎಷ್ಟಿದೆ ಎಂಬ ಪ್ರಶ್ನೆಗೆ ಅವರು, ಭಾರತೀಯರು ಎಂದು ಘೋಷಿಸಿಕೊಂಡಿರುವ ಗ್ರಾಹಕರು ಹೊಂದಿರುವ ಹಣದ ಮೊತ್ತ 14 ಸಾವಿರ ಕೋಟಿ ರೂ.(2.03 ಫ್ರಾಂಕ್)ನಷ್ಟಿದೆ. ಹಾಗಾಗಿ, ಆ ಹಣ ಅಕ್ರಮ ಸಂಪತ್ತಾಗುವ ಸಾಧ್ಯತೆಗಳಿಲ್ಲ ಎಂದು ಅಧಿಕಾರಿ ತಿಳಿಸಿದ್ದಾರೆ.

- ಭಾರತ ಸರಕಾರದ ಜತೆ ಶಂಕಿತ ಕಪ್ಪು ಹಣದ ಮಾಹಿತಿಯನ್ನು ಸಹಜ ಆಧಾರದಲ್ಲಿ ವಿನಿಮಯ ಮಾಡಿಕೊಳ್ಳಲಾಗುವುದು. ಆದರೆ ಭಾರತ ಸರಕಾರ ಈ ಮೊದಲು ಮಾಡಿಕೊಂಡ ಆಧಾರದಲ್ಲಲ್ಲ. ಅಂದರೆ, ಎಚ್‌ಎಸ್‌ಬಿಸಿ ಸೇರಿದಂತೆ ಕೆಲವು ನಿರ್ದಿಷ್ಟ ಬ್ಯಾಂಕ್‌ಗಳು ಸೋರಿಕೆ ಮಾಡಿದ ಪಟ್ಟಿಯ ಆಧಾರದಲ್ಲಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

- ಬ್ಯಾಂಕ್ ಅಧಿಕಾರಿಯೊಬ್ಬರು ಕಳವು ಮಾಡಿದ್ದ 'ಎಚ್‌ಎಸ್‌ಬಿಸಿ ಪಟ್ಟಿ'ಯಲ್ಲಿ ಸೇರ್ಪಡೆಯಾಗಿದ್ದ ಭಾರತೀಯರ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲು ಸ್ವಿಸ್ ಸರಕಾರ ನಿರಾಕರಿಸುತ್ತಾ ಬಂದಿತ್ತು.

- ಕಳವು ಮಾಡಿದ ಅಥವಾ ಅಕ್ರಮವಾಗಿ ಪಡೆದ ಭಾರತೀಯರ ಪಟ್ಟಿ ಕುರಿತು ಮಾಹಿತಿ ವಿನಿಮಯ ಮಾಡಿಕೊಳ್ಳಲು ಅಥವಾ ಆಡಳಿತಾತ್ಮಕ ನೆರವು ಒದಗಿಸಲು ಸ್ಥಳೀಯ ಕಾನೂನಿನಲ್ಲಿ ಅವಕಾಶಗಳಿಲ್ಲ ಎಂದು ಸ್ವಿಸ್, ಭಾರತಕ್ಕೆ ತಿಳಿಸಿತ್ತು.

- ವಾಸ್ತವವೆಂದರೆ, ತೆರಿಗೆ ವಿಚಾರಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಆಡಳಿತಾತ್ಮಕ ನೆರವು ಒದಗಿಸುವ ಕುರಿತು ಸ್ವಿಸ್ ಸರಕಾರವು ಭಾರತ ಸೇರಿದಂತೆ 36 ರಾಷ್ಟ್ರಗಳ ಜತೆ ಒಪ್ಪಂದ ಮಾಡಿಕೊಂಡಿದೆ. ಜತೆಗೆ, ಇತ್ತೀಚೆಗೆ ಹೊಸ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 103. ರಖೀನ್ ಅಭಿವೃದ್ಧಿಗೆ ಭಾರತದ ನೆರವು

### ಪ್ರಮುಖ ಸುದ್ದಿ

- ಮ್ಯಾನ್ಮಾರ್ ನ ರಖೀನ್ ಪ್ರಾಂತ್ಯದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಭಾರತ ಮತ್ತು ಮ್ಯಾನ್ಮಾರ್ ಒಪ್ಪಂದವೊಂದಕ್ಕೆ ಸಹಿ ಹಾಕಿವೆ. ಇದೇ ಪ್ರಾಂತ್ಯದಿಂದ ಸಾವಿರಾರು ರೋಹಿಂಗ್ಯಾಗಳು ಸನಿಹದ ಬಾಂಗ್ಲಾದೇಶಕ್ಕೆ ವಲಸೆ ಹೋಗಿದ್ದರು ಎಂಬುದು ಗಮನಾರ್ಹ.
- ಭಾರತ ಮತ್ತು ಮ್ಯಾನ್ಮಾರ್ ಈ ವಿಷಯದಕ್ಕೆ ಸಂಬಂಧಿಸಿದಂತೆ ತುರ್ತು ಕ್ರಮಗಳ ಅಗತ್ಯತೆ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದು, ಬೇರೆ ದೇಶಗಳು ಕೂಡ ಈ ಕಾರ್ಯಕ್ಕೆ ಸಹಕಾರ ನೀಡಬೇಕು ಎಂಬ ಸಂದೇಶ ರವಾನಿಸಿವೆ.

### ಮುಖ್ಯ ಅಂಶಗಳು

- ಈ ಒಪ್ಪಂದಕ್ಕೆ ಭಾರತದ ಪರವಾಗಿ ವಿದೇಶಾಂಗ ಕಾರ್ಯದರ್ಶಿ ಡಾ.ಎಸ್. ಜೈಶಂಕರ್ ಸಹಿ ಹಾಕಿದ್ದರೆ, ಮ್ಯಾನ್ಮಾರ್ ಕಡೆಯಿಂದ ಅಲ್ಲಿನ ಸಮಾಜ ಕಲ್ಯಾಣ ಇಲಾಖೆ ಸಹ ಸಚಿವ ಯು ಸೋ ಆಂಗ್ ಅವರು ಸಹಿ ಹಾಕಿದ್ದಾರೆ. ರೋಹಿಂಗ್ಯಾ ವಲಸೆಗಾರರಿಗೆ ರಖೀನ್ ನಲ್ಲಿ ವಾಸ್ತವ್ಯಕ್ಕಾಗಿ ಕಟ್ಟಡಗಳನ್ನು ನಿರ್ಮಾಣ ಮಾಡುವುದಾಗಿ ಭಾರತ ಒಪ್ಪಿಕೊಂಡಿದೆ.
- ಬಾಂಗ್ಲಾದೇಶದ ಕಾಕ್ಸ್ ಬಜಾರ್ ಪ್ರದೇಶದಿಂದ ರೋಹಿಂಗ್ಯಾಗಳನ್ನು ಮ್ಯಾನ್ಮಾರ್ ಗೆ ವಾಪಸ್ ಕರೆ ತರುವ ಸಂಬಂಧ ಜಂಟಿ ಕಾರ್ಯಪಡೆ ಕುರಿತ ನಿಯಮಗಳನ್ನು ಅಂತಿಮಗೊಳಿಸುತ್ತಿದ್ದ ಸಮಯದಲ್ಲೇ ಭಾರತ ಮತ್ತು ಮ್ಯಾನ್ಮಾರ್ ನಡುವೆ ಒಪ್ಪಂದ ಏರ್ಪಟ್ಟಿದೆ. ಸುಮಾರು 600000 ರೋಹಿಂಗ್ಯಾಗಳು ಆಗಸ್ಟ್ ತಿಂಗಳಿಂದ ಇಲ್ಲಿಯವರೆಗೆ ಬಾಂಗ್ಲಾದೇಶಕ್ಕೆ ವಲಸೆ ಹೋಗಿದ್ದಾರೆ.
- ಪ್ರಧಾನಿ ನರೇಂದ್ರ ಮೋದಿಯವರು ಕಳೆದ ಸೆಪ್ಟೆಂಬರ್ ನಲ್ಲಿ ಮ್ಯಾನ್ಮಾರ್ ಗೆ ಭೇಟಿ ನೀಡಿದ್ದ ವೇಳೆ ಎರಡೂ ದೇಶಗಳು ಈ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ನಿರ್ಧಾರ ಮಾಡಿದ್ದವು. ಆ ಸಮಯದಲ್ಲಿ ರಾಖೈನ್ ಪ್ರಾಂತ್ಯದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗಾಗಿ ಅವರು ಹಣಕಾಸಿನ ನೆರವನ್ನು ಕೂಡ ನೀಡಿದ್ದರು.
- ಈ ಒಪ್ಪಂದದ ಬಗ್ಗೆ ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ನೀಡಿರುವ ಹೇಳಿಕೆ ಪ್ರಕಾರ, "ಮ್ಯಾನ್ಮಾರ್ ಸರಕಾರವು ರಖೀನ್ ಪ್ರಾಂತ್ಯದಲ್ಲಿ ಸಹಜ ಸ್ಥಿತಿಯನ್ನು ಮರು ಸ್ಥಾಪಿಸುವ ಉದ್ದೇಶಕ್ಕಾಗಿ ಮತ್ತು ವಲಸೆ ಹೋದ ಜನರ ಹಿಂದಿರುಗುವಿಕೆಗೆ ಸಹಾಯ ಮಾಡಲು ಭಾರತ ಮುಂದಾಗಿದೆ". ಮ್ಯಾನ್ಮಾರ್ ನಲ್ಲಿ ರಖೀನ್ ಆರ್ಥಿಕವಾಗಿ ಅತ್ಯಂತ ಬಡ ಪ್ರಾಂತ್ಯವಾಗಿದ್ದು, ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದಿದೆ. ಅಭಿವೃದ್ಧಿ ಮತ್ತು ಜೀವನೋಪಾಯದ ಉಪಕ್ರಮಗಳ ಮೇಲೆ ಗಮನಹರಿಸುವ ಅಗತ್ಯದ ಬಗ್ಗೆ ಈ ಒಪ್ಪಂದದಲ್ಲಿ ದಾಖಲಿಸಲಾಗಿದೆ.
- ರೋಹಿಂಗ್ಯಾ ಸಮಸ್ಯೆಗೆ ಪರಿಹಾರ ಕಂಡು ಹುಡುಕುವುದು ಭಾರತದ ಆದ್ಯತೆಯಾಗಿದೆ. ಇದನ್ನು ಮೋದಿ ತಮ್ಮ ಮ್ಯಾನ್ಮಾರ್ ಭೇಟಿ ವೇಳೆಯಲ್ಲೂ ಪ್ರಕಟಿಸಿದ್ದರು. ದಕ್ಷಿಣ ಏಷ್ಯಾದಲ್ಲಿನ ಭದ್ರತೆ ಕೂಡ ಕಾಳಜಿಯ ವಿಷಯವಾಗಿದ್ದರೂ, ಈ ಸಮಸ್ಯೆಯನ್ನು ಕೇವಲ ಭದ್ರತೆಯ ದೃಷ್ಟಿಯಿಂದ ನೋಡಬಾರದು ಎಂಬ ನಿಲುವನ್ನು ಭಾರತ ಮುಂದಿಡುತ್ತಲೇ ಇದೆ.
- ಅಭಿವೃದ್ಧಿ ಮತ್ತು ಮಾನವೀಯತೆಯ ಆಯಾಮದಿಂದಲೂ ಈ ಸಮಸ್ಯೆಯನ್ನು ಕಾಣಬೇಕಿದೆ. ಭಾರತದ ಪ್ರಧಾನಿ ಭೇಟಿ ವೇಳೆ ಎರಡೂ ದೇಶಗಳು ಸೇರಿ ಬಿಡುಗಡೆ ಮಾಡಿದ್ದ ಜಂಟಿ ಹೇಳಿಕೆಯಲ್ಲೂ ಕೂಡ ರಖೀನ್ ಪ್ರಾಂತ್ಯದಲ್ಲಿ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಕೈಗೊಳ್ಳಲಾಗುವ ಕ್ರಮಗಳ ಬಗ್ಗೆ ವಿವರಣೆ ನೀಡಲಾಗಿತ್ತು.
- ಶಿಕ್ಷಣ, ಆರೋಗ್ಯ, ಕೃಷಿ ಸೇರಿದಂತೆ ಕೃಷಿ ಸಂಸ್ಕರಣೆ, ಸಾಮುದಾಯಿಕ ಅಭಿವೃದ್ಧಿ, ಆಣೆಕಟ್ಟುಗಳ ನಿರ್ಮಾಣ, ರಸ್ತೆ ಮೇಲ್ದರ್ಜೆ, ಸಣ್ಣ ವಿದ್ಯುತ್ ಯೋಜನೆಗಳು, ತರಬೇತಿ ಕೇಂದ್ರಗಳ ನಿರ್ಮಾಣ, ಗುಡಿ

ಕೈಗಾರಿಕೆಗಳಿಗೆ ಉತ್ತೇಜನ, ಪರಿಸರ ಸಂರಕ್ಷಣೆಯಂತಹ ಯೋಜನೆಗಳನ್ನು ಜಾರಿ ಮಾಡಲು ಚಿಂತನೆ ನಡೆಸಲಾಗಿದೆ.

- ರಖೀನ್ ನಲ್ಲಿ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ರೋಹಿಂಗ್ಯಾಗಳಲ್ಲಿರುವ ಶೋಷಿತ ಮತ್ತು ಅನಾಥ ಮನಸ್ಥಿತಿಯನ್ನು ತೊಡೆದು ಹಾಕಬಹುದು ಎಂದು ಭಾರತ ನಂಬಿದೆ.
- ಹಿಂದೆ ಭಾರತ ದೇಶವು ಮ್ಯಾನ್ಮಾರ್ ಗೆ ಒಂದು ಮಿಲಿಯನ್ ಡಾಲರ್ ನೆರವನ್ನು ನೀಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕಲದನ್ ನದಿಯಲ್ಲಿ ಭಾರತ ಕೈಗೊಂಡಿರುವ ಸಂಪರ್ಕ ಯೋಜನೆ ಗಮನಸೆಳೆದಿದೆ. ಇದು ರಖೀನ್ ನಿಂದಲೇ ಪ್ರಾರಂಭಗೊಳ್ಳುತ್ತದೆ. ರಖೀನ್ ನಲ್ಲಿರುವ ಸಮಸ್ಯೆಗಳು ಈ ಆಗಸ್ಟ್ ನಲ್ಲಿ ಕೋಫಿ ಅನ್ನಾನ್ ಸಮಿತಿ ಸಲ್ಲಿಸಿದ್ದ ವರದಿಯಲ್ಲಿರುವ ಅಂಶಗಳನ್ನೇ ಪ್ರತಿಫಲಿಸುತ್ತವೆ.
- ಈ ಒಪ್ಪಂದ ಬಾಂಗ್ಲಾದೇಶ ಮತ್ತು ವಿಶ್ವದ ಇತರೆ ರಾಷ್ಟ್ರಗಳಿಗೆ ಸ್ಪಷ್ಟ ಸಂದೇಶ ರವಾನಿಸುತ್ತಿದೆ. ರಖೀನ್ ನಲ್ಲಿ ರೋಹಿಂಗ್ಯಾ ಪರಿಸ್ಥಿತಿಯನ್ನು ಕಂಡು ವಿಶ್ವದ ಇತರೆ ರಾಷ್ಟ್ರಗಳು ಟೀಕೆ ಮಾಡುತ್ತಿದ್ದರೂ, ಭಾರತ ಮಾತ್ರ ಸುಮ್ಮನಿತ್ತು. ಮ್ಯಾನ್ಮಾರ್ ಮೇಲೆ ನಿರ್ಬಂಧ ಹೇರುವ ಕ್ರಮದ ವಿರುದ್ಧ ಭಾರತ ವಾದಿಸಿತು. ಇದರಿಂದ ಸಾಮಾನ್ಯ ಜನರಿಗಷ್ಟೇ ತೊಂದರೆ ಎಂಬುದು ಭಾರತದ ನಿಲುವಾಗಿತ್ತು. ರಖೀನ್ ನಲ್ಲಿ ಸಾಮಾಜಿಕ ಆರ್ಥಿಕ ಅಭಿವೃದ್ಧಿಗಾಗಿ ಭಾರತ ಮ್ಯಾನ್ಮಾರ್ ಜತೆ ಸೇರಿ ಹಲವು ಯೋಜನೆಗಳಿಗೆ ಒಪ್ಪಿಕೊಂಡಿರುವುದು ಸ್ವಾಗತಾರ್ಹ ಕ್ರಮ.
- ಟೀಕೆಗಳ ಸರಮಾಲೆಯಿಂದಾಗಿ ಮ್ಯಾನ್ಮಾರ್ ಚೀನಾ ಕಡೆ ಮತ್ತಷ್ಟು ವಾಲುವ ಸಾಧ್ಯತೆಯಿತ್ತು. ವಿಶ್ವಸಂಸ್ಥೆ ಭದ್ರತಾ ಸಮಿತಿ ಮತ್ತು ವಿಶ್ವಸಂಸ್ಥೆ ಮಾನವ ಹಕ್ಕುಗಳ ಸಮಿತಿ ಮ್ಯಾನ್ಮಾರ್ ವಿರುದ್ಧ ತೆಗೆದುಕೊಂಡ ನಿರ್ಣಯವನ್ನು ಚೀನಾ ವಿರೋಧಿಸಿತ್ತು. ಇದಕ್ಕೆ ಪ್ರತಿಯಾಗಿ ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶದ ಜತೆ ಸೇರಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಮಧ್ಯಸ್ಥಿಕೆ ವಹಿಸಿಕೊಳ್ಳುವುದಾಗಿ ಕೂಡ ಚೀನಾ ಹೇಳಿತ್ತು.

## 104.ಐಸಿಜಿಎಸ್ ಸುಜಯ್

### ಪ್ರಮುಖ ಸುದ್ದಿ

- ಕಡಲ ಕಿನಾರೆಯ ಗಸ್ತು ನೌಕೆ ಐಸಿಜಿಎಸ್ ಸುಜಯ್ ಅನ್ನು ಇತ್ತೀಚೆಗೆ ಭಾರತೀಯ ಕರಾವಳಿ ಕಾವಲು ಪಡೆಗೆ ನಿಯೋಜಿಸಲಾಗಿದೆ. ಇದು 105 ಮೀಟರ್ ಓಪಿವಿ ನಿರ್ಮಿತ ದೇಶೀಯ ಗಸ್ತುನೌಕೆ ಸರಣಿಯ ಆರನೇ ಹಾಗೂ ಕೊನೆಯ ನೌಕೆಯಾಗಿದ್ದು, ಇದನ್ನು ಭಾರತೀಯ ಕರಾವಳಿ ಕಾವಲು ಪಡೆಗಾಗಿ ಗೋವಾ ಶಿಪ್‌ಯಾರ್ಡ್ ನಿರ್ಮಿಸಿಕೊಟ್ಟಿದೆ.

- ಪ್ರಸ್ತುತ ಭಾರತೀಯ ಕರಾವಳಿ ಕಾವಲು ಪಡೆ 135 ಹಡಗುಗಳು ಮತ್ತು ನೌಕೆಗಳನ್ನು ಹೊಂದಿದ್ದು, ಇದಲ್ಲದೇ 66 ಕಾವಲು ನೌಕೆಗಳು ಮತ್ತು ಹಡಗುಗಳು ದೇಶದ ವಿವಿಧ ಶಿಪ್‌ಯಾರ್ಡ್‌ಗಳಲ್ಲಿ ನಿರ್ಮಾಣದ ವಿವಿಧ ಹಂತಗಳಲ್ಲಿವೆ.

### ಐಸಿಜಿಎಸ್ ಸುಜಯ್ ಬಗ್ಗೆ

- ಐಸಿಜಿಎಸ್ ಸುಜಯ್ (ಅರ್ಥ ಸರ್ವಶ್ರೇಷ್ಠ ವಿಜಯ) ಒಡಿಶಾದ ಪರದೀಪ್‌ನಲ್ಲಿ ನೆಲೆ ಹೊಂದಿರುತ್ತದೆ. ಇದರ ಕಾರ್ಯಾಚರಣೆ ಮತ್ತು ಆಡಳಿತಾತ್ಮಕ ನಿಯಂತ್ರಣ ಈಶಾನ್ಯ ವಲಯದ ಕಮಾಂಡ್ ಕೋಸ್ಟ್‌ಗಾರ್ಡ್‌ನ ಕೈಯಲ್ಲಿರುತ್ತದೆ. ಇದನ್ನು ವಿಸ್ತøತವಾಗಿ ಇಇಝಡ್ ಸರ್ವೇಕ್ಷಣೆ ಮತ್ತು ಇತರ ಕರ್ತವ್ಯಗಳಿಗೆ ಭಾರತೀಯ ಕರಾವಳಿ ಕಾವಲು ಪಡೆಯಲ್ಲಿ ನಿಯೋಜಿಸಲಾಗುತ್ತದೆ. ಇದು ಭಾರತದ ಸಾಗರ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತದೆ.

- ಇದು 105 ಮೀಟರ್ ಓಪಿವಿ ಅಳವಡಿಸಿದ ಅತ್ಯಾಧುನಿಕ ಪಥದರ್ಶಕ ಮತ್ತು ಸಂವಹನ ಸಾಧನವನ್ನು ಹೊಂದಿದ್ದು, ಇದರ ಜತೆಗೆ ಸೆನ್ಸಾರ್ಗಳು ಮತ್ತು ಅತ್ಯಧುನಿಕ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ಇದರ ಪ್ರಮುಖ ಗುಣಲಕ್ಷಣಗಳಲ್ಲಿ ಸಮಗ್ರ ಬ್ರಿಗೇಡ್ ಸಿಸ್ಟಮ್ (ಐಬಿಎಸ್), ಸಮಗ್ರ ಯಂತ್ರ ನಿಯಂತ್ರಣ ವ್ಯವಸ್ಥೆ (ಐಎಂಸಿಎಸ್), 30 ಎಂಎಮ ಸಿಆರ್‌ಎನ್ ನೌಕಾ ಬಂದೂಕು, ವಿದ್ಯುತ್ ನಿರ್ವಹಣಾ ವ್ಯವಸ್ಥೆ (ಪಿಎಂಎಸ್) ಮತ್ತು ಅಧಿಕ ವಿದ್ಯುತ್ ಬಾಹ್ಯ ಅಗ್ನಿಶಾಮಕ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ.

- ಇದು ಮಾಲಿನ್ಯ ಸ್ಪಂದನೆ ಸಾಧನವನ್ನೂ ಒಯ್ಯಲಿದ್ದು, ಸಮುದ್ರಕ್ಕೆ ತೈಲ ಸೋರಿಕೆಯನ್ನು ತಡೆಯಲು ಇದು ಸಹಕಾರಿಯಾಗಿದೆ. ಇದು ಅತ್ಯಾಧುನಿಕ ಮತ್ತು ತೀರಾ ಇತ್ತೀಚಿನ ಸಾಧನಗಳು ಮತ್ತು

ವ್ಯವಸ್ಥೆಗಳನ್ನು ಹೊಂದಿದ್ದು, ಈ ಹಡಗನ್ನು ಕಮಾಂಡ್ ಪ್ಲಾಟ್‌ಫಾರಂ ಆಗಿ ಐಸಿಜಿಯ ಎಲ್ಲ ಕರ್ತವ್ಯಗಳನ್ನು ನಿರ್ದೇಶಿಸಲು ಬಳಸಬಹುದಾಗಿದೆ.

## 105. ಇಂಟರ್ನೆಟ್ ಬಳಕೆದಾರರಲ್ಲಿ ಭಾರತೀಯ ಮಹಿಳೆಯರ ಪ್ರಮಾಣ ಕಡಿಮೆ-ಯುನಿಸೇಫ್

### ಪ್ರಮುಖ ಸುದ್ದಿ

- ಅಂತರ್ಜಾಲ ಬಳಸುವ ಭಾರತೀಯ ಮಹಿಳೆಯರ ಪ್ರಮಾಣ ಪುರುಷರಿಗಿಂತ ಅತಿ ಕಡಿಮೆ ಇದೆ ಎಂಬ ಸಂಶೋಧನಾ ವರದಿಯನ್ನು ಅಂತರಾಷ್ಟ್ರೀಯ ಮಕ್ಕಳ ತುರ್ತು ನಿಧಿ (ಯುನಿಸೆಫ್)ಯ 'ದಿ ಸ್ಟೇಟ್ ಆಫ್ ದಿ ವರ್ಲ್ಡ್ಸ್ ಚಿಲ್ಡ್ರನ್ 2017: ಚಿಲ್ಡ್ರನ್ ಇನ್ ಎ ಡಿಜಿಟಲ್ ವರ್ಲ್ಡ್' ಎಂಬ ಶೀರ್ಷಿಕೆಯಡಿ ಹೊರಬಂದ ವರದಿ ಪ್ರಕಟಿಸಿದೆ.
- ಇದಕ್ಕೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರಣಗಳನ್ನೂ ನೀಡಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ವರದಿಯ ಮುಖ್ಯ ಅಂಶಗಳು

- ಅಂತರ್ಜಾಲ ಕ್ರಾಂತಿಯಿಂದ ಜಗತ್ತೇ ಒಂದು ಗ್ರಾಮವಾಗಿ ಪರಿವರ್ತನೆಗೊಂಡಿದೆ. ದೇಶ-ವಿದೇಶಗಳ ನಡುವಿನ ಸಂವಹನ ಕೊಂಡಿಯಾಗಿ ಅಂತರ್ಜಾಲ ಕೆಲಸ ಮಾಡುತ್ತಿದೆ. ಜ್ಞಾನ ಸಂಪಾದನೆ, ಮಾಹಿತಿ ಕ್ರೋಢೀಕರಣ, ಮನರಂಜನೆ, ಉದ್ಯೋಗ, ಶಿಕ್ಷಣ, ವ್ಯಾಪಾರ ಮತ್ತು ವಹಿವಾಟುಗಳಲ್ಲಿ ಅಂತರ್ಜಾಲ ಪ್ರಮುಖ ಪಾತ್ರ ವಹಿಸಿದೆ.
- ಮಕ್ಕಳು, ವಿದ್ಯಾರ್ಥಿಗಳು, ಗೃಹಿಣಿಯರು ಸೇರಿದಂತೆ ಎಲ್ಲ ವರ್ಗ ಹಾಗೂ ವಯೋಮಿತಿಯ ಜನರಿಗೆ ಅಂತರ್ಜಾಲ ಆಸರೆಯಾಗಿ ನಿಂತಿದೆ. ಅಂತರ್ಜಾಲದ ತ್ವರಿತ ಪ್ರಗತಿಯು ಜನಜೀವನದ ಮೇಲೆ ತೀವ್ರಸ್ವರೂಪದ ಪ್ರಭಾವ ಬೀರಿದ್ದು, ಸಮಾಜ ಹಾಗೂ ಸಮುದಾಯದ ವಿಕಸನಕ್ಕೆ ಹೆಚ್ಚು ಕೊಡುಗೆ ನೀಡಿದೆ.

- ಪ್ರಯಾಣದ ಮಾಹಿತಿ ತಿಳಿಯಲು, ವಿಳಾಸ ಹುಡುಕಲು, ಆನ್‌ಲೈನ್ ಬ್ಯಾಂಕಿಂಗ್ ಹಾಗೂ ಶಾಪಿಂಗ್ ಸೇರಿದಂತೆ ವಿವಿಧ ರೀತಿಯ ಕೆಲಸಗಳಿಗಾಗಿ ಪುರುಷರು ಹಾಗೂ ಮಹಿಳೆಯರು ಅಂತರ್ಜಾಲಕ್ಕೆ ಪ್ರತಿದಿನ ಭೇಟಿ ನೀಡುತ್ತಾರೆ. ಜಾಗತಿಕವಾಗಿ ಮಹಿಳೆಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪುರುಷರು ಅಂತರ್ಜಾಲದ ಮೊರೆಹೋಗುತ್ತಾರೆ. ಆದರೆ, ಆರೋಗ್ಯ, ಔಷಧ, ಅಡುಗೆ ಮತ್ತು ಧರ್ಮದಂತಹ ನಿರ್ದಿಷ್ಟ ವಿಷಯಗಳ ಮಾಹಿತಿ ಪಡೆಯಲು ಮಹಿಳೆಯರೇ ಹೆಚ್ಚು ಸಂಖ್ಯೆಯಲ್ಲಿ ಅಂತರ್ಜಾಲದ ಸಹಾಯ ಪಡೆಯುತ್ತಾರೆ.

- ಇಂತಹ ಸನ್ನಿವೇಶದಲ್ಲಿ ಅಂತರ್ಜಾಲ ಬಳಸುವ ಭಾರತೀಯ ಮಹಿಳೆಯರ ಪ್ರಮಾಣ ಪುರುಷರಿಗಿಂತ ಅತೀ ಕಡಿಮೆ ಇದೆ ಎಂಬ ಸಂಶೋಧನಾ ವರದಿಯನ್ನುಅಂಕಿ-ಸಂಖ್ಯೆಗಳ ಮೂಲಕ ಯುನಿಸೆಫ್ ಬಿಡುಗಡೆ ಮಾಡಿದೆ.

- ಯುನಿಸೆಫ್ ಪ್ರಕಾರ, ಭಾರತದ ಒಟ್ಟು ಅಂತರ್ಜಾಲ ಬಳಕೆದಾರರ ಪೈಕಿ 29 ಪ್ರತಿಶತ ಮಹಿಳೆಯರಿದ್ದಾರೆ. ಇದನ್ನು ಜಾಗತಿಕವಾಗಿ ನೋಡುವುದಾದರೆ, ಮಹಿಳಾ ಬಳಕೆದಾರರಿಗಿಂತ ಪುರುಷ ಬಳಕೆದಾರರ ಪ್ರಮಾಣ ಕೇವಲ ಶೇ.12ರಷ್ಟು ಹೆಚ್ಚಿದೆ. ಅದರಲ್ಲೂ, ಮುಂದುವರಿದ ಅಮೆರಿಕದಂತಹ ದೇಶಗಳಲ್ಲಿ ಪುರುಷ ಹಾಗೂ ಮಹಿಳಾ ಬಳಕೆದಾರರ ಪ್ರಮಾಣದ ಅಂತರ ಶೇ.2ರಷ್ಟಿದೆ. ಆದರೆ, ಭಾರತದ ಮಟ್ಟಿಗೆ ಪುರುಷ ಹಾಗೂ ಮಹಿಳಾ ಬಳಕೆದಾರರ ನಡುವಿನ ಅಂತರ 42 ಪ್ರತಿಶತ ಇದ್ದು, ಲಿಂಗ ಅಂತರದಲ್ಲಿ ಡಿಜಿಟಲ್ ಇಂಡಿಯಾ ಇನ್ನೂ ಹಿಂದೆ ಉಳಿದಿದೆ ಎಂಬುದು ವರದಿಯಿಂದ ತಿಳಿದುಬರುತ್ತದೆ.

- 'ದಿ ಸ್ಟೇಟ್ ಆಫ್ ದಿ ವರ್ಲ್ಡ್ಸ್ ಚಿಲ್ಡ್ರನ್ 2017: ಚಿಲ್ಡ್ರನ್ ಇನ್ ಎ ಡಿಜಿಟಲ್ ವರ್ಲ್ಡ್' ಎಂಬ ಶೀರ್ಷಿಕೆಯಡಿ ಹೊರಬಂದ ವರದಿ ಪ್ರಕಾರ, ಈ ದೊಡ್ಡ ಪ್ರಮಾಣದ ಲಿಂಗ ಅಂತರವು ದೇಶದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಡೆತಡೆಗಳ ಪರಿಣಾಮವಾಗಿದ್ದು, ಬಹುಪಾಲು ಅಂತರ ಗ್ರಾಮೀಣ ಭಾಗದಲ್ಲಿ ಕಂಡುಬರುತ್ತಿದೆ ಎಂದು ದಾಖಲಿಸಲಾಗಿದೆ. ರಾಜಸ್ಥಾನದ
- ಗ್ರಾಮವೊಂದರಲ್ಲಿ ಮದುವೆಯಾಗದ ಹುಡುಗಿಯರು ಮೊಬೈಲ್ ಫೋನ್ ಬಳಸಬಾರದೆಂದು ಸ್ಥಳೀಯ ಆಡಳಿತ ಹೊರಡಿಸಿರುವ ಫರ್ಮಾನು ಬಗ್ಗೆಯೂ ಯುನಿಸೆಫ್ ಉಲ್ಲೇಖಿಸಿದೆ.

- ಹಿಂದುಳಿದ ಹಾಗೂ ಸಂಪರ್ಕ ಕೊರತೆ ಹೊಂದಿರುವ ಭಾರತದ ಹಳ್ಳಿಗಳಲ್ಲಿ ಅಂತರ್ಜಾಲ ಸೌಲಭ್ಯ ಒದಗಿಸುವುದು ಸವಾಲಿನ ಕೆಲಸ. ಇದಲ್ಲದೆ, ಕುಗ್ರಾಮಗಳಲ್ಲಿ ವಾಸಿಸುವ ಬಹುತೇಕ ಸಮುದಾಯಗಳ ಆದಾಯ ಬಡತನ ರೇಖೆಗಿಂತ ಕಡಿಮೆ. ಇದರಿಂದಾಗಿ ಅಂತರ್ಜಾಲ ಸಂಪರ್ಕ ಸೌಲಭ್ಯವಿರುವ ಸ್ಮಾರ್ಟ್‌ಫೋನ್ ಹೊಂದಲು ಜನರಿಗೆ ಕಷ್ಟವಾಗುತ್ತದೆ. ಹಳ್ಳಿಗಳಲ್ಲಿ ವಾಸಿಸುವ ಮಹಿಳೆಯರಿಗೆ ಸ್ಮಾರ್ಟ್‌ಫೋನ್ ವೆಚ್ಚ ಭರಿಸಲು ಸಾಧ್ಯವಾಗದಿರುವುದು ಅಂತರ್ಜಾಲದಲ್ಲಿ ಮಹಿಳೆಯರ ಪ್ರಮಾಣ ಇಳಿಕೆಗೆ ಕಾರಣವೆಂದು ಯುನಿಸೆಫ್ ತಿಳಿಸಿದೆ.

## 106. ಗಂಗಾ ಗ್ರಾಮ ಯೋಜನೆ

### ಪ್ರಮುಖ ಸುದ್ದಿ

- ಕೇಂದ್ರ 'ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯವು ಸ್ವಚ್ಛಗಂಗಾ ಮಿಷನ್' ಅಡಿಯಲ್ಲಿ ಗಂಗಾ ಗ್ರಾಮ ಯೋಜನೆಯನ್ನು ಜಾರಿಗೆ ಗೊಳಿಸಿದೆ .
- ಗಂಗಾ ನದಿಯ ತೀರದಲ್ಲಿ ಹಳ್ಳಿಗಳಲ್ಲಿ ಸಮಗ್ರ ನೈರ್ಮಲ್ಯ ಅಭಿವೃದ್ಧಿ ಇದರ ಮುಖ್ಯ ಉದ್ದೇಶವಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಗಂಗಾ ಗ್ರಾಮ ಯೋಜನೆ ಬಗ್ಗೆ

- ಗಂಗಾ ಗ್ರಾಮ ಯೋಜನೆಯ ಗ್ರಾಮಗಳ ನಿವಾಸಿಗಳನ್ನೂ ಪಾಲ್ಗೊಳ್ಳುವಂತೆ ಮಾಡಿ ಈ ಗ್ರಾಮಗಳ ಸಮಗ್ರ ಅಭಿವೃದ್ಧಿಪಡಿಸುವುದು ಯೋಜನೆಯ ಪ್ರಮುಖ ಅಂಶವಾಗಿದೆ. .
- ಗಂಗಾ ಗ್ರಾಮ ಯೋಜನೆಯ ಉದ್ದೇಶಗಳು ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಕೊಳಗಳು ಮತ್ತು ನೀರಿನ ಸಂಪನ್ಮೂಲಗಳ ನವೀಕರಣ, ನೀರಿನ ಸಂರಕ್ಷಣೆ ಯೋಜನೆಗಳು, ಸಾವಯವ ಕೃಷಿ, ತೋಟಗಾರಿಕೆ ಮತ್ತು ಔಷಧೀಯ ಸಸ್ಯಗಳ ಪ್ರಚಾರವನ್ನು ಒಳಗೊಂಡಿವೆ.

### ನಮಾಮಿ ಗಂಗೆ ಯೋಜನೆ ಬಗ್ಗೆ

- ಗಂಗಾ ನದಿಯನ್ನು ಶುದ್ಧೀಕರಿಸುವ ಸಲುವಾಗಿ ಕೇಂದ್ರ ಸರ್ಕಾರ ನವಾಮಿ ಗಂಗೆ ಯೋಜನೆಯನ್ನು ಜಾರಿಗೊಳಿಸಿದೆ.

- ನದಿ ಶುದ್ಧೀಕರಣಕ್ಕಾಗಿ ಕೊಳಚೆ ನೀರು ಸಂಸ್ಕರಣಾ ಘಟಕ ಸ್ಥಾಪನೆ ಹಾಗೂ ಅನಿಯಂತ್ರಿತ ನೀರಿನ ಹರಿವು ನಿಯಂತ್ರಣ ಸೇರಿದಂತೆ 300 ಯೋಜನೆಗಳು 'ನಮಾಮಿ ಗಂಗೆ'ಯಲ್ಲಿ ಸೇರಿವೆ. ಯೋಜನೆಯ ಮೊದಲ ಭಾಗವಾಗಿ ಗಂಗಾ ನದಿ ಹರಿಯುವ ಐದು ರಾಜ್ಯಗಳ 104 ಸ್ಥಳಗಳಲ್ಲಿ ಏಕಕಾಲದಲ್ಲಿ ಸ್ಮಶಾನ ಹಾಗೂ ಚಿತಾಗಾರ ನಿರ್ಮಾಣ, ದುರಸ್ತಿ, ಸುಂದರ ನದಿ ತೀರ ನಿರ್ಮಾಣ ಹಾಗೂ ಕೊಳಚೆ ನೀರು ಸಂಸ್ಕರಣ ಘಟಕಗಳ ನಿರ್ಮಾಣ, ದುರಸ್ತಿ ಸೇರಿದಂತೆ ಇತರ ಅಭಿವೃದ್ಧಿ ಕೆಲಸ ಗಳನ್ನು ಆರಂಭಿಸಲಾಗುತ್ತದೆ.
- ಗಂಗಾ ನದಿ ಹರಿದು ಸಾಗುವ ಐದು ರಾಜ್ಯ(ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ)ಗಳ ಸರ್ಕಾರಗಳು ಈ ಬೃಹತ್ ಯೋಜನೆಯಲ್ಲಿ ಭಾಗಿಯಾಗುತ್ತಿವೆ.

## 107. ಕ್ಷಿಪ್ರ ಸರಿಪಡಿಸುವ ಕ್ರಮ( Prompt correction action -PCA)

### ಪ್ರಮುಖ ಸುದ್ದಿ

- ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ತಮ್ಮ ಹಣಕಾಸಿನ ಆರೋಗ್ಯವನ್ನು ಸುಧಾರಿಸಲು ಬ್ಯಾಂಕುಗಳಿಗೆ ಉತ್ತೇಜನ ನೀಡಬೇಕೆಂದು ಕ್ಷಿಪ್ರ ಸರಿಪಡಿಸುವ ಕ್ರಮವನ್ನು (ಪಿಸಿಎ) ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಪಿಸಿಎ ಅಡಿಯಲ್ಲಿರುವ ಕೆಲವು ಬ್ಯಾಂಕುಗಳು ಮುಚ್ಚಲ್ಪಡುತ್ತವೆ ಎಂದು ಸಾಮಾಜಿಕ ಮಾಧ್ಯಮದ ವದಂತಿಗಳ ಹಿನ್ನೆಲೆಯಲ್ಲಿ ಈ ರೀತಿ ಪುನರುಚ್ಚರಿಸಿದೆ.

### ಕ್ಷಿಪ್ರ ಸರಿಪಡಿಸುವ ಕ್ರಮ ಎಂದರೇನು ?

- ಪಿಸಿಎ ನಿಯಮ 2002ರಿಂದಲೂ ಜಾರಿಯಲ್ಲಿದೆ.
- ವಸೂಲಾಗದ ಸಾಲ ಹೆಚ್ಚಿರುವುದರಿಂದ ಹಾಗೂ ಬಂಡವಾಳ ಕಡಿಮೆ ಇರುವ ಕಾರಣ ಈ ಬ್ಯಾಂಕ್‌ಗಳು ಅಸ್ಥಿರವಾಗಿವೆ. ಆದ್ದರಿಂದ ಇವನ್ನು 'ತಕ್ಷಣ ಸುಧಾರಣಾ ಪ್ರಕ್ರಿಯೆ' (ಪಿಸಿಎ)ಗೆ ಒಳಪಡಿಸಲಾಗಿದೆ.
- ಬ್ಯಾಂಕ್‌ಗಳು ಸಕಾಲಿಕವಾಗಿ ತಮ್ಮ ಸಾಧನೆಗಳನ್ನು ಸುಧಾರಿ ಸಬೇಕು ಎಂದು ಸೂಚಿಸಲು ಇವನ್ನು ಪಿಸಿಎ ಅಡಿ ಸೇರಿಸಲಾಗುತ್ತದೆ. ಗಾಯಗೊಂಡ ಕ್ರೀಡಾಪಟುವನ್ನು ವಿಶ್ರಾಂತಿ ಪಡೆಯಲು ಸೂಚಿಸುವುದಕ್ಕೆ ಇದನ್ನು ಹೋಲಿಸಬಹುದು.

- ಪಿಸಿಎ ಅಡಿ ಸೇರಿಸಲಾದ ಬ್ಯಾಂಕ್‌ಗಳು ತಮ್ಮ ದೈನಂದಿನ ವ್ಯವಹಾರ(ಸಾಲ ನೀಡುವುದೂ ಸೇರಿದಂತೆ)ವನ್ನು ಎಂದಿನಂತೆಯೇ ಮುಂದುವರಿಸಲಿದೆ.

## 108. ಜಲ ಫಿರಂಗಿ ಮೂಲಕ ಸ್ಮಾಗ್ ನಿವಾರಣೆ ಯತ್ನಕ್ಕೆ ಮುಂದಾದ ದೆಹಲಿ ಸರ್ಕಾರ

### ಪ್ರಮುಖ ಸುದ್ದಿ

- ದೆಹಲಿಯನ್ನು ಕಾಡುತ್ತಿರುವ ಹೊಂಜಿನ (ಸ್ಮಾಗ್) ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಯತ್ನವಾಗಿ ಅಲ್ಲಿನ ಸರ್ಕಾರ ಹೊಸ ತಂತ್ರಜ್ಞಾನವೊಂದರ ಪ್ರಯೋಗ ನಡೆಸುತ್ತಿದೆ.
- ಚಳಿಗಾಲದ ಹೊಗೆಯನ್ನು ಎದುರಿಸಲು ಹೊಂಜು ನಿಗ್ರಹ ಫಿರಂಗಿ' ತಂತ್ರಜ್ಞಾನ ವನ್ನು ರಾಜಧಾನಿಯಲ್ಲಿ ದೆಹಲಿ ಸರ್ಕಾರವು ಪ್ರಯೋಗಿಸಿದೆ

### ಏನಿದು ಹೊಂಜು ನಿಗ್ರಹ ಫಿರಂಗಿ'(Anti-smog gun) ?

ನಮ್ಮ ಐಎಎಸ್ ಅಕಾಡೆಮಿ

- ವಾತಾವರಣದಲ್ಲಿರುವ ಮಾಲಿನ್ಯಕಾರಕ ಹೊಂಜನ್ನು ಕಡಿಮೆ ಮಾಡುವುದಕ್ಕಾಗಿ ಅದು 'ಹೊಂಜು ನಿಗ್ರಹ ಫಿರಂಗಿ'ಯ (ಗನ್) ಬಳಕೆ ಆರಂಭಿಸಿದೆ. ಈ ಫಿರಂಗಿಯು ಭಾರಿ ಪ್ರಮಾಣದ ನೀರನ್ನು ಆಗದೆತ್ತರಕ್ಕೆ ಚಿಮ್ಮಿಸಿ ದೂಳಿನ ಕಣಗಳು ಭೂಮಿಗೆ ತಗ್ಗುವಂತೆ ಮಾಡುತ್ತದೆ.

- ದೆಹಲಿಯಲ್ಲಿ ಅತ್ಯಂತ ಹೆಚ್ಚು ಮಾಲಿನ್ಯಗೊಂಡಿರುವ ಪ್ರದೇಶದಲ್ಲೊಂದಾದ ನಂದ ವಿಹಾರದಲ್ಲಿ ಈ ಜಲಫಿರಂಗಿಯ ಪ್ರಯೋಗ ನಡೆಸಲಾಗಿದೆ.

- ಇದನ್ನು ಬಳಸುವುದಕ್ಕೂ ಮೊದಲಿನ ಮತ್ತು ನಂತರದ ಮಾಲಿನ್ಯ ಮಟ್ಟವನ್ನು ಪರಸ್ಪರ ಹೋಲಿಕೆ ಮಾಡುವುದರಿಂದ ಈ ತಂತ್ರಜ್ಞಾನದ ಪರಿಣಾಮ ಗೊತ್ತಾಗಲಿದೆ.

- ಕ್ಲೌಡ್ ಟೆಕ್ ಎಂಬ ಕಂಪೆನಿ ಈ ತಂತ್ರಜ್ಞಾನವನ್ನು ದೆಹಲಿಗೆ ಪರಿಚಯಿಸಿದೆ. ಶೇ 95ರಷ್ಟು ವಾಯುಮಾಲಿನ್ಯ ಕಾರಕಗಳನ್ನು ಇದು ನಿವಾರಿಸಬಲ್ಲುದು ಎಂದು ಕಂಪೆನಿ ಹೇಳಿದೆ.

## 109. ಒಡರ್ರನಾ ಅರುಣಾಚಲೆನಸಿಸ್ (Odorrana arunachalensis)

### ಪ್ರಮುಖ ಸುದ್ದಿ

- ಝೂಲಾಜಿಕಲ್ ಸರ್ವೆ ಆಫ್ ಇಂಡಿಯಾದ ವಿಜ್ಞಾನಿಗಳು ಹೊಸ ಕಪ್ಪೆ ಪ್ರಭೇಧವನ್ನು ಅರುಣಾಚಲ ಪ್ರದೇಶದ ಸುಬಾನ್‌ಸಿರಿ ಜಿಲ್ಲೆಯ ತಲ್ಲೆ ಕಣಿವೆ ವನ್ಯಜೀವಿ ಧಾಮದಲ್ಲಿ ಪತ್ತೆ ಮಾಡಿದ್ದಾರೆ.

### ಪ್ರಮುಖ ಸಂಗತಿಗಳು

- ಹೊಸ ಕಪ್ಪೆ ಪ್ರಬೇವನ್ನು ಒಡರ್ರನಾ ಅರುಣಾಚಲೆನಸಿಸ್ ಎಂದು ಹೆಸರಿಸಲಾಗಿದೆ. ಸಾಮನ್ಯವಾಗಿ ಇದನ್ನು ಒಡೊರಸ್ ಕಪ್ಪೆ ಎಂದು ಕರೆಯಲಾಗುತ್ತದೆ. ಒಡೊರ್ರನಾ ಎನ್ನುವುದು ನೈಜ ಕಪ್ಪೆಯ ತಳಿಯಾಗಿದ್ದು, ಇದು ಮೂಲತಃ ಪೂರ್ವ ಏಷ್ಯಾ ಪ್ರದೇಶದ್ದು. ಜತೆಗೆ ಭಾರತದ ಸುತ್ತಮುತ್ತಲ ಪ್ರದೇಶಗಳಲ್ಲೂ ಇದು ಕಂಡುಬರುತ್ತದೆ.
- ಒಡೊರ್ರೆನಾ ಪ್ರದೇಶದಲ್ಲಿ ಸುಮಾರು 50 ಪ್ರಬೇಧದ ಕಪ್ಪೆಗಳನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ. ಇದು ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ಪತ್ತೆಯಾದ ಐದು ಪ್ರಭೇಧಗಳ ಪೈಕಿಒಂದಾಗಿದ್ದು. ವಿಶ್ವದಲ್ಲಿ ಇದು 59ನೇ ಕಪ್ಪೆ ಪ್ರಭೇಧವಾಗಿದೆ.

- ಒಡರ್ರನಾ ಅರುಣಾಚಲೆನಸಿಸ್ ಎನ್ನುವುದು ಮಧ್ಯಮ ಗಾತ್ರದ ಹಸಿರು ಕಪ್ಪೆಯಾಗಿದ್ದು, ಅರುಣಾಚಲ ಪ್ರದೇಶದ ಕಡಿದಾದ ಕಣಿವೆ ಪ್ರದೇಶದ ನೀರಿನಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಇದು ಸಾಮಾನ್ಯವಾಗಿ, ಕಲ್ಲುಬಂಡೆಗಳಿಂದ ಕೂಡಿದ ಸ್ಥಳದಲ್ಲಿ ವಾಸ ಮಾಡುತ್ತದೆ ಹಾಗೂ ಉಷ್ಣ ವಲಯದ ಅರಣ್ಯದಲ್ಲಿ ಹಾದುಹೋಗುವ ನೀರಿನ ತೊರೆಗಳಲ್ಲೂ ಇದು ವಾಸ ಮಾಡುತ್ತದೆ.

- ಇದು ಕಪ್ಪು ಬಣ್ಣದ ಬ್ಯಾಂಡ್ ಹೋಲುವ ರಚನೆ ಹೊಂದಿದ್ದು, ಇದು ಎರಡು ಕಣ್ಣುಗಳ ಮಧ್ಯೆ ಇರುತ್ತದೆ. ಇದರ ಪ್ರಮುಖ ಗುಣಲಕ್ಷಣವೆಂದರೆ, ಇದು ಇದೇ ಜಾತಿಯ ಎಲ್ಲ ಕಪ್ಪೆಗಳ ಪ್ರಭೇಧಗಳಿಗಿಂತ

ಭಿನ್ನವಾಗಿರುತ್ತದೆ. ಇದು ಸಾಮಾನ್ಯವಾಗಿ ಏಪ್ರಿಲ್‌ನಿಂದ ಸೆಪ್ಟೆಂಬರ್ ಒಳಗಿನ ಅವಧಿಯಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಒಣ ಋತುಗಳಲ್ಲಿ ಇದು ಸಾಮಾನ್ಯವಾಗಿ ಕಂಡು ಬರುವುದಿಲ್ಲ.

### ಟೆಲ್ಲಿ ವೆಲ್ಲಿ ವನ್ಯಧಾಮದ ಬಗ್ಗೆ

- ಇದು ಅರುಣಾಚಲಪ್ರದೇಶದಲ್ಲಿರುವ ವನ್ಯಜೀವಿ ಧಾಮ ಹಾಗೂ ಜೀವವೈವಿಧ್ಯ ಕೇಂದ್ರವಾಗಿದೆ. ಇದು ಸಮುದ್ರ ಮಟ್ಟದಿಂದ 2400 ಮೀಟರ್ ಎತ್ತರದಲ್ಲಿದ್ದು, ಪಂಗೆ, ಸಿಪು, ಕರ್ನಿಂಗ್ ಮತ್ತು ಸುಬಾನ್‌ಸಿಯಂಥ ನದಿಗಳು ಇಲ್ಲಿ ಹರಿಯುತ್ತಿವೆ. ಈ ಎಲ್ಲ ನದಿಗಳು ಮೀಸಲು ಅರಣ್ಯ ಮತ್ತು ವನ್ಯಧಾಮದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹರಡುತ್ತವೆ.

- ಇದು ಮುಖ್ಯವಾಗಿ ಸಮಶೀತೋಷ್ಣ ವಲಯದ ಮತ್ತು ಅಲ್ಪೈನ್ ಅರಣ್ಯವನ್ನು ಒಳಗೊಂಡಿದ್ದು, ಇದು ವಿಸ್ತøತವಾದ ಗಿಡ ಹಾಗೂ ಪ್ರಾಣಿ ಪ್ರಭೇಧಗಳನ್ನು ಒಳಗೊಂಡಿದೆ. ಬಹುತೇಕ ಈ ಎಲ್ಲವೂ ಅಪಾಯದ ಅಂಚಿನಲ್ಲಿರುವ ಪ್ರಭೇಧಗಳು.

- ಟೆಲ್ಲಿ ಎನ್ನುವುದು ಪ್ರಸ್ಥಭೂಮಿಯಾಗಿದ್ದು, ಇದು ಸಿಲ್ವರ್ ಫಿರ್ ಮರದ ದಟ್ಟ ಅರಣ್ಯವನ್ನು ಹೊಂದಿದೆ. ಇದರ ಜತೆಗೆ ಪೈನ್ ಕ್ಲಾಡ್ ಪ್ರಸ್ಥಭೂಮಿಯು ಆಕರ್ಷಕವಾಗಿದ್ದು, ವಿಸ್ತøತ ಬಂಜರು ಭೂಮಿಯನ್ನು ಹೊಂದಿದೆ.

- ಇದು ತೀರಾ ಅಪಾಯದ ಅಂಚಿನಲ್ಲಿರುವ ಕ್ಲೌಡೆಡ್ ಚಿರತೆಯಂಥ ಪ್ರಭೇಧಗಳಿಗೂ ನೆಲೆಯಾಗಿದೆ. ಈ ಟೆಲ್ಲಿ ವೆಲ್ಲಿ ಪ್ರದೇಶದಲ್ಲಿ ಫ್ಲಯೊಬ್ಲೂಟೆಸ್ ಸಿಮೋನ್ ಎನ್ನುವುದು ಇಲ್ಲಿ ಕಂಡುಬರುವ ಬಿದಿರಿನ ಪ್ರಬೇಧವಾಗಿದೆ.

## 110. ನಗರದ ಬಡವರಿಗೆ ಮನೆ ನಿರ್ಮಾಣ ಎರಡನೇ ಸ್ಥಾನದಲ್ಲಿ ಕರ್ನಾಟಕ

### ಪ್ರಮುಖ ಸುದ್ದಿ

- 'ಪ್ರಧಾನಮಂತ್ರಿ ಆವಾಸ್ ಯೋಜನೆ' (ನಗರ) ಅಡಿಯಲ್ಲಿ ನಗರಪ್ರದೇಶದ ಬಡವರಿಗೆ ಅತಿ ಹೆಚ್ಚು ಮನೆಗಳನ್ನು ನಿರ್ಮಿಸಿದ ಎರಡನೇ ರಾಜ್ಯ ಎಂಬ ಹೆಗ್ಗಳಿಕೆಯನ್ನು ಕರ್ನಾಟಕ ಪಡೆದುಕೊಂಡಿದೆ.

ಮುಖ್ಯ ಅಂಶಗಳು

- ಯೋಜನೆ ಆರಂಭವಾದ 2014-15ನೇ ಸಾಲಿನಿಂದ ಈಚೆಗೆ 54,474 ಮನೆಗಳನ್ನು ನಿರ್ಮಿಸಿ ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್ ಮೊದಲ ಸ್ಥಾನದಲ್ಲಿದೆ. ಕರ್ನಾಟಕವು 2014ರಿಂದ ಈವರೆಗೆ ರಾಜ್ಯದಲ್ಲಿ ಒಟ್ಟು 33,450 ಮನೆಗಳನ್ನು ನಿರ್ಮಿಸಲಾಗಿದೆ ಎಂದು ವಸತಿ ಮತ್ತು ನಗರ ಕಲ್ಯಾಣ ಸಚಿವಾಲಯ ತಿಳಿಸಿದೆ.

- ದೇಶದ 36 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಸೇರಿ ಒಟ್ಟು 2.91 ಲಕ್ಷ ಮನೆಗಳು ಇದುವರೆಗೆ ನಿರ್ಮಿಸಲಾಗಿದೆ. ಯೋಜನೆಯಡಿ, 2022ರೊಳಗೆ ದೇಶಾದ್ಯಂತ 1.2 ಕೋಟಿ ಮನೆಗಳನ್ನು ನಗರಪ್ರದೇಶದ ಬಡವರಿಗಾಗಿ ನಿರ್ಮಿಸುವ ಗುರಿಯನ್ನು ಕೇಂದ್ರ ಹೊಂದಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 111. ಎಫ್ಎಂ 2ನೇ ಹಂತದಲ್ಲಿ 680 ಚಾನೆಲ್ ಹರಾಜಿಗೆ ಸಂಪುಟ ಅನುಮೋದನೆ

ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯು, 236 ನಗರಗಳಲ್ಲಿ ನಂತರದ ಬ್ಯಾಚ್ ಗಳಲ್ಲಿ 683 ವಾಹಿನಿಗಳ ಹರಾಜನ್ನು ನಡೆಸುವುದಕ್ಕೆ ತನ್ನ ಅನುಮೋದನೆ ನೀಡಿದೆ. ಇದು ಅಧಿಕ ನಗರಗಳಲ್ಲಿ ಎಫ್.ಎಂ. ರೇಡಿಯೋದ ಹೊಸ/ಹೆಚ್ಚಿನ ಅನುಭವ ನೀಡುತ್ತದೆ.

- 2ನೇ ಹಂತದಲ್ಲಿ ಈ ಚಾನಲ್‌ಗಳ ಮಾರಾಟದಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸುಮಾರು 10 ಸಾವಿರ ಮಂದಿಗೆ ಉದ್ಯೋಗಾವಕಾಶ ಸೃಷ್ಟಿಯಾಗಲಿದ್ದು, ದೇಶಾದ್ಯಂತ ಇದು ಪ್ರಯೋಜನವಾಗಲಿದೆ. ಈ ಮಾರಾಟವು ಸರ್ಕಾರಿ ಬೊಕ್ಕಸಕ್ಕೆ ಸುಮಾರು 1100 ಕೋಟಿ ರೂಪಾಯಿ ಹೆಚ್ಚುವರಿ ಆದಾಯವನ್ನು ತಂದುಕೊಡುವ ನಿರೀಕ್ಷೆ ಇರುತ್ತದೆ.

### ಪ್ರಮುಖ ಅಂಶಗಳು

- ಮೂರನೇ ಹಂತದ ಎಫ್‌ಎಂ ಹಂಚಿಕೆಯು ಹಲವು ನಗರಗಳನ್ನು ವ್ಯಾಪಿಸಲಿದ್ದು, ಎಫ್‌ಎಂ ರೇಡಿಯೊ ಅಸ್ತಿತ್ವವೇ ಇಲ್ಲದ ಕಡೆಗಳಲ್ಲಿ ಕೂಡಾ ಇದು ಎಫ್‌ಎಂ ಸೌಲಭ್ಯ ಆರಂಭಕ್ಕೆ ಪೂರಕವಾಗಲಿದೆ. ಅದರಲ್ಲೂ ಮುಖ್ಯವಾಗಿ ಜಮ್ಮು ಮತ್ತು ಕಾಶ್ಮೀರ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಇದು ಜಾರಿಗೆ ಬರಲಿದ್ದು, ಒಂದು ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಇರುವ ಎಲ್ಲ ಕಡೆಗಳಲ್ಲಿ ಈ ಸೌಲಭ್ಯ ಒದಗಿಸಲಾಗುತ್ತದೆ.
- ಮೂರನೇ ಹಂತದ ಹಂಚಿಕೆಯಿಂದಾಗಿ ಕೇಂದ್ರ ಸರ್ಕಾರ 29 ರಾಜ್ಯಗಳು ಮತ್ತು ಏಳು ಕೇಂದ್ರಾಡಳಿತ ಪ್ರದೇಶಗಳಲ್ಲಿ ಖಾಸಗಿ ಎಫ್‌ಎಂ ರೇಡಿಯೊ ಪ್ರಸಾರಕ್ಕೆ ಅನುಕೂಲ ಕಲ್ಪಿಸಲಿದೆ. ದಾದ್ರ ಮತ್ತು ನಗರ ಹವೇಲಿ ಹೊರತುಪಡಿಸಿ ಉಳಿದೆಲ್ಲ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಲ್ಲೂ ಇದು ಜಾರಿಗೆ ಬರಲಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಹಿನ್ನೆಲೆ

- ಇದಕ್ಕೂ ಮುನ್ನ ಎರಡು ಬ್ಯಾಚ್‌ಗಳಲ್ಲಿ ಎಲೆಕ್ಟ್ರಾನಿಕ್ ಹರಾಜನ್ನು ನಡೆಸಲಾಗಿದ್ದು, ಮೂರನೇ ಹಂತದಲ್ಲಿ 2015ರಲ್ಲಿ ಮತ್ತು 2016ರಲ್ಲಿ ಈ ಹರಾಜು ನಡೆದಿತ್ತು. ಮೊದಲ ಬ್ಯಾಚ್‌ನಲ್ಲಿ 56 ನಗರಗಳ ಹಕ್ಕು ಹಂಚಿಕೆಯಾಗಿತ್ತು.
- ಅಂತೆಯೇ ಎರಡನೇ ಹಂತದಲ್ಲಿ 48 ನಗರಗಳಲ್ಲಿ 66 ಚಾನಲ್‌ಗಳಿಗೆ ಹಂಚಿಕೆ ಮಾಡಲಾಗಿದ್ದು, ಇದರಿಂದ ಒಂದ ಒಟ್ಟು ಆದಾಯ 1187 ಕೋಟಿ ರೂಪಾಯಿ. 245 ಕೇಂದ್ರಗಳಿಂದ ವಲಸೆ ಶುಲ್ಕವಾಗಿ ಕೇಂದ್ರ ಸರ್ಕಾರ ಸುಮಾರು 3000 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದೆ.

## 112. ಮೊದಲ ಎಸಿ ನಗರ ರೈಲಿಗೆ ಚಾಲನೆ

- ಹಲವು ಹೊಸತುಗಳ ಮೂಲಕ ಪ್ರಯಾಣಿಕರನ್ನು ಸೆಳೆಯಲು ಕಸರತ್ತು ನಡೆಸಿರುವ ರೈಲ್ವೆ ಇಲಾಖೆ ಈ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ. ಪಶ್ಚಿಮ ರೈಲ್ವೆಯ ಚೊಚ್ಚಲ ಹವಾ ನಿಯಂತ್ರಿತ (ಎ.ಸಿ.) ಲೋಕಲ್ ರೈಲಿಗೆ ಮುಂಬಯಿನಲ್ಲಿ ಚಾಲನೆ ನೀಡಲಾಗಿದೆ .
- ಚೆನ್ನೈನ ಇಂಟೆಗ್ರಲ್ ಕೋಚ್ ಫ್ಯಾಕ್ಟರಿ ಇದನ್ನು ತಯಾರಿಸಿದ್ದು.

## 113. ಮೆಜೆಂಟಾ ಮಾರ್ಗಕ್ಕೆ ಚಾಲನೆ

- ಚಾಲಕರಹಿತ ದೆಹಲಿ ಮೆಟ್ರೋ ಸಂಚರಿಸುವ ಮೊದಲ ಮೆಜೆಂಟಾ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ಮಾರ್ಗದಲ್ಲಿ ಹೈಟೆಕ್ ಸಿಗ್ನಲ್ ವ್ಯವಸ್ಥೆ ಜತೆಗೆ ಎಲ್ಲ 9 ನಿಲ್ದಾಣಗಳಲ್ಲಿ ಪ್ಲ್ಯಾಟ್‌ಫಾರಂ ಸ್ಕ್ರೀನ್ ಡೋರ್ (ಪಿಎಸ್‌ಡಿ)ಗಳಿದ್ದು, ಕಾರ್ಯಾಚರಣೆ ಆರಂಭಿಸಲಿವೆ.

- ಇಲೆಕ್ಟ್ರಾನಿಕ್ ಮಾಹಿತಿ ಫಲಕ, ವಿದ್ಯುತ್ ಚಾರ್ಜಿಂಗ್ ಸಾಮರ್ಥ್ಯ, ವಿವಿಧ ಬಣ್ಣಗಳ ಸೀಟುಗಳನ್ನು ಹೊಂದಿರಲಿದೆ. ಹಳೆಯ ಮೆಟ್ರೋ ಬೋಗಿಗಳಿಗೆ ಹೋಲಿಸಿದರೆ ಇದಕ್ಕೆ ಬೇಕಾಗುವ ವಿದ್ಯುತ್ ಖರ್ಚು ಶೇ.20ರಷ್ಟು ಇಳಿಕೆಯಾಗಲಿದೆ.
- ಇನ್ನು ಇದರಲ್ಲಿನ ಬೋಗಿಗಳ ಗಾತ್ರವೂ ದೊಡ್ಡದಾಗಿರಲಿದ್ದು, 3.2 ಮೀಟರ್ ಅಗಲವಿರಲಿದೆ. ಬಳಕೆಯಲ್ಲಿರುವ ಬೋಗಿಗಿಂತ 30-40 ಹೆಚ್ಚುವರಿ ಯಾತ್ರಿಕರು ಪ್ರಯಾಣಿಸಬಹುದಾಗಿದೆ.

## 114.ಉತ್ತಮ ಆಡಳಿತ ದಿನ -2017 (Good Governance Day 2017)

### ಸನ್ನಿವೇಶ

- ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಹುಟ್ಟುಹಬ್ಬವನ್ನು ಡಿಸೆಂಬರ್ 25ರಂದು ಸರಕಾರ 'ಉತ್ತಮ ಆಡಳಿತ ದಿನ'ವನ್ನಾಗಿ ಆಚರಿಸುತ್ತಿದೆ.

### ಇದರ ಉದ್ದೇಶವೇನು ?

- ಸರ್ಕಾರದ ಜವಾಬ್ದಾರಿಯನ್ನು ಜನರಲ್ಲಿ ಜಾಗೃತಿ ಮೂಡಿಸುವುದರ ಸಲುವಾಗಿ 2014 ರಿಂದ ಅವರ ಜನುಮ ದಿನವನ್ನು ಉತ್ತಮ ಆಡಳಿತ ದಿನವನ್ನಾಗಿ ಆಚರಿಸಲಾಗುತ್ತಿದೆ .
- ದೇಶದಲ್ಲಿ ಪಾರದರ್ಶಕ ಮತ್ತು ಜವಾಬ್ದಾರಿಯುತ ಆಡಳಿತವನ್ನು ಒದಗಿಸಲು ಸರ್ಕಾರದ ಬದ್ಧತೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು .
- ಜನರ ಕಲ್ಯಾಣ ಮತ್ತು ಉತ್ತಮತೆಯನ್ನು ಹೆಚ್ಚಿಸುವುದು
- ಸರ್ಕಾರದ ಕಾರ್ಯಕ್ಷಮತೆಯನ್ನು ಪ್ರಮಾಣೀಕರಿಸಲು ಮತ್ತು ದೇಶದ ಪ್ರಜೆಗಳಿಗೆ ಹೆಚ್ಚು ಪರಿಣಾಮಕಾರಿ ಮತ್ತು ಜವಾಬ್ದಾರಿಯುತ ಆಡಳಿತವನ್ನು ನೀಡುವುದು .
- ಭಾರತದಲ್ಲಿ ಉತ್ತಮ ಆಡಳಿತದ ಗುರಿಯನ್ನು ಪೂರ್ಣಗೊಳಿಸಲು ಉತ್ತಮ ಮತ್ತು ಪರಿಣಾಮಕಾರಿ ನೀತಿಗಳನ್ನು ಜಾರಿಗೊಳಿಸುವುದು .
- ಈ ತತ್ವವನ್ನು ಅನುಸರಿಸಿಕೊಂಡು, ಉತ್ತಮ ಆಡಳಿತ ದಿನವನ್ನು ರಜೆಯನ್ನು ನೀಡದೆ ಸರ್ಕಾರದ ಕೆಲಸ ದಿನ ಎಂದು ಘೋಷಿಸಲಾಗಿದೆ.

## 115.ರಿಸರ್ವಾಯರ್ ಕಂಪ್ಯೂಟಿಂಗ್ ಸಿಸ್ಟಂ (Reservoir computing system)

## ಪ್ರಮುಖ ಸುದ್ದಿ

- ಬೋಧನೆ ಕ್ಷಮತೆಯನ್ನು ಸುಧಾರಿಸುವ ಸಲುವಾಗಿ ಮನುಷ್ಯನಂತೆ ಯೋಚಿಸುವ ತಂತ್ರಜ್ಞಾನವನ್ನು ಅಮೆರಿಕದ ಮಿಚಿಗನ್ ವಿವಿ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ರಿಸರ್ವಾಯರ್ ಕಂಪ್ಯೂಟಿಂಗ್ ಸಿಸ್ಟಂ ಬಳಸಿಕೊಂಡು ಈ ತಟಸ್ಥ ನೆಟ್‌ವರ್ಕ್ ಚಿಪ್ ಅಭಿವೃದ್ಧಿಪಡಿಸಲಾಗಿದೆ.

- ಈ ವ್ಯವಸ್ಥೆಯನ್ನು ಬಳಸಿಕೊಂಡು ಅಭಿವೃದ್ಧಿಪಡಿಸಿದ ನೆಟ್‌ವರ್ಕ್‌ನಲ್ಲಿ, ಯಾವುದೇ ಶಬ್ದಗಳನ್ನು ಉಚ್ಚರಿಸುವ ಮುನ್ನ ಅದು ಶಬ್ದವನ್ನು ಅಂದಾಜಿಸಬಲ್ಲದು ಮತ್ತು ಪ್ರಸ್ತುತ ಪರಿಸ್ಥಿತಿಯನ್ನು ವಿಶ್ಲೇಷಿಸಿ ಭವಿಷ್ಯದ ಪರಿಣಾಮವನ್ನು ಅಂದಾಜಿಸುವ ಸಾಮರ್ಥ್ಯ ಹೊಂದಿದೆ.

## ಮುಖ್ಯ ಅಂಶಗಳು

- ಈ ವ್ಯವಸ್ಥೆಯು ಮೆದುಳಿನ ಕಾರ್ಯನಿರ್ವಹಣೆಯಿಂದ ಸ್ಫೂರ್ತಿ ಪಡೆದಿದೆ. ನರವ್ಯೂಹವು ನರಗಳಿಂದ ಕೂಡಿದ್ದು, ಇವುಗಳ ನಡುವೆ ಸಂಪರ್ಕ ಹೊಂದಿರುತ್ತದೆ.
- ಹೊಸ ವ್ಯವಸ್ಥೆಯಲ್ಲಿ ಇದೇ ಸಂಚರನೆಯನ್ನು ಬಳಸಿಕೊಂಡು, ತಾರ್ಕಿಕವಾಗಿ ಚಿಂತಿಸಿ ಮಾಹಿತಿಯನ್ನು ದಾಸ್ತಾನು ಮಾಡಲಾಗುತ್ತದೆ.
- ಇದು ವಿಶೇಷವಾದ ನೆನಪು ಮತ್ತು ಸ್ಮರಣಶಕ್ತಿಯನ್ನು ಬಳಸಿಕೊಂಡು ಸದ್ಯದ ಇತಿಹಾಸವನ್ನು ದಾಖಲಿಸುತ್ತದೆ. ಇದು ಕಂಪ್ಯೂಟರ್ ವ್ಯವಸ್ಥೆ ಜತೆಗೆ ಸಂಪರ್ಕ ಹೊಂದಿದ್ದು, ಸ್ಮರಣಶಕ್ತಿಯ ಮಾದರಿಗಿಂತ ಭಿನ್ನವಾದ ಪ್ರೊಸೆಸರ್‌ಗಳನ್ನು ಒಳಗೊಂಡಿರುತ್ತದೆ.
- ಸಿಲಿಕಾನ್ ಆಧರಿತ ಎಲೆಕ್ಟ್ರಾನಿಕ್ಸ್ ಬಳಸಿಕೊಂಡು ಇದನ್ನು ದಾಖಲಿಸುವ ಕಾರ್ಯವನ್ನು ಇದು ನಿರ್ವಹಿಸುತ್ತದೆ.

## ಇದರ ಮಹತ್ವ

- ಈ ವ್ಯವಸ್ಥೆಯು ಕೈಬರಹವನ್ನು ಗುರುತಿಸುವ ವ್ಯವಸ್ಥೆಯನ್ನು ಒಳಗೊಂಡಿದ್ದು, ನರಮಂಡಲದ ವ್ಯೂಹವನ್ನು ಇದು ಬಳಸಿಕೊಳ್ಳಲಿದೆ. 88 ಸ್ಮರಣಶಕ್ತಿಯ ಯಂತ್ರಗಳನ್ನು ಬಳಸಿಕೊಂಡು ಇದನ್ನು ಅಭಿವೃದ್ಧಿಪಡಿಸಲಾಗಿದ್ದು,

- ಸಾಂಪ್ರದಾಯಿಕವಾಗಿ ಇಂಥ ಸಾವಿರಾರು ಯಂತ್ರಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಇದು ಶೇಕಡ 91ರಷ್ಟು ನಿಖರತೆಯನ್ನು ಹೊಂದಿದೆ.

## 116. ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಕ್ರಿಯಾ ಯೋಜನೆ (Action plan for the backward districts)

### ಪ್ರಮುಖ ಸುದ್ದಿ

- ಕೇಂದ್ರ ಸರಕಾರವು 115 -ಹಿಂದುಳಿದ ಜಿಲ್ಲೆಗಳನ್ನು ಗುರುತಿಸಿದ್ದು ಅವುಗಳ ಸಾಮಾಜಿಕ- ಶೈಕ್ಷಣಿಕ ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದೆ.
- ಆರೋಗ್ಯ, ನೈರ್ಮಲ್ಯ , ಶಿಕ್ಷಣ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳಾದ ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರಿನ ಸೌಲಭ್ಯ ಹಾಗು ಇತರೆ ಮೂಲಭೂತ ಸೌಕರ್ಯಗಳ ನ್ನು ಕಾಲಮಿತಿಯಲ್ಲಿ ಕಲ್ಪಿಸುವುದು ಕ್ರಿಯಾ ಯೋಜನೆಯಲ್ಲಿ ಸೇರಿದೆ.
- 2022 ರ ಹೊತ್ತಿಕ್ಕೆ ಭಾರತ ಸ್ವಾತಂತ್ರ್ಯ ಪಡೆದು 75 ನೇ ವರ್ಷ ತುಂಬಲಿದ್ದು ಈ ಹೊತ್ತಿಗೆ ಹಿಂದುಳಿದ ಪ್ರದೇಶಗಳಲ್ಲಿ ತ್ವರಿತ ಸರ್ಕಾರಿ-ಕಾರ್ಯಕ್ರಮಗಳು ಮತ್ತು ಮಧ್ಯಸ್ಥಿಕೆಗಳ ಮೂಲಕ ದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ತರಲು ಕೇಂದ್ರ ಸರಕಾರ ಅಪೇಕ್ಷಿಸುತ್ತಿದೆ.

### ಹಿಂದುಳಿದ ಜಿಲ್ಲೆಗಳ ಆಯ್ಕೆ ವಿಧಾನ

- ನಕ್ಸಲ್ ಪೀಡಿತರಿಂದ ಪ್ರಭಾವಿತವಾಗಿರುವ 35 ಜಿಲ್ಲೆಗಳನ್ನು ಒಳಗೊಂಡಂತೆ 115 ಜಿಲ್ಲೆಗಳ ನ್ನು ವಸತಿ ಅಭಾವ ಆರೋಗ್ಯ ಮತ್ತು ಪೌಷ್ಟಿಕತೆ (ಸಾಂಸ್ಥಿಕ ವಿತರಣೆ, ಮಕ್ಕಳ ಕುಗ್ಗುವಿಕೆ ಮತ್ತು ಮಕ್ಕಳಲ್ಲಿ ಕ್ಷೀಣಿಸುವುದು), ಶಿಕ್ಷಣ ಮತ್ತು ಮೂಲಭೂತ ಸೌಕರ್ಯಗಳು ( ಮನೆಗಳು, ಶೌಚಾಲಯಗಳ ಕೊರತೆ, ರಸ್ತೆ ಮತ್ತು ಕುಡಿಯುವ ನೀರಿನ ಕೊರತೆ ಹಳ್ಳಿಗಳು). ಇವುಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.

### ಈ ಯೋಜನೆಯ ಅಗತ್ಯತೆ

- 2016 ರಲ್ಲಿ, ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ(HDI) 188 ದೇಶಗಳಲ್ಲಿ 131 ನೇ ಸ್ಥಾನದಲ್ಲಿದೆ. ಅದರಲ್ಲೂ ಪ್ರಮುಖವಾಗಿ ಅಂತರ-ರಾಜ್ಯ ಮತ್ತು ಅಂತರ-ಜಿಲ್ಲೆಗಳ ವ್ಯತ್ಯಾಸಗಳು ಕಂಡುಬಂದಿದೆ .
- ಭಾರತದಲ್ಲಿ ಜನಿಸಿದ ಸುಮಾರು 40% ಮಕ್ಕಳು ಕುಂಠಿತಗೊಂಡಿದ್ದಾರೆ ಮತ್ತು ಸುಮಾರು 50% ಮಹಿಳೆಯರು ರಕ್ತಹೀನತೆ ಹೊಂದಿರುತ್ತಾರೆ.
- ಭಾರತವು ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ನೇಪಾಳ ಮತ್ತು ಚೀನಾಗಳಂತಹ ನೆರೆಹೊರೆಯ ದೇಶಗಳಿಗಿಂತ ಪೌಷ್ಟಿಕಾಂಶದಲ್ಲಿ ಹಿಂದೆ ಉಳಿದಿದೆ.

## 117. ಎಲೆಕ್ಟ್ರಾನಿಕ್ ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆ (e-HRMS)

### ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರಿ ಉದ್ಯೋಗಿಗಳಿಗೆ ವಿದ್ಯುನ್ಮಾನ-ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (ಇ-ಎಚ್‌ಆರ್‌ಎಂಎಸ್) ಯನ್ನು ಕೇಂದ್ರ ಸರ್ಕಾರವು ಪ್ರಾರಂಭಿಸಿದೆ.

- ಇದು ಕೇಂದ್ರ ಸರ್ಕಾರಿ ನೌಕರರಿಗೆ ರಜೆಗಾಗಿ ಅರ್ಜಿ ಸಲ್ಲಿಸಲು ಮತ್ತು ಅವರ ಸೇವಾ-ಸಂಬಂಧಿತ ಮಾಹಿತಿಯನ್ನು ತಿಳಿದುಕೊಳ್ಳುವ ಆನ್ಲೈನ್ ವೇದಿಕೆಯಾಗಿದೆ.

### ಇದರಿಂದ ಆಗುವ ಲಾಭಗಳು

- ಈ ಸೇವೆಯ ಪ್ರಾರಂಭದೊಂದಿಗೆ, ಸೇವೆಯ ಬಗ್ಗೆ ಸಂಬಳ, ಮತ್ತು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿವರಗಳನ್ನು ನೌಕರರು ನೋಡುವುದರ ಜೊತೆಗೆ ಆದರೆ ವಿಭಿನ್ನ ರೀತಿಯ ಹಕ್ಕು ಸಾಲ ,

ಮುಂಗಡಗಳು ಇತ್ಯಾದಿ ಅಂಶಗಳನ್ನು ಸಹ ನೋಡಬಹುದು . ಅವರ ಕೆಲಸದ ಸ್ಥಿತಿಯನ್ನು ಸಹ ಟ್ರ್ಯಾಕ್ ಮಾಡಿ ವಿವರಗಳನ್ನು ತಕ್ಷಣವೇ ಹೊಂದಾಣಿಕೆ ಮಾಡಲು ಸಾಧ್ಯವಾಗುತ್ತದೆ.

- ಇದರಿಂದ ವರ್ಗಾವಣೆ ಮತ್ತು ಸೇವೆಯಲ್ಲಿ ನಿಯೋಜಿಸಲು ಸರ್ಕಾರಕ್ಕೆ ಅನುಕೂಲವಾಗುತ್ತದೆ.

## 118. 'ಒಂದು ದೇಶ-ಒಂದೇ ಪರ್ಮಿಟ್-ಒಂದೇ ತೆರಿಗೆ' ನೀತಿಗೆ ಶಿಫಾರಸು

### ಪ್ರಮುಖ ಸುದ್ದಿ

- 'ಮುಕ್ತ ಆಗಸ ನೀತಿ'ಯಂತೆ 'ಮುಕ್ತ ರಸ್ತೆ ನೀತಿ'ಯೊಂದರ ಅಗತ್ಯವಿದ್ದು ಎಲ್ಲ ಬಸ್ ಪರವಾನಗಿಗಳನ್ನೂ ರಾಷ್ಟ್ರೀಯ ಪರವಾನಗಿಯಾಗಿ (ಪರ್ಮಿಟ್) ಪರಿವರ್ತಿಸಬೇಕು ಎಂದು ಸಂಸದೀಯ ಸಲಹಾ ಸಮಿತಿ ಶಿಫಾರಸು ಮಾಡಿದೆ.
- ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ನಿಟ್ಟಿನಲ್ಲಿ 'ಒಂದು ದೇಶ, ಒಂದೇ ಪರ್ಮಿಟ್ ಮತ್ತು ಒಂದೇ ತೆರಿಗೆ' ನೀತಿಯನ್ನು ಅಳವಡಿಸಿಕೊಳ್ಳಬೇಕು ಎಂದು ಸಮಿತಿ ಹೇಳಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ರಾಜ್ಯಸಭೆಯ 24 ಸದಸ್ಯರ ಒಂದು ಸಮಿತಿ ಮೋಟಾರು ವಾಹನಗಳ ತಿದ್ದುಪಡಿ ವಿಧೇಯಕದ ಬಗ್ಗೆ ಪರಿಶೀಲನೆ ನಡೆಸುತ್ತಿದೆ.

### ಮುಖ್ಯ ಅಂಶಗಳು

- 'ದಕ್ಷಿಣದ ಐದು ರಾಜ್ಯಗಳಲ್ಲಿ ಸಂಚರಿಸುವ ಒಂದು ಬಸ್ ಪ್ರತಿವರ್ಷ 42 ಲಕ್ಷ ರೂ.ಗಳಷ್ಟು ಪರ್ಮಿಟ್ ಶುಲ್ಕ ಪಾವತಿಸಬೇಕಾಗಿದೆ. ರಾಜ್ಯಗಳು ಒಪ್ಪಿದಲ್ಲಿ 'ಒನ್ ನೇಷನ್, ಒನ್ ಪರ್ಮಿಟ್, ಒನ್ ಟ್ಯಾಕ್ಸ್' ನೀತಿಯನ್ನು ಅಳವಡಿಸಿಕೊಳ್ಳಬಹುದು ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಸಂಸದೀಯ

ಸಮಿತಿಗೆ ತಿಳಿಸಿದೆ. ಇದರಿಂದ ರಾಜ್ಯಗಳ ಆದಾಯವೂ ಹೆಚ್ಚುತ್ತದೆ. ಅಲ್ಲದೆ ಒಬ್ಬರೇ ನಿರ್ವಾಹಕರು ಕೆಲವೇ ಪರ್ಮಿಟ್ ಪಡೆದು ಅನೇಕ ಬಸ್‌ಗಳನ್ನು ಓಡಿಸುವುದನ್ನು ತಡೆಯಬಹುದು' ಎಂದು ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

- 'ದೂರದ ಊರುಗಳಿಗೆ ಸಂಚರಿಸುವ ಬಸ್‌ಗಳಲ್ಲಿ ಅಂತರ್‌ನಿರ್ಮಿತ ಶೌಚಾಲಯ ಸೌಲಭ್ಯವಿರಬೇಕು. ಮೋಟಾರು ವಾಹನ ವಿಧೇಯಕ ತಿದ್ದುಪಡಿಯಲ್ಲಿ ಈ ಅಂಶವನ್ನೂ ಸೇರಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ. ಸಂಬಂಧಿತ ಸಚಿವಾಲಯ ಇದರ ಜಾರಿಗೆ ಕ್ರಮ ಕೈಗೊಳ್ಳಬೇಕು' ಎಂದೂ ಸಮಿತಿ ಹೇಳಿದೆ. ಕಳೆದ ವಾರ ರಾಜ್ಯಸಭೆಯಲ್ಲಿ ಈ ವರದಿ ಮಂಡನೆಯಾಗಿದೆ.

- 'ಮೋಟಾರು ವಾಹನ ಕಾಯ್ದೆಯನ್ನು ಅನುಷ್ಠಾನಗೊಳಿಸುವ ಪ್ರತಿಯೊಬ್ಬ ಆರ್‌ಟಿಓ ಅಧಿಕಾರಿಗಳು ಮತ್ತು ಟ್ರಾಫಿಕ್ ಪೊಲೀಸರ ಬಳಿ ದೇಹದಲ್ಲಿ ಧರಿಸಬಹುದಾದ ಕ್ಯಾಮೆರಾಗಳನ್ನು ಹೊಂದಿರಬೇಕು. ಅಲ್ಲದೆ ಸಂಚಾರಿ ನಿಯಮ ಉಲ್ಲಂಘನೆಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸಿಕೊಳ್ಳಬೇಕು. ಇದನ್ನು ಕಂಟ್ರೋಲ್ ರೂಂನಲ್ಲಿ ಮೇಲ್ವಿಚಾರಣೆ ನಡೆಸಬೇಕು. ಈ ಮೂಲಕ ಅಧಿಕಾರಿಗಳ ಭ್ರಷ್ಟಾಚಾರವನ್ನು ತಗ್ಗಿಸಬಹುದು' ಎಂದು ಸಮಿತಿ ವರದಿ ತಿಳಿಸಿದೆ.

JAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮಿಂದ..... ಮಸ್ಸೂರಿಗೆ/ಮೈಸೂರಿಗೆ

- ಟ್ರಾನ್ಸಪರೆನ್ಸಿ ಇಂಟರ್‌ನ್ಯಾಷನಲ್ ವರದಿ ಪ್ರಕಾರ, ಪ್ರತಿವರ್ಷ ವಿವಿಧ ಆರ್‌ಟಿಓಗಳಲ್ಲಿ ಅಧಿಕಾರಿಗಳು ಟ್ರಕ್ ಮಾಲೀಕರು/ಚಾಲಕರಿಂದ 10,000 ಕೋಟಿ ರೂ.ಗಳ ಲಂಚ ಸಂಗ್ರಹಿಸುತ್ತಾರೆ.

- ಲೈಸೆನ್ಸ್‌ಗಳು, ನೋಂದಣಿ, ತೆರಿಗೆ ಪಾವತಿ, ಪರ್ಮಿಟ್‌ಗಳು- ಇವೆಲ್ಲ ಸೇರಿದರೆ ಈ ಲಂಚದ ಮೊತ್ತ ದುಪ್ಪಟ್ಟಿಗಿಂತಲೂ ಹೆಚ್ಚಾಗುತ್ತದೆ. ಆರ್‌ಟಿಓಗಳಲ್ಲಿ ವಾರ್ಷಿಕ ಒಟ್ಟಾರೆ 23,000 ಕೋಟಿ ರೂ ಭ್ರಷ್ಟಾಚಾರ ನಡೆಯುತ್ತದೆ ಎಂದು ಮತ್ತೊಂದು ವರದಿ ತಿಳಿಸಿದೆ.

## 119. ಎಲ್‌ಪಿಜಿ ಆಮದು: ಚೀನಾ ಹಿಂದಿಕ್ಕಿದ ಭಾರತ

## ಪ್ರಮುಖ ಸುದ್ದಿ

- ಭಾರತ ಇದೇ ಮೊದಲ ಬಾರಿಗೆ ಅಡುಗೆ ಅನಿಲ (ಎಲ್‌ಪಿಜಿ) ಆಮದಿನಲ್ಲಿ ಚೀನಾವನ್ನು ಹಿಂದಿಕ್ಕಿದೆ. ಅಡುಗೆಗೆ ಕಟ್ಟಿಗೆ ಮತ್ತು ಸೆಗಣಿಯ ಉರುವಲು ಬಳಸುವುದನ್ನು ತಡೆಯಲು ಹೆಚ್ಚು ಹೆಚ್ಚು ಅನಿಲ ಸಂಪರ್ಕ ಒದಗಿಸಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಡಿಸೆಂಬರ್ ತಿಂಗಳಲ್ಲಿ ಅಡುಗೆ ಅನಿಲದ ಆಮದು ಪ್ರಮಾಣ 2.4 ಕೋಟಿ ಟನ್‌ಗಳಿಗೇರಿದೆ.

## ಮುಖ್ಯ ಅಂಶಗಳು

- 2015ರ ಆರಂಭದಲ್ಲಿ ಮಾಸಿಕ ಕೇವಲ 10 ಲಕ್ಷ ಟನ್‌ಗಳಷ್ಟು ಎಲ್‌ಪಿಜಿ ಆಮದು ಮಾಡಿಕೊಳ್ಳಲಾಗುತ್ತಿತ್ತು.

- 'ಭಾರತದಲ್ಲಿ ಎಲ್‌ಪಿಜಿ ಆಮದು ಪ್ರಮಾಣದ ಬೆಳವಣಿಗೆ ಅಭೂತಪೂರ್ವ. 2015ರಲ್ಲಿ 14 ಕೋಟಿ ಸಬ್ಸಿಡಿಯುಕ್ತ ಎಲ್‌ಪಿಜಿ ಸಂಪರ್ಕಗಳಿದ್ದರೆ, ಈಗ ಅದು 18.1 ಕೋಟಿಗೇರಿದೆ' ಎಂದು ಎಲ್‌ಪಿಜಿ ಶಿಪ್ಪಿಂಗ್ ಸಂಸ್ಥೆ ಡೊರಿಯಾನ್‌ನ ಮುಖ್ಯ ಹಣಕಾಸು ಅಧಿಕಾರಿ ಟೆಡ್ ಯಂಗ್ ರಾಯ್ಟರ್ಸ್ ಸುದ್ದಿಸಂಸ್ಥೆಗೆ ತಿಳಿಸಿದರು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಅಮೆರಿಕ ಮೂಲದ ಡೊರಿಯಾನ್ 22 ಟ್ಯಾಂಕರ್‌ಗಳ ಸಮೂಹವನ್ನು ಹೊಂದಿದ್ದು, ಜಗತ್ತಿನ ಅತಿದೊಡ್ಡ ಶಿಪ್ಪಿಂಗ್ ಏಜೆನ್ಸಿಗಳಲ್ಲಿ ಒಂದಾಗಿದೆ.

- ಪ್ರೊಪೇನ್ ಮತ್ತು ಬುಟೇನ್‌ನ ಮಿಶ್ರಣವಾಗಿರುವ ಎಲ್‌ಪಿಜಿಯನ್ನು ಅಡುಗೆ ಮತ್ತು ಸಾರಿಗೆ ಇಂಧನವಾಗಿ ಬಳಸಲಾಗುತ್ತದೆ. ಇದೇ ರೀತಿ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಕೂಡ ಜಾಗತಿಕ ಮಾರುಕಟ್ಟೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತಿದೆ. ಈ ವರ್ಷ 30 ಕೋಟಿ ಟನ್ ಎಲ್‌ಎನ್‌ಜಿ ಮಾರಾಟವಾಗಿದೆ. ಸಾಮಾನ್ಯವಾಗಿ ವಾರ್ಷಿಕ 400 ಕೋಟಿ ಟನ್‌ಗಳಷ್ಟು ಮಾರಾಟವಾಗುತ್ತಿದ್ದ ಕಚ್ಚಾತೈಲದ ಮಾರುಕಟ್ಟೆಯೂ ಇದರಿಂದಾಗಿ ಸ್ವಲ್ಪಮಟ್ಟಿಗೆ ಕುಗ್ಗಿದೆ.

- 2017ರಲ್ಲಿ ಭಾರತದ ಮಾಸಿಕ ಸರಾಸರಿ ಆಮದು 17 ಲಕ್ಷ ಟನ್‌ಗಳಾಗಿದ್ದು, ಚೀನಾಗಿಂತ (22 ಲಕ್ಷ ಟನ್) ಸ್ವಲ್ಪ ಹಿಂದಿದೆ. ಆದರೆ ಮೂರನೇ ಸ್ಥಾನದಲ್ಲಿದ್ದ ಜಪಾನ್ ಅನ್ನು (ಜಪಾನ್ ಆಮದು ಪ್ರಮಾಣ 10 ಲಕ್ಷ ಟನ್) ಹಿಂದಿಕ್ಕಿ ಎರಡನೇ ಸ್ಥಾನಕ್ಕೆ ಜಿಗಿದಿದೆ.

- ಭಾರತದ ಕಾರುಗಳಲ್ಲೂ ಅನಿಲ ಇಂಧನದ ಬಳಕೆ ಹೆಚ್ಚುತ್ತಿದ್ದು ಎಲ್‌ಪಿಜಿ ಆಮದು ಏರಿಕೆಗೆ ಕಾರಣವಾಗಿದೆ ಎಂದು ಡೊರಿಯಾನ್ ಎಲ್‌ಪಿಜಿ ತಜ್ಞರು ಹೇಳುತ್ತಾರೆ.

- ಚೀನಾ, ಭಾರತ ಮತ್ತು ಜಪಾನ್ ಒಟ್ಟಾಗಿ ಜಾಗತಿಕ ಎಲ್‌ಪಿಜಿ ಖರೀದಿಯ ಶೇ 45ರಷ್ಟು ಪಾಲು ಹೊಂದಿವೆ.

## 120.ಪ್ರಕಾಶ್ ಹೇ ತೋ ವಿಕಾಸ್ ಯೋಜನೆಗೆ ಚಾಲನೆ

- ಉತ್ತರ ಪ್ರದೇಶ ಸರ್ಕಾರ ಮಹತ್ವಾಕಾಂಕ್ಷಿ ಪ್ರಕಾಶ್ ಹೇ ತೋ ವಿಕಾಸ್ ಯೋಜನೆಗೆ ಚಾಲನೆ ನೀಡಿದೆ.
- ಇದು ಮನೆಗಳಿಗೆ ಉಚಿತ ವಿದ್ಯುತ್ ನೀಡುವ ಯೋಜನೆಯಾಗಿದ್ದು, ರಾಜ್ಯದ ಎಲ್ಲ ಬಡಕುಟುಂಬಗಳು ಇದರ ಪ್ರಯೋಜನ ಪಡೆಯಲಿವೆ.
- ಆರಂಭಿಕ ಹಂತದಲ್ಲಿ ಮಥುರಾ ಜಿಲ್ಲೆಯ ಎರಡು ಗ್ರಾಮಗಳಾದ ಲೋಬ್ವಾನ್ ಮತ್ತು ಗೌಸಿಯಾನಾವನ್ನು ಈ ಯೋಜನೆಗೆ ಆಯ್ಕೆ ಮಾಡಲಾಗಿದೆ.
- ಈ ಯೋಜನೆಯಡಿ ಎರಡು ಗ್ರಾಮಗಳಲ್ಲಿ ಶೇಕಡ 100ರಷ್ಟು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಈ ಯೋಜನೆಯಡಿ ರಾಜ್ಯ ಸರ್ಕಾರವು ಮಹತ್ವಾಕಾಂಕ್ಷಿ ಗುರಿ ಹಾಕಿಕೊಂಡಿದ್ದು, 16 ದಶಲಕ್ಷ ಕುಟುಂಬಗಳಿಗೆ 2018ರ ಅಂತ್ಯದ ಒಳಗಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಉದ್ದೇಶಿಸಿದೆ.

## 121.ಜಿಎಸ್‌ಟಿ ಸಂಗ್ರಹ ಮಹಾರಾಷ್ಟ್ರ ಪ್ರಥಮ

- ಕೇಂದ್ರ ಸರ್ಕಾರ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯನ್ನು 2017ರ ಜುಲೈ 1ರಂದು ಆರಂಭಿಸಿದ ಬಳಿಕ ಮೊದಲ ಐದು ತಿಂಗಳಲ್ಲಿ ಗರಿಷ್ಠ ಜಿಎಸ್‌ಟಿ ತೆರಿಗೆ ಸಂಗ್ರಹಿಸಿದ ಕೀರ್ತಿಗೆ ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶ ಪಾತ್ರವಾಗಿವೆ.
- ಈ ಮಾಹಿತಿಯನ್ನು ಹಣಕಾಸು ಖಾತೆ ರಾಜ್ಯ ಸಚಿವ ಶಿವಪ್ರತಾಪ್ ಸುಕ್ಲಾ ಅವರು ಲಿಖಿತ ಉತ್ತರದಲ್ಲಿ ಲೋಕಸಭೆಗೆ ತಿಳಿಸಿದರು.

## 122.ವಿಶ್ವದ ಅತಿದೊಡ್ಡ ಉಭಯವಾಸಿ ವಿಮಾನ ಟೇಕಾಫ್

- ಚೀನಾ ನಿರ್ಮಿಸಿದ ಎಜಿ-600 ಎಮಬ ವಿಶ್ವದ ಅತಿದೊಡ್ಡ ಉಭಯವಾಸಿ (ಆಂಪಿಬಿಯಸ್) ವಿಮಾನ ದಕ್ಷಿಣ ಝುಹೈ ನಗರದಿಂದ ಹೊರಟು ಒಂದು ಗಂಟೆ ಯಾನದ ಬಳಿಕ ಯಶಸ್ವಿಯಾಗಿ ಕಳಕ್ಕೆ ಇಳಿದಿದೆ.

- ಈ ಯಶಸ್ವಿ ಹಾರಟದಿಂದಾಗಿ ವಿಶ್ವದ ಬೆರಳೆಣಿಕೆಯ ದೇಶಗಳ ಸಾಲಿಗೆ ಚೀನಾ ಸೇರಿದೆ. ದೊಡ್ಡ ಉಭಯವಾಸಿ ವಿಮಾನಗಳನ್ನು ಅಭಿವೃದ್ಧಿಪಡಿಸುವ ಕೆಲವೇ ದೇಶಗಳ ಪೈಕಿ ಚೀನಾ ಕೂಡಾ ಒಂದಾಗಿದೆ. ಇದು ಚೀನಾದ ಕ್ಷಿಪ್ರ ಮಿಲಿಟರಿ ಆಧುನೀಕರಣಕ್ಕೆ ನೆರವಾಗಲಿದೆ.

## 123.ಕಿಸಾನ್ ಉದಯ್ ಯೋಜನೆ

- ಉತ್ತರಪ್ರದೇಶ ಸರ್ಕಾರವು ಇದರ ಜತೆಗೆ ಕಿಸಾನ್ ಉದಯ್ ಎಂಬ ವಿಶಿಷ್ಟ ಯೋಜನೆಗೆ ಕೂಡಾ ಚಾಲನೆ ನೀಡಿದೆ. ಇದರ ಅನ್ವಯ ಹಾಲಿ 5 ಅಶ್ವಶಕ್ತಿಯ ಮೋಟರ್ ವಿದ್ಯುತ್ ಸಂಪರ್ಕ ಹೊಂದಿರುವ ರೈತರಿಗೆ 7,5 ಅಶ್ವಶಕ್ತಿಯ ಸಬ್‌ಮರ್ಸಿಬಲ್ ಪಂಪ್‌ಗಳನ್ನು ಉಚಿತವಾಗಿ ಬದಲಿಸಿಕೊಡಲಾಗುವುದು.
- ಈ ಯೋಜನೆಯಡಿ 10 ಲಕ್ಷ ರೈತರಿಗೆ 2022ರೊಳಗೆ ಸೌಲಭ್ಯ ಕಲ್ಪಿಸಲಾಗುವುದು. ಇದು ಶೇಕಡ 35ರಷ್ಟು ವಿದ್ಯುತ್ ಉಳಿತಾಯಕ್ಕೆ ಕಾರಣವಾಗಲಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ